# ಕರ್ನಾಟಕ ವಿಧಾನ ಪರಿಷತ್ತು

17ನೇ ಡಿಸೆಂಬರ್ 2018,
ಸೋಮವಾರ.

## ವಿಷಯಾನುಕ್ರಮಣಿಕೆ

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ**

ವಿಷಯ: ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
– ಶ್ರೀ ಐವನ್ ಡಿ'ಸೋಜಾ
– ಡಾ:ಜಯಮಾಲ
– ಡಾ:ತೇಜಸ್ವಿನಿ ಗೌಡ

(ನಿಯಮ 68ರಡಿಯಲ್ಲಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು)

**2. ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

715 – ಮಡಿಕೇರಿ ರಾಜಾಸೀಟ್ ಉದ್ಯಾನವನವನ್ನು ವಿಸ್ತರಿಸುವ ಬಗ್ಗೆ
ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.

759 – 'ಹಸಿರು ಮನೆ' ನಿರ್ಮಾಣಕ್ಕೆ ಸಹಾಯ ಧನ
ಶ್ರೀ ಆರ್.ಧರ್ಮಸೇನ

801 – ರೇಷ್ಮೆ ಬೆಳೆಗಾರರ ಹಾಗೂ ಉದ್ಯಮ ಪ್ರೋತ್ಸಾಹದ ಮಾಹಿತಿ ಬಗ್ಗೆ
ಡಾ:ತೇಜಸ್ವಿನಿ ಗೌಡ

749 – ಅಡಿಕೆ ಮಂಡಳಿ ರಚನೆಯ ಬಗ್ಗೆ
ಶ್ರೀ ಐವನ್ ಡಿ'ಸೋಜಾ

781 – ಪದವೀಧರರಲ್ಲದ ಸಹಾಯಕ ಕೃಷಿ ಅಧಿಕಾರಿಯಿಂದ ಕೃಷಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ
ಶ್ರೀ ಶರಣಪ್ಪ ಮಟ್ಟೂರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

767 – ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಬಗ್ಗೆ
ಶ್ರೀ ಅರುಣ ಶಹಾಪುರ

745 – ತೋಟಗಾರಿಕೆ ಬೆಳೆಗಳ ದರ ನಿಗದಿಪಡಿಸುವ ಬಗ್ಗೆ
ಶ್ರೀ ಪಿ.ಆರ್.ರಮೇಶ್

809 – ಕುಣಬಿ ಜನಾಂಗವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸುವ ಕುರಿತು
ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ

44 – ಗಂಗಾ ಕಲ್ಯಾಣ ಯೋಜನೆ ಅವ್ಯವಹಾರದ ಕುರಿತು
ಶ್ರೀ ಪ್ರಾಣೇಶ್ ಎಂ.ಕೆ.

783 – ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯದ ಕುರಿತು
ಶ್ರೀ ಎಂ.ಸಿ.ವೇಣುಗೋಪಾಲ್

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

**ಅ) ಮಹಾರಾಷ್ಟ್ರ-ಕರ್ನಾಟಕ ಗಡಿ ಭಾಗದ ಕನ್ನಡಿಗರ ಪ್ರಾಬಲ್ಯದ 22 ಹಳ್ಳಿಗಳ ಸುಧಾರಣೆ ಕುರಿತು**
- **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**
- **ಡಾ:ಜಯಮಾಲ (ಸಭಾ ನಾಯಕರು)**

**ಆ) ಮಡಿಕೇರಿ ತಾಲ್ಲೂಕು ನಾಪೋಕ್ಲು ಭಾಗದಲ್ಲಿ "ಭತ್ತ ಬೆಳೆಯುವತ್ತ ರೈತನ ಚಿತ್ತ ಇಲ್ಲದಿದ್ದರೆ ಗದ್ದೆ ಸರ್ಕಾರದತ್ತ" ಎಂಬ ನಾಮಫಲಕ ಕುರಿತು**
- **ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ**
- **ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ (ಕೃಷಿ ಸಚಿವರು)**

**ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಟೋಲ್‌ಗೇಟ್ ಅಳವಡಿಕೆ ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಕುರಿತು**
- **ಶ್ರೀ ಐವನ್ ಡಿ'ಸೋಜಾ**
- **ಡಾ:ಜಯಮಾಲ (ಸಭಾ ನಾಯಕರು)**

**4. ಪ್ರಕಟಣೆ**

**5. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**6. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ**

**ದಿನಾಂಕ 14-12-2018ರಂದು ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರಿಂದ ಉತ್ತರ**
- **ಡಾ:ಜಯಮಾಲ (ಸಭಾ ನಾಯಕರು)**

" ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

ವಿಷಯ: ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
- ಡಾ:ಜಯಮಾಲ (ಸಭಾ ನಾಯಕರು)
- ಶ್ರೀ ಎಸ್.ಎಲ್.ಧರ್ಮೇಗೌಡ
- ಶ್ರೀ ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕ, 2018**

- ಶ್ರೀ ಹೆಚ್.ಎಂ.ರೇವಣ್ಣ
- ಡಾ:ತೇಜಸ್ವಿನಿ ಗೌಡ
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ (ಕೃಷಿ ಸಚಿವರು)
- ಡಾ:ವೈ.ಎ.ನಾರಾಯಣಸ್ವಾಮಿ
- ಶ್ರೀ ಎನ್.ರವಿಕುಮಾರ್
- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಜಯಮ್ಮ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಆ) ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2018**

- ಶ್ರೀ ಶಿವಾನಂದ ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)
- ಡಾ:ವೈ.ಎ.ನಾರಾಯಣಸ್ವಾಮಿ
- ಶ್ರೀ ಐವನ್ ಡಿ'ಸೋಜಾ
- ಡಾ:ತೇಜಸ್ವಿನಿ ಗೌಡ
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಪ್ರಕಾಶ್ ರಾಥೋಡ್
- ಶ್ರೀ ಪಿ.ಆರ್.ರಮೇಶ್
- ಶ್ರೀ ಆಯನೂರು ಮಂಜುನಾಥ್
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಹೆಚ್.ಎಂ.ರೇವಣ್ಣ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಇ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2018**

– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)
– ಶ್ರೀ ಸಿ.ಎಂ.ಇಬ್ರಾಹಿಂ
– ಡಾ:ವೈ.ಎ.ನಾರಾಯಣಸ್ವಾಮಿ
– ಡಾ:ತೇಜಸ್ವಿನಿ ಗೌಡ
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಪಿ.ಆರ್.ರಮೇಶ್
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಎಸ್.ಎಲ್.ಭೋಜೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಈ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2018**

– ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**9. ಪ್ರಕಟಣೆ**

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಉ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2018**

– ಶ್ರೀ ಆರ್.ವಿ.ದೇಶಪಾಂಡೆ (ಕಂದಾಯ ಸಚಿವರು)
– ಶ್ರೀ ಐವನ್ ಡಿ'ಸೋಜಾ
– ಶ್ರೀ ಆಯನೂರು ಮಂಜುನಾಥ್
– ಶ್ರೀ ಎಸ್.ಎಸ್.ಭೋಜೇಗೌಡ
– ಡಾ:ತೇಜಸ್ವಿನಿ ಗೌಡ
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಪ್ರಾಣೇಶ್.ಎಂ.ಕೆ.
– ಶ್ರೀ ಪಿ.ಆರ್.ರಮೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

ವಿಷಯ: ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ

- ಶ್ರೀ ಶಿವಾನಂದ ಪಾಟೀಲ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)
- ಡಾ:ಜಿ.ಪರಮೇಶ್ವರ್ (ಉಪ ಮುಖ್ಯ ಮಂತ್ರಿಗಳು)
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಆರ್.ಧರ್ಮಸೇನ
- ಶ್ರೀ ಎನ್.ರವಿಕುಮಾರ್
- ಶ್ರೀ ಎಸ್.ಎಲ್.ಭೋಜೇಗೌಡ
- ಡಾ:ತೇಜಸ್ವಿನಿ ಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ನಾರಾಯಣಸ್ವಾಮಿ
- ಅ.ದೇವೇಗೌಡ

**12. ಸಂತಾಪ ಸೂಚನೆ**

ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ 14 ಜನ ಮೃತರಾಗಿರುವ ಬಗ್ಗೆ ಹಾಗೂ ಬಾಯ್ಲರ್ ಸ್ಫೋಟದಿಂದ ಕುಲ್ಲಳ್ಳಿ ಗ್ರಾಮ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯಲ್ಲಿ 4 ಜನ ಮೃತರಾಗಿರುವ ಬಗ್ಗೆ

- ಡಾ:ಜಿ.ಪರಮೇಶ್ವರ್ (ಉಪ ಮುಖ್ಯಮಂತ್ರಿ, ಒಳಾಡಳಿತ, ಬೆಂಗಳೂರು ನಗರಾಭಿವೃದ್ಧಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ)

(ಅಗಲಿದ ಜನರ ಆತ್ಮಕ್ಕೆ ಶಾಂತಿ ಕೋರಿ ಸದನದಲ್ಲಿ ಒಂದು ನಿಮಿಷ ಮೌನವನ್ನಾಚರಿಸಲಾಯಿತು)

**********

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(471)17–12–2018 ಡಿಎಸ್–ಆರ್‌ಎನ್ 11.30

# ಕರ್ನಾಟಕ ವಿಧಾನ ಪರಿಷತ್ತು

**ಸೋಮವಾರ, 17ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**ವಿಷಯ:** ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ

-------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ತಮ್ಮ ಮುಂದೆ ಉಲ್ಲೇಖ ಮಾಡಬೇಕಾದ ಅವಶ್ಯಕತೆ ಇದೆ. ಮೊನ್ನೆಯ ದಿವಸ ನಾವು ಸದನವನ್ನು ಮುಗಿಸುವ ಸಮಯಕ್ಕೆ ಚಾಮರಾಜನಗರ ಜಿಲ್ಲೆಯ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ 14 ಮಂದಿ....

**ಸಭಾಪತಿಯವರು:-** ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ, ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮೊನ್ನೆ ತಾವು ರೂಲಿಂಗ್ ಕೊಟ್ಟಂತಹ ಸಂದರ್ಭದಲ್ಲಿ ಏನೇ ವಿಚಾರಗಳಿದ್ದರೂ ಪ್ರಶ್ನೋತ್ತರಗಳ ಬಳಿಕ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಇವತ್ತು ಸಹ ಅದೇ ರೀತಿಯ ವಿಚಾರ ಬಂದಿದೆ. ನಾವು ಸಮಯವನ್ನು ವ್ಯರ್ಥ ಮಾಡುವುದಕ್ಕಿಂತ ಈ ವಿಚಾರವನ್ನು ಪ್ರಶ್ನೋತ್ತರಗಳ ನಂತರ ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೆ, ಅದು international news ಆಗಿದೆ. ಆದ್ದರಿಂದ ಅವರು ಮಾತನಾಡಲಿ ಬಿಡಿ.

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರಗಳ ನಂತರ ಈ ವಿಚಾರದ ಬಗ್ಗೆ ನಾವು ಚರ್ಚೆ ಮಾಡೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಈ ಬಗ್ಗೆ ವಿರೋಧ ಪಕ್ಷದವರಿಗೆ ಯಾವ ಗೊಂದಲವೂ ಇಲ್ಲ. ಸದನ ಅತ್ಯಂತ ಅರ್ಥಪೂರ್ಣವಾಗಿ ನಡೆಯಬೇಕೆಂದು ಭಾವಿಸುವವರು ನಾವು. ಆದರೆ ನಿಯಮ 59ರ ಅಡಿಯಲ್ಲಿ ನಾವು ನಿಲುವಳಿ ಸೂಚನೆಯ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಚಾರದಲ್ಲಿ ರಾಜ್ಯದ ಮಹತ್ತರವಾದಂಥ ವಿಚಾರವಿದೆ. ನೂರಾರು ಜನರು ಇವತ್ತು ಆಸ್ಪತ್ರೆಯಲ್ಲಿದ್ದಾರೆ. ನಾನೇ ಖುದ್ದಾಗಿ ಅಲ್ಲಿಗೆ ಹೋಗಿ ಬಂದಿದ್ದೇನೆ. 10 ವರ್ಷದೊಳಗಿನ 12 ಮಕ್ಕಳು ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಜೀವನ್ಮರಣ ಹೋರಾಟದಲ್ಲಿರುವ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ಈಗಾಗಲೇ 14 ಜನರು ಸಾವನ್ನಪ್ಪಿದ್ದಾರೆ. ನನ್ನ ಕಣ್ಣೆದುರೇ ಎರಡು ಹೆಣಗಳು ಉರುಳುವುದನ್ನು ನೋಡುವಂತಹ ದುರ್ದಿನ ನನಗೆ ಬಂತು. ಈ ಹಿನ್ನೆಲೆಯಲ್ಲಿ ನಾನು ಕೊಟ್ಟಿರುವ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ಮಂಡಿಸುವುದಕ್ಕೆ ಐದು ನಿಮಿಷ ಅವಕಾಶ ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(472)17-12-2018(11-40)ಬಿಕೆಪಿ–ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು. . )**

ಎಲ್ಲಿಯವರೆಗೆ ಸರ್ಕಾರ ವಿಫಲವಾಗಿದೆ ಎಂದು ನಾನು ಈ ವಿಚಾರದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಷಯವಾಗಿದೆ ಎಂದು ನಮಗೂ ಸಹ ತಿಳಿದಿದೆ. ಇದರ ಬಗ್ಗೆ ಚರ್ಚೆ ಮಾಡೋಣ. ಇದನ್ನು ಪ್ರಶ್ನೋತ್ತರ ಅವಧಿ ಆದಮೇಲೆ ತೆಗೆದುಕೊಂಡರೆ ಒಳ್ಳೆಯದು.

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರಕ್ಕೂ ಮುನ್ನ ಇದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈ ವಿಚಾರದಲ್ಲಿ ನಮ್ಮದೇನೂ ಗೊಂದಲವಿಲ್ಲ. ನಾನು ಈ ನಿಲುವಳಿ ಸೂಚನೆಯನ್ನು ತಂದಿರುವಂತಹ ಹಿನ್ನೆಲೆಯಲ್ಲಿ . . . .

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ:–** ಈ ರೀತಿ ಮಾಡುತ್ತಾ ಹೋದಲ್ಲಿ, ನಾವೇ ಮಾಡಿಕೊಂಡಿರುವಂತಹ ಕಾನೂನನ್ನು ನಾವೇ ಉಲ್ಲಂಘನೆ ಮಾಡಿದಂತಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮಗೂ ಸಹ ಇದರ ಬಗ್ಗೆ ಕಾಳಜಿ ಇದೆ. ಆದ್ದರಿಂದ, ಇದನ್ನು ಪ್ರಶ್ನೋತ್ತರದ ನಂತರ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಅಲ್ಲಿನ ಜನರು ಸಾವು–ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದಾರೆ. 14 ಹೆಣಗಳು ಉರುಳಿ ಹೋಗಿವೆ. ಸರ್ಕಾರ ಸಂಪೂರ್ಣ ನಿಷ್ಕ್ರಿಯೆ ಆಗಿದೆ.

(ಗೊಂದಲ)

ಘಟನೆ ಸಂಭವಿಸಿ, 48 ಗಂಟೆಗಳಾದ ಮೇಲೆ ಆರೋಗ್ಯ ಸಚಿವರು ಅಲ್ಲಿಗೆ ಹೋಗುತ್ತಾರೆ. ಪರಿಸ್ಥಿತಿ ಎಷ್ಟೊಂದು ಗಂಭೀರ ಇದೆ ಎನ್ನುವುದನ್ನು ನೋಡಬೇಕು.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಇಲ್ಲಿ ಗಮನಿಸಬೇಕು. ಈ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಯಾರದ್ದೂ ಅಕ್ಷೇಪಣೆಗಳಿಲ್ಲ. ಪ್ರಶ್ನೋತ್ತರ ಅವಧಿ ಆದ ಮೇಲೆ ಈ ವಿಚಾರವನ್ನು ತೆಗೆದುಕೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಘಟನೆಯ ವಿಷಯ ತಿಳಿದ ತಕ್ಷಣವೇ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದಾರೆ. ಆ ಸಮಯದಲ್ಲಿ ವಿರೋಧ ಪಕ್ಷದ ನಾಯಕರು ಬೆಂಗಳೂರಿನಲ್ಲಿಯೇ ಇದ್ದರು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಮುಖ್ಯಮಂತ್ರಿಗಳ ಬಗ್ಗೆ ಆರೋಪ ಮಾಡುತ್ತಿಲ್ಲ. ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯ ನಂತರ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ದೇಶದ ಎಲ್ಲಾ ಮಾಧ್ಯಮಗಳು ನಮ್ಮ ಕಡೆ ನೋಡುತ್ತಿವೆ. ಈ ಬಗ್ಗೆ ಮಾನ್ಯ ಸಭಾಪತಿಯವರ ಕಡೆಯಿಂದ ಏನು ಆದೇಶ ಬರುತ್ತದೋ . . .

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ:–** ಪ್ರಶ್ನೋತ್ತರ ಅವಧಿಯ ನಂತರ ಇದರ ಬಗ್ಗೆ ನಾವು ಮಾತನಾಡೋಣ. ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಪೀಠದಿಂದ ಈ ಬಗ್ಗೆ ಏನು ಆದೇಶ ಕೊಡುತ್ತೀರೋ ಅದನ್ನು ನಾವು ಪಾಲಿಸುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

**ಸಭಾಪತಿಯವರು:–** ಪ್ರಶ್ನೋತ್ತರದ ನಂತರ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಸಚಿವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಪ್ರತಿಪಕ್ಷದವರಿಗೆ ಅವಕಾಶವನ್ನು ನಿರಾಕರಣೆ ಮಾಡುತ್ತಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ ಅವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ.

**ಸಭಾಪತಿಯವರು:–** ಶ್ರೀಯುತ ಭೋಜೇಗೌಡರವರೇ, ತಾವು ಮೊದಲು ಕುಳಿತುಕೊಳ್ಳಿ.

**ಡಾ॥ ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ ಎಂದು ಅವರು ಆದೇಶವನ್ನು ಕೊಡಬಾರದು. ಪ್ರತಿಪಕ್ಷದವರನ್ನು ಕುಳಿತುಕೊಳ್ಳಿ ಎಂದು ಪೀಠ ಹೇಳಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಅವಧಿಯ ನಂತರ ಈ ವಿಚಾರವನ್ನು ಉಲ್ಲೇಖ ಮಾಡಲಿಕ್ಕೆ ಅವಕಾಶ ಕೊಡುತ್ತೀರಿ ಎಂದು ನಂಬಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 715**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ತಮ್ಮ ಉತ್ತರವನ್ನು ಮಂಡಿಸಿದ್ದಾರೆ. ಆದರೆ, ಹಾರಂಗಿಯಲ್ಲಿ ಒಂದು ಪ್ರವಾಸೋದ್ಯಮ ಕೇಂದ್ರ ಇದೆ. ಅಲ್ಲಿ ಯಾವುತ್ತೂ ಸಹ ಅದನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಅಲ್ಲಿಗೆ ಮುಖ್ಯಮಂತ್ರಿಗಳು ಬರುವಾಗ ಮಾತ್ರ ಅದನ್ನು ನಿರ್ವಹಣೆ ಮಾಡುತ್ತಾರೆಯೇ ವಿನಹಃ ಬಾಕಿ ಸಂದರ್ಭದಲ್ಲಿ ಅದು ಖಾಲಿ ಬಿದ್ದಿರುತ್ತದೆ. ಜೊತೆಗೆ ಮಡಿಕೇರಿಯಲ್ಲಿ ರಾಜಾಸೀಟ್ ಇರುತ್ತದೆ. ಅದು ಜಿಲ್ಲಾ ಕೇಂದ್ರದಲ್ಲಿರುವುದರಿಂದ ಪ್ರವಾಸಿಗರೆಲ್ಲರೂ ಅಲ್ಲಿಗೆ ಬರುತ್ತಾರೆ. ಬರತಕ್ಕಂತಹ ಸಂದರ್ಭದಲ್ಲಿ ಅಲ್ಲಿ ಲೈಟ್ ಇರುವುದಿಲ್ಲ. ಮತ್ತೆ ಅದರ ಪಕ್ಕದಲ್ಲಿ ಟಾಯ್ ಟ್ರೈನ್ ಇದೆ. ಆ ಟಾಯ್ ಟ್ರೈನ್ ಸಹ ಓಡಾಡುತ್ತಿರುವುದಿಲ್ಲ. ಅದರ ಪಕ್ಕದಲ್ಲಿಯೇ ಒಂದು ಕೆರೆ ಇದೆ. ಆ ಕೆರೆಯನ್ನೂ ಸಹ ನಿರ್ವಹಣೆ ಮಾಡುತ್ತಿಲ್ಲ. ಮತ್ತೆ ಎಲ್ಲಾ ತೋಟಗಾರಿಕೆ ಪ್ರದೇಶಗಳಲ್ಲಿ ಉದ್ಯಾನವನ ಹಾಗೂ ನರ್ಸರಿಯ ಪಾಲನೆ ಮತ್ತು ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲ. ಹೀಗಾಗಿ, ಮಾನ್ಯ ಹಿರಿಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಇದರ ವಿಚಾರವಾಗಿ ಎರಡು ವರ್ಷಗಳ ಹಿಂದೆಯೇ ತೋಟಗಾರಿಕೆ ಇಲಾಖೆಯ ನಿರ್ದೇಶಕರಿಗೆ ನಾನು ಪತ್ರವನ್ನು ಬರೆದಿದ್ದೆ. ಆದರೆ, ಅದಕ್ಕೆ ಅವರು ಯಾವುದೇ ರೀತಿಯಲ್ಲಿ ಉತ್ತರವನ್ನು ಕೊಡಲಿಲ್ಲ. ಏಕೆಂದರೆ, ಈ ರಾಜಾಸೀಟ್ ಅನ್ನು ಸ್ವಲ್ಪ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಅದಕ್ಕೆ ಹೊಂದಿಕೊಂಡಂತೆ ಖಾಸಗಿಯವರ ಜಾಗವಿದ್ದು ಅದನ್ನು ಖರೀದಿ ಮಾಡಿ ಎಂದು ಹೇಳಿ ನಾನು ಪತ್ರವನ್ನು ಸಹ ಬರೆದಿದ್ದೆ. ಅದಕ್ಕೆ ಸರಿಯಾದ ಉತ್ತರವನ್ನು ಮಂತ್ರಿಗಳಾಗಲಿ, ಅಧಿಕಾರಿಗಳು ಕೊಡಲಿಲ್ಲ.

**ಶ್ರೀ ಎಂ.ಸಿ.ಮನಗೂಳಿ:-** ಮಾನ್ಯ ಸಭಾಪತಿಯವರೇ, ಸುಮಾರು 2 ಕಿ.ಮೀ ದೂರದಿಂದ ಖರೀದಿ ಮಾಡುವುದು ಅವಶ್ಯವಿಲ್ಲವೆಂದು ಸಮಿತಿ ನಿರ್ಧಾರ ಮಾಡಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅದು 2 ಕಿ.ಮೀ ದೂರದಲ್ಲಿ ಇಲ್ಲ. ಅದರ ಪಕ್ಕದಲ್ಲಿಯೇ ಆ ಜಾಗ ಇದೆ. ನಾನು ಮಡಿಕೇರಿಯ ನಿವಾಸಿಯಾಗಿದ್ದು, ಅಲ್ಲಿಯೇ ನಾನು ವಾಸಿಸುತ್ತಿದ್ದೇನೆ. ತಾವು ಅಲ್ಲಿಗೆ ಒಂದು ಬಾರಿ ಭೇಟಿ ಕೊಟ್ಟರೆ ನಾನು ತಮಗೆ ಎಲ್ಲವನ್ನೂ ತೋರಿಸುತ್ತೇನೆ.

**ಶ್ರೀ ಎಂ.ಸಿ.ಮನಗೂಳಿ:** ಈ ವಿಚಾರವಾಗಿ ತಮ್ಮೊಂದಿಗೆ ಒಂದು ಸಭೆಯನ್ನು ಕರೆದು ಇದರ ಬಗ್ಗೆ ವಿಚಾರ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 759**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲಾ ಪ್ರಶ್ನೆಗಳಿಗೂ ಸಹ ಉತ್ತರವನ್ನು ಕೊಟ್ಟಿದ್ದಾರೆ. ಕೃಷಿ ಭಾಗ್ಯ ಯೋಜನೆಯಡಿ ಹಸಿರುಮನೆ (ಪಾಲಿಹೌಸ್) ನಿರ್ಮಾಣ ಮಾಡುವುದರಲ್ಲಿ ಹಲವಾರು ಷರತ್ತುಗಳಿವೆ ಮತ್ತು ಈಗಾಗಲೇ ಜಿಲ್ಲಾವಾರು ಏನೇನು ಕೊಟ್ಟಿದ್ದಾರೆ, ಏನೇನು ಹಣವನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. ಆದರೆ, ನನ್ನ ಪ್ರಶ್ನೆ ಇರತಕ್ಕಂತಹದ್ದು ಏನೆಂದರೆ, ಈ ಒಂದು ಯೋಜನೆಯಡಿಯಲ್ಲಿ ಏನು ದಲಿತರಿಗೆ ಕೊಡಬೇಕಾದಂತಹದ್ದಕ್ಕೆ ಬಹಳ ಷರತ್ತುಗಳಿವೆ. ಈ ಷರತ್ತುಗಳಿಂದ ಅವರು ಯಾವುದೇ ಈ ಒಂದು ಯೋಜನೆಯ ಉಪಯೋಗವನ್ನು ಪಡೆದುಕೊಳ್ಳಲಿಕ್ಕೆ ಆಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ತಾಲ್ಲೂಕಿಗೆ ಒಂದು ಹಸಿರು ಮನೆಯನ್ನು ಕೊಡುತ್ತಿದ್ದಾರೆ. ಮತ್ತೆ, ಇದಕ್ಕೆ ಸರ್ಕಾರ ಏನು 40 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದೆ, ಇದಕ್ಕೆ 5 ಲಕ್ಷ ರೂಪಾಯಿಗಳನ್ನು ಬ್ಯಾಂಕಿನವರು ಕೊಡಬೇಕಾಗುತ್ತದೆ. ಆದರೆ, ಆ ಬ್ಯಾಂಕಿನವರು ಇವರುಗಳಿಗೆ ಸರಿಯಾದ ರೀತಿಯಲ್ಲಿ ಸಹಕಾರವನ್ನು ಕೊಡುತ್ತಿಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ ಸರ್ಕಾರ ಸ್ವಲ್ಪಮಟ್ಟಿಗೆ ಮುಂದೆ ನಿಂತು 5 ಲಕ್ಷ ರೂಪಾಯಿಗಳನ್ನು ಬ್ಯಾಂಕುಗಳ ಮುಖಾಂತರ ಕೊಡಿಸುವಂತಹ ಕೆಲಸವನ್ನು ಮಾಡಬೇಕು. ಮತ್ತೆ 1 ಎಕರೆಗೆ ದಲಿತರಿಗೆ ಕೊಟ್ಟರೆ ಅದನ್ನು ಇಬ್ಬರಿಗೆ ಒಂದರಂತೆ ಮಾಡಿಕೊಡುತ್ತಿದ್ದಾರೆ. ಜೊತೆಗೆ ಬೇರೆಯವರು ಸಹ ದಲಿತರ ಹೆಸರಿನಲ್ಲಿ ಮಾಡುತ್ತಿದ್ದಾರೆ. ಅದನ್ನು ಲಾಟರಿ ಮೂಲಕ ಮಾಡುತ್ತಿದ್ದಾರೆಂದು ನನಗೆ ಒಂದು ದೂರು ಬಂದಿದೆ. ಅದೆಲ್ಲವನ್ನೂ ಬಹಳ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಈಗಾಗಲೇ 40 ಲಕ್ಷದಂತೆ ಕೊಡುತ್ತಿದ್ದಾರೆ, ಅದನ್ನು ಇಳಿಕೆ ಮಾಡಲಿಕ್ಕೆ ಅಧಿಕಾರಿಗಳು ಚಿಂತನೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ದಯಮಾಡಿ, ಅದನ್ನು ಇಳಿಕೆ ಮಾಡುವುದು ಬೇಡ. ಅದನ್ನು ಇಳಿಕೆ ಮಾಡಿದರೆ ಏನಾಗುತ್ತದೆ ಎಂದರೆ ಇವರುಗಳಿಗೆ ಈಗಾಗಲೇ ಕೈಯಲ್ಲಿ ದುಡ್ಡು ಇರುವುದಿಲ್ಲ, ಇಳಿಕೆ ಮಾಡಿದರೆ 7 ರಿಂದ 8 ಲಕ್ಷ ರೂಪಾಯಿಗಳು ಒಬ್ಬ ದಲಿತನ ತಲೆ ಮೇಲೆ ಬರುತ್ತದೆ. ಅವನು ಆ ದುಡ್ಡನ್ನು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಈಗ ಇರುವಂತಹ ಯೋಜನೆಯನ್ನೇ ತಾವು ಮುಂದುವರಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಸಿ.ಮನಗೂಳಿ:–** ಮಾನ್ಯ ಸಭಾಪತಿಯವರೇ, ಹೆಚ್ಚಿನ ಹಣದ ಅವಕಾಶ ಮತ್ತು ಫಲಾನುಭವಿಗಳನ್ನು ಹೆಚ್ಚು ಮಾಡುವ ಸಲುವಾಗಿ ನಾವು ಈಗಾಗಲೇ ಸಮಾಜ ಕಲ್ಯಾಣ ಮಂತ್ರಿಗಳಿಗೆ ವಿನಂತಿ ಮಾಡಿಕೊಂಡಿದ್ದೇವೆ. ಈ ನಿಟ್ಟಿನಲ್ಲಿ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಸಹ ಪ್ರಸ್ತುತ ಸದನದಲ್ಲಿ ಹಾಜರಿರುವುದರಿಂದ ಈ ಸಂದರ್ಭದಲ್ಲಿ ಅವರಿಗೆ SCP (Special Component Plan) ಹಣ ಬಿಡುಗಡೆ ಮಾಡಿಕೊಡಬೇಕೆಂದು ಅವರಿಗೂ ಸಹ ನಾನು ಮನವಿ ಮಾಡುತ್ತಿದ್ದೇನೆ.

**(ಮುಂದಿನ ಪ್ರಶ್ನೆ ಶ್ರೀ ಆರ್.ಬಿ. ತಿಮ್ಮಾಪುರ್ ರವರದ್ದಾಗಿದ್ದು, ಅದಕ್ಕೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ)**

**ಪ್ರಶ್ನೆ ಸಂಖ್ಯೆ 801**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕದ ಯಾವ್ಯಾವ ಜಿಲ್ಲೆಗಳಲ್ಲಿ ರೇಷ್ಮೆ ಉದ್ಯಮವಿದೆ; ಭಾರತದ ರೇಷ್ಮೆ ಉತ್ಪತ್ತಿಯಲ್ಲಿ ಕರ್ನಾಟಕದ ಪಾಲೆಷ್ಟು; ಮತ್ತು ರೇಷ್ಮೆ ಉದ್ಯಮದಿಂದ ಹುಳು ಸಾಕಾಣಿಕೆ ಮತ್ತು ನೂಲು ಉತ್ಪತ್ತಿಯಿಂದ ಸೃಷ್ಟಿಯಾಗಿರುವ ಉದ್ಯೋಗಾವಕಾಶಗಳೆಷ್ಟು; ಮತ್ತು ಗ್ರಾಮೀಣ ರೇಷ್ಮೆ ಬೆಳೆಗಾರರಿಗೆ ವಿಶೇಷ ಒತ್ತು, ಯೋಜನೆ ರೂಪಿಸಲಾಗಿದೆಯೇ; ಮತ್ತು ರೇಷ್ಮೆ ವಸ್ತ್ರ ತಯಾರಿಕಾ ಉದ್ಯಮದಲ್ಲಿ ಆಧುನಿಕತೆ ಅಳವಡಿಸಲಾಗಿದೆಯೇ; ಮತ್ತು ಮಾರುಕಟ್ಟೆ ವಿಸ್ತರಣೆಗೆ ಅನುಸರಿಸಿರುವ ಉತ್ತೇಜನಕಾರಿ ಕ್ರಮಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ತಾವು ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು, ರೇಷ್ಮೆ ನೂಲು ತೆಗೆಯುವ ಘಟಕ, ಟಿ.ನರಸೀಪುರ ಮತ್ತು ರೇಷ್ಮೆ ನೇಯ್ಗೆ ಘಟಕ, ಚನ್ನಪಟ್ಟಣದ ಬಗ್ಗೆ ಉಲ್ಲೇಖ ಮಾಡಿದ್ದೀರಿ. ಚನ್ನಪಟ್ಟಣದಲ್ಲಿರುವ ರೇಷ್ಮೆ ನೇಯ್ಗೆ ಘಟಕ ಯಾವ ಹಂದು ಸ್ಥಗಿತ ಸ್ಥಿತಿಯಲ್ಲಿದೆ ಎಂದು ತಮಗೆ ಗೊತ್ತಿದೆ. ವಿಶೇಷವಾಗಿ, 13,67,912 ಉದ್ಯೋಗಾವಕಾಶಗಳನ್ನು ಕಲ್ಪಿಸುವಲ್ಲಿ ಮತ್ತು ರೇಷ್ಮೆ ಹುಳು ಸಾಕಾಣಿಕೆಯಿಂದ 12,99,894 ಉದ್ಯೋಗಾವಕಾಶ ಇದೆ. ಅಂದರೆ ಹುಳು ಸಾಕಾಣಿಕೆ ಮಾಡುವಂತಹದ್ದು ವಿಶೇಷವಾಗಿ ಈ ಭಾಗದ ಕೃಷಿಕರು. ಆದರೆ, ರೇಷ್ಮೆ ನೂಲು ಉತ್ಪಾದನೆಯಿಂದ 68,018 ಉದ್ಯೋಗ ಮಾತ್ರ ಸೃಷ್ಟಿಯಾಗಿದೆ. ತಾವು ಈ ಬಗ್ಗೆ ಏನೇನು ಕ್ರಮವನ್ನು ವಹಿಸಿದ್ದೀರಿ ಎಂದು ಹೇಳಿದ್ದೀರಿ, ಅದರ ಅನುಷ್ಠಾನದ ವಿಷಯವಾಗಿ ಬಂದಾಗ ಒಟ್ಟು 15 ಅಂಶಗಳನ್ನು ಹೇಳಿದ್ದೀರಿ. ರೇಷ್ಮೆ ಬೆಳೆಗಾರರಿಗೆ ವಿಶೇಷ ಒತ್ತು, ಯೋಜನೆ ಬಗ್ಗೆ ಹೇಳಲಾಗಿದೆ. ಅದರಲ್ಲಿ ಪಾವಗಡ ತಾಲ್ಲೂಕಿನಲ್ಲಿ ರೇಷ್ಮೆ ಗೂಡಿನ ಧಾರಣೆ ಕುಸಿತದ ಸಂದರ್ಭದಲ್ಲಿ ಒಣಗಿಸಿದ ರೇಷ್ಮೆ ಗೂಡುಗಳನ್ನು ಶೇಖರಣೆ ಮಾಡಲು ರೇಷ್ಮೆ ಗೂಡು (Cocoon Bank) ಬ್ಯಾಂಕ್ ಅನ್ನು ಸ್ಥಾಪಿಸಲಾಗಿದೆ ಎನ್ನುವುದು ಒಂದು ವಿಚಾರ. ರೇಷ್ಮೆ ಗೂಡಿನ ಧಾರಣೆ ಕುಸಿತದ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ, ಅದು ಎಷ್ಟು ಎಂದು ಹೇಳಿ ವಿವರವನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೊಟ್ಟಿಲ್ಲ. ಮತ್ತೆ ದ್ವಿದಳ ಬಿತ್ತನೆ ಬೆಳೆಗಾರರ ಪ್ರೋತ್ಸಾಹಧನದ ಬಗ್ಗೆ ಹೇಳಿದ್ದೀರಿ. ಆದರೆ, ಅದಕ್ಕೆ ಸಂಬಂಧಪಟ್ಟ ಹಾಗೆ ನನಗೆ ಅಂಕಿ–ಸಂಖ್ಯೆಯನ್ನು ಒದಗಿಸಿಲ್ಲ. ವಿಶೇಷವಾಗಿ ಎಷ್ಟು ಒದಗಿಸಲಾಗುತ್ತಿದೆ, ಏನು ಕೊರತೆ ಇದೆ ಎನ್ನುವುದರ ಬಗ್ಗೆ ವಿವರ ಬೇಕಾಗಿತ್ತು.

(473) 17.12.2018 11.50 SV-VK

**(ಸಭಾಪತಿಯವರ ಉಪಸ್ಥಿತಿ)**

**ಡಾ:ತೇಜಸ್ವಿನಿ ಗೌಡ (ಮುಂದು):–**

ರೇಷ್ಮೆ ವಸ್ತ್ರ ತಯಾರಿಕಾ ಘಟಕದ ಬಗ್ಗೆ ಬಂದಾಗ ರೇಷ್ಮೆ ನೂಲು ತೆಗೆಯುವುದಕ್ಕೆ ಚೈನಾ ದೇಶದಿಂದ ಆಮದು ಮಾಡಿಕೊಂಡ ಸ್ವಯಂಚಾಲಿತ ರೀಲಿಂಗ್ ಯಂತ್ರವನ್ನು ಟಿ.ನರಸೀಪುರದಲ್ಲಿ ಸ್ಥಾಪನೆ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿರುತ್ತಾರೆ. ಮಾರಾಟ ಮಳಿಗೆಗಳ ಮುಖಾಂತರ ನಮ್ಮ ರೇಷ್ಮೆ ಮಾರುಕಟ್ಟೆಯನ್ನು ವೃದ್ಧಿ ಮಾಡಬೇಕಾಗಿದೆ. ಭಾರತದ ರೇಷ್ಮೆ ಉತ್ಕೃಷ್ಟ ರೇಷ್ಮೆ. ಶೇ.42ರಷ್ಟು ರೇಷ್ಮೆಯನ್ನು ಕರ್ನಾಟಕದಿಂದ ಒದಗಿಸಲಾಗುತ್ತಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಒಳ್ಳೆಯ ರೀತಿಯಲ್ಲಿ ಮಾರುಕಟ್ಟೆಯನ್ನು ಒದಗಿಸದಿದ್ದರೆ ನಮ್ಮ ವ್ಯಾಪಾರವಾಗುವುದು ಹೇಗೆ? ಅದರಿಂದ ಉತ್ಪಾದನೆಯೂ ಸಹ ಸ್ಥಗಿತಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ಬಯಸುತ್ತೇನೆ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:–** ಮಾನ್ಯ ಸಭಾಪತಿಯವರೇ, ರೇಷ್ಮೆಗೂಡಿನ ಬೆಲೆ ಕಡಿಮೆಯಾದಂತಹ ಸಂದರ್ಭದಲ್ಲಿ ಮಿಶ್ರ ತಳಿಗೆ ಪ್ರಾರಂಭಿಕವಾಗಿ ಪ್ರತಿ ಕಿಲೋಗ್ರಾಂಗೆ ರೂ.300ಕ್ಕಿಂತಲೂ ಕಡಿಮೆ ಬಂದರೆ ಅದನ್ನು market intimation ಮಾಡಿ ಸರ್ಕಾರದಿಂದ ಹಣ ತುಂಬಿಸುವಂತಹ ಕೆಲಸವನ್ನು ಮಾಡಲಾಗುತ್ತದೆ. ಎರಡನೇ ಶ್ರೇಣಿಗೆ ಪ್ರತಿ ಕಿಲೋಗ್ರಾಂಗೆ ರೂ.265/– ಹಾಗೂ ಮೂರನೇ ಶ್ರೇಣಿ ಪ್ರತಿ ಕಿಲೋಗ್ರಾಂಗೆ ರೂ.220/– ರ ಪ್ರಕಾರ minimum prise ಅನ್ನು ಒದಗಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ. Bivoltine ತಳಿಗೆ ಕನಿಷ್ಠ ಬೆಂಬಲ ಬೆಲೆ ಪ್ರತಿ ಕಿಲೋಗ್ರಾಂಗೆ ರೂ.350/–, ಎರಡನೇ ಶ್ರೇಣಿಗೆ ಪ್ರತಿ ಕಿಲೋಗ್ರಾಂಗೆ ರೂ.300/–, ಮೂರನೇ ಶ್ರೇಣಿಗೆ ರೂ.250/– ಕೊಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಕಡಿಮೆ ಬಿದ್ದಾಗ ಸರ್ಕಾರವೇ market intimation ಮಾಡಿ ಹಣವನ್ನು ತುಂಬಿ ರೈತರಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಬರಗಾಲದ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಟ್ಟಿರುತ್ತೀರಿ. ವಿಶೇಷವಾಗಿ ದಕ್ಷಿಣ ಕರ್ನಾಟಕದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಬೆಂಗಳೂರು ಗ್ರಾಮಾಂತರ, ತುಮಕೂರು, ಮೈಸೂರು, ಚಿತ್ರದುರ್ಗ, ಹಾಸನ ಭಾಗದಲ್ಲಿ ಇದ್ದಂತಹ ಈ ಕೃಷಿ ಇಂದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿಯೂ ಸಹ ಹೆಚ್ಚು ಪ್ರಚಲಿತವಾಗುತ್ತಿದೆ. ಬರಗಾಲದ ಸಂದರ್ಭ ಹಾಗೂ ಕಡಿಮೆ ಮಳೆಯ ಪ್ರಮಾಣದಿಂದಾಗಿ ನೀರಾವರಿ ಇಲ್ಲದ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟ 1500 ರಿಂದ 1700 ಅಡಿ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಳಕ್ಕೆ ಇಳಿದಿದೆ. ಒಬ್ಬ ರೈತನಿಗೆ ಒಂದು ಕೊಳವೆ ಬಾವಿಗೆ 8 ರಿಂದ 10 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ರೈತ ಉಪಯೋಗ ಮಾಡುವ ವೆಚ್ಚವನ್ನು ನಾವು ಗಮನದಲ್ಲಿಟ್ಟುಕೊಂಡರೆ, ನಾವು ರೇಷ್ಮೆ ಗೂಡಿಗೆ ಕೊಡತಕ್ಕಂತಹ ಬೆಲೆ ಅನುಪಾತದ ದೃಷ್ಟಿಯಿಂದ ಬಹಳ ಕಡಿಮೆಯಾಗುತ್ತದೆ. ಮಾರುಕಟ್ಟೆ ಬಗ್ಗೆ ಬಂದಾಗ ಮೈಸೂರು ರೇಷ್ಮೆಯ ಇಳುವರಿ ಕಡಿಮೆ ಬರುತ್ತದೆ. ಎರಡು ನೂರು ವರ್ಷಗಳ ಇತಿಹಾಸವಿರುವ ಮೈಸೂರು ರೇಷ್ಮೆಯ ಬಗ್ಗೆ ಸಂಶೋಧನೆಯಿಂದ ಕಂಡು ಬಂದಿರುವ ಒಂದು ವಿಶೇಷ ಗುಣವೆಂದರೆ ಇಳುವರಿ ಕಡಿಮೆ ಬಂದರೂ ಸಹ ಬೆಲೆ ಜಾಸ್ತಿ ಇರುತ್ತದೆ. ಬೇಸಿಗೆ ಕಾಲದಲ್ಲಿ ತಣ್ಣನೆಯ ಅನುಭವ, ಚಳಿಗಾಲದಲ್ಲಿ ಬಿಸಿಯಾದ ಅನುಭವವನ್ನು ನೀಡುವುದು ಮೈಸೂರು ರೇಷ್ಮೆಯ ವೈಶಿಷ್ಟ್ಯತೆಯಾಗಿದೆ. ಅದರ ಮಾರುಕಟ್ಟೆಯ ದೃಷ್ಟಿಯಿಂದ, ಮಳಿಗೆಗಳನ್ನು ತೆರೆಯಲಾಗಿದೆ. ತಮಿಳುನಾಡು ಹಾಗೂ ಆಂಧ್ರ ಸರ್ಕಾರಗಳ ಮಾರುಕಟ್ಟೆಯ ಕೌಶಲ್ಯವನ್ನು ಹೋಲಿಸಿದರೆ ನಾವು ಕರ್ನಾಟಕದ ರೇಷ್ಮೆಯನ್ನು ಮಾರುಕಟ್ಟೆ ಮಾಡುವಲ್ಲಿ ಕೈಗೊಂಡಿರುವ ಕ್ರಮಗಳು ಹೆಚ್ಚು ಪರಿಣಾಮಕಾರಿಯಾಗದಿರುವುದು ಕಂಡು ಬರುತ್ತದೆ. ಕೈಮಗ್ಗದ ನೇಯ್ಗೆಯು ಪರಂಪರಾಗತ ಕೌಶಲ್ಯದ ಉದ್ಯಮ. ಆದ್ದರಿಂದ ಇಲಾಖೆಯು ಅವರಿಗೆ ಹೆಚ್ಚಿನ ರೀತಿಯ ನಿರಂತರವಾದ ಸ್ಥಿರಬೆಲೆಯನ್ನು ಕೊಡದಿದ್ದಲ್ಲಿ ಆ ಉದ್ಯಮಗಳು ಬದುಕುವುದು ಕಷ್ಟವಾಗುತ್ತದೆ ಎಂದು ಮಾನ್ಯ ಸಚಿವರ ಗಮನವನ್ನು ಸೆಳೆದು ಅದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಮಾರುಕಟ್ಟೆ ವೃದ್ಧಿಯಾಗಬೇಕಾಗಿದೆ. ಥಾಯ್‌ಲ್ಯಾಂಡಿನಲ್ಲಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಹಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಮಾರುಕಟ್ಟೆ ವರ್ಧನೆಗೆ ಏನೇನು scope ಇದೆಯೋ ಅದರ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಹರಿಸಲಿದೆ.

**ಶ್ರೀ ಆರ್.ಧರ್ಮಸೇನ-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾರುಕಟ್ಟೆಯ ಬಗ್ಗೆ ಮಾತ್ರ ಹೇಳುತ್ತಿದ್ದಾರೆ. ರೇಷ್ಮೆ ಬೆಳೆಗಾರರ ಬಗ್ಗೆಯೂ ಕೂಡ ಸ್ವಲ್ಪ ಹೆಚ್ಚಿನ ಗಮನವನ್ನು ಹರಿಸಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ರೇಷ್ಮೆ ಬೆಳೆಯಲ್ಲಿ ಎರಡು ವಿಧಗಳಿವೆ. ಒಂದು ಬಿತ್ತನೆ ವಲಯ, ಮತ್ತೊಂದು bivoltine. ಬಿತ್ತನೆ ವಲಯಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಡದಿದ್ದರೆ ನಮಗೆ ರೇಷ್ಮೆ ಉತ್ಪತ್ತಿಯಲ್ಲಿ ತೊಂದರೆಯಾಗುತ್ತದೆ. ಆ ವಿಷಯದಲ್ಲಿ ಹಿಂದೆ ಮಾಗಡಿ ಮತ್ತು ರಾಮನಗರ ಭಾಗದಲ್ಲಿ ರೇಷ್ಮೆ ಬೆಳೆ ಬಿದ್ದು ಹೋದಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಬೆಂಬಲ ಬೆಲೆಯನ್ನು ನೀಡಿದ್ದರು. ಇಂದು ಅದು ಕುಂಠಿತವಾಗಿದೆ. ರೇಷ್ಮೆಯ ವಿಷಯದಲ್ಲಿ ಟಿಪ್ಪು ಸುಲ್ತಾನ್ ಅವರನ್ನು ನೆನಪಿಸಿಕೊಳ್ಳಬೇಕು. ಕರ್ನಾಟಕದಲ್ಲಿ ರೇಷ್ಮೆಯನ್ನು ತೆಗೆದವರೇ ಟಿಪ್ಪು ಸುಲ್ತಾನ್ ಅವರು. ಅಂದಿನಿಂದ ಇಂದಿನವರೆವಿಗೂ ಅದು ರೈತರಿಗೆ ಉಪ ಕಸುಬು. ಮೊಟ್ಟೆಯಿಂದ ಬಟ್ಟೆಯವರೆವಿಗೂ ರೈತರು ಒಳಪಟ್ಟಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಕೈಮಗ್ಗದಲ್ಲಿ ಕೃಷಿ ಮಾಡುವಂತಹವರಿಗೆ working capital ಆಗಿ ರೂ.3 ಲಕ್ಷದವರೆವಿಗೆ 0% ಬಡ್ಡಿಯಲ್ಲಿ ಸಾಲ ಕೂಡ ಕೊಡುತ್ತಿದ್ದೇವೆ. ಸುಮಾರು 619 ಕಸುಬುದಾರರಿಗೆ ಇನ್ನೂ ಹೆಚ್ಚು ಉತ್ತೇಜನ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಬೆಲೆ ಕುಸಿತಕ್ಕೆ ಬಹಳಷ್ಟು ಕಾರಣಗಳಿವೆ. Import duty ಕೂಡ ಕೇಂದ್ರ ಸರ್ಕಾರದಲ್ಲಿ ಮೊದಲು ಜಾಸ್ತಿ ಇತ್ತು. ಬಹುಶಃ ಅದು ಈಗ ಕಡಿಮೆಯಾಗಿದೆ. ಅದನ್ನು ಏರಿಸತಕ್ಕಂತಹ ಕೆಲಸ ಕೂಡ ಆಗಬೇಕಾಗಿದ್ದು, ಅದರಿಂದಲೂ ಕೂಡ ಬೆಲೆ ಕುಸಿತ ಸಂಭವಿಸುತ್ತದೆ. ಚೈನಾದಿಂದ ಹೆಚ್ಚು ಆಮದಾಗಿರುವಂತಹದ್ದು ಕೂಡ ಇದಕ್ಕೆ ಒಂದು ಕಾರಣವಾಗುತ್ತದೆ. ಬಹುಶಃ Import duty ಕೂಡ ಹೆಚ್ಚಿಸಿದರೆ ಅದನ್ನು ಸ್ವಲ್ಪ ತಡೆ ಹಿಡಿಯುವುದಕ್ಕೆ ಅವಕಾಶವಿದೆ. ಮಾನ್ಯ ಸದಸ್ಯರು ಹೇಳಿದಂತಹ ಹಲವಾರು ಸಲಹೆಗಳನ್ನು ಪರಿಶೀಲಿಸಿ, ಸರ್ಕಾರ ಕ್ರಮ ಕೈಗೊಳ್ಳುತ್ತದೆ.

**ಪ್ರಶ್ನೆ ಸಂಖ್ಯೆ 749**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿರುವುದೇ ಒಂದು, ನನಗೆ ನೀಡಿರುವ ಉತ್ತರವೇ ಮತ್ತೊಂದು. 2014ರಿಂದ ಈ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದೇನೆ. ದೇಶದಲ್ಲಿರುವ ಒಟ್ಟು ಅಡಿಕೆ ಬೆಳೆಗಾರರಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು ಶೇ.51 ಅಡಿಕೆ ಬೆಳೆಗಾರರಿದ್ದಾರೆ. ಆಮದು ಮತ್ತು ರಫ್ತು ಇಲ್ಲಿಂದಲೇ ಆಗುತ್ತದೆ. ಅಡಿಕೆ ಬೆಳೆಗೆ ಕೊಳೆರೋಗ ಬರುತ್ತದೆ. ಅಡಿಕೆ ಬೆಳೆಗಾರರ ರಕ್ಷಣೆಗಾಗಿ ರಾಜ್ಯ ಸರ್ಕಾರದಿಂದ ಅಡಿಕೆ ಬೆಳೆಗಾರರ ಮಂಡಳಿಯನ್ನು ರಚನೆ ಮಾಡಬೇಕೆಂದು ನಾನು ಕೇಳಿದ್ದೆನು. ಈ ಹಿಂದೆ ಪ್ರಶ್ನೆಯನ್ನು ಕೇಳಿದ್ದಾಗ ತೋಟಗಾರಿಕಾ ವಿಶ್ವವಿದ್ಯಾಲಯಕ್ಕೆ ಅದರ ಬಗ್ಗೆ ಅಧ್ಯಯನ ಮಾಡುವುದಕ್ಕಾಗಿ ಕಳುಹಿಸಲಾಗಿದೆ ಎಂದು ಹೇಳಿದ್ದರು. ಅಧ್ಯಯನವಾದ ನಂತರ ತೋಟಗಾರಿಕೆ ವಿಶ್ವವಿದ್ಯಾಲಯದಿಂದ ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ಅಡಿಕೆ ಬೆಳೆಗಾರರ ಮಂಡಳಿಯನ್ನು ರಚನೆ ಮಾಡುವ ಅವಶ್ಯಕತೆ ಇದೆ ಎಂದು ವರದಿ ಬಂದಿತು. ವರದಿಯನ್ನು ಕೊಟ್ಟು ಮೂರು ವರ್ಷಗಳು ಕಳೆದಿದ್ದು, ವರದಿ ಈಗ ನನ್ನ ಕೈಯಲ್ಲಿದೆ. ಇದುವರೆವಿಗೂ ಅದರ ಬಗ್ಗೆ ಕೇಳಿದಾಗ ಅದು ಪರಿಶೀಲನೆಯಲ್ಲಿದೆ ಎಂಬುದಾಗಿ ಉತ್ತರವನ್ನು ನೀಡುತ್ತಿರುತ್ತಾರೆ. ಅಡಿಕೆ ಬೆಳೆಗಾರರ ಮಂಡಳಿಯನ್ನು ರಚನೆ ಮಾಡಲು ತೋಟಗಾರಿಕೆ ಇಲಾಖೆ ಮತ್ತು ವಿಶ್ವವಿದ್ಯಾಲಯ ನೀಡಿದ ವರದಿಯನ್ನು ಜಾರಿಗೊಳಿಸಲು ಸರ್ಕಾರಕ್ಕಿರುವ ಅಡ್ಡಿ -ಆತಂಕಗಳೇನು ಎಂಬುದಾಗಿ ನಾನು ಪ್ರಶ್ನೆಯನ್ನು ಕೇಳಿದ್ದೆನು. ಇಂದು ನೀಡಿರುವ ಉತ್ತರದಲ್ಲಿ ಇದು ಸರ್ಕಾರದ ಪರಿಶೀಲನೆಯಲ್ಲಿದ್ದು, ಅಡಿಕೆ ಮಂಡಳಿ ರಚಿಸುವುದು ಅವಶ್ಯಕವೆಂದು ಅಭಿಪ್ರಾಯ ಪಡಲಾಗಿದೆ ಎಂದು ಹೇಳಿರುತ್ತಾರೆ. ಈ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಅಡಿಕೆ ಬೆಳೆಗೆ ಕೊಳೆ ರೋಗ ಬಂದು ಅಡಿಕೆ ಬೆಳೆಗಾರರಿಗೆ ರೂ.500 ಕೋಟಿಗಳಿಗೂ ಹೆಚ್ಚು ನಷ್ಟವಾಗಿದೆ ಎಂಬ ವಿಷಯ ತಮಗೂ ಸಹ ತಿಳಿದಿದೆ. ಅಷ್ಟಾದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಸರ್ಕಾರ ಈ ವಿಚಾರದಲ್ಲಿ ಮೀನ–ಮೇಷ ಎಣಿಸುವುದು ಸರಿಯಲ್ಲ. ನಾನು ಇದರ ಬಗ್ಗೆ ಇಷ್ಟು ವರ್ಷಗಳಿಂದಲೂ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದು, ನನ್ನ ಕಡತವು ದೊಡ್ಡದಾಗಿದೆ. 2014ರಿಂದ 2018ರವರೆಗೆ ಸತತವಾಗಿ ಪ್ರಶ್ನೆಯನ್ನು ಕೇಳುತ್ತಾ ಬಂದಿದ್ದರೂ, ಸಮಂಜಸವಾದ ಉತ್ತರ ಲಭಿಸಿರುವುದಿಲ್ಲ. ಒಂದು ವೇಳೆ ಸಚಿವರು ಆಗುವುದಿಲ್ಲ ಎಂದು ಹೇಳಿದರೆ, ಸದನದ ಬಾವಿಯೊಳಗೆ ತೆರಳುವುದೊಂದೇ ನನಗೆ ಉಳಿದಿರುವ ದಾರಿ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಂ.ಸಿ.ಮನಗೂಳಿ:–** ಮಾನ್ಯ ಸಭಾಪತಿಯವರೇ, ಅಡಿಕೆ ಮಂಡಳಿಯ ರಚನೆಯ ಬಗ್ಗೆ ಇರತಕ್ಕಂತಹ ಸಾಧಕ – ಬಾಧಕಗಳನ್ನು ಪರಿಶೀಲಿಸಿ, ಮಾನ್ಯ ಸದಸ್ಯರ ಬೇಡಿಕೆಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ತೋಟಗಾರಿಕೆ ವಿಶ್ವವಿದ್ಯಾಲಯವು ನೀಡಿರುವ ವರದಿಯ ಆಧಾರದಲ್ಲಿ ಅಡಿಕೆ ಮಂಡಳಿಯನ್ನು ರಚನೆ ಮಾಡಲಿಕ್ಕೆ ಸರ್ಕಾರ ಸಿದ್ಧವಾಗಬೇಕಾಗಿತ್ತು. ಆದರೆ ಅದು ವಿಳಂಬವಾಗಿದೆ. ಒಂದು ವೇಳೆ ತೋಟಗಾರಿಕಾ ಮಂತ್ರಿಗಳಿಗೆ ಆ ಬೆಳೆಯ ಬಗ್ಗೆ ಅಥವಾ ಬೇರೆ ರೀತಿಯ ಏನಾದರೂ ಸಮಸ್ಯೆಯಿದ್ದಲ್ಲಿ ಸರ್ಕಾರದ ಕಡೆಯಿಂದ ಹೇಳಿಕೆಯನ್ನು ಮಾಡಬೇಕು. ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ಡಿ'ಸೋಜರವರು ಬಾವಿಗೆ ಹೋಗುವುದು ಬೇಡ, ನಾವು ಸಿದ್ಧರಾಗಿದ್ದೇವೆ. ಆದರೆ ಕೆಲವು ಬಾರಿ ಮಂತ್ರಿಗಳಿಗೆ ಕೆಲವು ವಿಚಾರಗಳಲ್ಲಿ ಸಮಸ್ಯೆಯಿರುತ್ತದೆ. ಆದ್ದರಿಂದ ದಯಮಾಡಿ ಪ್ರಶ್ನೋತ್ತರ ವೇಳೆ ಮುಗಿಯುವುದರೊಳಗಾಗಿಯಾದರೂ ಸರ್ಕಾರದಿಂದ ಉತ್ತರಿಸಬೇಕು.

**ಶ್ರೀ ಎಂ.ಸಿ.ಮನಗೂಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ನಾನು ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೆನು. ಅಡಿಕೆ ಬೆಳೆಗಾರರಿಗೆ ಕೇಂದ್ರ ಸರ್ಕಾರದಿಂದ ಏನಾದರೂ ಸಹಾಯವನ್ನು ನೀಡಲಾಗುತ್ತಿದೆಯೇ ಎಂದು ಕೇಳಿದ್ದೆನು. ಅಡಿಕೆ ಬೆಳೆಗಾರರ ಮಂಡಳಿಯನ್ನು ರಚಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ದೊರಕುತ್ತಿಲ್ಲ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದಲೂ ಸಹ ಇದಕ್ಕೆ ಅನುದಾನವನ್ನು ಕೊಡುವಂತಹ ಅವಶ್ಯಕತೆ ಇದೆ ಎಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಲಿಚ್ಛಿಸುತ್ತೇನೆ.

(474) 17.12.2018 (12.00) ಕೆಜಿ.ವಿಕೆ

**ಪ್ರಶ್ನೆ ಸಂಖ್ಯೆ 781**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ವಿವರವಾಗಿ ಒದಗಿಸಿದ್ದಾರೆ. ಆದರೆ, ಉತ್ತರವನ್ನು ನಿಖರವಾಗಿ ಒದಗಿಸಿದ್ದಾರೆಂದು ನನಗೆ ಅನಿಸುವುದಿಲ್ಲ. ಕೃಷಿ ಇಲಾಖೆಯಲ್ಲಿ ಪದವೀಧರರಲ್ಲದ ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆಯಿಂದ ಕೃಷಿ ಅಧಿಕಾರಿಗಳ ಹುದ್ದೆಗೆ ಮುಂಬಡ್ತಿ ನೀಡಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಳೆಯ ವೃಂದ ಮತ್ತು ನೇಮಕಾತಿ (ಸಿ ಅಂಡ್ ಆರ್) ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರದ ಚಿಂತನೆ ನಡೆಸಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಕೃಷಿ ಪದವೀಧರರಲ್ಲದ ಪದವೀಧರರು ಕೃಷಿ ಇಲಾಖೆಯಲ್ಲಿ 25/30 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರು ಬಡ್ತಿ ವಂಚಿತರಾಗಿದ್ದಾರೆ. 1995 ರಲ್ಲಿ ಕೆ.ಎ.ಟಿ., ನಿರ್ದೇಶನ ಪಡೆದು ನಂತರ ಅವರಿಗೆ ಮುಂಬಡ್ತಿ ಕೊಟ್ಟಿದ್ದಾರೆ. ಆದರೆ, 1984 ರಿಂದ ಇಲ್ಲಿಯವರೆಗೆ ಸಿ ಅಂಡ್ ಆರ್ ನಿಯಮಗಳಿಗೆ ತಿದ್ದುಪಡಿ ಮಾಡದೆ ಹೆಚ್ಚು ಜನ ಸಹಾಯಕ ಕೃಷಿ ಅಧಿಕಾರಿಗಳಾಗಿ ನೇಮಕಾತಿ ಹೊಂದಿ ಸಹಾಯಕ ಕೃಷಿ ಅಧಿಕಾರಿಗಳಾಗಿಯೇ ಸೇವೆ ಸಲ್ಲಿಸಿ ಯಾವುದೇ ಮುಂಬಡ್ತಿ ಇಲ್ಲದೆಯೇ ಹಾಗೆಯೇ ನಿವೃತ್ತಿ ಹೊಂದಿದ್ದಾರೆ. ಅದಕ್ಕೆ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಕೃಷಿ ಪದವೀಧರರಲ್ಲದವರು 25 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರು ಸಹ ಬಡ್ತಿ ವಂಚಿತರಾಗಿದ್ದಾರೆ. ಉಳಿದರು ಇನ್ನು 400 ಜನ ಇದ್ದಾರೆ. ತಮ್ಮ ಉತ್ತರದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಬಗ್ಗೆಯೂ ಪರಿಶೀಲಿಸಲಾಗುತ್ತಿದ್ದು, ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಹೇಳಿದ್ದಾರೆ. ಅಂದರೆ, ಅದು ನಿಖರವಾಗಿ ಇಲ್ಲ. 400 ಜನ ಸಿಬ್ಬಂದಿ ವಂಚಿತರಾಗಿ ಹೋಗುತ್ತಾರೆ. ಆದ್ದರಿಂದ, ದಯಮಾಡಿ ಕೃಷಿ ಪದವೀಧರರಲ್ಲದವರಿಗೂ ಸಹ ಬಡ್ತಿ ಕೊಡುವ ನಿಟ್ಟಿನಲ್ಲಿ ಸಿ ಅಂಡ್ ಆರ್ ನಿಯಮ 1984 ಕ್ಕೆ ತಿದ್ದುಪಡಿ ತರದೇ ಇದ್ದರೂ ಸಹ, ಎರಡನೆ ಪ್ರಶ್ನೆಗೆ 'Does not arise as the process of bringing comprehensive amendments to the Cadre and Recruitment rules is under examination. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವನ್ನು ನೋಡಿದರೆ, ನನಗೆ 2ನೇ ಪ್ರಶ್ನೆಗೆ ಭಯ ಏನೆಂದರೆ, ಪರಿಶೀಲಿಸಲಾಗುವುದು ಎಂದು ಇದೆ. ಮುಂದಿನ ಪ್ರಶ್ನೆಗೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ದಯಮಾಡಿ ಇದಕ್ಕೆ ನಿಖರವಾಗಿ ಉತ್ತರವನ್ನು ಕೊಡಬೇಕೆಂದು ಬಯಸುತ್ತೇನೆ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಪರಿಶೀಲಿಸಲಾಗುತ್ತಿದೆ ಎಂದರೆ, ಸರ್ಕಾರ ಅದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತಿದೆ ಎಂದು ಅರ್ಥ. ಸಿ ಅಂಡ್ ಆರ್ ನಿಯಮಗಳಲ್ಲೂ ಸಹ ಬದಲಾವಣೆ ತರಲು ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಇದರ ಬಗ್ಗೆ Commissionerate Office ನಲ್ಲಿ ಅಧಿಕಾರಿಗಳು ಸಹ ಕ್ರಮ ವಹಿಸಿದ್ದಾರೆ. ಆದಷ್ಟು ಬೇಗ ಈ ಸಮಸ್ಯೆಗಳನ್ನು ಬಗೆಹರಿಸುವಂತ ಕೆಲಸವನ್ನು ಸರ್ಕಾರ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಪರಿಶೀಲಿಸಲಾಗುವುದೆಂದು ಹೇಳಿದ್ದಾರೆ. ಆದರೆ, ಇದನ್ನು ಒಂದು time bound ಒಳಗೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, 25 ವರ್ಷಗಳಿಂದ ಹಾಗೆಯೇ ಇದೆ. ಕೇವಲ 400 ಜನ ಮಾತ್ರ ಇಲಾಖೆಯಲ್ಲಿ ಉಳಿದ್ದಾರೆ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಎರಡು ತಿಂಗಳಲ್ಲಿ ಬಗೆಹರಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದನ್ನು ಎರಡು ತಿಂಗಳಲ್ಲಿ ಬಗೆಹರಿಸುತ್ತೇವೆಂದು ಹೇಳಿದ್ದಾರೆ, ಅವರಿಗೂ ಸಹ ಇದರಲ್ಲಿ ಅವಕಾಶವನ್ನು ಕಲ್ಪಿಸಬೇಕೆಂಬ ಮನವಿಯನ್ನು ಮಾಡುತ್ತೇನೆ.

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಅವಕಾಶವನ್ನು ಕೊಡುವುದಕ್ಕೆ ಮಾಡುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 767**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಚೆನ್ನಾಗಿ ಮತ್ತು ಪ್ರಮಾಣಿಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ, ನಮಗೆ ಸಂತೋಷವಾಗಿದೆ. ಹಿಂದೆ ವಿದ್ಯಾರ್ಥಿ ಚಳುವಳಿಯಲ್ಲಿ ಇದ್ದಂತಹ ಸಂದರ್ಭದಲ್ಲಿ ನಾನು ABVP (Akhil Bharatiya Vidyarthi Parishad) ಕಾರ್ಯಕರ್ತನಾಗಿದ್ದೆ. ಆ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ ಎಂದರೆ ಏನೆಂದು ಯಾರಾದರೂ ಕೇಳಿದರೆ ಜ್ಞಾನ, ಶೀಲ, ಏಕತೆ ಎಂದು ಹೇಳುತ್ತಿದ್ದೇವು. ಮಾಧ್ಯಮದವರು ಸಹ ಅದೇ ತರಹ ನೇರ, ದಿಟ್ಟ, ನಿರಂತರ ಎಂದು ಇಟ್ಟುಕೊಂಡಿದ್ದಾರೆ. ಹಿಂದುಳಿದ ವರ್ಗಗಳ ಇಲಾಖೆಯವರು ಉತ್ತರವನ್ನು ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಸ್ವಂತ ಕಟ್ಟಡ ಹೊಂದಿದ/ಬಾಡಿಗೆ ಕಟ್ಟಡಗಳ ಸಂಖ್ಯೆ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಲಿಖಿತ ಉತ್ತರದಲ್ಲಿ ಸ್ವಂತ, ಉಚಿತ, ಬಾಡಿಗೆಗಳು ಕಟ್ಟಡಗಳು ಎಂದು ಉತ್ತರ ಕೊಟ್ಟಿದ್ದಾರೆ. ಅದೇರೀತಿಯಲ್ಲಿ ಇಲಾಖೆ ಇದೆ. 2017-2018 ರಲ್ಲಿ ಬಿ.ಜೆ.ಪಿ ಯವರು ಸರ್ಕಾರಿ ಹಾಸ್ಟೆಲ್‌ಗಳ ಪರಿಸ್ಥಿತಿಯ ಬಗ್ಗೆ ಸರ್ವೆ ಮಾಡಿ 'ಭೂಲೋಕದ ನರಕ' ಎಂದು ಮಾಡಿದ್ದೇವು. ನನಗೆ ಇದರ ಬಗ್ಗೆ ಬಹಳ ಸಂತೋಷವಾಗಿದೆ. ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಬಹಳ ಆಸ್ತಕಿ ತೆಗೆದುಕೊಂಡು ಹಾಸ್ಟೆಲ್‌ಗಳನ್ನು ಪುನರ್‌ಚೇತನ ಮಾಡಬೇಕೆಂದು

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಿಗೆ ಒಂದು ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ನಮಲ್ಲೆರಿಗೂ ಪತ್ರ ಬರೆದಿದ್ದಾರೆ. ಇದರಲ್ಲಿ ಏನು ಬದಲಾವಣೆ ಮಾಡಬೇಕು ಎನ್ನುವುದರ ಬಗ್ಗೆ ಒಂದು ಪ್ರಮಾಣಿಕವಾದಂತಹ ಪಯತ್ನ ನಡೆಯುತ್ತಿದೆ. ತಮ್ಮಲ್ಲೂ ಸಹ ಇದನ್ನು ಮಾಡಬೇಕು ಎನ್ನುವಂತಹ ಅಪೇಕ್ಷೆಯನ್ನು ವಕ್ತಪಡಿಸುತ್ತೇನೆ ಇದು ಮೊದಲನೆಯದು. ಎರಡನೆಯ ಸಂಗತಿಯೆಂದರೆ, ಮಾನ್ಯ ಸಚಿವರು ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಬಹಳ ಪ್ರಮಾಣಿಕವಾದ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದ್ದೇನೆ. ಅದಕ್ಕೆ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಹೌದು ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ, ಇದನ್ನು ಯಾವಾಗ ಉದ್ಧಾರ ಮಾಡುತ್ತಾರೆ ಎನ್ನುವುದು, ಬಾಡಿಗೆ ಕಟ್ಟಡಗಳಲ್ಲಿ ಇರವಂಥದ್ದು ಮತ್ತು ಉಚಿತವಾಗಿ ಕೊಟ್ಟಿರುವುದರಲ್ಲಿ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದಾರೆ. ಆ ರೀತಿ ಆಗಬಾರದು. ಅದಕ್ಕೂ ಸಹ ಒಂದು ಶಶ್ವಾತವಾಗಿರುವಂತಹ ಕಟ್ಟಡಗಳ ನಿರ್ಮಾಣ ಮಾಡುವಂಥದ್ದು ಮತ್ತು ಇರುವಂತಹ ಕಟ್ಟಡಗಳಿಗೆ ಕಾಯಕಲ್ಪ ಕೊಡಬೇಕಾಗಿರುವಂಥದ್ದು, ಸುಧಾರಣೆ ಮಾಡುವಂಥದ್ದನ್ನು ಯಾವಾಗ ಮಾಡುತ್ತಾರೆ ಎನ್ನುವಂಥದ್ದು. ಮೂರನೆ ಪ್ರಶ್ನೆ ಏನೆಂದರೆ, ನನ್ನದು ಸಿಂಧಗಿ ತಾಲ್ಲೂಕ್. ಆ ತಾಲ್ಲೂಕಿನ ತಿಳಗೋಳ ಗ್ರಾಮಕ್ಕೆ ಒಂದು ಹಾಸ್ಟೆಲ್ ಮಂಜೂರಾಗಿತ್ತು. ಈ ಹಾಸ್ಟೆಲ್ ವಿಚಾರಕ್ಕೂ ಸಹ ನಾವು ರಾಜಕಾರಣ ಮಾಡುತ್ತೇವೆಂದರೆ, ನಮಗೆ ನಾಚಿಕೆಯಾಗುವಂತಹ ಸ್ಥಿತಿ ಎಂದು ನಾನು ಭಾವಿಸುತ್ತೇನೆ. ತಿಳಗೋಳ ಗ್ರಾಮಕ್ಕೆ ಹಾಸ್ಟೆಲ್ ಕೊಡುತ್ತಾರೆ, ಅದನ್ನು ರಾಜಕೀಯ ಒತ್ತಡದಿಂದ ಬಿಂಜಲಭಾವಿ ಗ್ರಾಮಕ್ಕೆ ಶಿಫ್ಟ್ ಮಾಡುತ್ತಾರೆ. ಈ ಎರಡು ಕಡೆಯೂ ಅವಶ್ಯಕತೆಯಿದೆ ಎಂದು ಹೇಳಿ ಕಳೆದ ಮೂರು ವರ್ಷಗಳಿಂದ ನನ್ನ ಎರಡು ಜೊತೆ ಚಪ್ಪಲಿ ಸವೆದಿದೆ. ಆದರೆ, ಮಾನ್ಯ ಸಚಿವರು ಒಪ್ಪಿಕೊಂಡಿರುವ ಪ್ರಕಾರ, ಹಿಂದುಳಿದ ವರ್ಗಗಳಿಗೆ 246 ಹೊಸ ಹಾಸ್ಟೆಲ್‌ಗಳ ಬೇಡಿಕೆ ಇದೆ. ಅಹಿಂದ ಸರ್ಕಾರ ಎಂದು ಹೇಳಿಕೊಂಡವರು ಏನೂ ಮಾಡದೆ ಹೋಗಿದ್ದಾರೆ. ಇದಕ್ಕೆ ಈಗ ಏನಾದರೂ ಮಾಡುತ್ತಾರೆಯೇ ಎಂದು ಕೇಳಿದರೆ, ಮಾನ್ಯ ಸಚಿವರು "ಹೊಸ ವಿದ್ಯಾರ್ಥಿ ನಿಲಯದ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನ್ನು ಅವಲಂಬಿಸಿರುತ್ತದೆಂದು" ಹೇಳಿದ್ದಾರೆ. ಮಾನ್ಯ ಸಚಿವರ ಉತ್ತರದಿಂದ ನನಗೆ ಮೊತ್ತೊಂದು ಸಂಶಯ ಹುಟ್ಟಿದೆ. ಅವರ ಬೇಡಿಕೆ ಎಷ್ಟಿದೆ, ಅವರ ಅನುದಾನ ಎಷ್ಟಿದೆ, ಈ ಉತ್ತರವನ್ನು ನೋಡಿದರೆ ಅವರು ಈ ಅವಧಿಯೊಳಗೆ ಮಾಡುವಂತಹ ಇಚ್ಛಾಶಕ್ತಿ ಅಥವಾ ದೃಢತೆ ಕಾಣಿಸುತ್ತಿಲ್ಲ. ಅದಕ್ಕೆ ಇದನ್ನು ಯಾವಾಗ ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಆ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಅಳವಡಿಕೊಂಡು ಅದರ ಬಗ್ಗೆ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ನಾಳೆ ಅದರ ಸಭೆ ಇದೆ. ಆ ಸಭೆಗೆ ತಮನ್ನು ಸಹ ಆಹ್ವಾನಿಸಲಾಗಿದೆ. ಇದು ಕೇವಲ Social

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Welfare Department ಗಳಷ್ಟೇ ಸೀಮಿತವಾಗುವುದಿಲ್ಲ. ನಮ್ಮ entire Committee finding report ಏನು ಇರುತ್ತದೆ ಅದರ ಎಲ್ಲಾ ಸಲಹೆ ಸೂಚನೆಗಳು ಇರಬಹುದು, ಅದು Backward or Minority Hostels ಗಳು ಇದ್ದರೂ ಸಹ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ಮೇಲೆ ಸಾಕಷ್ಟು Backward Hostels ಗಳು ಮತ್ತೆ Residential Institutes ಏನಿವೆ, Christ ಅವರು ಸಹ ಮಾಡುತ್ತಿದ್ದಾರೆ. ನಾವು ಬಂದ ಮೇಲೆ ನಿರಂತರವಾಗಿ Video Conference ಗಳನ್ನು ಮಾಡಿದ್ದೇವೆ. ಈಗಾಗಲೇ 104 ನಿವೇಶನಗಳನ್ನು ಕಳೆದ ಐದು ತಿಂಗಳಲ್ಲಿ ಪಡೆದಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರ ಬಳಿ ಮನವಿ ಮಾಡಿದ್ದೇವೆ. ಅದಕ್ಕೆ ರೂ.2,500 ಕೋಟಿ ರೂಪಾಯಿಗಳ ಬೇಡಿಕೆ ಇದೆ. ಅದಕ್ಕೆ ಯಾವ ರೀತಿ ಅನುದಾನವನ್ನು ತರಬೇಕು ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾರ್ಗ ಸೂಚನೆ ನೀಡಿದ್ದಾರೆ. ಅದನ್ನು ಸಹ ನಾಳೆ ಸಭೆಯಲ್ಲಿ ಪ್ರಸ್ತಾವನೆ ಮಾಡುತ್ತೇನೆ. ನಮ್ಮ ಹಾಸ್ಟೆಲ್‌ಗಳ ವಿಚಾರದ ಬಗ್ಗೆ ಮಾನ್ಯ ಸದಸ್ಯರಿಗೆ ಬಹಳ ಕಾಳಜಿ ಇದೆ. ನಮಗೂ ಸಹ ಇದೆ. ನಾವೆಲ್ಲರೂ ನಾಳಿನ ಸಭೆಯಲ್ಲಿ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುತ್ತೇವೆ ಎಂಬ ಮಾತನ್ನು ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಸ್‌ಸಿ ಮತ್ತು ಎಸ್‌ಟಿ ಹಾಸ್ಟೆಲ್‌ಗಳಿಗೆ 105 ಜಾಗವನ್ನು ಹುಡಿಕಿದ್ದಾರೆ. ಆದರೆ, Backward class ಗೆ ಎಷ್ಟು ಎಂದು ಹೇಳಬೇಕು.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಯಾವುದು Backward Hostels or Residential Institutes ಇವೆ, which is under Christ. ಅದಕೂ ಸಹ ನಾವು ಮಾಡುತ್ತಿದ್ದೇವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಯಾವ ರೀತಿ ಹಿಂದುಳಿದ ಸಚಿವರ ಬದಲಿಗೆ ಮಾನ್ಯ ಸಚಿವರಾದ ಪ್ರಿಯಾಂಕ ಖರ್ಗೆಯವರು ಉತ್ತರ ಕೊಟ್ಟಿದ್ದಾರೆ. ಹಿಂದುಳಿದ ವರ್ಗವಗಳ ಇಲಾಖೆ missing ಇದೆ. ಅಲ್ಪಸಂಖ್ಯಾತರ ಇಲಾಖೆಗೆ ಮಾನ್ಯ ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮಗಳಡಿ ಅಲ್ಲೂ ಸಹ ಕೆಲಸ ಚೆನ್ನಾಗಿ ಆಗುತ್ತಿದೆ. ನಮ್ಮ SCP (Special Component Plan) / TSP (Tribal Sub Plan) ಅನುದಾನ ಲಭ್ಯತೆಯಲ್ಲಿ ನಮ್ಮ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಿಗೆ ಮಾಡುವುದಕ್ಕೆ ಅವಕಾಶ ಇದೆ. ಆದರೆ, ಹಿಂದುಳಿದ ವರ್ಗಗಳ ಇಲಾಖೆ ಇದರ ಮಧ್ಯದಲ್ಲಿ ಸಿಕ್ಕಿ ಹಾಕಿಕೊಂಡು ತ್ರಿಶಂಕು ಸ್ಥಿತಿಯನ್ನು ಅನುಭವಿಸುತ್ತಿದೆ. ಅಲ್ಲಿ ಅನುದಾನದ ಕೊರತೆ ಇದೆ. ನಾನು ಮಾನ್ಯ ಸಚಿವರುಗಳಿಗೆ ಪತ್ರ ಬರೆದಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಸಮಾಜ ಕಲ್ಯಾಣ ಇಲಾಖೆಯ ಸಚಿವರೆ Christ ನೋಡುತ್ತಾರೆ. ಹಾಗಾಗಿ, ಅವರು ಸಭೆ ಕರೆದಾಗ ನಾನು ಬರುತ್ತೇನೆಂದು ಹೇಳಿದ್ದಾರೆ. ಇವತ್ತು ಹಿಂದುಳಿದ ವರ್ಗಗಳ ಒಟ್ಟು ಇಲಾಖೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ನನಗೆ ತಿಳಗೊಳ ಗ್ರಾಮಕ್ಕೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವಾಗ ಹಾಸ್ಟೆಲ್ ಕೊಡುತ್ತಾರೆಂಬ ಬಗ್ಗೆ ಒಂದು ಸ್ಪಷ್ಟ ಉತ್ತರ ಕೊಡಿ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯನ್ನು ಉದ್ಧಾರ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ **ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಇದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ ಸುಮಾರು ವಸತಿ ನಿಲಯಗಳು ಬಾಡಿಗೆಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಎಲ್ಲಾ ಸೌಕರ್ಯಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವಂತಹ ಸಂದರ್ಭದಲ್ಲಿ ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಆಗುವುದಿಲ್ಲ. ಜಾಗದ ಕೊರತೆ ಇದೆ. ನಮ್ಮದೇ ಆದಂತಹ ಕಟ್ಟಡಗಳನ್ನು ಮಾಡಿದಾಗ ಮಾತ್ರ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಸಾಧ್ಯವಾಗುತ್ತಿದೆ. ಮಾನ್ಯ ಸದಸ್ಯರು ಕೇಳಿರುವಂತಹ ಇನ್ನೊಂದು ವಿಷಯಕ್ಕೆ ಸಂಬಂಧಪಟ್ಟಂತೆ, ಬಿಂಜಲಭಾವಿ ಗ್ರಾಮಕ್ಕೆ ಹಾಸ್ಟೆಲ್ ಮೊದಲೇ approval ಆಗಿತ್ತು. ತದನಂತರ ಜನಪ್ರತಿನಿಧಿಗಳ ಅಥವಾ ಸ್ಥಳೀಯ ಜನರ ಒತ್ತಾಯದ ಮೇರೆಗೆ ಅದನ್ನು ಬದಲಾವಣೆ ಮಾಡಲಾಯಿತು. ತದನಂತರ ಬಿಂಜಲಭಾವಿ ಗ್ರಾಮಕ್ಕೆ ಹಾಸ್ಟೆಲ್ ಕೊಡಲಾಗಿದೆ. ಅಲ್ಲದೇ, ಆದಷ್ಟು ಬೇಗ ತಿಳಗೊಳ ಗ್ರಾಮಕ್ಕೂ ಹಾಸ್ಟೆಲ್ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

(475)17–12–2018(12–10)ಎಂವಿ–ಬಿಎನ್‌ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪುಟ್ಟರಂಗಶೆಟ್ಟಿ (ಮುಂದು):–** ಮಾನ್ಯ ಸಭಾಪತಿಯವರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಯಾವ ರೀತಿ ಮಾಡಿದ್ದಾರೆಯೋ, ಅದೇರೀತಿ ನಾವು ಮೊದಲು ಅದನ್ನು ಪರಿಶೀಲನೆ ಮಾಡಿ ಅವರು ಮಾಡಿದ ಹಾಗೆಯೇ ಮಾಡುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಈ ಇಲಾಖೆಯಲ್ಲಿ ಸಮಿತಿ ಮಾಡುವುದಕ್ಕೆ ಸಮಸ್ಯೆ ಏನು? ಇದಕ್ಕೆ ಮಾನ್ಯ ಸಚಿವರು ಹೇಳಿಕೆ ನೀಡಿ, ಒಪ್ಪಿಗೆ ಕೊಡಲಿ. ಅವರು ಅದನ್ನು ಮಾಡುತ್ತಿದ್ದಾರೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೆ, ಈಗ ಎಲ್ಲಾ ವ್ಯವಸ್ಥೆ ಒಂದೇ ರೀತಿ ಇದೆ. ಅದನ್ನು ನಾವು ಮಾಡಿದರೆ ಏನು, ಅವರು ಮಾಡಿದರೆ ಏನು?

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ಈ ಹಿಂದೆ ಇದು ಸಮಾಜ ಕಲ್ಯಾಣ ಇಲಾಖೆಯ ಜೊತೆಯಲ್ಲಿಯೇ ಇದ್ದಂತಹ ಇಲಾಖೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಅವರ ಇಲಾಖೆಯ ಷೇರುಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಹಿಂದುಳಿದ ವರ್ಗಗಳ ಇಲಾಖೆಯ ಷೇರು ಸಿಗುತ್ತಿಲ್ಲ. ಈ ಇಲಾಖೆಗೆ ಪ್ರತ್ಯೇಕ ಸಚಿವರು ಇದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದು ಅಸಮಾಧಾನ ಮಾಡಿ, ಸುಮ್ಮನೆ ಸಮಾಧಾನ ಮಾಡಿದಂತಾಯಿತು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, Backward Class Welfare Minister ಇರುವಾಗ, he should take the responsibility.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಮಾಹಿತಿಗಾಗಿ, ಮುಂಚೆ ಎಸ್.ಸಿ. ಮತ್ತು ಎಸ್.ಟಿ. ಹಾಸ್ಟೆಲ್‌ನಲ್ಲಿ ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳೇ ಇರುತ್ತಿದ್ದರು. ಈಗ ಎಸ್.ಸಿ. ಮತ್ತು ಎಸ್.ಟಿ. ಹಾಸ್ಟೆಲ್‌ನಲ್ಲಿ ಶೇಕಡಾ 25ರಷ್ಟು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇರುತ್ತಾರೆ ಮತ್ತು ಹಿಂದುಳಿದ ವರ್ಗಗಳ ಹಾಸ್ಟೆಲ್‌ನಲ್ಲಿ ಶೇಕಡಾ 25ರಷ್ಟು ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳು ಇರುತ್ತಾರೆ. ಆ ರೀತಿಯ ವ್ಯವಸ್ಥೆಯನ್ನು ಕೂಡ ನಾವು ಮಾಡಿದ್ದೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಮಾನ್ಯ ಪ್ರಿಯಾಂಕ ಖರ್ಗೆಯವರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ರಾಜ್ಯದಲ್ಲಿ ಈ ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟಂತೆ ಒಂದು ಇಲಾಖೆ ಇದ್ದು, ಅದಕ್ಕೆ ಒಬ್ಬರು ಸಚಿವರು ಇರುವುದರಿಂದ, ಇದಕ್ಕೂ ಸಹ ಪ್ರತ್ಯೇಕವಾಗಿ ಒಬ್ಬರು ಸಚಿವರನ್ನು ನೇಮಕ ಮಾಡಬೇಕೆಂಬುದು ನಮ್ಮ ಆಗ್ರಹ.

**(ಗೊಂದಲ).**

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ಇವತ್ತಿಗೂ ಕೆಲವೊಂದು ಇಲಾಖೆಗಳು, ಈಗ KREIS (Karnataka Residential Educational Institutions Society) ಇಲಾಖೆ ಇದೆ, ಅದು ಸಮಾಜ ಕಲ್ಯಾಣ ಇಲಾಖೆಯ ಆದೇಶದ ಮೇಲೆ ಕಾರ್ಯ ನಿರ್ವಹಿಸುತ್ತಿದೆ. ಅದು ಇನ್ನು ನಮ್ಮ ಇಲಾಖೆಯಲ್ಲಿ ವಿಲೀನಗೊಂಡಿಲ್ಲ. ನಾವು ಇದನ್ನೆಲ್ಲಾ ನೋಡಿಕೊಂಡು ಸಮಿತಿ ರಚನೆ ಮಾಡಿ ಅದನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಚುಕ್ಕೆ ಪ್ರಶ್ನೆ ಸಂಖ್ಯೆ: 807)**
**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ಗೈರು ಹಾಜರಾಗಿದ್ದರು)**

**(ಚುಕ್ಕೆ ಪ್ರಶ್ನೆ ಸಂಖ್ಯೆ: 818)**
**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮನವರು ಗೈರು ಹಾಜರಾಗಿದ್ದರು.)**

**(ಚುಕ್ಕೆ ಪ್ರಶ್ನೆ ಸಂಖ್ಯೆ: 790)**
**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಗೈರು ಹಾಜರಾಗಿದ್ದರು)**

**(ಪ್ರಶ್ನೆ ಸಂಖ್ಯೆ: 745)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಹಾಪ್‌ಕಾಮ್ಸ್‌ಗಳ ಬಗ್ಗೆ ಇದ್ದು, ಹಣ್ಣು ಮತ್ತು ತರಕಾರಿಗಳಂತಹ perishable products ಏನಿದೆ, ಇವುಗಳನ್ನು ರೈತರಿಂದ ಪಡೆದು ಗ್ರಾಹಕರಿಗೆ ಕೊಡುವಂತಹ ಒಂದು ಕೊಂಡಿ ಈ ಹಾಪ್‌ಕಾಮ್ಸ್ ಆಗಿದೆ ಎಂದು ನಾವು ಅಂದುಕೊಂಡಿದ್ದೇವೆ. ಆದರೆ, ಈ ಹಾಪ್‌ಕಾಮ್ಸ್‌ಗಳು ಬಹಳ ಸೀಮಿತವಾಗಿ ಕೆಲಸ ಮಾಡುತ್ತಿವೆ. ಕೇವಲ 22 ನಗರಗಳಲ್ಲಿ ಮಾತ್ರ ಹಾಪ್‌ಕಾಮ್ಸ್ ಕೆಲಸ ಮಾಡುತ್ತಿದೆ ಎಂದು ನನಗೆ ಕೊಟ್ಟಿರುವಂತಹ ಉತ್ತರದಲ್ಲಿ ಇದೆ. ಇಡೀ ಕರ್ನಾಟಕದ ಲಕ್ಷಾಂತರ ಜನ ರೈತರು ಹಣ್ಣು, ತರಕಾರಿ ಮತ್ತು ದಿನನಿತ್ಯದ ಏನು ಅವಶ್ಯಕತೆಗಳಿವೆ, ನಮ್ಮ ಇಡೀ ಕರ್ನಾಟಕದ ಜನತೆಗೆ ಅವರು ಬೆಳೆಯುವಂಥ ಪದಾರ್ಥಗಳನ್ನು ತಲುಪಿಸಲಾಗುತ್ತದೆ. ಆದರೆ, ಆ ಪದಾರ್ಥಗಳನ್ನು ಬೆಳೆದಂಥ ರೈತರಿಗೆ ಯಾವುದೇ ತರಹದ ಬೆಂಬಲ ಬೆಲೆಯಾಗಲಿ, supporting ಬೆಲೆಯಾಗಲಿ ಯಾವುದೇ ಒಂದು attempt ಅನ್ನು ಮಾಡದೆ ಇರುವಂಥದ್ದು ಇವತ್ತಿನ ಈ ಉತ್ತರದಿಂದ ಕಾಣುತ್ತಿದೆ. ಇಲ್ಲಿ A.P.M.C. (Agricultural Produce Market Committee) ಯಿಂದ ಕೊಡತಕ್ಕಂಥದ್ದು, ಕೇವಲ ಏನು ಕೃಷಿ ಉತ್ಪನ್ನಗಳು ಇರಬಹುದು ಮತ್ತು ತೋಟಗಾರಿಕೆ ಉತ್ಪನ್ನಗಳು ಇರಬಹುದು. ಇವುಗಳೆರಡಕ್ಕೂ ಕೊಡುವಂಥದ್ದಕ್ಕೆ A.P.M.C.ಗೆ ಅವಕಾಶ ಇದೆ. ಆದರೆ, A.P.M.C.ಯಲ್ಲಿ ಎಷ್ಟು effective ಆಗಿ ಅದನ್ನು ಕೊಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು ಸಹ ಬಹಳ ಅವಶ್ಯಕವಾಗಿದೆ. ಇಲ್ಲಿ ಏಜೆಂಟ್ಸ್ ಇರುತ್ತಾರೆ. ಆ ಏಜೆಂಟ್ಸ್ ಮುಖಾಂತರ ಈ ಕೆಲಸ ಕಾರ್ಯಗಳು ಆಗುತ್ತಿವೆ. ಉದಾಹರಣೆಗೆ ಹೇಳುವುದಾದರೆ, ಹಾಪ್‌ಕಾಮ್ಸ್‌ನಲ್ಲಿ ನೂರು ಕೆ.ಜಿ. ಬದನೆಕಾಯಿ ಅವಶ್ಯಕತೆ ಇದ್ದರೆ. ಅವರು ಅಷ್ಟನ್ನು ಮಾತ್ರ ಖರೀದಿ ಮಾಡುತ್ತಾರೆ. ಅದೇರೀತಿ ಸುಮಾರು ಐನೂರು ಕೆ.ಜಿ. ಬೆಂಡೇಕಾಯಿ ಬೇಕಾದರೆ, ಅವರು ಅಷ್ಟನ್ನು ಮಾತ್ರ ಖರೀದಿ ಮಾಡುತ್ತಾರೆ. ಆದರೆ, ರೈತರು ಬೆಳೆದ ಸಾವಿರಾರು ಕೆ.ಜಿ. ಬೆಳೆಯನ್ನು ಖರೀದಿಸಿ ಅದಕ್ಕೆ ಸರಿಸಮನಾದ ಬೆಲೆಯನ್ನು ಅವರಿಗೆ ಕೊಡುತ್ತಿಲ್ಲ. ನಾನು ಇಲ್ಲಿ ಕೇಳಿರುವಂತಹ ಇನ್ನೊಂದು ಪ್ರಶ್ನೆ ಏನೆಂದರೆ, ರೈತರ ಬೆಳೆಗೆ ಬೆಂಬಲ ಬೆಲೆಯನ್ನು ನಿಗದಿಪಡಿಸಲಾಗುತ್ತದೆಯೇ ಎಂದು ಕೇಳಿದ್ದೇನೆ. ಆದರೆ, ಅವರು ಇಲ್ಲವೆಂದು ಹೇಳಿದ್ದಾರೆ. ಇವತ್ತು ಬೆಂಗಳೂರಿನ ಹಾಪ್‌ಕಾಮ್ಸ್‌ನಲ್ಲಿ ಪ್ರತಿನಿತ್ಯ ಹಣ್ಣು ಮತ್ತು ತರಕಾರಿಗಳ ಅಂದಿನ ದರವನ್ನು ನಮೂದು ಮಾಡುತ್ತಾರೆ. ಅದು ಮಾನ್ಯ ಸಚಿವರಿಗೂ ಗೊತ್ತಿದೆ. ಆದ್ದರಿಂದ ಆ ಬಗ್ಗೆ ಅವರು ಉತ್ತರ ಕೊಡಬಹುದಾಗಿತ್ತು. ಆದರೆ, ಅವರು ಅದನ್ನು ಏತಕ್ಕೆ ಉತ್ತರದಲ್ಲಿ ಕೊಟ್ಟಿಲ್ಲವೆಂಬುದು ನನಗೆ ಗೊತ್ತಿಲ್ಲ. ಈಗ ರೈತರಿಗೆ ನೂರು ರೂಪಾಯಿ ಕೊಟ್ಟರೆ, ಶೇಕಡಾ 25ರಷ್ಟನ್ನು ಕಡಿತ ಮಾಡಿ, ಅದರಲ್ಲಿ ಶೇಕಡಾ 75ರಷ್ಟು ಮಾತ್ರ ರೈತರಿಗೆ ಹೋಗುತ್ತಿದೆ. ಹೀಗಾಗಿ ಬೆಂಬಲ ಬೆಲೆಯನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುವಂಥದ್ದು ಒಂದು ವಿಚಾರವಾದರೆ. ಈ ಬೆಂಬಲ ಬೆಲೆಯನ್ನು ಜಿಲ್ಲಾವಾರು ನಿಗದಿ ಮಾಡುವ ಸಲುವಾಗಿ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದು ನನ್ನ ಎರಡನೆಯ ಪ್ರಶ್ನೆ. ಈಗ ಸರ್ಕಾರದವರು ಸಾವಿರಾರು ಕೋಟಿಗಟ್ಟಲೆ ಹಣವನ್ನು ಸಾಲಮನ್ನಾ ಮಾಡುವುದಕ್ಕೆ ಹೋಗುತ್ತಿದ್ದಾರೆ. ಆದರೆ, ತರಕಾರಿ ಬೆಳೆಯುವಂತಹ ರೈತರಿಗೆ ಮಾರ್ಕೆಟಿಂಗ್‌ಗೆ ಯಾವುದೇ ತರಹದ ಪ್ರೋತ್ಸಾಹ ಕೊಡದೆ ಇರುವುದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇಲ್ಲಿ Karnataka Horticulture Federation ಇದೆ. ಈ ಫೆಡರೇಷನ್‌ನ ಕೆಲಸ ಸೀಮಿತವಾಗಿದ್ದು, ಅದು ಅಪ್ಷರಮಟ್ಟಿಗೆ ಕೆಲಸ ಮಾಡದೇ ಇರುವುದು, ಸರ್ಕಾರದ ಈ ಉತ್ತರದಿಂದ ಕಾಣುತ್ತಿದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಿಂದ ಅಪೇಕ್ಷೆ ಪಡುವಂಥದ್ದು, ಈ ತರಕಾರಿ ಬೆಳೆಯುವಂತಹ ರೈತರಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸುವ ಒಂದು ವ್ಯವಸ್ಥೆಯನ್ನು ಜಿಲ್ಲಾವಾರು, ಅದರಲ್ಲೂ ಬೆಂಗಳೂರು ಸೇರಿದಂತೆ ಏನಾದರೂ ಕಾರ್ಯಕ್ರಮ ಮಾಡುವುದಕ್ಕೆ ಈ Horticulture Federation ಅನ್ನು ಬಹಳ ವಿಸ್ತಾರಗೊಳಿಸುವಂತಹ ಮತ್ತು ಎಲ್ಲಾ ಜಿಲ್ಲೆಗಳಲ್ಲೂ ಈಗ ಖಾಸಗಿ ಏಜೆಂಟ್‌ಗಳು ಏನು ಈ ಕೆಲಸವನ್ನು ಮಾಡುತ್ತಾರೆ, ಇದನ್ನು ತಪ್ಪಿಸಿ ಸರ್ಕಾರದ ಮುಖಾಂತರ ಆ ಏಜೆಂಟ್‌ಗಳನ್ನು ನೇಮಕ ಮಾಡಿ, ಅವರ ಮುಖಾಂತರ ರೈತರ ಬೆಳೆಗೆ ಸರಿಯಾದಂತಹ ಬೆಲೆಗಳನ್ನು ನಿಗದಿಪಡಿಸಿದರೆ ಇದು ರೈತರಿಗೆ ಸಹಾಯಕವಾಗುತ್ತದೆ. ಈಗ ತಮಗೆ ಗೊತ್ತಿದೆ, ಗ್ರಾಹಕರಿಗೆ ನೂರು ರೂಪಾಯಿ ತರಕಾರಿ ಇದ್ದರೆ, ರೈತರಿಗೆ ಸಿಗುವುದು 10 ರಿಂದ 15 ರೂಪಾಯಿಗಳು ಮಾತ್ರ. ಇನ್ನುಳಿದ 85 ರೂಪಾಯಿಗಳನ್ನು ಮಧ್ಯದಲ್ಲಿ ಇರುವಂತಹ ವರ್ತಕರು ಪಡೆಯುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಹೀಗಾಗಿ ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ವ್ಯವಸ್ಥೆಯನ್ನು ಸರಿಪಡಿಸುವಂತಹ ಒಂದು ಯೋಜನೆಯನ್ನು ಏನಾದರೂ ರೂಪಿಸುತ್ತಾರೆಯೇ; ಈ ರೀತಿಯ ಯೋಜನೆಯನ್ನು ಸರ್ಕಾರದವರೇನಾದರೂ ಪ್ರಾರಂಭ ಮಾಡುತ್ತಾರೆಯೇ ಎಂಬುದು ನನ್ನ ಪ್ರಶ್ನೆ.

**ಶ್ರೀ ಎಂ.ಸಿ.ಮನಗೂಳಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಸಲಹೆಯಂತೆ, ಹಾಪ್‌ಕಾಮ್ಸ್‌ನ ಬಲವರ್ಧನೆಗೆ ಕ್ರಮ ಜರುಗಿಸಲಾಗುವುದೆಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಪ್ರತಿಯೊಬ್ಬ ಮನುಷ್ಯನಿಗೂ ತರಕಾರಿ ಅವಶ್ಯಕವಾಗಿರುವಂತಹ ಒಂದು ಪದಾರ್ಥ. ವಿಶೇಷವಾಗಿ ಬಯಲುಸೀಮೆ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಭಾಗಗಳಲ್ಲಿ ನೀರಾವರಿ ಇಲ್ಲದ ಕಾರಣ ಹೆಚ್ಚು ಹೆಚ್ಚಾಗಿ ಕೊಳವೆಬಾವಿಗಳ ಮೂಲಕ ಅಮೂಲ್ಯವಾದ ನೀರನ್ನು ಸಂಗ್ರಹಿಸಿಕೊಂಡು ಉತ್ತಮವಾದ ತರಕಾರಿಗಳನ್ನು ಬೆಳೆಯುತ್ತಾರೆ. ಸರ್ಕಾರ ಸ್ಥಿರವಾದ ಬೆಲೆಗಳನ್ನು ನಿಗದಿ ಮಾಡದೇ ಇರುವುದರಿಂದ ಮತ್ತು ಜನಸಂಖ್ಯೆ ಇರುವಂತಹ ಪ್ರದೇಶಗಳಿಗೆ ಉತ್ತಮ ಮಾರುಕಟ್ಟೆಯನ್ನು ಒದಗಿಸದೆ ಇರುವುದರಿಂದ ಅನೇಕ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಂದರ್ಭಗಳಲ್ಲಿ perishable items ಆದಂತಹ ಹಣ್ಣು ಮತ್ತು ತರಕಾರಿಗಳನ್ನು ಅಗತ್ಯ ಪ್ರಮಾಣದಲ್ಲಿ cold storage ವ್ಯವಸ್ಥೆ ಇಲ್ಲದ ಕಾರಣದಿಂದ ಅವುಗಳನ್ನು ಬಹಳ ದಿನಗಳವರೆಗೆ ಕೆಡದಂತೆ ಸಂರಕ್ಷಿಸಿಡಲು ಸಾಧ್ಯವಾಗುವುದಿಲ್ಲ. ಈಗ ದ್ರಾಕ್ಷಿ ತಳಿಯಲ್ಲಿ 'Bangalore Blue' ಎಂಬುವಂತಹ ಒಂದು ತಳಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇವತ್ತು ಶಾಲಾ ಮಕ್ಕಳಿಗೆ nutrition ಕೊಡುವಂತಹ ಯೋಜನೆಗಳಲ್ಲಿ ದ್ರಾಕ್ಷಾ ರಸವನ್ನು ಸಹ include ಮಾಡಿದರೆ, ಅದಕ್ಕೆ ಸರ್ಕಾರದಿಂದಲೇ ಉತ್ತಮ ಮಾರುಕಟ್ಟೆಯನ್ನು ಒದಗಿಸಬಹುದು. ಆದರೆ, ಸರ್ಕಾರ ಅದರಲ್ಲಿ ವಿಫಲವಾಗಿದೆ.

**ಶ್ರೀ ಎಂ.ಸಿ.ಮನಗೂಳಿ:–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಪರಿಶೀಲಿಸಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**(ಪ್ರಶ್ನೆ ಸಂಖ್ಯೆ: 809)**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೆ, ನಾನು ಮೊದಲಿಗೆ ಕರ್ನಾಟಕ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಬಹಳ ದಿವಸಗಳಿಂದ ಈ 'ಕುಣಬಿ' ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ನಾನು ಹಲವು ಬಾರಿ ಪ್ರಶ್ನೆಯನ್ನು ಕೇಳುತ್ತಿದ್ದೆ. ಅದರಲ್ಲಿ ಕುಣಬಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ, ಕುಲಶಾಸ್ತ್ರೀಯ ಅಧ್ಯಯನವನ್ನು ನಡೆಸಿ, ಈ ಸಮುದಾಯವನ್ನು ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಭಾರತ ಸರ್ಕಾರಕ್ಕೆ ದಿನಾಂಕ:10.10.2017ರಂದು ಶಿಫಾರಸ್ಸು ಮಾಡಲಾಗಿತ್ತು. ಆದರೆ, ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ದಿನಾಂಕ:31.07.2018ರ ಪತ್ರದಲ್ಲಿ Registrar General of India, ಗೃಹ ಮಂತ್ರಾಲಯ, ಭಾರತ ಸರ್ಕಾರ ಇವರು ಕುಣಬಿ ಸಮುದಾಯವನ್ನು ರಾಜ್ಯದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ಬೆಂಬಲ ನೀಡಿರುವುದಿಲ್ಲ. ಇದು ಒಂದು ಬಹಳ ಹಾಸ್ಯಾಸ್ಪದ ಸಂಗತಿಯೆಂದು ಹೇಳಬಯಸುತ್ತೇನೆ. ಏಕೆಂದರೆ, ಕುಣಬಿ ಸಮಾಜದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಜನರಾಗಿದ್ದಾರೆ. ಅವರು ಇನ್ನೂ ಸಹ ಕಾಡಿನಲ್ಲೇ ವಾಸಿಸುತ್ತಿದ್ದಾರೆ. ಅವರು ಬುಡಕಟ್ಟು ಸಂಸ್ಕೃತಿಯ ಎಲ್ಲಾ ಗುಣಗಳನ್ನು ಹೊಂದಿರುವುದರಿಂದ, ಈಗಾಗಲೇ ಗೋವಾ ಸರ್ಕಾರ ಕುಣಬಿ ಸಮುದಾಯದವರನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಿದ್ದಾರೆ. ಅಲ್ಲಿಗೆ ಕೇಂದ್ರ ಸರ್ಕಾರದವರು ಗೋವಾ ಸರ್ಕಾರಕ್ಕೆ ಕುಣಬಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದಕ್ಕೆ ತಿಳಿಸಿರುತ್ತಾರೆ. ಆದರೆ, ಇಲ್ಲಿ ನಮಗೆ ಏಕೆ ಕೊಟ್ಟಿಲ್ಲವೆಂದು ಮಾನ್ಯ ಸಚಿವರಲ್ಲಿ ಈ ಪ್ರಶ್ನೆಯನ್ನು ಕೇಳುತ್ತೇನೆ. ಅದರ ಬಗ್ಗೆ ಗೋವಾ ಸರ್ಕಾರ ಯಾವ ರೀತಿ ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದಾರೆ ಎಂಬುದರ ಬಗ್ಗೆ ಸಮಗ್ರವಾದ ಒಂದು ವರದಿಯನ್ನು ತರಿಸಿ, ಆ ವರದಿಯನ್ನು ಸರ್ಕಾರ ಕಳುಹಿಸಿಕೊಟ್ಟರೆ, ಈ ಕುಣಬಿ ಜನರನ್ನು ಪರಿಶಿಷ್ಟ ಪಂಗಡಕ್ಕೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೇರಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ನನ್ನ ಅನಿಸಿಕೆ. ಮಾನ್ಯ ಮಂತ್ರಿಗಳು ಆದಷ್ಟು ಬೇಗನೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

(476)17–12–2018(12–20)ಎಲ್ಎಲ್–ಬಿಎನ್ಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಹೇಳಿದ ಹಾಗೆ ನಮ್ಮ ವರದಿ ಏನಿದೆ ಅದು ಕೇಂದ್ರ ಸರ್ಕಾರದಲ್ಲಿ ತಿರಸ್ಕಾರವಾಗಿದೆ. ಅದಾದ ಮೇಲೆ ಅವರು ಒಂದು ಪತ್ರ ಕೂಡ ಬರೆದಿದ್ದಾರೆ. ಇಲ್ಲಿ ಬಹಳ ಸ್ಪಷ್ಟವಾಗಿ ಮಾನ್ಯ ಶಾಸಕರು ಹೇಳಿದ ಹಾಗೆ ತಿರಸ್ಕಾರವಾದ ಮೇಲೆ, ಈ ಕೆಳಕಂಡಂತೆ ಮತ್ತೊಂದು ಪ್ಯಾರಾಗ್ರಾಫ್ ಅನ್ನು ಸೇರಿಸಿದ್ದಾರೆ ;

> *"Accordingly it is requested that further justification commends additional information, if any, upon observations of the office of the Registrar General of India, may be furnished to the Ministry for further necessary action."*

ಅದನ್ನು ನಾವು ಮುಂದಿಟ್ಟುಕೊಂಡು Tribal Research Institute ಗೆ Anthropologist ಮುಖಾಂತರ R.G.I. (Registrar General of India) ಯವರು ಏನೇನು ಪ್ರಶ್ನೆಗಳನ್ನು ಕೇಳಿದ್ದಾರೆ, ಅವುಗಳಿಗೆ ಸಮರ್ಪಕವಾದ ಉತ್ತರ ಮತ್ತು ಹೆಚ್ಚುವರಿ ಮಾಹಿತಿಗಳನ್ನು ಕೂಡ ಮೂರು ತಿಂಗಳೊಳಗೆ ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಮಾನ್ಯ ಶಾಸಕರು ಹೇಳಿದ್ದ ಹಾಗೆ ಗೋವಾ ಮತ್ತು ಗುಜರಾತ್ ರಾಜ್ಯಗಳ ಧಂಗಾರ್ ಜನಾಂಗವನ್ನು S.T. (Scheduled Tribe) ಎಂದು ಘೋಷಣೆ ಮಾಡಿದ್ದಾರೆ. ಆ ಮಾಹಿತಿಯನ್ನು ಸಹ ತರಿಸಿ ನಮ್ಮ Anthropologist ರವರಿಗೆ ಕೊಟ್ಟು ಒಂದು ಸಮಗ್ರವಾದ ವರದಿಯನ್ನು ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆ. ಅದಕ್ಕಾಗಿ ಮೂರು ತಿಂಗಳು ಕಾಲಾವಕಾಶ ಬೇಕಾಗುತ್ತದೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಅವರು ಬಹಳ ವರ್ಷದ ಹಿಂದೆ ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ವರದಿ ನೀಡುತ್ತೇವೆಂದು ಉತ್ತರ ನೀಡಿದ್ದಾರೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಅದರ ಪ್ರಕಾರ ನಾವು ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 44**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಖಂಡಿತವಾಗಿ ಯಾವುದೇ ವಿಚಾರಗಳನ್ನು ಹಗುರವಾಗಿ ತೆಗೆದುಕೊಳ್ಳದೇ, ಗಂಭೀರವಾಗಿ ತೆಗೆದುಕೊಂಡು ನ್ಯಾಯ

ಕೊಡಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಅವರ ಬಗ್ಗೆ ನಮಗೆ ಗೌರವವಿದೆ. ಆದರೆ, ಸಮಾಜ ಕಲ್ಯಾಣ ಇಲಾಖೆಯು ಹಗರಣಗಳ ಸರಮಾಲೆಯನ್ನು ಹೊತ್ತಿಕೊಂಡಿರುವ ಬಗ್ಗೆ ಬಹುಶಃ ಹಿಂದಿನ ಪತ್ರಿಕೆಗಳು, ಈಗಿನ ಪತ್ರಿಕೆಗಳು ಮತ್ತು ನಿನ್ನೆ ಕೂಡ ಈ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಈ ಬಗ್ಗೆ ಮಾನ್ಯ ಸಚಿವರು ಸಹ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಆದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿರುವಂತಹ ಭಾರೀ ದೊಡ್ಡ ಹಗರಣಗಳನ್ನು ಹೊರತರುವಂತಹ ಕೆಲಸಗಳು ಆಗಬೇಕಾಗಿದೆ.

ಇಲ್ಲಿ ಏನಾಗಿದೆಯೆಂದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ದಿವಸಕ್ಕೆ 3 ರಿಂದ 4 ಜಲಬಿಂದುಗಳನ್ನು ಗುರುತು ಮಾಡಬೇಕೆಂದು ಅಧಿಕಾರಿಗಳಿಗೆ ನಿಯಮ ಮಾಡಿದ್ದಾರೆ. ಆದರೆ, ಅಧಿಕಾರಿಗಳು ಅದಕ್ಕಿಂತಲೂ ಹೆಚ್ಚಿನ ಜಲಬಿಂದುಗಳನ್ನು ಗುರುತು ಮಾಡುವಂತಹದ್ದು ಮತ್ತು ಅದರಲ್ಲಿ ಹಣ ವಸೂಲಿ ಮಾಡುವ ಕಾರ್ಯಕ್ರಮ ನಿರಂತರವಾಗಿ ಸಾಗಿದೆ. ಇದರ ಜೊತೆಗೆ, ಇನ್ನೂ 2-3 ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಈ ಇಲಾಖೆಯಲ್ಲಿ ಅಷ್ಟೊಂದು ಅವ್ಯವಹಾರಗಳಿವೆ. ಮಾನ್ಯ ಸಚಿವರು ಇದನ್ನು ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತಾರೆಂಬ ವಿಶ್ವಾಸದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರ ಬಗ್ಗೆ ನನಗೆ ನಂಬಿಕೆ ಇದೆ. ಈ ಹಿಂದಿನ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ, "ಕೋಣನ ಮುಂದೆ ಕಿನ್ನರಿ ಭಾರಿಸಿದ ರೀತಿ" ನಾವು ಸಾಕಷ್ಟು ಭಾರಿ ಈ ವಿಷಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಿದ್ದೆವು. ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಆದರೆ, ಮಾನ್ಯ ಸಚಿವರು ಈ ವಿಷಯದಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಇಲ್ಲಿ ಏನಾಗಿದೆಯೆಂದರೆ, ರಾಜ್ಯದಲ್ಲಿ ಶೇಕಡ 75ರಷ್ಟು ಜಲಬಿಂದು ಗುರುತಿನ ಪ್ರಮಾಣ ಪತ್ರಗಳನ್ನು ಪಡೆಯದೇ ಕೊಳವೆ ಬಾವಿಗಳನ್ನು ನಿರ್ಮಾಣ ಮಾಡಿದ್ದಾರೆ. ಈ ವಿಷಯ ಮಾನ್ಯ ಸಚಿವರ ಗಮನದಲ್ಲಿರಲಿ. ನನ್ನ ಜಿಲ್ಲೆಗೆ ಸಂಬಂಧಪಟ್ಟಂತೆ, ನಾನು ನನ್ನ ಜಿಲ್ಲೆಯಲ್ಲಿ ನೋಡಿದಂತಹ ಸಂದರ್ಭದಲ್ಲಿ ಮತ್ತು ರಾಜ್ಯದ ಅನೇಕ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ, ಈ ರೀತಿ ಸಾಕಷ್ಟು ಪ್ರಕರಣಗಳು ಆಗಿವೆ ಎಂದು ಹೇಳುವಂಥದ್ದನ್ನು ನಾನು ಕೇಳಿದ್ದೇನೆ. ಅಲ್ಲದೇ, ಪತ್ರಿಕೆಗಳು ಸಹ ಅದನ್ನು ಉಲ್ಲೇಖ ಮಾಡಿವೆ. ಜಿಲ್ಲೆ ಮತ್ತು ತಾಲ್ಲೂಕು ವ್ಯವಸ್ಥಾಪಕರ ಸಹಿ ಇಲ್ಲದೇ ಶೇಕಡ 60ರಷ್ಟು ಪ್ರಮಾಣ ಪತ್ರಗಳನ್ನು ವಾಪಸ್ಸು ಮಾಡಿದ್ದಾರೆ. ಕೊಳವೆ ಬಾವಿ ಕೊರೆದಾಗ rig ಸಮೇತ ಫಲಾನುಭವಿಗಳ ಮತ್ತು ಅಧಿಕಾರಿಗಳ ಭಾವಚಿತ್ರ ಇರುವುದಿಲ್ಲ. ಅದೆಲ್ಲವನ್ನೂ ಒಳವ್ಯವಹಾರದ ಮುಖಾಂತರ ಮಾಡಿಕೊಳ್ಳುವಂಥದ್ದು ಮತ್ತು ಫಲಾನುಭವಿಗಳ ಬದಲು ಬೇರೆ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಬಿಲ್ ಸೃಷ್ಟಿಸಿ ಹಣವನ್ನು ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ, 9 ಕೇಸಿಂಗ್ ಪೈಪ್ ಮತ್ತು ಇತರೆ ವೆಚ್ಚ ಕೊಡಬೇಕೆಂದು ಫಲಾನುಭವಿಗಳಿಂದ ಹಣ ವಸೂಲು ಮಾಡಿದ್ದಾರೆ. ಮಾನ್ಯ ಸಚಿವರು ಕೇವಲ 7-8 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆಂದು ಹೇಳಿದ್ದಾರೆ. ಆದರೆ, ಇದರಲ್ಲಿ ಬಹಳ ದೊಡ್ಡ lobby ಇದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಇದಕ್ಕೆಲ್ಲಾ ಸರ್ಕಾರದವರು ಏನು ಕ್ರಮ

ಕೈಗೊಳ್ಳುತ್ತಾರೆಂದು ಕೇಳುವುದಕ್ಕೆ ಬಯಸುತ್ತೇನೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ. ಉದಾಹರಣೆಗೆ, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿರುವಂತಹ ಫಲಾನುಭವಿ ಶ್ರೀಮತಿ ಲಕ್ಷ್ಮಮ್ಮ ಕಗ್ಗಲಹಳ್ಳಿ ಎಂಬುವವರು ಒಬ್ಬ ರೈತ ಮಹಿಳೆ. ಇಲಾಖೆಯವರು ಪರಿಶಿಷ್ಟ ಜಾತಿಯ ಬಡವರಿಗೆಲ್ಲಾ ಉಚಿತವಾಗಿ ಬೋರ್‌ವೆಲ್‌ಗಳನ್ನು ತೆಗೆಸಿಕೊಡುತ್ತೇವೆಂದು ಹೇಳಿದರೂ ಸಹ ಕೊನೆಗೆ ಬೋರ್‌ವೆಲ್ ತೆಗೆಯಬೇಕಾದರೆ ಅಧಿಕಾರಿಗಳು ಒಂದು ಲಕ್ಷ ರೂಪಾಯಿ ಹಣ ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಾರೆ. ಆ ಸಂದರ್ಭದಲ್ಲಿ ಆ ಮಹಿಳೆ ತಾನು ಸಾಕಿರುವ ಕುರಿಗಳನ್ನು ವ್ಯಾಪಾರ ಮಾಡಿ, ಅದರಿಂದ ಬಂದ ಹಣವನ್ನು ಕೊಟ್ಟು ಬೋರ್‌ವೆಲ್ ನ್ನು ತೆಗೆಸಿಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ, ಮಾನ್ಯ ಸಚಿವರ ಮುಂದೆ ಇಷ್ಟೆಲ್ಲಾ ಪ್ರಶ್ನೆಗಳಿವೆ, ಅವುಗಳಿಗೆ ಸೂಕ್ತವಾದ ಉತ್ತರವನ್ನು ಅವರಿಂದ ನಿರೀಕ್ಷೆ ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಆದರೆ, ಮಾನ್ಯ ಸಚಿವರು ಕೂಡಲೇ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಬೇಕೆಂಬ ನಿರೀಕ್ಷೆಯನ್ನು ನಾವು ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ಪತ್ರವನ್ನು ಸಹ ನಾವು ಅವರಿಗೆ ಕೊಡುತ್ತೇವೆ. ಈ ಬಗ್ಗೆ ವಿಜಯವಾಣಿ ಪತ್ರಿಕೆಯಲ್ಲಿ, "ಗಂಗಾ ಕಲ್ಯಾಣದಲ್ಲಿ ಅಕ್ರಮ, ಅಗೆದಷ್ಟು ಆಳ, 1.80 ಕೋಟಿ ರೂಪಾಯಿ ಕಿಕ್ ಬ್ಯಾಕ್ ಆರೋಪ, ಒಂದು ಕ್ಷೇತ್ರಕ್ಕೆ 1800 ಬೋರ್‌ವೆಲ್" ಎಂದು ವರದಿ ಸಹ ಬಂದಿರುತ್ತದೆ. ಅದೇ ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಹಾಗಾಗಿ, ದಯಮಾಡಿ, ಮಾನ್ಯ ಸಚಿವರು ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಬೇಕು ಮತ್ತು ಈ ವಿಷಯದಲ್ಲಿ ಬಡವರಿಗೆ ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಹೇಳಿದ ಅಂಶಗಳ ಬಗ್ಗೆ ನಾನು ಯಾವುದೇ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಸಚಿವನಾಗಿ ನಾನು ಕೂಡ ಈ ವಿಷಯವನ್ನು ಸ್ವಲ್ಪ ಒಪ್ಪಿಕೊಳ್ಳುತ್ತೇನೆ. ನಮ್ಮ ಇಲಾಖೆಯ credibility ಬಹಳ ಕಡಿಮೆ ಇದೆ. ಅದನ್ನು ಸರಿಪಡಿಸುವುದಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇನೆ. ಈ ಗಂಗಾ ಕಲ್ಯಾಣ ವಿಷಯದಲ್ಲಿ ಯಾವ್ಯಾವ ಪ್ರಕರಣಗಳು ಬೆಳಕಿಗೆ ಬಂದಿವೆ, ಅವುಗಳ ಪಟ್ಟಿಯನ್ನು ಈಗಾಗಲೇ ತಮ್ಮ ಮುಂದೆ ಕೊಟ್ಟಿದ್ದೇವೆ. ಅದರಲ್ಲಿ 8 ಜನ ಅಧಿಕಾರಿಗಳನ್ನು ನಾವು ಅಮಾನತ್ತು ಮಾಡಿದ್ದೇವೆ. ಅದಲ್ಲದೇ, ಈ ವರ್ಷವೂ ಕೂಡ ನಾವು ಆದಷ್ಟು ಮಟ್ಟಿಗೆ ಪಾರದರ್ಶಕತೆಯಿಂದ ಎಲ್ಲಾ ರೇಟ್‌ಗಳನ್ನು ಫಿಕ್ಸ್ ಮಾಡಿದ್ದೇವೆ. ಉದಾಹರಣೆಗೆ, drilling rates, rig rates. I.P. sets ಗಳಲ್ಲಿಯೂ ಕೂಡ ಸಾಕಷ್ಟು rewinded I.P. sets ಗೆ ತರುತ್ತಾರೆಂದು, ಈಗ I.S.O. mark ಇರುವಂಥದ್ದು, ಯಾವ manufacturer ಇರಬೇಕೆನ್ನುವ ಮಾನದಂಡಗಳನ್ನು ತಂದಿದ್ದೇವೆ. ಮಾನ್ಯ ಶಾಸಕರು ಹೇಳಿದ ಹಾಗೆ, ಆಯ್ಕೆ ಪ್ರಕ್ರಿಯೆಯಲ್ಲಿ ಸ್ವಲ್ಪ ಅವ್ಯವಹಾರವಾಗುತ್ತಿದೆ. ಮಾನ್ಯ ಶಾಸಕರು ಯಾವ್ಯಾವ ಪ್ರಕರಣಗಳನ್ನು ತಂದಿದ್ದಾರೆ, ಅವುಗಳ ಬಗ್ಗೆ ಖಂಡಿತವಾಗಿ ನಾವು ತನಿಖೆ ಮಾಡುತ್ತೇವೆ. ಈ ಬಗ್ಗೆ ಮಾಹಿತಿ ನನ್ನ ಗಮನಕ್ಕೆ ಬಂದಿರುವುದಿಲ್ಲ. ನಿನ್ನೆಯ ದಿವಸ ಪತ್ರಿಕೆಯಲ್ಲಿ ಬಂದಿರುವ ವರದಿ ಬಗ್ಗೆ ನಾವು ಈಗಾಗಲೇ ತನಿಖೆ ಮಾಡುತ್ತಿದ್ದೇವೆ. Give me some time.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

We will ensure that action is taken on that issue also. ಅದನ್ನು ಹೊರತುಪಡಿಸಿ ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಯಾವುದೇ ಪ್ರಕರಣ ಬಂದರೂ ಕೂಡ ತಪ್ಪಿತಸ್ಥರ ವಿರುದ್ಧ ನಾವು ನಿರ್ದಾಕ್ಷಿಣ್ಯವಾದ ಕ್ರಮವನ್ನು ವಹಿಸುತ್ತಿದ್ದೇವೆ. ಮಾನ್ಯ ಶಾಸಕರು ಹೇಳಿದ ಹಾಗೆ ಪಾರದರ್ಶಕವಾಗಿ ನಾವು ದರವನ್ನು ಫಿಕ್ಸ್ ಮಾಡಿದ್ದೇವೆ. ಪಾರದರ್ಶಕವಾಗಿ ಈ ಬಾರಿ procurement ಮಾಡುತ್ತಿದ್ದೇವೆ. ದರಗಳು ಸರಿಯಿಲ್ಲವೆಂದು ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುತ್ತದೆ. ಆದರೂ ಕೂಡ we will justify everything. ಅದಕ್ಕಾಗಿ ನಮಗೆ ಸ್ವಲ್ಪ ಕಾಲಾವಕಾಶ ಕೊಡಿ. We will address all those problems stated by the Hon'ble Member.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ 2013 ರಿಂದ 2015 ರವರೆಗೆ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ ಎಂಬ ವಿಷಯದ ಬಗ್ಗೆ ಚರ್ಚೆ ಮಾಡಬೇಕಾದರೆ ಇಡೀ ದಿನ ಈ ಸದನದಲ್ಲಿ ನಾವು ಧರಣಿ ಮಾಡಿದ್ದೇವೆ. ಈ ವಿಷಯ ಮಾನ್ಯ ಸಚಿವರಿಗೂ ಸಹ ಗೊತ್ತಿದೆ. ಮಾನ್ಯ ಸಚಿವರು ಕೋಲಾರ ಜಿಲ್ಲೆಯಲ್ಲಿ 1132 ಬೋರ್‌ವೆಲ್‌ಗಳನ್ನು rig ಮಾಡಿದ್ದಾರೆಂದು ಹೇಳಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 792 ಬೋರ್‌ವೆಲ್‌ಗಳನ್ನು rig ಮಾಡಿದ್ದೇವೆಂದು ಹೇಳಿದ್ದಾರೆ. ಒಟ್ಟು 1924 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಮಾನ್ಯ ಶಾಸಕರು ಹೇಳಿದ ಜಲಬಿಂದು ಚೆಕ್ ಮಾಡುವ ಬಗ್ಗೆ ಮತ್ತು ಇಲಾಖೆಯ procedure ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸರ್ಕಾರದವರು ಕೊಟ್ಟ unit cost ಗೆ ಶೇಕಡ 50ರಷ್ಟು ಬೋರ್‌ವೆಲ್‌ಗಳು rig ಆಗಿರುವುದಿಲ್ಲ. With due respect to all the Members, I request that ಇದನ್ನು ದಯಮಾಡಿ ತನಿಖೆ ಮಾಡಬೇಕು. ಏಕೆಂದರೆ, ಒಂದು ಬೋರ್‌ವೆಲ್‌ನಲ್ಲಿ ಫಲಾನುಭವಿಯನ್ನು ನಿಲ್ಲಿಸಿ, ಒಂದು ಗಡಿಗೆ ನೀರನ್ನು ಹಾಕಿ, ಗ್ಯಾಸ್ ಬಿಟ್ಟು, ಆ ನೀರನ್ನು ಮೇಲೆ ಚಿಮ್ಮುವ ರೀತಿ ಮಾಡಿ, ಬಿಲ್ ಹಣ ಪಡೆದಿರುತ್ತಾರೆ. ಈ ರೀತಿ ಸುಮಾರು ಸಾವಿರಕ್ಕಿಂತಲೂ ಹೆಚ್ಚು ಬೋರ್‌ವೆಲ್‌ಗಳಲ್ಲಿ rig ಮಾಡದೇ ದುಡ್ಡು ಮಾಡಿಕೊಂಡಿದ್ದಾರೆ. ಅದಕೋಸ್ಕರ ಮಾನ್ಯ ಸಚಿವರು ಬಹಳ young and energetic ಮಂತ್ರಿಗಳಾಗಿದ್ದಾರೆ. ನಮಗೆ ನಂಬಿಕೆ ಇದೆ. ಈ ಇಲಾಖೆಯ credibility ಬಹಳ ಕಡಿಮೆ ಇದೆ, we will take it to a great height ಎಂದು ತಾವು ಹೇಳಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಕಳೆದ ಸರ್ಕಾರದ ಅವಧಿಯಲ್ಲಿ ಅದರಲ್ಲಿ ವಿಶೇಷವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1500 ಅಡಿಗಳಿಗಿಂತಲೂ ಕೆಳಗಿರುವ ಅಂತರ್ಜಲವನ್ನು 2 ಲಕ್ಷ ರೂಪಾಯಿಯ unit cost ನಲ್ಲಿ ಹೇಗೆ ಮೇಲೆ ತರುವುದಕ್ಕೆ ಸಾಧ್ಯ? ಆದುದರಿಂದ, ಇದರಲ್ಲಿ ದೊಡ್ಡ ಹಗರಣವಾಗಿದೆ. ದಯಮಾಡಿ, ಇದನ್ನು ತನಿಖೆ ಮಾಡಬೇಕು.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ....

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಕಳೆದ 2 ವರ್ಷದಿಂದ ನಮ್ಮ undivided ಕೋಲಾರ ಜಿಲ್ಲೆ ಏನಿದೆ ಅಲ್ಲಿ ನಾವು ಯಾವುದೇ ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ. ಆ ಪ್ರದೇಶದಲ್ಲಿ ನಿಷೇಧವಿದೆ. ಈ ವರ್ಷ ಮಾತ್ರ ನಾವು ಬೋರ್‌ವೆಲ್‌ಗಳನ್ನು ಕೊರೆಯುತ್ತಿದ್ದೇವೆ. ಆದಾಗ್ಯೂ, ಯಾವುದಾದರೂ ತಮ್ಮ ಗಮನಕ್ಕೆ ಬಂದಿದ್ದರೆ ಅದರ ಬಗ್ಗೆ ಮಾಹಿತಿಯನ್ನು ನಮಗೆ ನೀಡಿ, we will verify that. ಅದರ ಬಗ್ಗೆ ಯಾವುದೇ...

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, borewells were drilled upto 2016-17. ಒಂದು ವರ್ಷ ಮಾತ್ರ ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಹೌದು. 2 ವರ್ಷಗಳು ಆಗಿವೆ. ಕಳೆದ ವರ್ಷ ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ವರ್ಷ ಮಾತ್ರ ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ. 4 ವರ್ಷಗಳ ಕಾಲ ಬೋರ್‌ವೆಲ್‌ಗಳನ್ನು ಕೊರೆದಿರುತ್ತಾರೆ. ಆ 4 ವರ್ಷ ಕೊರೆದಿರುವ ಬೋರ್‌ವೆಲ್‌ಗಳ ಸಂಖ್ಯೆಯೇ 1924. ಸುಮಾರು 2000 ಬೋರ್‌ವೆಲ್‌ಗಳನ್ನು ಕೊರೆದಿರುತ್ತಾರೆ, it is multiplied by Rs.2,00,000/-, ಎಷ್ಟು ಕೋಟಿ ರೂಪಾಯಿ ಹಗರಣ ಇದು?

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, any specific case ಇದ್ರೆ ಕೊಡಿ. Definitely, we will look into it. ಈ ಬಗ್ಗೆ ನಾವು ತಕರಾರು ಮಾಡುವುದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಹಗರಣದ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ. Enquiry ಮಾಡಿ. Free hand is there to the Hon'ble Minister.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಇದನ್ನು enquiry ಮಾಡಿ definitely ಮಾನ್ಯ ಶಾಸಕರಿಗೆ ತಿಳಿಸುತ್ತೇವೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಡವರ ಹಣ. ಪರಿಶಿಷ್ಟ ಜಾತಿಯವರ ಹಣ. ಅವರಿಗೆ ಅನ್ಯಾಯವಾಗುವುದು ಬೇಡ, ಅವರ ಬಾಯಿಯಲ್ಲಿ ಮಣ್ಣು ಹಾಕುವುದು ಬೇಡ. ದಯಮಾಡಿ ಅವರಿಗೆ ನ್ಯಾಯ ಕೊಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ತಾವು ಈ ಬಗ್ಗೆ ಹೇಳಿದ್ದೀರಿ. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಚಿವರು ಈ ವಿಷಯವನ್ನು ಒಪ್ಪಿಕೊಂಡಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(477) 17–12–2018 (12.30) ವೈಎಲ್–ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್(ಮುಂದು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಪ್ಪಿಕೊಂಡಿರುವುದಕ್ಕೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾರು ಕಾನೂನು ಬಾಹಿರವಾಗಿ ಬೋರ್‌ವೆಲ್ ಅಳವಡಿಸಿ ಹಣವನ್ನು ಲೂಟಿ ಮಾಡಿದ್ದಾರೆ ಅವರ ವಿರುದ್ಧ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ? ಒಪ್ಪಿಕೊಳ್ಳುವುದು ಬಹಳ ದೊಡ್ಡ ವಿಷಯ. ಆದರೆ, ತೆಗೆದುಕೊಳ್ಳುವ ಕ್ರಮವೇನಿದೆ,.... ಇಲ್ಲದಿದ್ದರೆ ಇಂತಹ ಪ್ರಕರಣಗಳು ನಡೆಯುತ್ತಲೇ ಇರುತ್ತದೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಇಂತಹ ಪ್ರಕರಣಗಳು ಎಲ್ಲೆಲ್ಲಿ ಬೆಳಕಿಗೆ ಬಂದಿದೆ ಅಲ್ಲಿ ಈಗಾಗಲೇ ಅಂತಹ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. ಒಬ್ಬರನ್ನು ಸೇವೆಯಿಂದ ಸಹ ಬಿಡುಗಡೆಗೊಳಿಸಲಾಗಿದೆ. ಪ್ರತ್ಯೇಕ ಪ್ರಕರಣ ಇದ್ದಾಗ, ಇದರ ಬಗ್ಗೆ ಸರ್ಕಾರಕ್ಕಾಗಲೀ ಇಲಾಖೆಗಾಗಲೀ ಸಂಪೂರ್ಣ ಬದ್ಧತೆ ಇದೆ. ಅದರ ಬಗ್ಗೆ ಯಾವುದೇ ರೀತಿಯ ಸಂಶಯ ಬೇಡ.

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಾತ್ರ ಅಮಾನತ್ತುಗೊಳಿಸಲಾಗಿದೆ. ಬೇರೆ ಯಾವ ಜಿಲ್ಲೆಗಳಲ್ಲಿಯೂ ಅಮಾನತ್ತುಗೊಳಿಸಿರುವುದಿಲ್ಲ. ಏಕೆಂದರೆ, ಯಾವ ಜಿಲ್ಲೆಗಳಲ್ಲಿ ಅಮಾನತ್ತುಗೊಳಿಸಿರುವುದಿಲ್ಲವೋ ಅಲ್ಲಿಯೇ ಗೋಲ್‌ಮಾಲ್ ಆಗಿದೆ. ಅದಕ್ಕಾಗಿ ಗೋಲ್‌ಮಾಲ್ ಎಲ್ಲಿ ಆಗಿದೆ, ಅಲ್ಲಿ ದಯವಿಟ್ಟು ತನಿಖೆ ಮಾಡಬೇಕು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ವಿಚಾರವನ್ನು ಹೇಳುತ್ತೇನೆ. ದಯವಿಟ್ಟು ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಸದನ ಸಮಿತಿಯನ್ನು ರಚನೆ ಮಾಡಲಿ. ಹಾಗೆಯೇ ಎಲ್ಲೆಲ್ಲಿ ಬೋರ್‌ವೆಲ್ ಅಳವಡಿಸಲಾಗಿದೆ ಅಂತಹ ಭಾಗಗಳಲ್ಲಿ ಒಂದು ಸಲ cross-check ಮಾಡಿದರೆ ಶೇಕಡ 50 ಕ್ಕಿಂತಲೂ ಹೆಚ್ಚು ದೊಡ್ಡ–ದೊಡ್ಡ ಹೆಗ್ಗಣಗಳು ಸಿಕ್ಕಿಕೊಳ್ಳುತ್ತಾರೆ. ಹಾಗಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ ಸದನ ಸಮಿತಿಯನ್ನು ರಚನೆ ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 1800 ಬೋರ್‌ವೆಲ್‌ಗಳನ್ನೂ ಒಂದೇ ಕ್ಷೇತ್ರದಲ್ಲಿ ಅಳವಡಿಸಲಾಗಿದ್ದು, 1 ಕೋಟಿ 80 ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ಲಂಚ ಪಡೆದಿದ್ದಾರೆ ಎಂಬ ವಿಚಾರ ಇದೆ. ಹಾಗೆಯೇ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಹ ನಿರ್ದೇಶಕರ ಹೆಸರನ್ನು ಉಲ್ಲೇಖಿಸಿ, ಅವರುಗಳನ್ನೇ ಆರೋಪಿತರು ಎಂದು ಹೇಳಲಾಗಿದೆ. ಹಾಗಾಗಿ ಯಾರ ಮೇಲೆ ತನಿಖೆ ಮಾಡುತ್ತಾರೆ? ಯಾರನ್ನು ತನಿಖಾಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸಲಾಗುತ್ತದೆ? ಸದನ ಸಮಿತಿಯನ್ನು ರಚನೆ ಮಾಡುತ್ತಾರೆಯೇ? ತನಿಖಾ ಮಾದರಿ ಯಾವುದು ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ,....

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಈಗಾಗಲೇ ಈ ಪ್ರಶ್ನೆಯ ಬಗ್ಗೆ ಚರ್ಚೆ ಮಾಡಲು ಶುರು ಮಾಡಿ 10 ನಿಮಿಷವಾಗಿದೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಅದೇ ವಿಚಾರಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಗಂಗಾ ಕಲ್ಯಾಣ ಯೋಜನೆಯಡಿ ಸೇರಿಸಿರುವುದಿಲ್ಲ. ಏಕೆಂದರೆ, ಈ ರೀತಿ ಸಮಸ್ಯೆಗಳು ಬಂದಾಗ ನಮ್ಮನ್ನು ಸಹ ಅದರಲ್ಲಿ ಸದಸ್ಯರನ್ನಾಗಿ ಮಾಡಿದರೆ, ಖಂಡಿತವಾಗಿ ನಾವೂ ಸಹ ಇಂತಹ ಅವ್ಯವಹಾರಗಳು ಗೋಲ್‌ಮಾಲ್ ಇದ್ದಂತಹ ಸಂದರ್ಭದಲ್ಲಿ ಸರಿಪಡಿಸುವ ಪ್ರಯತ್ನವನ್ನು ಮಾಡುತ್ತೇವೆ ಬೇರೆ ಉದ್ದೇಶವೇನೂ ಇಲ್ಲ. ದಯಮಾಡಿ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ ನಮ್ಮನ್ನು ಸಹ ಗಂಗಾ ಕಲ್ಯಾಣ ಯೋಜನೆಯಲ್ಲಿ ಸೇರಿಸುವಂಥ ಪ್ರಯತ್ನವನ್ನು ಮಾಡಲಿ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾವಿರಾರು ಬೋರ್‌ವೆಲ್‌ಗಳು ಬೇಕಾಗುತ್ತದೆ, ಸರ್ಕಾರದ ವತಿಯಿಂದಲೇ ಏಕೆ ಇದರ ವೆಚ್ಚವನ್ನು ಭರಿಸಬಾರದು?

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ಮಾಡಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಮಾಡಿ, ಇಲ್ಲದಿದ್ದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಲು ಸದನದಲ್ಲಿ ಅವಕಾಶ ನೀಡಿ.

(ಗೊಂದಲ)

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ GPS (Global Positioning System) ಮೂಲಕ ಸಾಕಷ್ಟು satellite pictures ಗಳನ್ನು ತೆಗೆದುಕೊಳ್ಳಬಹುದು. ಈ ರೀತಿ ವ್ಯವಸ್ಥೆಗಳಿರುವಾಗ cross-verification ಮಾಡುವಾಗ ಸರಿ, ತಪ್ಪುಗಳನ್ನು ನೋಡಬಹುದು. ಅಂತಹ ಒಂದು ಪದ್ಧತಿಗಳನ್ನು ಅಳವಡಿಸಿಕೊಂಡರೆ, ಸದನದಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇರುವುದಿಲ್ಲ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಹ ನಿರ್ದೇಶಕರ ಹೆಸರನ್ನು ಉಲ್ಲೇಖಿಸಿದ್ದಾರೆ. ಅದಕ್ಕಾಗಿ, internally ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡುತ್ತೇವೆ. ಇಲಾಖೆಯವರನ್ನು ಮೊದಲು ಕರೆಸುತ್ತೇವೆ. ಅವರು ಏನು ತನಿಖೆ ಮಾಡುತ್ತಾರೆ, ಏನು ವರದಿ ಹೊರಬರುತ್ತದೆ ಎಂಬುದನ್ನು ನೋಡಿ, ನಂತರ ಸದನ ಸಮಿತಿಯ ಅವಶ್ಯಕತೆ ಇದ್ದರೆ ಮಾಡೋಣ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸದನ ಸಮಿತಿಯನ್ನು ರಚನೆ ಮಾಡಲೇಬೇಕು.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬಡವರ ಹಣ. ಯಾವ ಕಾರಣಕ್ಕೆ ಕೊಟ್ಟಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಡಾ॥ ವೈ.ಎ.ನಾರಾಯಣಸ್ವಾಮಿಯವರೇ ಕುಳಿತುಕೊಳ್ಳಿ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲಾಖೆಯ ವರದಿ ಸಮಾಧಾನವಾಗಿಲ್ಲವೆಂದರೆ, ನಂತರ ಸದನ ಸಮಿತಿಯನ್ನು ಮಾಡುವ ಬಗ್ಗೆ ನೋಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಸಿ.ವೇಣುಗೋಪಾಲ್‌ರವರೇ ಪ್ರಶ್ನೆಯನ್ನು ಕೇಳಿ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಸದನ ಸಮಿತಿಗೆ ಒತ್ತಾಯಪಡಿಸಿದರು)

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಇಲಾಖಾ ವತಿಯಿಂದ ವಿಚಾರಣೆ ಮಾಡಿ, ನಂತರ ಸದನ ಸಮಿತಿಯನ್ನು ಮಾಡುತ್ತೇವೆ.

(ಗೊಂದಲ)

**ಸಭಾಪತಿಯವರು:–** ಈಗಾಗಲೇ ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಒಂದು ಸಮಿತಿಯನ್ನು ಮಾಡುತ್ತೇವೆ ಎಂದು ಉತ್ತರವನ್ನು ನೀಡಿದ್ದಾರೆ ಅದಕ್ಕಿಂತಲೂ ಹೆಚ್ಚಾಗಿ ಏನು ಕೇಳುವುದಕ್ಕಾಗಲಿ, ಹೇಳುವುದಕ್ಕಾಗಲಿ ಆಗುವುದಿಲ್ಲ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಒಂದು ಸಮಿತಿಯನ್ನು ಮಾಡಿ ವರದಿ ನೀಡುತ್ತೇವೆ. ನಂತರ ಸಮಾಧಾನವಾಗಿಲ್ಲವೆಂದರೆ ಮುಂದೆ ನೋಡೋಣ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಸಿ.ವೇಣುಗೋಪಾಲ್‌ರವರೇ ಪ್ರಶ್ನೆಯನ್ನು ಕೇಳಿ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು 2–3 ದಾಖಲೆಗಳನ್ನು ನೀಡಿದ್ದಾರೆ. ಅದಲ್ಲದೇ ನಿನ್ನೆ ಬಂದಿರುವ ವರದಿ ಏನಿದೆ ಅದರ ಆಧಾರದ ಮೇಲೆ ತೀರ್ಮಾನವನ್ನು ಕೈಗೊಳ್ಳುತ್ತೇವೆ. ನಮ್ಮ ಇಲಾಖೆಯಲ್ಲಿ ನಿವೃತ್ತರಾಗಿರುವ ACS (Additional Chief Secretary) and Senior Advisor ಇದ್ದಾರೆ. ಅವರುಗಳು ಸಮಿತಿಯ ಅಧ್ಯಕ್ಷರಾಗಿದ್ದಾರೆ ಅವರ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ವತಿಯಿಂದಲೇ ಸಮಿತಿಯನ್ನು ಮಾಡಿಸುತ್ತೇವೆ. ಅದೂ ಸಹ ಸಮಂಜಸವಾಗಿಲ್ಲ, ತೃಪ್ತಿದಾಯಕವಾಗಿಲ್ಲವೆಂದರೆ ಸದನ ಸಮಿತಿಯನ್ನು ಮಾಡುತ್ತೇವೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಯಾರನ್ನು ತನಿಖೆ ಮಾಡುತ್ತಾರೆಯೋ, ಆ ತನಿಖೆ ಮಾಡುವ ಅಧಿಕಾರಿಗಳು ಯಾರು?

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದಕ್ಕಾಗುವುದಿಲ್ಲ. ಏನೇ ಮಾಡಿದರು ಪಾರದರ್ಶಕವಾಗಿ ಮಾಡುತ್ತೇವೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಗಂಭೀರವಾಗಿರುವ ಸಮಾಚಾರವಾಗಿದೆ. ಇವತ್ತಿನ ದಿವಸ ಮಾನ್ಯ ಸಚಿವರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಯಾರು ಹಿಂದೆ ಮಾಡಿದ್ದಾರೆಯೋ, ಏನು ಮಾಡಿದ್ದಾರೆಯೋ ಎಂದು responsibility and accountability ಅನ್ನು ಬಿಡುವ ಆಗಿಲ್ಲ. ಒಂದು ವೇಳೆ ನಮ್ಮ ಪಕ್ಷದವರೇ ಮಾಡಿದ್ದರೂ, ಯಾರೇ ತಪ್ಪು ಮಾಡಿದ್ದರೂ, ಅದು ಹೊರಗೆ ಬರಲಿ. Hon'ble minister, you are young minister and have earned good name. ಮಾನ್ಯ ಸಚಿವರು ಏಕೆ ಅವರ ಮೇಲೆ ತಪ್ಪನ್ನು ಎಳೆದುಕೊಳ್ಳುತ್ತಾರೆ. ಯಾರೇ ತಪ್ಪು ಮಾಡಿದ್ದರೂ ಸಹ ಅವರಿಗೆ ಶಿಕ್ಷೆಯಾಗಲೇಬೇಕು. ಯಾರೇ ಆಗಿರಲಿ, ಅದನ್ನು ಸರಿಪಡಿಸಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಯಾರೇ ತಪ್ಪು ಮಾಡಿದರೂ, ಏನೇ ಆಗಿದ್ದರೂ ಸಹ ಅದು ತಪ್ಪೇ ಆಗುತ್ತದೆ. ಅದನ್ನು ಮುಚ್ಚುವಂಥ ಯಾವುದೇ ಪ್ರಯತ್ನವನ್ನು ಮಾಡುವುದಿಲ್ಲ. ನನ್ನ ಸಲಹೆಯೇನೆಂದರೆ, ನಮ್ಮ ಇಲಾಖೆಯಲ್ಲಿ Senior Advisor and Rtd. ACS (Additional Chief Secretary) ಇದ್ದಾರೆ. ಅವರ ಮೂಲಕ ಒಂದು ವರದಿ ಮಾಡಿಸುತ್ತೇವೆ. ಅದಾದ ನಂತರ ಸದನಕ್ಕೆ ವರದಿ ಸರಿಯಿಲ್ಲವೆಂದರೆ, ಸದನ ಸಮಿತಿಯನ್ನು ಮಾಡೋಣ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ,...

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸದಸ್ಯರೆ ಒಂದು ನಿಮಿಷ. I am stating this on the floor of the House, ನಮ್ಮ ಪ್ರಾಮಾಣಿಕತನಕ್ಕೆ ಸಂಶಯ ಪಡುವುದು ಬೇಡ. ನಾವು ಯಾರ ಪ್ರಕರಣವನ್ನು ಮುಚ್ಚುವಂಥ ಪ್ರಯತ್ನವನ್ನು ಮಾಡುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ವಿನಂತಿಯೇನೆಂದರೆ, ಸದನ ಸಮಿತಿಯನ್ನು ರಚನೆ ಮಾಡಲಿ. ಇದರಿಂದ ಹೆಚ್ಚು ನ್ಯಾಯ ಹೊರಬರುತ್ತದೆ. ಸದನ ಸಮಿತಿಯನ್ನು ರಚನೆ ಮಾಡಬೇಕೆಂಬುದು ನಮ್ಮ ಕಳಕಳಿಯ ವಿನಂತಿಯಾಗಿದೆ. ಮಾನ್ಯ ಸಚಿವರು ಒಳ್ಳೆಯ ಕೆಲಸವನ್ನೇ ಮಾಡುತ್ತಿದ್ದಾರೆ. ಸದನ ಸಮಿತಿಯನ್ನು ರಚನೆ ಮಾಡಲಿ ಇದರಿಂದ ಅವರಿಗೂ ಗೌರವ ಬರುತ್ತದೆ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ವರದಿ ಬಂದ ಮೇಲೆ ಅವಶ್ಯಕತೆ ಇದ್ದರೆ ಸದನ ಸಮಿತಿಯನ್ನು ಮಾಡುತ್ತೇವೆ.

(ಗೊಂದಲ)

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ರಚನೆ ಮಾಡಲಿ, ಇದರಿಂದ ಹೆಚ್ಚು ನ್ಯಾಯ ಹೊರಬರುತ್ತದೆ. ದಯವಿಟ್ಟು ತಾವೂ ಆ ಕಡೆ, ಈ ಕಡೆ ಯೋಚನೆ ಮಾಡುವುದು ಬೇಡ. ಮಾನ್ಯ ಸಚಿವರು ಸದನ ಸಮಿತಿಯನ್ನು ಮಾಡಲಿ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೋರ್‌ವೆಲ್ ಅಳವಡಿಸಿಯೇ ಇಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಸಿ.ವೇಣುಗೋಪಾಲ್‌ರವರೇ ಪ್ರಶ್ನೆಯನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ತೀರ್ಮಾನವಾಗಿಲ್ಲ.

(ಗೊಂದಲ)

**ಸಭಾಪತಿಯವರು:–** ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರಲ್ಲವೇ ಅದಕ್ಕಿಂತಲೂ ಹೆಚ್ಚಾಗಿ ಏನು ಹೇಳುತ್ತಾರೆ. ಈಗಾಗಲೇ ಅವಶ್ಯಕತೆ ಇದ್ದರೆ ಸದನ ಸಮಿತಿಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ಮಾಡುವುದಿಲ್ಲ ಎಂದು ಹೇಳುತ್ತಿಲ್ಲ. ಸದನ ಸಮಿತಿಯನ್ನು ಮಾಡುತ್ತೇವೆ.

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ ಎಲ್ಲರೂ ಕುಳಿತುಕೊಳ್ಳಿ. ಈಗಾಗಲೇ ಮಾನ್ಯ ಸಚಿವರು ಪರಿಶೀಲನೆ ಮಾಡಿ, ಅಗತ್ಯವಿದ್ದರೆ ಸದನ ಸಮಿತಿಯನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದರೂ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ತಾವುಗಳು ಸದನ ಸಮಿತಿಯನ್ನು ಮಾಡಲಿ ಎಂದು ಒತ್ತಾಯ ಮಾಡುವುದು ಸಮಂಜಸವಲ್ಲ. ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರಿಂದ ನ್ಯಾಯ ನಿರಾಕರಣೆಯಾಗುತ್ತದೆ. ಈ ರೀತಿ ಹೇಳಿದರೆ ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಸೇರಿದಂತೆ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸದನದ ಭಾವಿಯಲ್ಲಿ ಧರಣಿ ಕುಳಿತರು)

**ಸಭಾಪತಿಯವರು:–** ಈ ರೀತಿ ಮಾಡುವುದು ಸಮಂಜಸವಲ್ಲ.

(ಗೊಂದಲ)

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ವರದಿ ಬಂದ ನಂತರ ಸದನ ಸಮಿತಿಯನ್ನು ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮಗೂ ಪ್ರಶ್ನೋತ್ತರ ಅವಧಿ ಎಂಬುದು ಗೊತ್ತಿದೆ.

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಮಾಡಿದರೆ ಹೇಗೆ? ಮಾನ್ಯ ಸಚಿವರು ಸಮಿತಿಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಪುಟ್ಟರಂಗಶೆಟ್ಟಿ:–** ನಿಂತ ಜಾಗದಲ್ಲಿಯೇ ಸಮಿತಿಯನ್ನು ಮಾಡಲಾಗುತ್ತದೆಯೇ? ಈಗಾಗಲೇ ಮಾನ್ಯ ಸಚಿವರು ಸಮಿತಿಯನ್ನು ಮಾಡುತ್ತೇವೆ ಎಂದು ಹೇಳಿದ್ದಾರಲ್ಲವೇ?

(478)17–12–2018 SK-KS 12-40

**(ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಬಿಜೆಪಿಯ ಎಲ್ಲಾ ಸದಸ್ಯರು ಸದನದ ಬಾವಿಯಿಂದ ಇಳಿದು, 'ಬೇಕೆ ಬೇಕು ನ್ಯಾಯ ಬೇಕು, ಸಮಿತಿ ರಚನೆ ಆಗಬೇಕು' ಎಂದು ಘೋಷಣೆ ಕೂಗುತ್ತಿದ್ದರು.)**

**(ಗೊಂದಲ)**

**ಸಭಾಪತಿಯವರು:–** ಸದನದ ಬಾವಿಯಲ್ಲಿ ನಿಂತು, ಧರಣಿ ಮಾಡುತ್ತಿರುವ ಮಾನ್ಯ ಸದಸ್ಯರು ಏನೇ ಮಾತನಾಡಿದರೂ, ಅದು ದಾಖಲೆಗೆ ಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮಿಂದ ಯಾವುದೇ ಗೊಂದಲವಿಲ್ಲ ಮತ್ತು ಯಾವುದೇ ರಾಜಕಾರಣ ಇಲ್ಲ. ಇದು ದಲಿತರಿಗೆ ಮತ್ತು ಹಿಂದುಳಿದವರಿಗೆ ಇಟ್ಟಿರುವಂತಹ ಹಣ. ಒಂದೇ ಕ್ಷೇತ್ರದಲ್ಲಿ ಸುಮಾರು 1800 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿರುವ ಬಗ್ಗೆ ಆರೋಪವಿದೆ ಎಂದು ಕೇಳಿದರೆ, ಆ ಇಲಾಖೆಯ ಎಂ.ಡಿ.ಯವರ ಮತ್ತು ಕಾರ್ಯದರ್ಶಿಯವರು ಲಂಚ ಪಡೆದಿದ್ದಾರೆಂಬ ಆರೋಪ ಇರುವಾಗ, ಈ ವಿಚಾರದಲ್ಲಿ ಯಾವುದೇ ರಾಜಕೀಯ ಇಲ್ಲ. ದಯವಿಟ್ಟು, ಆಡಳಿತ ಪಕ್ಷದವರು ಇದನ್ನು ಗಮನಿಸಬೇಕು. ಸದನ ಸಮಿತಿಯನ್ನು ರಚನೆ ಮಾಡಿ.

**ಸಭಾಪತಿಯವರು:–** ಮಾನ್ಯ ಸಚಿವರೇ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಮಂತ್ರಿಗಳು ಬಹಳ ಗೌರವಯುತವಾಗಿ. ...

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ಸಚಿವರು ಮಾತನಾಡುತ್ತಾರೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ನಾನು ತನಿಖೆ ಮಾಡುವುದಿಲ್ಲವೆಂದು ಹೇಳುತ್ತಿಲ್ಲ. ನನ್ನ ಪ್ರಸ್ತಾವನೆ ಏನಿದೆ ಎಂದರೆ, ಮೊದಲು ಇಲಾಖಾ ವಿಚಾರಣೆಯಾಗಲಿ. ಮಾನ್ಯ ಸದಸ್ಯರೆಲ್ಲರೂ ಪ್ರಕರಣದ ಮೇಲೆ ಇವತ್ತು ಏನು ಬೆಳಕು ಚೆಲ್ಲಿದ್ದಾರೆ. ಆ ವಿಚಾರಗಳನ್ನು ಕೂಡ ಸಂಗ್ರಹಿಸಿ ನಮ್ಮ ಇಲಾಖೆಯಲ್ಲಿ ನಿವೃತ್ತರಾದಂತಹ A.C.S. (Additional Chief Secretary)ನವರು ಕೆಲಸ ಮಾಡುತ್ತಿದ್ದಾರೆ. Senior Advisor ಯಾಗಿರುವಂತಹ ಶ್ರೀ ವೆಂಕಟಯ್ಯ, ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಪಾರದರ್ಶಕವಾದಂತಹ ಅಧಿಕಾರಿಗಳು, High credibility ಯನ್ನು ಹೊಂದಿರುವಂತಹ ಅಧಿಕಾರಿಗಳು ಇದ್ದಾರೆ. ಅವರ ಹತ್ತಿರ D.E. (Departmental Enquiry) ಮಾಡಿಸಿ, ಅವರು ರಿಪೋರ್ಟ್ ಕೊಟ್ಟ ನಂತರ, ಅದು ಸಮಂಜಸವಲ್ಲವೆನಿಸಿದಾಗ ಈ ವರದಿಯಲ್ಲಿ ಪಾರದರ್ಶಕವಿಲ್ಲ, ಯಾರನ್ನಾದರೂ ರಕ್ಷಣೆ ಮಾಡುವುದಕ್ಕೆ ಮಾಡುತ್ತಿದ್ದಾರೆಂದರೆ, ಆಗ ಸದನ ಸಮಿತಿ ಮಾಡೋಣ. ದಲಿತರು ಮತ್ತು ಹಿಂದುಳಿದವರ ಬಗ್ಗೆ ನಮಗೂ ಕಾಳಜಿ ಇದೆ. ಯಾರಿಗೂ ಅನ್ಯಾಯವಾಗದ ಹಾಗೇ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ನಾನು ಸಚಿವನಾಗಿರುವುದರಿಂದ, it is my moral responsibility.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಇದನ್ನು ಕೇಳಬೇಕು. ನಾನು ಗಂಭೀರವಾಗಿ ಆರೋಪ ಮಾಡುತ್ತಿದ್ದೇವೆ. ವ್ಯವಸ್ಥೆ ಸರಿಯಿಲ್ಲ. ....

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, as a minister it is my moral responsibility. ನನಗೆ ಜವಾಬ್ದಾರಿಯ ಅರಿವು ಇದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳ....

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, D.E. (Departmental Enquiry) ಆದ ಮೇಲೆ, ಅದು ಸರಿ ಇಲ್ಲದಿದ್ದರೆ ಸದನ ಸಮಿತಿ ಮಾಡುವುದಕ್ಕೆ ಪರಿಶೀಲನೆ ಮಾಡಬಹುದು.

(ಗೊಂದಲ)

**ಡಾ|| ವೈ.ಎ. ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಳೆದ ಐದು ವರ್ಷ....

(ಗೊಂದಲ)

**ಸಭಾಪತಿಯವರು:-** ದಯವಿಟ್ಟು, ಒಂದು ನಿಮಿಷ ಬಾವಿಯಲ್ಲಿ ಇದ್ದು ಮಾತನಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಮಾನ್ಯ ನಾರಾಯಣ ಸ್ವಾಮಿಯವರೇ ಇಲ್ಲಿ ಕೇಳಿ. ತಾವು ಧರಣಿಯನ್ನಾದರೂ ಮಾಡಿ, ಇಲ್ಲವಾದರೆ ಧರಣಿ ಬಿಟ್ಟು ತಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

**ಡಾ. ವೈ.ಎ. ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-**ತಾವು ಇಷ್ಟ ಬಂದಾಗ ಎರಡನ್ನು ಮಾಡುವುದಕ್ಕೆ ಆಗುವುದಿಲ್ಲ. ಒಂದು ಸರಿ ಬಾವಿಗೆ ಬಂದು ಧರಣಿ ಮಾಡುವುದು ಮತ್ತೊಮ್ಮೆ ಬಂದು ಮಾತನಾಡುವುದು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. ತಾವು ಸ್ಪಷ್ಟವಾಗಿ ಇತ್ಯರ್ಥವನ್ನು ತೆಗೆದುಕೊಂಡು, ಒಂದು ಧರಣಿಗೆ ಕುಳಿತುಕೊಳ್ಳಿ. ಇಲ್ಲವಾದರೆ ಭಾಷಣ ಮಾಡಿ. ವಿಷಯ ಏನೇ ಆಗಿದ್ದರೂ ಕೂಡ ಇಷ್ಟ ಬಂದಂತೆ ಮಾಡುವುದಕ್ಕಾಗುವುದಿಲ್ಲ. ಒಟ್ಟಾಗಿ ಎರಡನ್ನು ಮಾಡುವುದಕ್ಕೆ ಅವಕಾಶವಿಲ್ಲ. ತಾವು ಧರಣಿ ಮಾಡುವುದಾದರೆ, ಧರಣಿ ಮಾಡಿ. ಇದು ಸ್ಪಷ್ಟ.

(ಗೊಂದಲ)

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-**ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಒಂದು ಧರಣಿಗೆ ಕುಳಿತುಕೊಳ್ಳಿ. ಇಲ್ಲವಾದರೆ ಭಾಷಣ ಮಾಡಿ ಎಂದು ನಾನು (ಶ್ರೀ ಅರುಣ ಶಹಾಪುರರವರನ್ನು ಉದ್ದೇಶಿಸಿ) ಹೇಳುತ್ತಿದ್ದೇನೆ. ಒಟ್ಟಾಗಿ ಎರಡನ್ನು ಮಾಡುವುದಕ್ಕೆ ಅವಕಾಶವಿಲ್ಲ. ನಿಮಗೆ ಇಷ್ಟ ಬಂದ ಹಾಗೆ ಮಾಡುವುದಕ್ಕಾಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ ಜಯಮಾಲಾ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದನೇಂದರೆ, ಈಗಾಗಲೇ ಮಾನ್ಯ ಸಚಿವರು ಇಲಾಖೆಯಿಂದ ವಿಚಾರಣೆ ಮಾಡಿಸಿದ ನಂತರ ಇದರ ಬಗ್ಗೆ ತೀರ್ಮಾನ ಮಾಡುತ್ತೇನೆಂದು ಹೇಳಿದ್ದಾರೆ. ದಯವಿಟ್ಟು, ಈಗ ಸದನ ಸಮಿತಿಯನ್ನು ರಚಿಸುವುದಕ್ಕೆ ಆಗುವುದಿಲ್ಲ. ಮೊದಲು ಇಲಾಖೆಯಿಂದ ತನಿಖೆಯನ್ನು ಮಾಡಿಸುವುದಕ್ಕೆ ಒಪ್ಪಿಕೊಂಡು, ಮಾನ್ಯ ಸದಸ್ಯರೆಲ್ಲರೂ ತಿಳುವಳಿಕೆಯುಳ್ಳವಂತರು ಆಗಿರುವುದರಿಂದ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಮಾಜ ಕಲ್ಯಾಣ ಸಚಿವರು ಬಹಳ ಮುಕ್ತ ಮನಸ್ಸಿನಿಂದ ಇದ್ದಾರೆ. ಅವರ ದಕ್ಷತೆ ಮತ್ತು ಸಾಮರ್ಥ್ಯದ ಬಗ್ಗೆ ಎರಡು ಪ್ರಶ್ನೆಯೇ ಇಲ್ಲ. ಅವರು ಈಗಾಗಲೇ ಹೆಚ್ಚುವರಿ ನಿವೃತ್ತ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಇಲಾಖಾ ವಿಚಾರಣೆ ಮಾಡಿಸುತ್ತೇನೆ. ಯಾವ ಯಾವ ಪ್ರಕರಣಗಳಿವೆ. ಅವುಗಳನ್ನು ಕೊಡಿ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಈ ರೀತಿ ಇರುವಾಗ ಮತ್ತೊಮ್ಮೆ ಈ ವಿಚಾರದಲ್ಲಿ ಅಗ್ರಹ ಮಾಡುವುದರಲ್ಲಿ ಅರ್ಥವಿಲ್ಲ. ಅವರಿಂದ ವರದಿ ಬರಲಿ, ಆ ವರದಿ ನಿಮಗೆ ಸಮಧಾನವಾಗಿಲ್ಲವೆಂದರೆ, ಸದನ ಸಮಿತಿಗೆ ಒಪ್ಪಿಕೊಳ್ಳೋಣವೆಂದು ಮುಕ್ತ ಮನಸ್ಸಿನಿಂದ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದಕ್ಕೆ ಮತ್ತೆ ವೃತ ಕಾಲಾಹರಣ ಏಕೆ?

**(ಗೊಂದಲ)**

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ Legislative Committee ಕೂಡ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮಿತಿಯಲ್ಲಿಯೂ ಕೂಡ ಸಾಕಷ್ಟು ಬಾರಿ ಚರ್ಚೆಯಾಗಿದೆ. ಅಲ್ಲಿಯೂ ಕೂಡ ಕೆಲವು ಬೋರ್‌ವೆಲ್‌ಗಳ ಪ್ರಕರಣಗಳು ಬಂದಿವೆ. Committee on the Scheduled Castes (SC)/Scheduled Tribes (ST) is also examining this issue and have suggested legally in this regard. ಮಾನ್ಯ ಸಭಾಪತಿಯವರೇ, ಮತ್ತೊಂದು ಸದನ ಸಮಿತಿ ರಚನೆಯಾಗುವುದು ಬೇಡ.

**ಸಭಾಪತಿಯವರು:–** ಆ ಕಮಿಟಿಯಲ್ಲಿ ತಾವು ಸಹ ಸದಸ್ಯರಾಗಿದ್ದೀರಿ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಆ ಕಮಿಟಿಯಲ್ಲಿ ಸದಸ್ಯರು, ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಸಹ ಇರುತ್ತಾರೆ. ಈಗಾಗಲೇ ಅದರಲ್ಲಿ ಚರ್ಚೆಯೂ ಆಗುತ್ತಿದೆ. ಈಗಾಗಲೇ ಕಾನೂನು ಇಲಾಖೆಯಿಂದ justification and suggestion ಅನ್ನು ಕೂಡ ಪಡೆದಿದ್ದಾರೆ. ನಾವು ಇಲಾಖೆಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖಾಂತರ ಏನೇನು ವರದಿಯನ್ನು ತರಿಸಿಕೊಳ್ಳಬೇಕೋ, ಅದನ್ನೆಲ್ಲಾ ತರಿಸಿಕೊಂಡ ನಂತರ ನೋಡೋಣ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮಿತಿ ಒಂದು ಸದನ ಸಮಿತಿ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯಲ್ಲಿಯೂ ಕೂಡ ಈ ಬಗ್ಗೆ ನಾವೆಲ್ಲರೂ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. 'ಗಂಗಾ ಕಲ್ಯಾಣ ಯೋಜನೆ' ಯಡಿಯಲ್ಲಿ ಕೊರೆದಿರುವ ಬೋರ್‌ವೆಲ್‌ಗಳು ಸರಿಯಾಗಿ ನಡೆಯುತ್ತಿಲ್ಲ. 'No water, no money ಎಂದು ಹೇಳುವ ಈ ಯೋಜನೆಯೊಳಗೆ ಯಾವ ಕಂಪನಿಯವರ ಬೋರ್‌ವೆಲ್‌ಗಳನ್ನು ಕೊರೆಯುತ್ತಾರೋ, ಅಲ್ಲಿ ನೀರು ಸಿಗದಿದ್ದರೆ ಅವರಿಗೆ ಹಣವನ್ನು ಕೊಡುವುದಿಲ್ಲ ಎಂಬುದರ ಬಗ್ಗೆ ಚರ್ಚೆಯಾಗಿದೆ. ಮಾನ್ಯ ಸಚಿವರು ಉತ್ತಮ ಮನಸ್ಸಿನಿಂದ ಇದರಲ್ಲಿ ಬಹಳ ತೊಂದರೆಗಳಾಗಿದೆ, ಇದರ ಬಗ್ಗೆ ವಿಚಾರಣೆ ಮಾಡಿಸುತ್ತೇನೆಂದು, ಬಹಳ ಮುಕ್ತ ಮನಸ್ಸಿನಿಂದ ಒಪ್ಪಿದ್ದಾರೆ. ಮಾನ್ಯ ಸಚಿವರು ಈ ರೀತಿ ಹೇಳಿದರೂ ಕೂಡ ಸದನ ಸಮಿತಿ ಮಾಡಿ ಎಂದು ಹಠ ಹಿಡಿಯುವುದು ಸರಿಯಲ್ಲ. ನಾವೆಲ್ಲರೂ ಸದನ ಸಮಿತಿಯಲ್ಲಿ ಏನೂ ಮಾಡುತ್ತೇವೆಂಬುದು ನಮಗೆ ಗೊತ್ತಿದೆ. ನಾವು ಅನೇಕ ಸದನ ಸಮಿತಿಯನ್ನು ನಡೆಸಿದ್ದೇವೆ. ಅಲ್ಲಿಯೂ ಕೂಡ ಆಗುವಂತಹ ವಿಚಾರಗಳ ಅಷ್ಟೇ. ಮಾನ್ಯ ಸಚಿವರು ಹೇಳಿರುವುದೇನೆಂದರೆ, ಸದನ ಸಮಿತಿ ಆಗುವುದಕ್ಕಿಂತ ಮುಂಚೆ, ನಮ್ಮ ಕೈಗೆ ಬರಲಿ. Departmental enquiry report ಬರಲಿ ಎಂದು ಹೇಳುತ್ತಿದ್ದಾರೆ. ನೀವು ವಿಚಾರಣೆ ಮಾಡದೇ ಗಲ್ಲು ಶಿಕ್ಷೆ ಕೊಡಿ ಎಂದರೆ ಹೇಗೆ? ನಾನು ಹೇಳುವುದೇನೆಂದರೆ, ಸಮಿತಿಯಿಂದ ಇಲಾಖಾ ವಿಚಾರಣೆಯಾದ ನಂತರ ಅದು ನಿಮಗೆ ಒಪ್ಪಿಗೆಯಾಗದಿದ್ದರೆ  ಸದನ ಸಮಿತಿ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿರುವುದನ್ನು ನಾವು ಪರಿಗಣನೆ ಮಾಡಬಹುದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಿಂದ ನಾವು ಯಾವ ಹೊಸ ಸಂಪ್ರದಾಯವನ್ನು ಹುಟ್ಟಿ ಹಾಕಿಲ್ಲ. ಇದರ ಬಗ್ಗೆ ನಮಗೆ ಅನುಮಾನವಿದೆ. ಒಂದೇ ಕ್ಷೇತ್ರದಲ್ಲಿ ಏಕ ಕಾಲದಲ್ಲಿ ಸುಮಾರು 1800 ಕೊಳವೆ ಬಾವಿಗಳನ್ನು ಕೊರೆದಿದ್ದಾರೆ. ಸುಮಾರು ಒಂದು ಕೋಟಿ ಎಂಭತ್ತು ಲಕ್ಷ ರೂಪಾಯಿಗಳನ್ನು ಅಕ್ರಮವಾಗಿ ಲಂಚ ಪಡೆದಿದ್ದಾರೆಂಬ ಆರೋಪ ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಎಂ.ಡಿ.ಯವರ ಮೇಲೆಯೇ ಆರೋಪಗಳಿದೆ. ಈ ಹಿನ್ನೆಲೆಯಲ್ಲಿ ಸದನ ಸಮಿತಿ ಮಾಡಿದರೆ ಮಾತ್ರ ನ್ಯಾಯ ಸಿಗುತ್ತದೆಂದು ನಾವು ತಿಳಿದುಕೊಂಡಿದ್ದೇವೆ. ಮತ್ತೆ ತಾವು ಪೀಠದಲ್ಲಿದ್ದಾಗ, ಹೇಳಿರುವಂತಹ ಒಂದು  ಮಾತನ್ನು ತಾವು ಗಮನಿಸಬೇಕು. ಯಾವುದೇ ಸಂದರ್ಭದಲ್ಲಿ ನ್ಯಾಯ ಕೋರಿ, ವಿರೋಧ ಪಕ್ಷದವರು ಬಾವಿಗೆ ಇಳಿದಾಗ, ವಿರೋಧ ಪಕ್ಷದ ಪರವಾಗಿ ಒಬ್ಬರು ತಮ್ಮ ಸ್ಥಾನಕ್ಕೆ ಬಂದು, ಮಾತನಾಡುವುದಕ್ಕೆ ಇಲ್ಲಿಯವರೆಗೆ ಸಂಪ್ರದಾಯದಲ್ಲಿ ಅವಕಾಶ ಇದೆ.

**ಸಭಾಪತಿಯವರು:–** ಎರಡೂ ಅವಕಾಶಗಳು ಸಹ ಇದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳ ಮೇಲೆ ನಂಬಿಕೆ ಇದೆ. ಯಾರೂ ಕೂಡ ಅವರಿಗೆ ಯೋಗ್ಯತೆ ಇಲ್ಲ ಎನ್ನುವ ಪ್ರಶ್ನೆಯಲ್ಲ. ಅವರಿಗೆ ಒಳ್ಳೆಯದಾಗಲಿ. ಆದರೆ ಈ ವಿಚಾರದಲ್ಲಿ ನಾವು ರಾಜಿ ಮಾಡಿಕೊಳ್ಳುವುದಿಲ್ಲ. ಆದರೆ ಸದನ ಸಮಿತಿ ಮಾಡಬೇಕೆಂಬ ಒತ್ತಾಯವಿದೆ. ಅದರಲ್ಲಿ ದುರಪಯೋಗವಾಗಿರುವುದರ ಬಗ್ಗೆ ನ್ಯಾಯಯುತವಾಗಿಕ್ಕೋಸ್ಕರವಾಗಿ ತನಿಖೆಯಾಗಬೇಕು. ಸಾಮಾನ್ಯ ಅಧಿಕಾರಿಗಳು ಮತ್ತು ನಿಗಮದ ಅಧಿಕಾರಿಗಳ ಮೂಲಕ ತನಿಖೆ ಮಾಡುವಂತಹ ಷಡ್ಯಂತ್ರ ಇದೆ. ಇದನ್ನು ನಾವು ಒಪ್ಪುವುದಿಲ್ಲ.

**ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದವರ ಬಗ್ಗೆ ನಮಗೆ ನೂರಕ್ಕೆ ನೂರು ಕಾಳಜಿ ಇದೆ. ಅವರ ಅಭಿಪ್ರಾಯದ ಬಗ್ಗೆ ನೂರಕ್ಕೆ ನೂರು ಸಮ್ಮತಿಯೂ ಕೂಡ ಇದೆ. ಇದು ಬಹಳ ಗಂಭೀರವಾಗಿರುವಂತಹ ವಿಚಾರ ಮಾನ್ಯ ಸಚಿವರು ಬಹಳ ಗಂಭೀರವಾಗಿ ಪರಿಗಣಿಸಿದ್ದಾರೆ. ಅವರು ಉತ್ತರವನ್ನು ಕೊಡುವಾಗ, ಹತ್ತು ಪಟ್ಟು ಕಳಕಳಿಯಿಂದ ಮಾತನಾಡಿದ್ದಾರೆ. ಎಲ್ಲೂ ದುರುಪಯೋಗವಾಗಿದೆ ಎಂದಾಗ ಚಕಾರ ಎತ್ತಲಿಲ್ಲ. ಕೋಲಾರ ಜಿಲ್ಲೆ 100% drought hit region ಎನ್ನುವುದು ರಾಜ್ಯದ ಜನತೆಗೆ ಗೊತ್ತಿರುವಂತಹದ್ದು. ಅಲ್ಲಿ ನೀರಾವರಿಗಾಗಿ ಕೊಳವೆ ಬಾವಿಯನ್ನು ಹೊರತುಪಡಿಸಿ, ಬೇರೆ ಇನ್ನಾವುದೇ ದಾರಿ ಇಲ್ಲ. ಅಲ್ಲಿ ಮಾನ್ಯ ಸದಸ್ಯರಿಗೆ ಅತಿ ಹೆಚ್ಚಾಗಿ ಕೊಳವೆ ಬಾವಿ ಕೊರೆದಿರುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ನನಗೂ ಕೂಡ ಅನುಮಾನವಿದೆ. ಎಲ್ಲರಿಗೂ ಕೂಡ ಅನುಮಾನವಿದೆ. ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಒಮ್ಮೆಲೆ ನೀವು CBI (Central Bureau of Investigation) ಗೆ ತಕ್ಷಣವೇ ಕೊಡಿ ಎಂದು ಹೇಳಿದರೆ ಹೇಗಾಗುತ್ತದೆ? ಅಧಿಕಾರಿಗಳ ಸಮಿತಿಯನ್ನು ರಚನೆ ಮಾಡಿ ಕಮಿಟಿಯನ್ನು ಮೊದಲು ಮಂಡಿಸಲಾಗುವುದೆಂದು ಹೇಳಿದ್ದಾರೆ. ವಿರೋಧ ಪಕ್ಷದವರು ಕೂಡ ಮಾನ್ಯ ಸಚಿವರ ದಕ್ಷತೆಯ ಬಗ್ಗೆ ಕೊಂಡಾಡಿದ್ದಾರೆ. ಇನ್ನೊಂದು ಕಡೆ ಮಾನ್ಯ ಸಚಿವರು ಹಿರಿಯ ಅಧಿಕಾರಿ ವರ್ಗದವರನ್ನೊಳಗೊಂಡಂತಹ ಸಮಿತಿಯನ್ನು ರಚನೆ ಮಾಡಿ. ಆ ಸಮಿಯಿಂದ ರಿಪೋರ್ಟ್ ಬಂದ ಮೇಲೆ ಆ ವರದಿಯನ್ನು ಒಂದು ವೇಳೆ ಅದು ಸಮಂಜಸವಾಗಿಲ್ಲವೆಂದರೆ, ನಂತರ ಅವರು ಸದನ ಸಮಿತಿಯನ್ನು ರಚನೆ ಮಾಡುತ್ತಾರೆ. ಆನಂತರ ಸದನ ಸಮಿತಿ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎನ್ನುವದರ ಬಗ್ಗೆ ಪರಿಶೀಲನೆ ಮಾಡಿ. ಇಲ್ಲಿ ಪ್ರಮುಖ್ಯವಾದ ಒಂದು ವಿಚಾರವನ್ನು ಏನು ಹೇಳಿದ್ದಾರಂದರೆ, ನಾವು vague ಆಗಿ ಆರೋಪ ಮಾಡುವುದಲ್ಲ. ಎಲ್ಲೆಲ್ಲಿ ದುರಪಯೋಗವಾಗಿದೆ, ಅಂದರೆ ಅಳತೆಯಲ್ಲಿ ದುರುಪಯೋಗವಾಗಿದೆಯೋ, casing pipes ನಲ್ಲಿ ದುರುಪಯೋಗವಾಗಿದೆಯೋ, ನೀರು ಬರದೇ ಇರುವಂತಹದ್ದರಲ್ಲಿ ಕೊಳವೆ ಬಾವಿಗಳನ್ನು ಕೊರೆಸುವಲ್ಲಿ ಆಗಿರುವ ನಿರ್ದಿಷ್ಟವಾದ ಪ್ರಕರಣಗಳನ್ನು ದಯವಿಟ್ಟು, ತಾವುಗಳೆಲ್ಲರೂ ಕೊಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(479)17–12–2018 12–50 TCH:GR

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಬೋಜೇಗೌಡ:– (ಮುಂದು)**

ಮಾನ್ಯ ಸಚಿವರು ಇಷ್ಟು ಹೇಳಿದ ಮೇಲೆ ಇನ್ನು ಯಾವ ರೀತಿ ಹೇಳಬೇಕು? ಆದ್ದರಿಂದ ಮಾನ್ಯ ವಿರೋಧ ಪಕ್ಷದವರು ಪದೇ ಪದೇ ಬಾವಿಗೆ ಇಳಿದು ವ್ಯರ್ಥ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ಏಕೆಂದರೆ, ತಮ್ಮದೂ ಅಮೂಲ್ಯವಾದಂತಹ ಸಮಯ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ಎಲ್ಲಾ ವಿಷಯಗಳಲ್ಲೂ ಅವರು ಈ ರೀತಿ ಬಾವಿಗೆ ಇಳಿದು, ಧರಣಿಯಲ್ಲಿ ನಿರತರಾದಲ್ಲಿ, ಸದನವು ಅರ್ಥವನ್ನೇ ಕಳೆದುಕೊಳ್ಳುತ್ತದೆ ಎಂಬುದು ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿರುತ್ತದೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ನನ್ನದೊಂದೇ ಮನವಿ. ಈಗಾಗಲೇ Committee on Welfare of Scheduled Castes/Scheduled Tribes ಕೂಡ ರಚನೆಯಾಗಿದೆ, ಅದರಲ್ಲಿ ಕೂಡ ಈ ವಿಷಯ ಚರ್ಚೆ ಆಗುತ್ತಿದೆ. ಈ ಸಮಿತಿಯಲ್ಲಿ ಎಂ.ಎಲ್.ಎ., ಮತ್ತು ಎಂ.ಎಲ್.ಸಿ., ಯವರು ಇರುತ್ತಾರೆ. ಎಲ್ಲಾ ಪಕ್ಷದವರೂ ಕೂಡ ಸದಸ್ಯರಾಗಿರುತ್ತಾರೆ. ನನ್ನ ಮೇಲೆ ನಂಬಿಕೆ ಇಲ್ಲದಿದ್ದರೆ, ಕೊನೆಪಕ್ಷ ಮಾನ್ಯ ಸದಸ್ಯರಿಗೆ ಆ ಸಮಿತಿ ಮೇಲೆ ನಂಬಿಕೆ ಇರಬೇಕು ಅಲ್ಲವೇ? (ಗೊಂದಲ) ಅದಕ್ಕೆ ನಾವು ಏನು ಹೇಳುತ್ತಿದ್ದೇವೆಂದರೆ, ಮೊದಲು ಇಲಾಖಾ ವಿಚಾರಣೆ ನಡೆದಂತಹ ಸಂದರ್ಭದಲ್ಲಿ ಪ್ರತಿ ಶುಕ್ರವಾರ ಆ ಸಮಿತಿಗೆ ನಾವು ಹೋಗಲೇಬೇಕು. There is no escape.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, Committee on Welfare of Scheduled Castes/Scheduled Tribes ಯಲ್ಲಿ ಬಿ.ಜೆ.ಪಿ. ಶಾಸಕರುಗಳೇ ಹೆಚ್ಚಾಗಿ ಇರುತ್ತಾರೆ.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ನಾವು ಪ್ರತಿ ಶುಕ್ರವಾರ ಆ ಸಮಿತಿಗೆ ಹಾಜರಾಗಲೇಬೇಕು. ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಹಾಗೂ ಎಂ.ಡಿ.,ಯವರು ಕೂಡ ಆ ಸಮಿತಿಗೆ ಹಾಜರಿರುತ್ತಾರೆ. ಅಲ್ಲಿ ಈ ವಿಷಯದ ಕುರಿತು ಚರ್ಚೆ ಆಗಲೇಬೇಕು. ಅಲ್ಲಿ ಎಲ್ಲಾ ಸದಸ್ಯರು ಇದ್ದಾರೆ. That is also an House Committee, specially constituted for the Welfare of Scheduled Castes/Scheduled Tribes. ಅದು ಜಂಟಿ ಸದನ ಸಮಿತಿ ಆಗಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಮಾಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ, ಮಾನ್ಯ ಸಚಿವರ ಇಲಾಖೆಯಲ್ಲಿನ ಶೇ.90ರಷ್ಟು ಅಧಿಕಾರಿಗಳ ವಿರುದ್ಧವೇ ಆರೋಪ ಇರುವುದರಿಂದ, ಅಧಿಕಾರಿಗಳಿಂದ ತನಿಖೆ ನಡೆಸುವುದು ವಿಶ್ವಾಸಾರ್ಹವಲ್ಲ. ಮಾನ್ಯ ಸಚಿವರು ಈಗಾಗಲೇ



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನ ಸಮಿತಿ ಇದೆಯೆಂದು ಹೇಳಿದ್ದಾರೆ, ಆ ಎಲ್ಲಾ ಇಲಾಖೆಯ ಸಮಿತಿಗಳಿಗಿಂತಲೂ ಈ ಸದನ ಸಮಿತಿ ಸರ್ವೋಚ್ಚ ಆಗಿದೆ. ಹಾಗಾಗಿ, ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಕೇಳುತ್ತಿದ್ದೇವೆ. ಒಂದು ವೇಳೆ ಅವರಿಗೇನಾದರೂ ನಮ್ಮ ಮೇಲೆ ಆತಂಕಗಳಿದ್ದಲ್ಲಿ, ನಿಮ್ಮ ಆಡಳಿತ ಪಕ್ಷದವರ ನೇತೃತ್ವದಲ್ಲಿಯೇ ಮಾನ್ಯ ಶ್ರೀ ಕೆ.ಸಿ.ಕೊಂಡಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿಯನ್ನು ರಚನೆ ಮಾಡಿ. ಯಾರ ಅಧ್ಯಕ್ಷತೆಯಲ್ಲಿ ಬೇಕಾದರೂ ಸದನ ಸಮಿತಿ ರಚನೆ ಮಾಡಿದರೆ ನಮ್ಮ ಆಕ್ಷೇಪ ಏನೂ ಇಲ್ಲ. ನಾವು ವಿಷಯದ ಮೇಲೆ ಮಾತ್ರ ಮಾತನಾಡುತ್ತಿದ್ದೇವೆ. ಮಾನ್ಯ ಸಚಿವರ ನಿರೀಕ್ಷೆ ಏನು ಇತ್ತು ಎಂದರೆ,...

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡಬಯಸುತ್ತಿದ್ದಾರೆ.

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಇಲಾಖಾ ವಿಚಾರಣೆಗೆ ಆದೇಶ ನೀಡಲಾಗಿದೆ. ಒಂದು ವೇಳೆ, ಆ ಇಲಾಖಾ ವಿಚಾರಣೆ ತಮಗೆ ತೃಪ್ತಿದಾಯಕವಾಗಿಲ್ಲವೆಂದರೆ, ನಾನು hundred per cent ಸದನ ಸಮಿತಿಯನ್ನು ರಚನೆ ಮಾಡುತ್ತೇನೆ. ಅದು ಅಲ್ಲದೇ Committee on Welfare of Scheduled Castes/Scheduled Tribes ಏನಿದೆ, ಇದು ಪ್ರತಿ ಶುಕ್ರವಾರ ಸಭೆ ಸೇರುತ್ತಿದೆ. ನಾವು ಅವರಿಗೂ ಕೂಡ ಈ ವಿಚಾರವನ್ನು ಸಲ್ಲಿಸುತ್ತಿದ್ದೇವೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ ಹಾಗೂ ಯಾರಿಗೂ ರಕ್ಷಣೆ ಕೊಡುವಂತಹ ಉದ್ದೇಶ ನಮಗೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರಿಗೆ ರಕ್ಷಣೆ ಕೊಡುವಂತಹ ಉದ್ದೇಶ ಇಲ್ಲದಿದ್ದಲ್ಲಿ, ಸದನ ಸಮಿತಿ ರಚನೆ ಮಾಡಲು ಸರ್ಕಾರಕ್ಕಿರುವ ತೊಂದರೆಯಾದರೂ ಏನು?

**ಶ್ರೀ ಪ್ರಿಯಾಂಕ ಖರ್ಗೆ:-** ಅದರಲ್ಲಿ ಏನೇನಾಗಿದೆ ಎಂದು ಮೊದಲು ನಮಗೂ ಗೊತ್ತಾಗಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರ ಇಲಾಖೆಯಲ್ಲಿ ಮೊದಲು ಪರಿಶೀಲಿಸಬೇಕಾಗುತ್ತದೆ. ತಮ್ಮ ಇಲಾಖಾ ಮಟ್ಟದಲ್ಲಿ ತಾವೇ ತನಿಖೆ ನಡೆಸಿಕೊಳ್ಳಿ.

(ಗೊಂದಲ)

**ಶ್ರೀ ಪ್ರಿಯಾಂಕ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು ಸುಮಾರು 8-10 ಪ್ರಕರಣಗಳ ಬಗ್ಗೆ ಹೇಳಿದ್ದಾರೆ. ನಾವು ಆ ದಾಖಲೆಗಳನ್ನು ತರಿಸಿಕೊಂಡು ಪರಿಶೀಲನೆ ಮಾಡಬೇಕಲ್ಲವೇ? ಅಲ್ಲಿಯವರೆಗೆ ಸದನ ಸಮಿತಿ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಮಾಡಿದರೆ ಮಾತ್ರ ನ್ಯಾಯ ಸಿಗುತ್ತದೆಂದು ನಾವು ನಂಬಿದ್ದೇವೆ. ಅದನ್ನು ರಚನೆ ಮಾಡಲು ಮಾನ್ಯ ಸಚಿವರಿಗೆ ಇರುವ ತೊಂದರೆಯೇನು?

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ನ್ಯಾಯ ಒದಗಿಸಿಕೊಡುವುದು ನಮ್ಮ ಜವಾಬ್ದಾರಿ. ನಾನು ಸಚಿವನಾಗಿ ಈ ಕುರ್ಚಿಯನ್ನು ಅಲಂಕರಿಸಿದಾಗ, ಈ ಸಮಾಜದ ಹಿತವನ್ನು ಕಾಪಾಡುವುದು ನನ್ನ ಜವಾಬ್ದಾರಿ ಆಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನ್ಯಾಯ ಕೊಡುವುದಕ್ಕೆ ಸಚಿವರು ಇದ್ದಾರೆ, ಇಲಾಖೆ ಇದೆ, ಅಧಿಕಾರಿಗಳು ಕೂಡ ಇದ್ದಾರೆ. ಹಾಗಾದರೆ, ಗಂಗಾ ಕಲ್ಯಾಣ ಯೋಜನೆಯಲ್ಲಿ ಹೇಗೆ ಅನ್ಯಾಯ ಆಯಿತು.

**ಶ್ರೀ ಪ್ರಿಯಾಂಕ ಖರ್ಗೆ:–** ಮಾನ್ಯ ಸಭಾಪತಿಯವರೇ, ಈಗಲೇ ಸದನ ಸಮಿತಿ ರಚನೆ ಆಗಬೇಕೆಂದು ಹೇಳಿದರೆ ಆಗುವುದಿಲ್ಲ.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಲಾಖೆಯಿಂದ ವಿಚಾರಣೆ ಮಾಡಿಸುತ್ತೇವೆಂದು ಹೇಳಿದ್ದಾರೆ, ಅದಕ್ಕಾಗಿ ಅವರಿಗೆ ಸ್ವಲ್ಪ ಸಮಯಾವಕಾಶ ಕೊಡಿ, ಅವರು ಮಾಡಲಿ.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಬಿಜೆಪಿಯ ಎಲ್ಲಾ ಸದಸ್ಯರು ಸದನದ ಬಾವಿಗೆ ಇಳಿದು, 'ಬೇಕೆ ಬೇಕು ನ್ಯಾಯ ಬೇಕು, ಬೇಕೇ ಬೇಕು ಸಮಿತಿ ಮಾಡಬೇಕು' ಎಂದು ಎಂದು ಘೋಷಣೆ ಕೂಗುತ್ತಿದ್ದರು.)**

**ಸಭಾಪತಿಯವರು:–** ಮಾನ್ಯ ಸದಸ್ಯರುಗಳೇ, ಸುಮ್ಮನೆ ಸದನದ ಸಮಯವನ್ನು ಹಾಳು ಮಾಡಿ ಸದನವನ್ನು ಮುಂದೂಡಲು ತಾವು ಅವಕಾಶ ಮಾಡಿಕೊಡಬೇಡಿ. ನಿಮಗೆ ಸದನವನ್ನು ಅಡ್ಜರ್ನ್ ಮಾಡಲೇಬೇಕು ಎನ್ನುವಂತಿದ್ದರೆ, ಧಿಕ್ಕಾರ ಕೂಗಿ, ಅಡ್ಜರ್ನ್ ಮಾಡುತ್ತೇನೆ. ಏಕೆಂದರೆ, ಇಲ್ಲಿಗೆ ನಾವು ಬೆಳಗಾವಿಯ ಅಧಿವೇಶನದಲ್ಲಿ ಪಾಲ್ಗೊಳ್ಳುವ ಸಲುವಾಗಿ ಬಂದಿದ್ದೇವೆ. ಹಾಗಾಗಿ, ಯಾವ ಉದ್ದೇಶಕ್ಕಾಗಿ ಬಂದಿದ್ದೇವೆಯೋ ಅದನ್ನು ನಾವು ಈಡೇರಿಸಬೇಕಾಗುತ್ತದೆ. ತಮಗೆ ಯಾವ ತನಿಖೆ ಮಾಡಬೇಕಾಗಿದೆಯೋ, ಆ ತನಿಖೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಪರೋಕ್ಷವಾಗಿ ಹೇಳಿದ್ದಾರೆ. ಆದರೂ ಸಹ ಸಮಯವನ್ನು ವ್ಯರ್ಥವಾಗಿ ಹಾಳು ಮಾಡಬೇಡಿ. ಇದೆಲ್ಲಾ ಒಳ್ಳೆಯ ವ್ಯವಸ್ಥೆ ಅಲ್ಲ. ಎಲ್ಲಾ ವಿರೋಧ ಪಕ್ಷದ ನಾಯಕರು, ಮಾನ್ಯ ವಿರೋಧ ಪಕ್ಷದವರು ಹೇಳಿದಂತಹ ಗೆರೆಯಲ್ಲಿಯೇ ಸರ್ಕಾರ ನಡೆಯಬೇಕು ಎನ್ನುವ ನಿರೀಕ್ಷೆ ಇದೆಯೆಲ್ಲಾ, ಅದು ಸರಿಯಾದುದಲ್ಲ. ಮಾನ್ಯ ಸಚಿವರು 'ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಅಗತ್ಯವಿದ್ದಲ್ಲಿ ಸದನ ಸಮಿತಿಯನ್ನು ರಚನೆ ಮಾಡುತ್ತೇನೆ' ಎನ್ನತಕ್ಕಂತಹ ಭರವಸೆಯನ್ನು ಕೊಟ್ಟರೂ ಕೂಡ ಮತ್ತೆ ಧರಣಿ ಮಾಡುವುದು ಅಷ್ಟೊಂದು ಸಮಂಜಸವಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬರಗಾಲದಲ್ಲಿ 1,800 ಕೊಳವೆಬಾವಿಗಳನ್ನು ಕೊರೆಸಿ, 36 ಕೋಟಿ ರೂಪಾಯಿಗಳ ಲಂಚ ವಂಚನೆ ಆದಂತಹ ಸಂದರ್ಭದಲ್ಲಿ ನಾವು ಮತ್ತೆ ಇನ್ನೇನು ಮಾಡಬೇಕಾಗುತ್ತದೆ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, 'ಗಂಗಾ ಕಲ್ಯಾಣ ಯೋಜನೆ' ಅಡಿಯಲ್ಲಿ ಬೋರ್‌ವೆಲ್ ಕೊರೆಸುವುದು ಇದೆಯೆಲ್ಲಾ, ಈ Committee on Welfare of Scheduled Castes/Scheduled Tribes ಯಲ್ಲಿ ನಾನು ಕೂಡ ಸದಸ್ಯನಾಗಿದ್ದೇನೆ. ಅಲ್ಲಿ ಬಿ.ಜೆ.ಪಿ. ಪಕ್ಷದ ಸದಸ್ಯರುಗಳು ಕೂಡ ಬಹಳಷ್ಟು ಸಂಖ್ಯೆಯಲ್ಲಿ ಇದ್ದಾರೆ, ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಕೂಡ ಇದ್ದಾರೆ. ಏಕೆಂದರೆ, ಅಲ್ಲಿ ಆಡಳಿತ ಪಕ್ಷದವರು ಮಾತ್ರ ಸದಸ್ಯರಾಗಿಲ್ಲ. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಹಿರಿಯ ಸದಸ್ಯರು ಅದರ ಬಗ್ಗೆ ಮಾತನಾಡಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. 'ಗಂಗಾ ಕಲ್ಯಾಣ ಯೋಜನೆ' ಅಡಿಯಲ್ಲಿ ಬೋರ್‌ವೆಲ್ ಕೊರೆಸುವುದರಲ್ಲಿ ದೊಡ್ಡ ಮಟ್ಟದಲ್ಲಿ ಅವ್ಯವಹಾರವಾಗಿದೆ. ಇದರಲ್ಲಿ ಅವ್ಯವಹಾರ ಆಗಿಲ್ಲವೆಂದು ಹೇಳುತ್ತಿಲ್ಲ. ಆದರೆ, ಹಿಂದೆ ಇದ್ದಂತಹ ಮಾನ್ಯ ಸಚಿವರು ಕೂಡ ಅದರಲ್ಲಿ ಯಾರನ್ನೂ ಸಹ ಬಚಾವ್ ಮಾಡಬೇಕು ಎಂಬುದಲ್ಲ. ಈ ಗಂಗಾ ಕಲ್ಯಾಣ ಯೋಜನೆಯು ಬಡವರಿಗೆ ಬೋರ್‌ವೆಲ್ ಕೊರೆಸಿಕೊಡುವಂತಹ ಕಾರ್ಯಕ್ರಮವಾಗಿದೆ. ಸದರಿ ಯೋಜನೆಯಲ್ಲಿ ಬಹಳಷ್ಟು ಅವ್ಯವಹಾರವಾಗಿದೆ. ನಾವು ಕೂಡ ಇದನ್ನು ಪರಿಶೀಲಿಸಲು ಕೈಜೋಡಿಸುತ್ತಿದ್ದೇವೆ. ಆದರೆ ಸದನ ಸಮಿತಿ ರಚನೆ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಇಲಾಖಾ ವಿಚಾರಣೆ ನಡೆಯುತ್ತಿದ್ದು, ಅದು ತನ್ನ ವರದಿ ನೀಡಿದ ನಂತರವೂ ಕೂಡ ಅವರಿಗೆ ಸಮಾಧಾನ ಇಲ್ಲವೆಂದರೆ, ಆಗ ನಾವೇ ಸದನ ಸಮಿತಿಗೆ ಒತ್ತಾಯ ಮಾಡುತ್ತೇವೆ. ಅದು ಬಿಟ್ಟು ಮಾನ್ಯ ವಿರೋಧ ಪಕ್ಷದವರು, ಸರ್ಕಾರ ಏಕಾಏಕಿ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳುವುದು ತಪ್ಪಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದವರಿಗೆ ಒಂದು ವಿಚಾರವನ್ನು ನಾನು ಕೇಳುತ್ತೇನೆ. Committee on Welfare of Scheduled Castes/Scheduled Tribes ಗೂ ಸದನದ ಸಮಿತಿಗೂ ಇರುವ ವ್ಯತ್ಯಾಸ ಏನೆಂದು ಹೇಳಿ. ಮೊದಲು ನೀವು ಇದಕ್ಕೆ ಉತ್ತರ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, Committee on Welfare of Scheduled Castes/Scheduled Tribes ಹಾಗೂ ಇನ್ನಾವುದೇ ಸಮಿತಿಗಿಂತ ಈ ಸದನ ಸಮಿತಿಗೆ ಸರ್ವೋಚ್ಚ ಅಧಿಕಾರವಿದೆ. ಅದಕ್ಕೆ ನಾನು ಕೇಳುತ್ತಿರುವುದೇನೆಂದರೆ, ಸರ್ಕಾರ ಪಾರದರ್ಶಕವಾಗಿದೆ ಹಾಗೂ ಮಾನ್ಯ ಸಚಿವರು ಪ್ರಮಾಣಿಕರಾಗಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾಗಾದರೆ, ಮಾನ್ಯ ಸಚಿವರು ಸದನ ಸಮಿತಿ ರಚನೆ ಮಾಡುವುದಕ್ಕೆ ಏನು ತೊಂದರೆ ಇದೆ? ಇದರಲ್ಲಿ ಯಾರನ್ನೋ ಮುಖ್ಯರನ್ನಾಗಿ ಮಾಡುವಂತಹ ಪರಿಸ್ಥಿತಿ ಆಗಬಾರದು.

**ಸಭಾಪತಿಯವರು:–** ಆ ಎಸ್‌ಸಿ/ಎಸ್‌ಟಿ ಸಮಿತಿ ಮತ್ತು ಸದನ ಸಮಿತಿ ಎರಡೂ ಒಂದೇ. ಎರಡೂ ಕೂಡ ಅಲ್ಲಿಂದಲೇ ಉದ್ಭವವಾಗಿರುವುದು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೇ, Committee on Welfare of Scheduled Castes/Scheduled Tribes ವರದಿಯನ್ನು ನಾಳೆ ಸಲ್ಲಿಸುತ್ತಿದ್ದೇವೆ.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಆದರೆ ಭಾವಿ ಉಪ ಸಭಾಪತಿಯವರು ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ. ನಾನು ಮಾನ್ಯ ಆಯನೂರು ಮಂಜುನಾಥ್‌ರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ರಚಿಸಿರುವ Committee on Welfare of Scheduled Castes/Scheduled Tribes ಯಲ್ಲಿ ಇದೇ ವಿಷಯ ಪರಿಶೀಲನೆಯಲ್ಲಿ ಇರುವುದರಿಂದ, ಮತ್ತೊಂದು ಸದನ ಸಮಿತಿ ರಚನೆ ಮಾಡುವುದು ಅಪ್ರಸ್ತುತ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಭಾರತೀಯ ಇತಿಹಾಸದಲ್ಲಿ ಯಾವುದೇ ಸಮಿತಿ ರಚನೆಯಾಗಿದ್ದರೂ ಕೂಡ ಸದನ ಸಮಿತಿಯನ್ನು ಸರ್ವೋಚ್ಚ ಮಾಡಲಾಗಿದೆ. ದಯಮಾಡಿ ಮಾನ್ಯ ಸದಸ್ಯರು ದಾರಿ ತಪ್ಪಿಸಬಾರದು.

(ಗೊಂದಲ)

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ತಾವೇ ನನ್ನ ಹೆಸರನ್ನು ನಿರ್ದಿಷ್ಟವಾಗಿ ಕರೆದು ವ್ಯತ್ಯಾಸ ಕೇಳಿದ್ದೀರಿ. ನನಗೆ ಇರುವಂತಹ ಅಲ್ಪಜ್ಞಾನದಿಂದ ತಮ್ಮ ಮುಂದೆ ನಿವೇದಿಸುತ್ತಿದ್ದೇನೆ. ಈಗ ಇರುವಂತಹ ಸಮಿತಿಗಳು ಏನಿವೆ, ಅವು ಸಾಮಾನ್ಯವಾಗಿ ಆ ಇಲಾಖೆಯ ಪರಾಮರ್ಶೆಯನ್ನು ಮಾಡುತ್ತದೆ. ಆದರೆ, ಈಗ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಮಾನ್ಯ ಸದಸ್ಯರು ಕೇಳುತ್ತಿರುವಂಥದ್ದು ಏನೆಂದರೆ, ‘ಒಂದು ನಿರ್ದಿಷ್ಟ ಪ್ರಕರಣದ ಬಗ್ಗೆ ತನಿಖೆ ಮಾಡುವುದಕ್ಕೋಸ್ಕರ’ ಸದನ ಸಮಿತಿ ರಚನೆ ಮಾಡುವಂತೆ ಕೇಳುತ್ತಿದ್ದಾರೆ.

**Mr.CHAIRMAN:-** Committee on Welfare of Scheduled Castes/Scheduled Tribes ಯಲ್ಲಿ ತನಿಖೆ ಮಾಡಲು ಆಗುವುದಿಲ್ಲವೇ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, Committee on Welfare of Scheduled Castes/Scheduled Tribes ವ್ಯಾಪ್ತಿಗೂ ಸದನ ಸಮಿತಿ ವ್ಯಾಪ್ತಿಗೂ ಅಗಾಧವಾದಂತಹ ವ್ಯತ್ಯಾಸವಿರುತ್ತದೆ. ನಿರ್ದಿಷ್ಟ ಪ್ರಕರಣಕ್ಕೆ ಹಾಗೂ ನಿರ್ದಿಷ್ಟ ಸಮಯಕ್ಕೆ ಒಳಪಟ್ಟಂತೆ, ಸದನ ಸಮಿತಿಯನ್ನು ರಚನೆ ಮಾಡುವಂತೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಬೇಡಿಕೆಯನ್ನು ಇಡುತ್ತಿದ್ದಾರೆ. ಇದರಲ್ಲಿ ಅಷ್ಟರ ಮಟ್ಟಿಗೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ವ್ಯತ್ಯಾಸವಿದೆ. ಹಾಗಾಗಿ, ನಾನು ಈ ಸ್ಪಷ್ಟೀಕರಣ ಕೊಟ್ಟನಂತರ, ತಾವು ಅದನ್ನು ಒಪ್ಪಿ, ರೂಲಿಂಗ್‌ನ್ನು ಕೊಡುತ್ತೀರಿ ಎನ್ನತಕ್ಕಂಥ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಮಾಡಿದಾಗ, ನಿರ್ದಿಷ್ಟವಾದ ವಿಷಯ ಕುರಿತು, ಫೋಕಸ್ಡ್ ತನಿಖೆ ಮಾಡಿ, ಅದು ಒಂದು ನಿರ್ದಿಷ್ಟ ಸಮಯ ಮಿತಿಗೆ ಒಳಪಡುತ್ತದೆ ಎಂಬುದು ನಮ್ಮ ಉದ್ದೇಶವಾಗಿದೆ. ಆದರೆ, ಆ Committee on Welfare of Scheduled Castes/Scheduled Tribes ನಲ್ಲಿ ಸಾಕಷ್ಟು ವಿಷಯಗಳು ಪರಿಶೀಲಿಸಲು ಬಾಕಿ ಇವೆ, ಅದರಲ್ಲಿ ಎಷ್ಟು ವಿಷಯಗಳು ಬಾಕಿ ಇವೆ ಎಂಬುದನ್ನು ತಾವು ಗಮನಿಸಬಹುದು.

**ಸಭಾಪತಿಯವರು:–** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ಆ Committee on Welfare of Scheduled Castes/Scheduled Tribes ನಲ್ಲಿ ಎಲ್ಲಾ ಪಕ್ಷದ ಸದಸ್ಯರು ಇರುತ್ತಾರೆ; ವಿಧಾನ ಸಭೆಯ ಸದಸ್ಯರು ಹಾಗೂ ವಿಧಾನ ಪರಿಷತ್‌ನ ಸದಸ್ಯರು ಇರುತ್ತಾರೆ. ನಿಖರವಾಗಿ ನಮಗೆ ಯಾವುದೇ ವಿಷಯಗಳು ಬೇಕಾದರೂ ಸಹ ಅಂತಹ ಕಾಲಮಿತಿಯಲ್ಲಿ ತೀರ್ಮಾನಿಸಿ ವರದಿ ಕೊಡುವಂತಹ ಅಧಿಕಾರ Committee on Welfare of Scheduled Castes/Scheduled Tribes ಗೂ ಕೂಡ ಇದೆ. ಅದನ್ನು ನೀವು ಜನರಲ್ ಆಗಿ ತೆಗೆದುಕೊಂಡಲ್ಲಿ ಜನರಲ್ ಆಗಿ ಇರುತ್ತದೆ. ನಿರ್ದಿಷ್ಟವಾಗಿ ಕೇಳಿದರೆ, ನಾವು ಏನೋ ಸದನ ಸಮಿತಿ ರಚನೆ ಮಾಡಬೇಕು ಎನ್ನುವ ಕಾರಣಕ್ಕಿಂತ ನಮಗೆ ಬೇಕಾಗಿರತಕ್ಕಂಥದ್ದು ನ್ಯಾಯ. ಆ ನ್ಯಾಯವನ್ನು ಯಾವ ವೇದಿಕೆಯಲ್ಲಿ ಪಡೆಯುವುಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಅನುಭವವುಳ್ಳವರಾಗಿರುತ್ತೀರಿ, ನಾನು ಅನುಭವ ಇಲ್ಲವೆಂದು ಹೇಳುವುದಿಲ್ಲ.

(480)17-12-2018(1-00)mm-gr

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು** (ಮುಂದು):–

ಆದರೆ ಅದೇ ಆಗಬೇಕು, ಇದೇ ಆಗಬೇಕು ಎನ್ನುವ ಒಣ ಪ್ರತಿಷ್ಠೆ ಏಕೆ? ಇದು ಸರಿಯಲ್ಲ. ಏಕೆಂದರೆ ಇದು ಬೇರೆ ರೀತಿ ಹೋಗುತ್ತದೆ. ಸಮಿತಿ ಇರುವಾಗ . . . (ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರ ಕೊಟ್ಟಿದ್ದಾರೆ. ಮೊದಲನೆಯದಾಗಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಲಾಖಾ ತನಿಖೆಯನ್ನು ಮಾಡಿಸುತ್ತೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಎರಡನೆಯದಾಗಿ Committee on the Welfare of Scheduled Castes and Scheduled Tribes ನಲ್ಲಿಯೂ ಕೂಡ ಈ ವಿಷಯ ಪ್ರಸ್ತಾಪವಾಗುತ್ತಿದ್ದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿಯೂ ಕೂಡ ಚರ್ಚೆಗೆ ಅವಕಾಶ ಇದೆ ಎಂದು ಹೇಳಿದ್ದಾರೆ. ಇಲಾಖಾ ತನಿಖೆಯ ನಂತರ ಇದರಲ್ಲಿ ಮೇಲ್ನೋಟಕ್ಕೆ ತಪ್ಪಿದೆ ಎಂದು ಕಂಡು ಬಂದರೆ, ಸೂಕ್ತವಾದ ತನಿಖೆಯನ್ನು ಖಂಡಿತವಾಗಿಯೂ ಮಾಡಿಸುತ್ತೇನೆ ಎಂದು ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಈ ಸದನದಲ್ಲಿ ಕೊಟ್ಟಿದ್ದಾರೆ. ದಯಮಾಡಿ ಇದನ್ನು ಮಾನ್ಯ ವಿರೋಧಪಕ್ಷದ ಸದಸ್ಯರು ಪರಿಗಣಿಸಬೇಕು. ಈ ಸದನದಲ್ಲಿ ಸಂಬಂಧಪಟ್ಟ ಒಬ್ಬ ಇಲಾಖಾ ಮಂತ್ರಿಗಳು ಸ್ಪಷ್ಟವಾಗಿ ತನಿಖೆ ಮಾಡಿಸುತ್ತೇನೆ ಎಂದು ಹೇಳುತ್ತಿದ್ದರೂ ಕೂಡ ಸದನ ಸಮಿತಿಯನ್ನು ಮಾಡಬೇಕು, ಇಂತಹದ್ದೇ ತನಿಖೆಯಾಗಬೇಕೆಂದು ವಿರೋಧಪಕ್ಷದ ನಾಯಕರು ಹಠ ಹಿಡಿಯುವುದು ಸೂಕ್ತವಲ್ಲ. ಆದ್ದರಿಂದ ದಯಮಾಡಿ ಸದನ ನಡೆಯಲು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದ ಕಾಳಜಿ ಇಷ್ಟೇ, ಕಳೆದ ಸರ್ಕಾರದಲ್ಲಿ ಗುರುತರವಾದಂತಹ ದೊಡ್ಡ ಲೋಪದೋಷಗಳಾಗಿದೆ. ಪ್ರಸ್ತುತ ಸಚಿವರು ಅವರು ಬಂದ ತಕ್ಷಣ ಟೆಂಡರ್ ಕರೆದಿರುವಂತಹ ಕೆಲವೊಂದು ಉತ್ತಮ ಕಾರ್ಯಗಳನ್ನು ನಾವೆಲ್ಲರೂ ಮುಕ್ತ ಮನಸ್ಸಿನಿಂದ ಗುರುತಿಸಿದ್ದೇವೆ. ಇದು ಸರ್ಕಾರ ತೆಗೆದುಕೊಂಡಂತಹ ಉತ್ತಮ ಕಾರ್ಯ. ನಮ್ಮ ಕಾಳಜಿಯೇನೆಂದರೆ, ಸಂವಿಧಾನಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರ ಕಾಳಜಿಯಂತೆ ಗಂಗಾ ಕಲ್ಯಾಣ ಯೋಜನೆಯು ದೀನದಲಿತರಿಗೆ ಸ್ವಾವಲಂಬನೆಯನ್ನು ಕಲ್ಪಿಸುವುದಾಗಿದೆ. ಇದಕ್ಕೆ ಇನ್ನೂ ಎಷ್ಟು ವರ್ಷ ಬೇಕು? ನಮಗೆ ತಪ್ಪಿತಸ್ಥರು ತಪ್ಪಿಸಿಕೊಂಡು ಹೋಗಬಾರದು ಎನ್ನುವ ಕಾಳಜಿ ಬಿಟ್ಟರೆ ಬೇರೇನೂ ಇಲ್ಲ. ನಮ್ಮ ಸಚಿವರು ಯುವಕರಿದ್ದಾರೆ. ಹಿಂದೆ ಈ ವ್ಯವಸ್ಥೆ ಇದ್ದರೂ ಕೂಡ ಅಂತಹ ದೊಡ್ಡ ಲೋಪದೋಷಗಳು ಹೇಗೆ ನಡೆಯಿತು? ನೀರಾವರಿ ಯೋಜನೆಯನ್ನು ಕೊಟ್ಟು ಕೃಷಿ ಬದುಕನ್ನು ಕಟ್ಟಿಕೊಡುವಂತಹ ಬೋರ್‌ವೆಲ್ ಹಾಕುವಂತಹ ಕೆಲಸದಲ್ಲಿಯೂ ಇಷ್ಟು ದೊಡ್ಡ ಪ್ರಮಾಣದ ಭ್ರಷ್ಟಾಚಾರವನ್ನು ಮಾಡಿದರೆ, ಈ ಸಮಿತಿಗಳೆಲ್ಲಾ ನಿಜವಾಗಲೂ ಫಲಿತಾಂಶವನ್ನು ಕೊಟ್ಟಿದ್ದರೆ, ನಾವು ಬೇಡಿಕೆ ಇಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರ ಮಾತಿನ ಮೇಲೆ ನಮಗೆ ನಂಬಿಕೆ ಇದೆ.

**ಸಭಾಪತಿಯವರು:–** ಆ ರೀತಿ ಹೇಳಬಾರದು. ಏಕೆಂದರೆ, ಅದರಲ್ಲಿರುವುದೂ ಇದೇ ಸದಸ್ಯರು. ಅವರ ವಿಶ್ವಾಸಾರ್ಹತೆ ಬಗ್ಗೆ ಪ್ರಶ್ನೆ ಮಾಡಲು ಹೋಗುವುದು ಬೇಡ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಫಲಾನುಭವಿಗಳನ್ನು ಆಯ್ಕೆ ಮಾಡುವುದು ಶಾಸಕರುಗಳೇ ಆಗಿದ್ದಾರೆ. ಹಾಗಾಗಿ ಶಾಸಕರುಗಳು ಯಾರು ಫಲಾನುಭವಿಗಳನ್ನು ಆಯ್ಕೆ ಮಾಡಿಕೊಡುತ್ತಾರೋ ಅಂತಹವರು ಮಾಡುವುದು. ಇದರಲ್ಲಿ ನಿಮ್ಮ ಶಾಸಕರುಗಳೂ ಸೇರಿದ್ದಾರೆ. ಪ್ರಾರಂಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಅರ್ಧಗಂಟೆ ಚರ್ಚೆಗೆ ಇದನ್ನು ವರ್ಗಾವಣೆ ಮಾಡಿ ಅಥವಾ ಸದನ ಸಮಿತಿಯನ್ನು ರಚನೆ ಮಾಡಿ ಎಂದು ಒಂದು ಸಲಹೆಯನ್ನು ನೀಡಿದರು. ಇದರ ಬಗ್ಗೆ ನಮಗೂ ಅನುಭವ ಬೇಕು. ಅರ್ಧಗಂಟೆ ಚರ್ಚೆ ಮಾಡೋಣ. ಆ ಚರ್ಚೆಯಲ್ಲಿ ಏನಾದರೂ ತಮಗೆ ಕಂಡರೆ ತದನಂತರ ಸದನ ಸಮಿತಿಯನ್ನು ಘೋಷಣೆ ಮಾಡಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತನಿಖೆ ಮಾಡುತ್ತೇನೆ ಎಂದು ಮಂತ್ರಿಗಳು ಹೇಳಿದಾಗ ನಾವು ಅಂಬೇಡ್ಕರ್ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುವಂತಹ ಶ್ರೀ ಶ್ರೀನಿವಾಸುಲು ಮತ್ತು ವ್ಯವಸ್ಥಾಪಕರಾದ ಶ್ರೀ ಟಿ. ಕುಮಾರ್ ರವರ ವಿರುದ್ಧ ನೇರವಾಗಿ ಅಕ್ರಮ ಆರೋಪಗಳನ್ನು ಮಾಡಲಾಗಿದೆ ಎಂದು ಮಾಧ್ಯಮಗಳಲ್ಲಿ ಬಂದಿರುವ ಹಿನ್ನೆಲೆಯಲ್ಲಿ ಮತ್ತು ಅವರ ಸಲಹೆಗಾರರಾಗಿರುವವರು ಇದೇ ಆರೋಪದಲ್ಲಿ ಇರುವಂತಹ ಕೆಲವು ಸಮಸ್ಯೆಗಳಿರುವುದರಿಂದ ಈ ಅಧಿಕಾರಿಗಳನ್ನು ಹೊರತುಪಡಿಸಿ ಶಾಸಕರ ನೇತೃತ್ವದಲ್ಲಿ ಸದನ ಸಮಿತಿಯನ್ನು ರಚನೆ ಮಾಡುವುದರ ಮೂಲಕ ಪಾರದರ್ಶಕವಾಗಿ ತನಿಖೆಯಾಗಿ, ಸರ್ಕಾರದ ಗೌರವ ಇನ್ನೂ ಹೆಚ್ಚಲಿ ಎನ್ನುವುದು ನಮ್ಮ ಉದ್ದೇಶವಾಗಿದೆ. ನೀವು ಬಹಳ ಗಡಿಬಿಡಿ ಮಾಡಿಕೊಳ್ಳಬೇಡಿ. ಇದರಲ್ಲಿ ನಮ್ಮ ವೈಯಕ್ತಿಕ ಏನೂ ಇಲ್ಲ, ಯಾವುದೇ ಪೂರ್ವಾಗ್ರಹಪೀಡಿತ ಇಲ್ಲ. ನಾವು ಸಚಿವರಿಗಾಗಲೀ, ಸರ್ಕಾರಕ್ಕಾಗಲೀ ನೇರವಾದ ಆರೋಪಗಳನ್ನೇನೂ ಮಾಡಿಲ್ಲ. ಹಾಗಾಗಿ ಸರ್ಕಾರದ ಗೌರವ ಹೆಚ್ಚಬೇಕು ಮತ್ತು ನಡೆದಿರುವ ಅಕ್ರಮ ಬಯಲಿಗೆ ಬರಬೇಕು ಎನ್ನುವ ಕಾರಣಕ್ಕೋಸ್ಕರ, ಈ ಸದನ 'ಸರ್ವೋಚ್ಚ' ಎಂದು ನೀವು ಒಪ್ಪಿಕೊಂಡಿರುವುದರಿಂದ, ತಾವು ಮೇಲೆ ಕುಳಿತುಕೊಂಡಾಗ ಹೇಳಿದಂತಹ 'ಯಾವುದೇ ಕಮಿಟಿ, ಯಾವುದೇ ಅಧಿಕಾರಿ, ವ್ಯಕ್ತಿ ಅಥವಾ ಯಾವುದೇ ಮಂತ್ರಿಗಳಿಗಿಂತ ಈ ಸದನ ಸರ್ವೋಚ್ಚ' ಎಂದು ತಾವು ಹೇಳಿರುವಂತಹ ಹಿನ್ನೆಲೆಯಲ್ಲಿ ನಾವು ಸದನ ಸಮಿತಿಯನ್ನು ಮಾಡಬೇಕೆಂದು ಬೇಡಿಕೆ ಇಟ್ಟಿದ್ದೇವೆ. ದಯವಿಟ್ಟು ಸರ್ಕಾರ ಪಾರದರ್ಶಕವಾಗಿ ಕೆಲಸಗಳನ್ನು ಮಾಡಬೇಕು, ಮಂತ್ರಿಗಳು ಪ್ರಾಮಾಣಿಕರು ಎಂದು ಸಾಬೀತುಪಡಿಸಬೇಕು, ಸದನ ಸಮಿತಿಯನ್ನು ಒಪ್ಪಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿರೋಧಪಕ್ಷದವರು ಎತ್ತಿರುವಂತಹ ಪ್ರಶ್ನೆ ಮತ್ತು ಅವರ ಕಾಳಜಿಗೆ ನಮ್ಮ ಸಹಮತ ಕೂಡ ಇದೆ. ಇವರ ಕಾಳಜಿ ಏನಿದೆ, ಈ ಸಮಸ್ಯೆಗೆ ಸಮಂಜಸವಾದಂತಹ ಪರಿಹಾರ ಬೇಕಾಗಿದೆಯೇ ಅಥವಾ ಇವರು ರಾಜಕಾರಣ ಮಾಡಬೇಕಾಗಿದೆಯೇ? ನಮ್ಮ ಮಂತ್ರಿಯವರು ಇಲ್ಲಿ ಏನು ನ್ಯೂನತೆಗಳಾಗಿದೆಯೋ ಅದನ್ನು ಸರಿಪಡಿಸುವಂತಹ ಜವಾಬ್ದಾರಿ ನನಗಿರಲಿ ಎಂದು ಪ್ರಾಮಾಣಿಕವಾಗಿ ಹೇಳಿದರು. ಅವರು ಆಗುವುದಿಲ್ಲ ಎಂದೇನೂ ಹೇಳುತ್ತಿಲ್ಲ. ಇಲಾಖಾ ತನಿಖೆಯನ್ನು ಮಾಡುತ್ತೇವೆ, ಅದರಲ್ಲಿ ಏನಾದರೂ ಸರಿ ತಪ್ಪುಗಳಿದ್ದರೆ ಸರ್ಕಾರ ಉತ್ತರ ಕೊಡುತ್ತದೆ, ಅದು ನಿಮಗೆ ಸಮಂಜಸವಲ್ಲ ಅನಿಸಿದರೆ ಆಗ ಜಂಟಿ ಸದನ ಸಮಿತಿಯನ್ನು ರಚನೆ ಮಾಡುತ್ತೇವೆ ಎಂದು ಸಚಿವರು ಹೇಳಿದ್ದಾರೆ. ಅದನ್ನು ಬಿಟ್ಟು ರಾಜಕಾರಣ ಮಾಡುವುದಕ್ಕೋಸ್ಕರವಾಗಿ ಪ್ರಶ್ನೋತ್ತರ ವೇಳೆಯನ್ನು ಈ ರೀತಿ ಹಾಳು ಮಾಡುವುದು ಸರಿಯಲ್ಲ, ಇಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಮಂತ್ರಿಗಳು ಒಪ್ಪಿಕೊಂಡಿದ್ದಾರೆ, ದಯವಿಟ್ಟು ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅದೂ ಅಲ್ಲದೇ ಜೊತೆಯಲ್ಲಿ Committee on the Welfare of Scheduled Castes and Scheduled Tribes ಇದೆ. ಆ ಕಮಿಟಿಯಲ್ಲಿ ಬಿ.ಜೆ.ಪಿ, ಜೆ.ಡಿ.ಎಸ್ ಮತ್ತು ಕಾಂಗ್ರೆಸ್‌ನ ಶಾಸಕರು ಇದ್ದಾರೆ. ಅಲ್ಲಿ ಪ್ರಸ್ತಾಪ ಆಗಿದೆ. ಆರ್.ಡಿ.ಪಿ.ಆರ್., ಕಮಿಟಿಯಲ್ಲಿ ನಾನೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಬ್ಬ ಸದಸ್ಯನಾಗಿದ್ದೇನೆ. ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾವೆಲ್ಲರೂ ಕೈಜೋಡಿಸಬೇಕೇ ವಿನಃ ರಾಜಕಾರಣ ಮಾಡಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:-** ಪೀಠದ ಅನುಮತಿ ಇಲ್ಲದೇ ಯಾರೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗಬಾರದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಈಗಾಗಲೇ ವಿರೋಧಪಕ್ಷದ ನಾಯಕರು ಅನುಮಾನ ಪಡುತ್ತಿದ್ದಾರೆ. ಯಾರ ಹೆಸರು ದಿನಪತ್ರಿಕೆಯಲ್ಲಿ ಬಂದಿದೆ, ಬಂದ ತಕ್ಷಣ ಅವರು guilty ಅಲ್ಲ. ಆದರೂ ಈ ಸದನದಲ್ಲಿ ಅವರ ಹೆಸರನ್ನು ಪ್ರಸ್ತಾಪ ಮಾಡಿರುವುದು ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ತಪ್ಪಾಗುತ್ತದೆ. ಏಕೆಂದರೆ, he cannot defend himself here. ಪತ್ರಿಕೆಯಲ್ಲಿ ಬಂದ ತಕ್ಷಣವೇ ಎಲ್ಲರೂ . . . ನಾನು ಪತ್ರಿಕೆಯಲ್ಲಿ ಬಂದಿರುವುದು ಸುಳ್ಳು ಎಂದು ಹೇಳುತ್ತಿಲ್ಲ.

(ಗೊಂದಲ)

ಪತ್ರಿಕೆಯಲ್ಲಿ 100 ದಿನ ಬರುತ್ತದೆ. (ಗೊಂದಲ) ತಾವು ಕೇಳುವುದಕ್ಕೆ ತಯಾರಿಲ್ಲದಿದ್ದರೆ ನಾನೇನು ಮಾಡಲಿ? ನಾನು ಅದರ ಬಗ್ಗೆ ಹೆಚ್ಚಿನ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನನ್ನ ಪ್ರಸ್ತಾವನೆ ಇಷ್ಟೇ. ಮಾನ್ಯ ವಿರೋಧಪಕ್ಷದ ನಾಯಕರು ಇದಕ್ಕೆ ಒಪ್ಪಬೇಕಾಗುತ್ತದೆ. ಈಗಾಗಲೇ Committee on the Welfare of Scheduled Castes and Scheduled Tribes ಮುಂದೆ ಇದು ಇದೆ. ನಾವು internally ಇಲಾಖೆಯಲ್ಲಿ ಉನ್ನತಾಧಿಕಾರಿಗಳನ್ನು ಹಾಕಿಕೊಂಡು ಒಂದು ಸಮಿತಿಯನ್ನು ರಚನೆ ಮಾಡಿ ತನಿಖೆಯನ್ನು ಮಾಡುತ್ತೇವೆ. ಅದರ ವರದಿಯನ್ನು ಎಸ್.ಸಿ, ಎಸ್.ಟಿ ಕಮಿಟಿಗೆ ಸಬ್ಮಿಟ್ ಮಾಡಲೇಬೇಕಾಗುತ್ತದೆ. ಏಕೆಂದರೆ, ಅವರು ಕೂಡ ಈ ಪ್ರಶ್ನೆಗಳನ್ನು ಎತ್ತಿದ್ದಾರೆ. ಆನಂತರ ಅವರಿಗೆ ಸಮಂಜಸವೆನಿಸದಿದ್ದರೆ Committee on the Welfare of Scheduled Castes and Scheduled Tribes ನವರೇ ಸದನ ಸಮಿತಿ ಆಗಲಿ ಎಂದು ಶಿಫಾರಸ್ಸು ಮಾಡಬಹುದು. ಸದನಕ್ಕೇ ಕಾಯಬೇಕಾದ ಅವಶ್ಯಕತೆ ಇಲ್ಲ.

(ಗೊಂದಲ)

ಅವರು ಹೇಳಿದ ಹಾಗೆ ಆ ಅಧಿಕಾರಿಯನ್ನು ತನಿಖೆಗೊಳಪಡಿಸುತ್ತೇವೆ ಎಂದರೆ ನಾವು ಅಷ್ಟು ಮೂರ್ಖರಲ್ಲ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ಬೆಲೆ ಇಲ್ಲ ಎಂದು ಅವರು ಹೇಳುವುದಿಲ್ಲ.

(ಗೊಂದಲ)

**ಶ್ರೀ ಪ್ರಿಯಾಂಕ್ ಖರ್ಗೆ:-** ತಮ್ಮ ಮಾತಿಗೆ ಬೆಲೆ ಕೊಟ್ಟು internal enquiry ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ . . .

(ಗೊಂದಲ)



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, ವಿಷಯ ಬಹಳ ಪ್ರಮುಖವಾದುದು. ನಾವು ಅದಕ್ಕೆ ಬದ್ಧರಾಗಿರುತ್ತೇವೆ. ಅವರು ಎತ್ತಿರುವ ವಿಷಯ ಬಹಳ ಗಂಭೀರವಾದುದು. ಜನರಲ್ಲಿ ಅನುಮಾನ ಮೂಡುತ್ತಿದೆ, ಆ ಅನುಮಾನವನ್ನು ದೂರ ಮಾಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇದನ್ನು ನಾವು ತನಿಖೆ ಮಾಡುತ್ತೇವೆ, Committee on the Welfare of Scheduled Castes and Scheduled Tribes ಮುಂದೆ ಇಡುತ್ತೇವೆ. ಅದಾದ ಮೇಲೆ ಅವರು ಶಿಫಾರಸ್ಸು ಮಾಡಿದರೆ ಸದನ ಸಮಿತಿಯನ್ನು ಮಾಡೋಣ. ಎಲ್ಲದಕ್ಕೂ ಸದನ ಸಮಿತಿ ಆಗಲೇಬೇಕು ಎಂದರೆ ಅದನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಬೆಳಗಾವಿಗೆ ಬಂದಿರುವುದು ಇಲ್ಲಿಯ ಸಮಸ್ಯೆಗಳನ್ನು ಕೇಳುವುದಕ್ಕೆ. ಸುಮ್ಮನೆ ಅನಾವಶ್ಯಕವಾಗಿ . . . (ಗೊಂದಲ) ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆ ಎಂದು ಅವರು ಹೇಳಿದರು, ತಾವು ಮತ್ತೂ ಒಪ್ಪದಿದ್ದರೆ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡಲಾಗುವುದು.

**(ಸದನವನ್ನು ಮಧ್ಯಾಹ್ನ 1 ಗಂಟೆ 08 ನಿಮಿಷಕ್ಕೆ ಅರ್ಧ ಗಂಟೆ ಕಾಲ ಮುಂದೂಡಲಾಯಿತು)**

(481) 17–12–2018/01–40/ಕೆಹೆಚ್–ಎಂಡಿ

(ಸಭಾಪತಿಯವರ ಉಪಸ್ಥಿತಿ)

**(ಸದನವು ಪುನಃ ಮಧ್ಯಾಹ್ನ 01 ಗಂಟೆ 48 ನಿಮಿಷಕ್ಕೆ ಸಮಾವೇಶಗೊಂಡಿತು)**
**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

**(ಸದನ ಪ್ರಾರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.)**

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ನನಗೆ ಇಲ್ಲಿ ಚರ್ಚೆಯಾಗುತ್ತಿರುವ ವಿಷಯದ ಬಗ್ಗೆ ಗೊತ್ತಿಲ್ಲ. ಮಾನ್ಯ ಸದಸ್ಯರುಗಳೆಲ್ಲರೂ ಬಾವಿಗೆ ಬಂದ ಮೇಲೆ ಪುನಃ ಸ್ವಸ್ಥಾನಕ್ಕೆ ಹೋಗಿ ಮಾತನಾಡಬಹುದೇ? ಎಂದು ತಮ್ಮನ್ನು ಕೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬಹುದೆಂದು ಗೊತ್ತಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಅನುಮತಿ ತೆಗೆದುಕೊಂಡು ಮಾತನಾಡಬಹುದು.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಬಾವಿಯಲ್ಲಿ ನಿರತರಾಗಿರುವವರು ಸಹ ಅನುಮತಿ ತೆಗೆದುಕೊಂಡು ಸ್ವಸ್ಥಾನಕ್ಕೆ ಹೋಗಿ ಮಾತನಾಡಬಹುದೇ?

**ಸಭಾಪತಿಯವರು:–** ಬಾವಿಯಲ್ಲಿ ನಿರತರಾಗಿರುವವರು ಅನುಮತಿ ತೆಗೆದುಕೊಂಡು ಸ್ಥಸ್ಥಾನಕ್ಕೆ ಹೋಗಿ ಮಾತನಾಡಬಹುದೇ ಹೊರತು, ಯಾರು ಕೂಡ ಅಲ್ಲಿಂದ suo moto ಮಾತನಾಡುವ ಆಗಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ|| ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಸ್ಪಷ್ಟವಾದಂತಹ ಒಂದು ಉತ್ತರವನ್ನು ಹೇಳಿ ಹೋಗಿದ್ದಾರೆ. ಈಗಾಗಲೇ ಎಸ್‌ಸಿ/ಎಸ್.ಟಿ., ಕಮಿಟಿ ಇರುವುದರಿಂದ, ಅಲ್ಲಿಯೂ ಕೂಡ ಚರ್ಚೆಗಳು ನಿರಂತರವಾಗಿ ನಡೆಯುತ್ತಿರುವುದರಿಂದ, ಈಗಾಗಲೇ ಒಂದು ರೀತಿಯಲ್ಲಿ ಇಲಾಖಾ ತನಿಖೆಯನ್ನು ಮಾಡುತ್ತಿದ್ದೇವೆ. ಆ ತನಿಖೆಯ ವರದಿ ಬಂದ ನಂತರ ತೀರ್ಮಾನವನ್ನು ತೆಗೆದುಕೊಂಡು ನಂತರ ಏನು ಮಾಡಬೇಕೆಂಬ ಬಗ್ಗೆ ಚರ್ಚೆ ಮಾಡೋಣ ಎನ್ನುವಂತಹ ಸ್ಪಷ್ಟವಾದ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಇಲ್ಲಿಗೆ ಕೈ ಬಿಡಬೇಕು. ಇನ್ನೂ ಮಹತ್ತರವಾದ ವಿಚಾರಗಳ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆಯಾಗಬೇಕಾಗಿದೆ. ಈ ತನಿಖೆಯ ವರದಿ ಬಂದ ನಂತರ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ತಾವು ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರದ ಸೀಮಿತ ಅವಧಿಯಲ್ಲಿ ಮಾನ್ಯ ಸದಸ್ಯರುಗಳು ಬಾವಿಗೆ ಇಳಿದು ಸರ್ಕಾರವನ್ನು ಏಕೆ ಒತ್ತಾಯ ಮಾಡಬೇಕೆಂದರೆ, ವಿಷಯದ ಗಾಂಭೀರ್ಯತೆ ಎಷ್ಟಿದೆ ಎನ್ನುವ ಕಾರಣಕ್ಕಾಗಿ ನಾವು ಸರ್ಕಾರವನ್ನು ಒತ್ತಾಯಿಸಿದ್ದೇವೆ.

**(482) 17–12–2018 (1–50) ಎಸ್‌ಪಿಆರ್–ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):–**

ವಿಷಯದ ಗಾಂಭೀರ್ಯತೆ ಅಷ್ಟಿದೆ ಎನ್ನುವ ಕಾರಣಕ್ಕಾಗಿ ನಾವು ಸರ್ಕಾರವನ್ನು ಒತ್ತಾಯಿಸಿದ್ದೇವೆ. ಒಂದೇ ತಾಲ್ಲೂಕಿನಲ್ಲಿ 1,800 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಹೀಗಾಗಿ ಎಲ್ಲಿಯೋ ಒಂದು ಕಡೆ ಸರ್ಕಾರವು ತನಿಖೆಗಾಗಿ ಸದನ ಸಮಿತಿಯನ್ನು ರಚನೆ ಮಾಡಿದರೆ, ಇಡೀ ರಾಜ್ಯದಲ್ಲಿ ದಲಿತರ ಹೆಸರಿನಲ್ಲಿ ವಂಚನೆಯಾಗಿರುವ ವ್ಯವಸ್ಥೆಗಳು ಪೂರ್ಣವಾಗಿ ಹೊರ ಬರುವುದಕ್ಕೆ ಮುಕ್ತ ಅವಕಾಶಗಳಿವೆ. ಕೋಲಾರ ಜಿಲ್ಲೆಯೊಂದರಲ್ಲಿ ಮಂಜೂರಾಗಿರುವ ಒಟ್ಟು ಹಣದಲ್ಲಿ ಕೇವಲ ಶೇಕಡಾ 20 ರಷ್ಟು ಬಾವಿಗಳನ್ನೂ ಸಹ ಮಾಡದೇ, ಬಹುತೇಕವಾಗಿ ಎಲ್ಲಾ ಹಣವು ಲಪಟಾಯಿಸಲಾಗಿದೆ ಎಂಬ ಗಂಭೀರವಾದ ಪ್ರಕರಣವಿದೆ. ಸದನ ಸಮಿತಿಯ ರಚನೆಗಾಗಿ ನಾವು ಏಕೆ ಆಗ್ರಹ ಮಾಡಿದ್ದೇವೆ ಎಂದರೆ, ಅನೇಕ ಈ ಸದನದಲ್ಲಿ ಸದನ ಸಮಿತಿಗಳು ಹಾಗೂ ಜಂಟಿ ಸಮಿತಿಗಳನ್ನು ರಚಿಸಿದಂತಹ ಉದಾಹರಣೆಗಳಿವೆ. ರೈತರಿಗೆ ಭೂಮಿ ವಂಚನೆಯಾದ ಸಂದರ್ಭದಲ್ಲಿ ನೈಸ್‌ಗೆ ಸಂಬಂಧಪಟ್ಟಂತೆ ಸದನ ಸಮಿತಿಯನ್ನು ರಚಿಸಲಾಯಿತು. ವಿದ್ಯುತ್ ಖರೀದಿಗೆ ಸಂಬಂಧಪಟ್ಟಂತೆ, ಸರ್ಕಾರದ ಭೂಮಿಯನ್ನು ಯಾರೋ ಅಕ್ರಮವಾಗಿ ಪರಭಾರ ಮಾಡಿದಾಗ ಸರ್ಕಾರಿ ಭೂಮಿಯನ್ನು ಗುರ್ತಿಸುವುದಕ್ಕಾಗಿ, ಶಾಸಕರ ಕ್ಲಬ್ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಗೊಂದಲಗಳುಂಟಾದಾಗ ಇದರ ತನಿಖೆಗಾಗಿ ಹಾಗೂ ಇನ್ನಿತರೆ ಸನ್ನಿವೇಶಗಳಲ್ಲಿಯೂ ಸಹ ಸದನ ಸಮಿತಿಯನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಚಿಸಲಾಯಿತು. ಇತಿಹಾಸದ ಉದ್ದಕ್ಕೂ ಸಹ ಅನ್ಯಾಯ, ಅಕ್ರಮಗಳಾದಾಗ ಸದನ ಸಮಿತಿಗಳ ಮೂಲಕ ಅವುಗಳನ್ನು ಬಯಲಿಗೆಳೆದು ನ್ಯಾಯವನ್ನು ನೀಡಿದಂತಹ ಉದಾಹರಣೆಗಳು ನಮಗೆ ಇವೆ. ನಾವು ಈ ವಿಚಾರದಲ್ಲಿ ನಿರ್ದಿಷ್ಟವಾದಂತೆ ಯಾವುದೇ ಆರೋಪಗಳನ್ನು ಸರ್ಕಾರದ ಹಾಗೂ ಮಂತ್ರಿಗಳ ಮೇಲೆ ಮಾಡಿಲ್ಲ. ಈಗಲೂ ಸಹ ನಾವು ಸದನ ಸಮಿತಿ ರಚನೆಗಾಗಿ ಆಗ್ರಹಿಸುತ್ತೇವೆ. ಇದನ್ನೂ ಹೊರತು ಪಡಿಸಿ ಪೀಠವು ನಮಗೆ ಯಾವುದೇ ರೀತಿಯಾದ ಸಲಹೆ ಸೂಚನೆಗಳನ್ನು ನೀಡಿದರೆ, ಆರೋಗ್ಯಕರವಾದ ಚರ್ಚೆಯ ಸಂಬಂಧ ನಾವು ಅದರ ಬಗ್ಗೆ ಗಮನ ನೀಡಲು ಸಿದ್ಧರಿದ್ದೇವೆ.

**ಸಭಾಪತಿಯವರು:-** ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಹೇಳಿದ್ದರು. ಅದನ್ನು ಪ್ರಾರಂಭದಲ್ಲಿಯೇ ಪ್ರಸ್ತಾಪಿಸಿದ್ದರು. ನಾಳೆಯ ದಿವಸ ಇದಕ್ಕೆ ಅವಕಾಶವನ್ನು ನೀಡಲು ಆಗುವುದಿಲ್ಲ. ಆದರೆ ಬುಧವಾರದಂದು ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶವನ್ನು ನೀಡಲಾಗುವುದು. ಸದನದ ಕಲಾಪಗಳು ಸುಸೂತ್ರವಾಗಿ ನಡೆಯಲು ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿಷಯಗಳನ್ನೇ ಮುಂದಿಟ್ಟುಕೊಂಡು ನಾವು ಚರ್ಚೆಯನ್ನು ಮಾಡುತ್ತೇವೆ. ಕಡೆಯದಾಗಿಯೂ ಸಹ ನಮಗೆ ನ್ಯಾಯ ನಿರಾಕರಣೆಯಾಗದಂತೆ ಸರ್ಕಾರ ನಮಗೆ ಮುಕ್ತವಾಗಿ ಅವಕಾಶವನ್ನು ನೀಡಬೇಕೆಂದು ವಿನಂತಿಸುತ್ತಾ, ತಮ್ಮ ಕೋರಿಕೆಯ ಮೇರೆಗೆ ನಾವು ನಮ್ಮ ಸ್ಥಾನಗಳಿಗೆ ಹಿಂದಿರುಗುತ್ತೇವೆ.

**(ಈ ಹಂತದಲ್ಲಿ ಸದನದ ಬಾವಿಯೊಳಗೆ ನಿಂತಿದ್ದ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ 783**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಂ.ಸಿ.ವೇಣುಗೋಪಾಲ್:-** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿರುವ ಉತ್ತರವು ಸಮಂಜಸವಾಗಿಲ್ಲ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಇರುವ ವೃತ್ತಿಪರ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು

ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಹೌದು ಎಂದು ಉತ್ತರಿಸಿದೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ನೀಲಿ ನಕ್ಷೆಯನ್ನು ನೀಡಿಲ್ಲ. 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎನ್ನುವ ರೀತಿಯಲ್ಲಿ ನೀಲಿ ನಕ್ಷೆಯನ್ನು ತಯಾರಿಸಿ, ಪ್ರತಿವರ್ಷ ಅವಶ್ಯಕತೆಗೆ ಅನುಗುಣವಾಗಿ ಅಂದಾಜು ಮಾಡಿರುವ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿನಿಲಯಗಳು ಬಹಳ ಅವಶ್ಯಕವಾಗಿವೆ. ಹೀಗಾಗಿ ನಾನು ಈ ಸದನದ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಸರ್ಕಾರದ ಹೆಚ್ಚಿನ ಆಸಕ್ತಿ ಕಾಣದೇ ಇರುವ ಕಾರಣ ಸರ್ಕಾರವು ಹೆಚ್ಚಿನ ಆಸಕ್ತಿಯನ್ನು ವಹಿಸಿ, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಶ್ರೀ ಸಿ.ಪುಟ್ಟರಂಗಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರವು ಸಮಂಜಸವಾದ ಉತ್ತರಗಳನ್ನು ನೀಡಿದೆ ಹಾಗೂ ಅವಶ್ಯವಿರುವ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿದ್ಯಾರ್ಥಿ ನಿಲಯಗಳ ಕೊರತೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಸರ್ಕಾರವು ಸಕಾರಾತ್ಮಕವಾಗಿ ಉತ್ತರವನ್ನು ನೀಡಿದೆ. ಆದರೆ ಎಲ್ಲೆಲ್ಲಿ ಎಷ್ಟೆಷ್ಟು ಕೊರತೆ ಇದೆ ಎನ್ನುವ ಬಗ್ಗೆ ಲಿಖಿತ ಉತ್ತರದಲ್ಲಿ ಹೇಳಿಲ್ಲ. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಹಾಸನ ಟೌನ್, ಬಾಗಲಕೋಟೆ ಮತ್ತು ಕೊಪ್ಪಳ ಟೌನ್‌ಗೆ ವೃತ್ತಿಪರ ವಿದ್ಯಾರ್ಥಿ ನಿಲಯಗಳಿಗೆ ಬೇಡಿಕೆ ಬಂದಿದ್ದು, ಹೊಸದಾಗಿ ರೂಪಿಸಲಾಗಿರುವ ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರಸ್ತಾವನೆಯನ್ನು ಕಳುಹಿಸಿ ಕೊಡಲು ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಲಾಗಿದೆ. ಇನ್ನುಳಿದ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರಸ್ತಾವನೆಗಳು ಬಂದಿಲ್ಲವೇ? ಯಾವ್ಯಾವ ಜಿಲ್ಲೆಗಳಲ್ಲಿ ಕೊರತೆ ಇದೆ? ನಾನು ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಉದಾಹರಣೆಯನ್ನು ನೀಡುತ್ತೇನೆ. ಮೈಸೂರು ಜಿಲ್ಲೆಯಲ್ಲಿ ವೈದ್ಯಕೀಯ ಸೀಟಿಗೆ ಸಂಬಂಧಪಟ್ಟಂತೆ ನಾನು ಶಿಫಾರಸ್ಸು ಪತ್ರವನ್ನು ಕಳುಹಿಸಿ ಕೊಟ್ಟಿದ್ದೇನು. ಅಲ್ಲಿನ ವಿದ್ಯಾರ್ಥಿ ನಿಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೀಟುಗಳು ಭರ್ತಿಯಾಗಿವೆ, ಹೀಗಾಗಿ ಸೀಟನ್ನು ನೀಡಲು ಅವಕಾಶವಿಲ್ಲ. ಬೇರೆ ಕಡೆ ಪರ್ಯಾಯ ವ್ಯವಸ್ಥೆ ಮಾಡುತ್ತೇನೆ ಎಂಬುದಾಗಿ ಹೇಳಿದರು. ಇಂತಹ ಉದಾಹರಣೆಗಳು ಎಷ್ಟು ಕಡೆ ಇವೆ ಎಂಬುದು ನಮಗೆ ಗೊತ್ತಿಲ್ಲ. ನಮ್ಮ ಹತ್ತಿರದ ಒಂದೆರೆಡು ಉದಾಹರಣೆಗಳನ್ನು ಮಾತ್ರವೇ ನಾವು ನೀಡಬಹುದು. ನಮ್ಮ ಜನ ಪ್ರತಿನಿಧಿಗಳ ಹತ್ತಿರ ಇಂತಹ ವಿಚಾರಕ್ಕೆ ಎಷ್ಟು ಜನ ಅವರನ್ನು ಸಂಪರ್ಕಿಸಬಹುದು ಎನ್ನುವುದು ನಮಗೆ ತಿಳಿದಿಲ್ಲ. ವಿದ್ಯಾರ್ಥಿ ನಿಲಯಗಳಲ್ಲಿ ಕೊರತೆ ಇರುವುದನ್ನು ಸರ್ಕಾರವು ಒಪ್ಪಿಕೊಂಡಿದೆ. ಆದರೆ ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಕೊರತೆ ಇದೆ ಎಂಬುದರ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿದರೆ, ಸದನಕ್ಕೆ ಗೊತ್ತಾಗುತ್ತದೆ. ಇವುಗಳ ಬಗ್ಗೆ ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 47 ವೃತ್ತಿಪರ ಬಾಲಕರ ಮತ್ತು 43 ವೃತ್ತಿಪರ ಬಾಲಕಿಯರ ಹೀಗೆ ಒಟ್ಟು 90 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ ಮೂರು ವಿದ್ಯಾರ್ಥಿ ನಿಲಯಗಳ ಬೇಡಿಕೆ ನಮ್ಮ ಮುಂದೆ ಬಂದಿದೆ. ಅವುಗಳ ವಿವರಗಳನ್ನು ಲಿಖಿತ ಉತ್ತರದಲ್ಲಿ ನೀಡಲಾಗಿದೆ.

**ಶ್ರೀ ಎಂ.ಸಿ.ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ಕೆಳ ಮನೆಯಲ್ಲಿ ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ 246 ವಿದ್ಯಾರ್ಥಿ ನಿಲಯಗಳ ಅವಶ್ಯಕತೆ ಇದೆ ಎಂಬುದಾಗಿ ಮಾನ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಟಿ.ಎ.ಶರವಣರವರದ್ದು. ಆದರೆ ಪ್ರಸ್ತುತ ಅವರು ಸದನದಲ್ಲಿ ಉಪಸ್ಥಿತರಿಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಜಯಮ್ಮರವರು ಕೇಳಿರುವ ಪ್ರಶ್ನೆಗೆ ಉತ್ತರ ನೀಡಲು ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿಲ್ಲ. ಮಾನ್ಯ ಸಚಿವರು ಸದನದಲ್ಲಿದ್ದಾಗ ಮಾನ್ಯ ಸದಸ್ಯರು ಹಾಜರಿರಲಿಲ್ಲ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ನಾನು ಬಹಳ ಮಹತ್ತರವಾದ ವಿಷಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಹೀಗಾಗಿ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಆದರೆ ಮಾನ್ಯ ಮಂತ್ರಿಗಳು ಈಗ ಸದನದಲ್ಲಿ ಉಪಸ್ಥಿತರಿಲ್ಲ. ಈಗ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಡಾ॥ ಜಯಮಾಲ್ಲ ರಾಮಚಂದ್ರ (ಸಭಾನಾಯಕರು):–**ಮಾನ್ಯ ಸಭಾಪತಿಯವರೇ, ದಿನಾಂಕ: 17ನೇ ಡಿಸೆಂಬರ್ 2018, ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 92 ಪ್ರಶ್ನೆಗಳ ಪೈಕಿ 66 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

**ಮತ್ತು**

ದಿನಾಂಕ: 10ನೇ ಡಿಸೆಂಬರ್ 2018, ಸಮೂಹ–1ರ ಸದನದಲ್ಲಿ ಉತ್ತರಿಸುವ ಒಟ್ಟು 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 104 ಪ್ರಶ್ನೆಗಳ ಪೈಕಿ 96 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**3. ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

**ಅ) ವಿಷಯ:– ಮಹಾರಾಷ್ಟ್ರ–ಕರ್ನಾಟಕ ಗಡಿ ಭಾಗದ ಕನ್ನಡಿಗರ ಪ್ರಾಬಲ್ಯದ 22 ಹಳ್ಳಿಗಳ ಸುಧಾರಣೆ ಕುರಿತು**

* * *

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ 14/12/2018 ರಂದು ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಯಲ್ಲಿ "ಮೂಲಸೌಕರ್ಯ ಕಲ್ಪಿಸದಿದ್ದುದಕ್ಕೆ ಆಕ್ರೋಶ ; ಮತದಾನ ಬಹಿಷ್ಕಾರ ಎಚ್ಚರಿಕೆ, ಮಹಾ ಸರ್ಕಾರಕ್ಕೆ ಕನ್ನಡಿಗರ ಸೆಡ್ಡು" ಎಂಬ ಶೀರ್ಷಿಕೆಯಡಿ ಪ್ರಕಟವಾದಂತೆ ಮೂಲ ಸೌಕರ್ಯಕ್ಕೆ ಒತ್ತಾಯಿಸಿ, ಮಹಾರಾಷ್ಟ್ರ–ಕರ್ನಾಟಕದ ಗಡಿ ಭಾಗದ ಹಿಂಗ್ಲಜ್ ತಾಲ್ಲೂಕಿನ ಪೂರ್ವ ಭಾಗದಲ್ಲಿರುವ ಕನ್ನಡಿಗರ ಪ್ರಾಬಲ್ಯದ 22 ಹಳ್ಳಿಗಳ ಜನ ತೀವ್ರ ಪ್ರತಿಭಟನೆಗೆ ಇಳಿದಿದ್ದಾರೆ. ಸುಧಾರಣೆಗೆ ಕ್ರಮ ಕೈಗೊಳ್ಳದಿದ್ದರೆ ಬರಲಿರುವ ಚುನಾವಣೆಯಲ್ಲಿ ಮತದಾನ ಬಹಿಷ್ಕರಿಸುವುದಾಗಿ ಅಲ್ಲಿನ ಪ್ರಮುಖ ರಸ್ತೆಗಳಲ್ಲಿ ದೊಡ್ಡ, ದೊಡ್ಡ ಗಾತ್ರದ ಎಚ್ಚರಿಕೆ ಫಲಕಗಳನ್ನು ನೆಟ್ಟು ಆಡಳಿತದ ಗಮನ ಸೆಳೆದಿದ್ದಾರೆ.

ಈ 22 ಹಳ್ಳಿಗಳು ಗಡಿ ವಿವಾದ ಇತ್ಯರ್ಥಕ್ಕಾಗಿ ರಚಿಸಲಾಗಿದ್ದ ಮಹಾಜನ್ ವರದಿ ಜಾರಿಗೊಂಡರೆ ಕರ್ನಾಟಕಕ್ಕೆ ಸೇರ್ಪಡೆಗೊಳ್ಳಲಿವೆ. ಈ ಕಾರಣಕ್ಕಾಗಿ ಮಹಾರಾಷ್ಟ್ರ ಇಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಹೋಗಿಲ್ಲ. ಇಲ್ಲಿ ರಸ್ತೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ ಒಳಗೊಂಡಂತೆ ಮೂಲಸೌಕರ್ಯಗಳ ಸ್ಥಿತಿ ಶೋಚನೀಯವಾಗಿದೆ. ಕೃಷಿ, ನೀರಾವರಿಯು ಸಂಕಷ್ಟದಲ್ಲಿದೆ. ಉದ್ಯೋಗ ಸೃಷ್ಟಿಗೆ ಯಾವುದೇ ಕೈಗಾರಿಕೆಗಳ ಸ್ಥಾಪನೆ ಮಾಡಿಲ್ಲ ಎಂಬ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):–**ಮಾನ್ಯ ಸಭಾಪತಿಯವರೇ, ಸದರಿ 22 ಹಳ್ಳಿಗಳು ಗಡಿ ವಿವಾದ ಇತ್ಯರ್ಥಕ್ಕಾಗಿ ರಚಿಸಲಾಗಿದ್ದ ಮಹಾಜನ್ ವರದಿ ಜಾರಿಗೊಂಡರೆ ಕರ್ನಾಟಕಕ್ಕೆ ಸೇರ್ಪಡೆಗೊಳ್ಳಲಿವೆ. ಇದರ ವಿಚಾರವಾಗಿ ಆಚೆಬದಿ ಮತ್ತು ಈಚೆಬದಿ ಗಡಿ ಭಾಗದ ಎರಡೂ ಕಡೆಯಲ್ಲಿನ ಪ್ರದೇಶಗಳ ಬಗ್ಗೆ ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿದ್ದಾರೆ. ಈಗಾಗಲೇ ಗಡಿ ಅಭಿವೃದ್ಧಿ ಪ್ರಾಧಿಕಾರ ಕುರಿತಂತೆ ಗಡಿ ಪ್ರದೇಶದ ಆ ಕಡೆ ಭಾಗದಲ್ಲಿರುವ ಹಲವಾರು ಜನರು ಆ ಭಾಗದಲ್ಲಿ ಸಮುದಾಯ ಭವನ, ರಂಗ ಮಂದಿರಗಳ ಸ್ಥಾಪನೆ, ಶಾಲೆಗೆ ಸಂಬಂಧಪಟ್ಟಂತೆ ಮತ್ತು ರಸ್ತೆಗಳ ನಿರ್ಮಾಣಕ್ಕಾಗಿ ಬೇಡಿಕೆ ಇಟ್ಟಿರುವ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಾಗುತ್ತಿದೆ. ಮೂಲಭೂತವಾಗಿ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ಗಡಿ ಭಾಗದ ಈ ಕಡೆಗಿನ ಪ್ರದೇಶಗಳಲ್ಲಿ ಅವಶ್ಯಕವಿರುವ ಮೂಲಭೂತ ಸೌಕರ್ಯಗಳ ಬಗ್ಗೆ ನಮ್ಮ ಸರ್ಕಾರವು ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಆದರೆ ಆಚೆ ಬದಿಯಲ್ಲಿ ಗಡಿ ಭಾಗದ ಬೇರೆ ರಾಜ್ಯಗಳಿಗೆ ಸೇರಿದ ಆ ಕಡೆಗಿನ ಪ್ರದೇಶಗಳ ಬಗ್ಗೆ ಸರ್ಕಾರ ಯಾವುದೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸಗಳನ್ನು ನಿರ್ವಹಿಸಬೇಕಾದರೆ, ಆಯಾ ರಾಜ್ಯದ ಮುಖ್ಯಮಂತ್ರಿಗಳ ಜೊತೆ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಪತ್ರ ವ್ಯವಹಾರ ಮಾಡಿ, ಕೆಲವು ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಆಯಾ ರಾಜ್ಯದ ಸಹಕಾರವನ್ನೂ ಸಹ ನಾವು ಪಡೆಯಬೇಕಾಗುತ್ತದೆ. ಸ್ಥಳಗಳು ಲಭ್ಯವಿದ್ದ ಪಕ್ಷದಲ್ಲಿ ಸಮುದಾಯ ಭವನ ಅಥವಾ ಕಲಾಭವನಗಳನ್ನು ನಿರ್ಮಾಣ ಮಾಡುವುದಕ್ಕೆ ನಾವು ಖಂಡಿತವಾಗಿಯೂ ಸಹ ಸಹಕಾರ ನೀಡಬಹುದು.

(483) 17–12–2018 2:00 ಸಿಎಸ್/ಎಕೆ

**ಡಾ॥ ಜಯಮಾಲ ರಾಮಚಂದ್ರ(ಮುಂದು):–**

ಶಾಲೆಗಳನ್ನು ಕೂಡ ನಿರ್ಮಾಣ ಮಾಡಬಹುದು. ನಾವು ಆ ರಾಜ್ಯ ಸರ್ಕಾರದ ಸಹಮತಿಯನ್ನು ಕೂಡ ನಾವು ಪಡೆಯಬೇಕಾಗುತ್ತದೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳೊಂದಿಗೆ ಈ ಕುರಿತು ಪತ್ರವ್ಯವಹಾರವನ್ನು ಮಾಡಬೇಕಾಗುತ್ತದೆ. ಇದರ ಜೊತೆಗೆ ಆ ಗಡಿ ಭಾಗದಲ್ಲಿರುವ ಕುಂದುಕೊರತೆಗಳ ಬಗ್ಗೆ ಕೂಡ ಸರ್ಕಾರ ಗಮನವನ್ನು ಹರಿಸುತ್ತದೆ. ಮಾನ್ಯ ಗೌರವಾನ್ವಿತ ಸದಸ್ಯರಿಗೆ ಒಂದು ವಿಚಾರವನ್ನು ತಿಳಿಸಬಯಸುವುದೇನೆಂದರೆ ಈಗಾಗಲೇ ರೂಪಿಸಿರುವ ಯೋಜನೆಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ಚರ್ಚೆಗಳು ನಡೆದಾಗ ನಮ್ಮ ರಾಜ್ಯದಲ್ಲಿರುವ 52 ಭಾಗಗಳಲ್ಲಿ ಯಾವ ಯಾವ ಭಾಗಗಳಿಗೆ ಮೊದಲನೆ, ಎರಡನೇ ಮತ್ತು ಮೂರನೆಯ ಆದ್ಯತೆಗಳಿಗೆ ಅನುಗುಣವಾಗಿ ಹಣವನ್ನು ಖರ್ಚು ಮಾಡಬಹುದೆಂದು ಸ್ಪಷ್ಟವಾದ ರೂಪುರೇಷೆಗಳನ್ನು ಹಾಕಿಕೊಂಡಿದ್ದು, ಅದನ್ನು ಬಹಳ ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕಾಗುತ್ತದೆ. ಆ ಭಾಗದಲ್ಲಿರುವ ಎಲ್ಲಾ ಸದಸ್ಯರನ್ನು ಕೂಡ ಅಲ್ಲಿಗೆ ಕಳುಹಿಸಿದ್ದೇವೆ. ಮಹಾರಾಷ್ಟ್ರ ಗಡಿಭಾಗದಲ್ಲಿರುವ ಪ್ರದೇಶ ಹಾಗೂ ನಮ್ಮ ರಾಜ್ಯದ ಗಡಿಯ ಭಾಗದಲ್ಲಿರುವ ಪ್ರದೇಶಗಳ ಕುಂದುಕೊರತೆಗಳ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತೇವೆ. ಹಾಗೆಯೇ ಮಹಾರಾಷ್ಟ್ರ ರಾಜ್ಯದೊಂದಿಗೆ ಈ ಬಗ್ಗೆ ನಾವು ಪತ್ರ ವ್ಯವಹಾರವನ್ನುಕೂಡ ನಡೆಸುತ್ತೇವೆ.

**ಶ್ರೀ ಕವಟಗಿಮಠ ಮಲ್ಲಿಕಾರ್ಜುನ ಮಹಾಂತೇಶ** :– ಮಾನ್ಯ ಸಭಾಪತಿಗಳೇ, ನಮ್ಮ ದೇಶದಲ್ಲಿ ಭಾಷಾವಾರು ಪ್ರಾಂತ್ಯ ರಚನೆ ಆದ ನಂತರ ಕರ್ನಾಟಕದ ಅನೇಕ ಗ್ರಾಮಗಳು ಮಹಾರಾಷ್ಟ್ರಕ್ಕೆ ಸೇರಿಕೊಂಡಂತಹ ನಿದರ್ಶನಗಳು ಇವೆ. ಹಾಗೆಯೇ ಮಹಾರಾಷ್ಟ್ರ ರಾಜ್ಯಕ್ಕೆ ಸೇರಿರುವ ಗ್ರಾಮಗಳು ಕೂಡ ನಮ್ಮ ಭಾಗಕ್ಕೆ ಬಂದಿರಬಹುದು. ಕರ್ನಾಟಕ ಸರ್ಕಾರ ಗಡಿ ಭಾಗಗಳಲ್ಲಿರುವ ಮರಾಠಿ ಶಾಲೆಗಳಿಗೆ ಮಾನವೀಯತೆಯ ದೃಷ್ಟಿಯಿಂದ ಹಾಗೂ ಇಲ್ಲಿರತಕ್ಕ ಭಾಷೆ ಸಾಮರಸ್ಯದ ದೃಷ್ಟಿಯಿಂದ ಮರಾಠಿ ಶಾಲೆಗಳಿಗೂ ಸಹ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಹಾಗೆಯೇ ಆ ಭಾಷೆಯ ಸಂರಕ್ಷಣೆಯನ್ನು ಕೂಡ ಸರ್ಕಾರ ಮಾಡಿಕೊಂಡು ಬಂದಿದೆ. ಹಾಗೆಯೇ ಗಡಿ ಭಾಗದಲ್ಲಿರುವ ಕನ್ನಡ ಜನರು ತಮ್ಮ ಕುಂದುಕೊರತೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಗಡಿ ಭಾಗದಲ್ಲಿರುವ ಕನ್ನಡ ಭಾಷಿಕರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಕಟ್ಟಡ, ಕುಡಿಯುವ ನೀರು, ಅಥವಾ ಅಲ್ಲಿಗೆ ಅವಶ್ಯವಾಗಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಾಗಿರುವ ಅವರ ಇನ್ನಿತರ ಬೇಡಿಕೆಗಳಿಗೆ ಸ್ಪಂದಿಸಬೇಕಾದಂತಹ ವಿಚಾರದಲ್ಲಿ ಸರ್ಕಾರ, ಮಹಾರಾಷ್ಟ್ರ ರಾಜ್ಯಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗುವ ವಿಚಾರದಲ್ಲಿ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಕಳೆದ 50–60 ವರ್ಷಗಳಿಂದಲೂ ಸಹ ಅಲ್ಲಿ ವಾಸ ಮಾಡುತ್ತಿರುವ ನಮ್ಮ ಕನ್ನಡಿಗರಿಗೆ ತೊಂದರೆ ಆಗಬಾರದು. ಇಲ್ಲಿರುವ ಜನರನ್ನು ಸಂರಕ್ಷಣೆ ಮಾಡಬೇಕು. ಏಕೆಂದರೆ ನಾವೆಲ್ಲರೂ ಭಾರತ ಮಾತೆಯ ಮಕ್ಕಳು, ಸೌಜನ್ಯತೆಯಿಂದ ಈ ಜನರಿಗೆ ರಕ್ಷಣೆಯನ್ನು ನೀಡಬೇಕೆನ್ನುವುದು ನನ್ನ ವಿನಂತಿ.

ಡಾ||ಜಯಮಾಲ ರಾಮಚಂದ್ರ:– ಮಾನ್ಯ ಸಭಾಪತಿಗಳೇ, ಖಂಡಿತವಾಗಿ ಮಾನ್ಯ ಸದಸ್ಯರ ವಿನಂತಿಯನ್ನು ಗಮನಿಸಲಾಗುವುದು. ಆ ಭಾಗದಲ್ಲಿ ಉದ್ಯೋಗ ಸೃಷ್ಟಿ ಮಾಡುವ ಸಲುವಾಗಿ ಕೈಗಾರಿಕೆಗಳನ್ನು ಸ್ಥಾಪಿಸದೇ ಇರುವ ವಿಚಾರದ ಬಗ್ಗೆ ನಾನು ಉತ್ತರವನ್ನು ನೀಡಿದ್ದೇನೆ. ಆ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಕಷ್ಟವಾಗಬಹುದು. ಇನ್ನೂ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಅಂಗನವಾಡಿ ಇರಬಹುದು, ಶಾಲೆಗಳಿರಬಹುದು, ಅಥವಾ ಅಲ್ಲಿಗೆ ಶೌಚಾಲಯಗಳು ಹಾಗೂ ನೀರಿನ ವ್ಯವಸ್ಥೆ, ದೀಪ ಹಾಗೂ ರಸ್ತೆಯ ಬಗ್ಗೆ ನಮ್ಮ ಸರ್ಕಾರ ಖಂಡಿತವಾಗಿ ಕ್ರಮವನ್ನು ವಹಿಸುತ್ತದೆ.

ಆ) ವಿಷಯ: ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಭಾಗದಲ್ಲಿ "ಭತ್ತ ಬೆಳೆಯುವತ್ತ ರೈತನ ಚಿತ್ತ ಇಲ್ಲದಿದ್ದರೆ ಗದ್ದೆ ಸರ್ಕಾರದತ್ತ" ಎಂಬ ನಾಮಫಲಕ ಕುರಿತು.

~~~~~~~~~

**ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** ಮಾನ್ಯ ಸಭಾಪತಿಗಳೇ, ಕೊಡಗಿನ ಶಕ್ತಿ ಪತ್ರಿಕೆಯಲ್ಲಿ ಬಂದಿರುವ "ರೈತನಗದ್ದೆ ಸರ್ಕಾರದತ್ತ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿರುವ ವಿಷಯವನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಜಿಲ್ಲಾ ಪಂಚಾಯಿತಿ, ಮಡಿಕೇರಿ ತಾಲ್ಲೂಕು ಕೃಷಿ ಇಲಾಖೆ, ನಾಪೋಕ್ಲು ನಾಲ್ನಾಡ್ ಪ್ಲಾಂಟರ್ಸ್ ಕ್ಲಬ್‌ನ ಸಂಯುಕ್ತ ಆಶ್ರಯದಲ್ಲಿ ನಾಲ್ನಾಡ್ ಪ್ಲಾಂಟರ್ಸ್ ಕ್ಲಬ್ ಸಭಾಂಗಣದಲ್ಲಿ ಇತ್ತೀಚೆಗೆ ಆಯೋಜಿಸಲಾಗಿದ್ದ ಸಮಗ್ರ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ಸಭಾಂಗಣದ ಎರಡು ಕಡೆಗಳಲ್ಲಿ ಅಂಟಿಸಲಾದ "ಭತ್ತ ಬೆಳೆಯುವತ್ತ ರೈತನ ಚಿತ್ತ ಇಲ್ಲದಿದ್ದರೆ ಗದ್ದೆ ಸರ್ಕಾರದತ್ತ" ಎಂಬ ನಾಮಫಲಕ ಹಲವಾರು ರೈತರನ್ನು ಬೆಚ್ಚಿ ಬೀಳಿಸಿದ ಪ್ರಸಂಗ ನಡೆಯಿತು. ಈ ಬಗ್ಗೆ ಕೃಷಿ ಅಧಿಕಾರಿಗಳನ್ನು ರೈತರು ಪ್ರಶ್ನಿಸಿದಾಗ ಇದು ಸರ್ಕಾರದ ಆದೇಶ ಎಂಬ ಉತ್ತರವನ್ನು ಅಧಿಕಾರಿಗಳು ನೀಡಿದರು. ಇದಕ್ಕೆ ಸಂಬಂಧಿಸಿದಂತೆ ತಮ್ಮ ಅಳಲು ತೋಡಿಕೊಂಡ ರೈತರು ಸರ್ಕಾರ ರೈತರ ಗದ್ದೆಯನ್ನು ಕಬಳಿಸಲು ತಂತ್ರ ರೂಪಿಸುತ್ತಿದೆ. ಭತ್ತದ ಕೃಷಿಯಲ್ಲಿ ಲಾಭವಿಲ್ಲ ಎಂದು ಗೊತ್ತಿದ್ದರೂ ಯಾವುದೇ ಪ್ರೋತ್ಸಾಹಧನ ನೀಡದೆ ಈಗ ಈ ರೀತಿ ಸರ್ಕಾರ ಆಲೋಚಿಸಿರುವುದು ಸರಿಯಾದ ಕ್ರಮವಲ್ಲ ಇದರಿಂದಾಗಿ ರೈತರು ತೊಂದರೆ ಅನುಭವಿಸಬೇಕಾಗುವುದು ಎಂದು ತಿಳಿಸಿದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~~~~~

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ(ಕೃಷಿ ಸಚಿವರು):–**ಮಾನ್ಯ ಸಭಾಪತಿಗಳೇ, ನನಗೆ ಇದರ ಬಗ್ಗೆ ಸದ್ಯಕ್ಕೆ ಮಾಹಿತಿಯಿಲ್ಲ. ಇದರ ಬಗ್ಗೆ ಮಾಹಿತಿ ತರಿಸಿಕೊಂಡು ಉತ್ತರ ನೀಡುತ್ತೇನೆ.

**ಸಭಾಪತಿಯವರು:–** “ಭತ್ತ ಬೆಳೆಯುವತ್ತ ರೈತನ ಚಿತ್ತ ಇಲ್ಲದಿದ್ದರೆ ಗದ್ದೆ ಸರ್ಕಾರದತ್ತ” ಇದು ಸರ್ಕಾರದ ಘೋಷಣೆಯೇ?

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ:–** ಮಾನ್ಯ ಸಭಾಪತಿಗಳೇ, ಸರ್ಕಾರ ಈ ರೀತಿ ಘೋಷಣೆ ಮಾಡಿರುವುದಿಲ್ಲ. ಇದರ ಮಾಹಿತಿ ತರಿಸಿಕೊಂಡು ಉತ್ತರ ನೀಡುತ್ತೇನೆ.

ಇ) ವಿಷಯ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ
ಟೋಲ್‌ಗೇಟ್ ಅಳವಡಿಕೆ ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಕುರಿತು.

~~~~~~~~~~~

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೇ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅವೈಜ್ಞಾನಿಕವಾಗಿ ಟೋಲ್‌ಗೇಟುಗಳನ್ನು ಮತ್ತುರಾಜ್ಯ ಸರ್ಕಾರಗಳು ಪದೇ ಪದೇ ತೆರೆಯುತ್ತಿದ್ದು, ಟೋಲ್‌ಗೇಟ್ ಅಳವಡಿಸಲು ಪಾಲಿಸಬೇಕಾದ ನಿಯಮಗಳನ್ನು ಗಾಳಿಗೆ ತೂರಿ ಯಾವುದೇ ವ್ಯವಸ್ಥೆಗಳು ಇಲ್ಲದೇ ನಿಯಮಗಳನ್ನು ಮೀರಿ 10 ಕಿ.ಮೀ ಗೆ ಒಂದರಂತೆ ಟೋಲ್‌ಗೇಟುಗಳನ್ನು ತೆರೆಯುವ ಮುಖಾಂತರ ಪರಸ್ಪರ ಮೇಲಾಟದ ಮೂಲಕ ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು, ಅವಿಭಜಿತ ಜಿಲ್ಲೆಗಳ ಶಾಸಕರು ಸಾರ್ವಜನಿಕರು ಈ ಬಗ್ಗೆ ನಿರಂತರ ಹೋರಾಟ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳದೇ ಟೋಲ್‌ಗೇಟುಗಳಿಗೆ ಯಾವುದೇ ನಿಯಮ ಅನ್ವಯಿಸುವುದಿಲ್ಲ ಎನ್ನುವಂತೆ ಪದೇ ಪದೇ ಸಾರ್ವಜನಿಕರಿಗೆ ಟೋಲ್‌ಗೇಟ್ ಕಾಂಟ್ರೆಕ್ಟರ್‌ಗಳ ಬಳಿ ಸಂಘರ್ಷಣೆಗಳು ನಡೆದು ಗೂಂಡಾಗಿರಿಯ ಕೇಂದ್ರವಾಗಿ ಟೋಲ್‌ಗೇಟ್ ಮಾರ್ಪಟ್ಟಿರುವುದು ಸಾರ್ವಜನಿಕರ ಆಕ್ರೋಷಕ್ಕೆ ಕಾರಣವಾಗಿದೆ.

ಕನ್ನಡ ದಿನಪತ್ರಿಕೆಗಳಾದ ಉದಯವಾಣಿ, ವಿಜಯಕರ್ನಾಟಕ, ವಾರ್ತಾಭಾರತಿ, ಪ್ರಜಾವಾಣಿ, ವಿಜಯವಾಣಿ ಪತ್ರಿಕೆಗಳಲ್ಲಿ”ಬೆಳ್ಳಣ್ ಟೋಲ್‌ಗೇಟ್‌ಗೆ ವಿರೋಧಿಸಿ ಡಿಸೆಂಬರ್ 20 ರಂದುಪಡುಬಿದ್ರಿ ಕಾರ್ಕಳ ಬಂದ್‌ಗೆ” ಮತ್ತು ಎಲ್ಲಾ ಅಂಗಡಿ ಮುಗ್ಗಟ್ಟು ಮುಚ್ಚಬೇಕೆಂದು ಮತ್ತು ಇದಕ್ಕೆ ಸಾರ್ವಜನಿಕರು, ಉದ್ಯಮಿಗಳು ಸಹಕರಿಸಲು ಟೋಲ್‌ಗೇಟ್ ವಿರೋಧಿ ಸಂಚಾಲಕರು ಕರೆ ನೀಡಿರುವುದರಿಂದ ಜನರಿಗೆ ಉಂಟಾಗುವ ತೊಂದರೆ ನಿವಾರಿಸಿ, ನಿಯಮಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸುವ ಟೋಲ್‌ಗೇಟ್‌ಗಳನ್ನು ಬಂದ್ ಮಾಡಬೇಕೆಂದು ರಾಜ್ಯ ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ, ಈ ವಿಚಾರವಾಗಿ ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ. ಈ ಬಗ್ಗೆ ಸಾರ್ವಜನಿಕರು ಸಾಕಷ್ಟು ಹೋರಾಟವನ್ನು ಮಾಡುತ್ತಿದ್ದಾರೆ. ಶಾಸಕರು ಅಹೋರಾತ್ರಿಧರಣಿಯನ್ನು ನಡೆಸುತ್ತಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~~~~~~~

**ಡಾ||ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸಲಾಗುವುದು.

4. **ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 104ರ ಮೇರೆಗೆ ವಿಧಾನ ಸಭೆಯ ದಿನಾಂಕ 14–12–2018 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ, 2018
2. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ(ತಿದ್ದುಪಡಿ) ವಿಧೇಯಕ, 2018
3. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2018

5. **<u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಗಳೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ:

01. ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿ ನಿರತರ(ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ)(ತಿದ್ದುಪಡಿ) ವಿಧೇಯಕ 2018
02. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕ, 2018
03. ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ(ತಿದ್ದುಪಡಿ) ವಿಧೇಯಕ, 2018
04. ಕರ್ನಾಟಕ ಭೂ ಕಂದಾಯ(ಎರಡನೇ ತಿದ್ದುಪಡಿ)ವಿಧೇಯಕ, 2018

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

6. **ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ**

**ಡಾ||ಜಯಮಾಲ ರಾಮಚಂದ್ರ(ಸಭಾನಾಯಕರು, ಮಾನ್ಯ ಕಂದಾಯ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ದಿನಾಂಕ 14–12–2018ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ಸೂಚನೆಗೆ ಸಂಬಂಧಿಸಿದ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

**7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

ವಿಷಯ: ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕು ಸುಳವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ.

~~~~~

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಅತ್ಯಂತ ಗಂಭೀರವಾದ ಮತ್ತು ಇಡೀ ರಾಜ್ಯದಲ್ಲಿ ಆತಂಕವನ್ನು ತಂದೊಡ್ಡಿರುವ ಒಂದು ವಿಚಾರದ ಬಗ್ಗೆ ಪ್ರಸ್ತಾಪಿಸಲು ಒಂದು ನಿಲುವಳಿ ಸೂಚನೆಯನ್ನು ತಮಗೆ ನೀಡಿದ್ದೆನು. ನಮ್ಮ ರಾಜ್ಯದ ಚಾಮರಾಜನಗರದ ಹನೂರ ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿನ ಮಾರಮ್ಮನ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳನ್ನು ಮಾಡಿ, ಪ್ರಸಾದವನ್ನು ವಿತರಣೆ ಮಾಡಿರುತ್ತಾರೆ. ಆ ಪ್ರಸಾದವನ್ನು ಸೇವಿಸಿದಂತಹ ನೂರಕ್ಕೂ ಹೆಚ್ಚು ಜನರು ಅಸ್ವಸ್ಥರಾದಂತಹ ಧಾರುಣ ಘಟನೆ ಶುಕ್ರವಾರ ನಡೆದಿದೆ. ಈ ಘಟನೆ ಎಷ್ಟು ಗಂಭೀರವಾಗಿದೆ ಎಂದರೆ ನಾನು ನಿನ್ನೆಯ ದಿವಸ ಅಸ್ವಸ್ಥರಾಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜನರನ್ನು ಭೇಟಿಯಾಗಲು ಹೋದಂತಹ ಸಂದರ್ಭದಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಸುಮಾರು 40 ಕ್ಕಿಂತಲೂ ಹೆಚ್ಚು ಜನರು ದಾಖಲಾಗಿರುವುದನ್ನು ನಾನು ಕಂಡೆನು.

(484) 17–12–2018 (2–10)ಎಲ್‌ಎಂ/ಎಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):–** ಅಪೋಲೋ ಖಾಸಗಿ ಆಸ್ಪತ್ರೆಯಲ್ಲಿ ಸುಮಾರು 14 ಜನ ದಾಖಲಾಗಿದ್ದಾರೆ. ಸುಯೋಗ ಎನ್ನುವ ಆಸ್ಪತ್ರೆ ಇದೆ. ಇಲ್ಲಿ 10 ಮತ್ತು 11 ವರ್ಷದ 12 ಮಕ್ಕಳನ್ನು ದಾಖಲು ಮಾಡಲಾಗಿದೆ. ಅತ್ಯಂತ ನೋವಿನ ಘಟನೆ ಏನು ಎಂದರೆ, ಮೊದಲು 12 ಜನ ಮೃತರಾಗಿರುವ ಬಗ್ಗೆ ಮಾಹಿತಿ ಇತ್ತು, ನಂತರ ನಾನು ಅಲ್ಲಿ ಇರುವಾಗ ಇನ್ನು ಇಬ್ಬರು ಮೃತರಾದ ಬಗ್ಗೆ ಮಾಹಿತಿ ಬಂತು. ಅಲ್ಲಿಯ ಧಾರುಣವಾದ ದೃಶ್ಯವನ್ನು ಯಾರಿಂದಲೂ ನೋಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಜನರು ಪ್ರಸಾದವನ್ನು ತಿನ್ನುವಾಗ ಅಲ್ಲಿ–ಇಲ್ಲಿ ಬಿದ್ದಿರುವ ಪ್ರಸಾದವನ್ನು ತಿಂದ ಕಾಗೆ–ನಾಯಿಗಳು ಸಹ ಸತ್ತಿರುವ ದೃಶ್ಯವನ್ನು ಅಲ್ಲಿ ನೋಡಿದ್ದೇವೆ. ದೇವರ ಹೆಸರಿನಲ್ಲಿ ದ್ರೋಹ ಬಗೆದಿದ್ದಾರೆ ಎನ್ನುವ ಭಾವನೆ ನಮಗೆ ಬಂದಿದೆ. ಉಪವಾಸವಿದ್ದು ದೇವರ ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸಿರುವ ಭಕ್ತರಿಗೆ ಈ ರೀತಿಯಾಗಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಆ ಪ್ರಸಾದದಲ್ಲಿ ರೋಗರ್ (Rogor) ಎನ್ನುವ ಕ್ರಿಮಿನಾಶಕವನ್ನು ಯಾರೋ ಕಿಡಿಗೇಡಿಗಳು ಸೇರಿಸಿದ್ದಾರೆ ಎನ್ನುವ ಸುದ್ದಿ ಇದೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಈ ಮಾರಮ್ಮ ದೇವಸ್ಥಾನ ಹೆಸರು ಮಾಡಿರುವಂತಹದ್ದು. ಇಲ್ಲಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
~~~~~

ಆಡಳಿತ ನಡೆಸಲು ಎರಡು ಗುಂಪುಗಳ ನಡುವೆ ಆಗಾಗ ಮಾತುಕತೆಯಾಗುತ್ತಿತ್ತು ಎನ್ನುವ ಸುದ್ದಿ ಇದೆ. ಅಲ್ಲಿ ಮುಖಮಂಟಪ ಮಾಡುವಾಗ ಅದಕ್ಕೆ ಕೆಲವು ಜನರು ವಿರೋಧ ಮಾಡಿದ್ದರು ಎನ್ನುವ ಸುದ್ದಿ ಇದೆ. ಆ ದೇವಸ್ಥಾನದಲ್ಲಿ ನಡೆಯುವ ಪೂಜಾ ವಿಧಾನದಿಂದ ಮತ್ತು ನಂಬಿಕೆಯಿಂದ ಭಕ್ತಾದಿಗಳ ಸಂಖ್ಯೆ ಜಾಸ್ತಿಯಾಗಿದ್ದರಿಂದ ಆ ದೇವಸ್ಥಾನಕ್ಕೆ ಒಳ್ಳೆಯ ಆದಾಯ ಬರುತ್ತಿತ್ತು ಎನ್ನುವಂತಹ ವಿವರಗಳು ಇವೆ. ಈ ಎಲ್ಲ ಹಿನ್ನೆಲೆಯಲ್ಲಿ ಎರಡು ಗುಂಪುಗಳ ನಡುವೆ ಆಕ್ರೋಶದ ಚಟುವಟಿಕೆಗಳು ನಡೆಯುತ್ತಿದ್ದವು ಎನ್ನುವ ಮಾತು ಕೇಳಿಬಂತು. ಅಲ್ಲಿಯ ಧಾರುಣವಾದ ದೃಶ್ಯ ನೋಡಲು ಆಗುತ್ತಿರಲಿಲ್ಲ. ಅಲ್ಲಿ ಒಬ್ಬ ಶಿವರಾಮಿ ಎನ್ನುವ ಮಹಿಳೆ 'ನನಗೆ ಮಗುವನ್ನು ಕೊಟ್ಟು ನನ್ನ ಗಂಡನನ್ನು ಕಿತ್ತುಕೊಂಡೆಯಲ್ಲ ದೇವಿ' ಎಂದು ಬೊಬ್ಬೆ ಹಾಕಿ ರೋಧಿಸುತ್ತಿರುವ ದೃಶ್ಯವನ್ನು ನೋಡಲು ಆಗಲಿಲ್ಲ. ಮದುವೆಯಾಗಿ 12ವರ್ಷವಾದರೂ ಮಕ್ಕಳು ಆಗದಿರುವುದಕ್ಕೆ ಆ ಹೆಣ್ಣುಮಗಳು ಈ ಮಾರಮ್ಮ ದೇವಿಗೆ ಹರಕೆ ಹೊತ್ತ ಮೇಲೆ ಒಂದು ಮಗುವಾಗಿದೆ. ಹರಕೆ ತೀರಿಸಲು ಮಗುವನ್ನು ಕರೆದುಕೊಂಡು ಬಂದಿದ್ದಾರೆ. ಅಲ್ಲಿ ಪೂಜೆಯಾದ ಮೇಲೆ ಈ ಹೆಣ್ಣುಮಕ್ಕಳು ಪ್ರಸಾದ ಸ್ವೀಕರಿಸಲು ತಡವಾಗಿದೆ, ಅಷ್ಟರಲ್ಲಿ ಆಕೆಯ ಗಂಡ ಪ್ರಸಾದವನ್ನು ಸ್ವೀಕರಿ ಸತ್ತು ಹೋಗಿದ್ದಾನೆ. ಇದನ್ನು ನೋಡಿದ ಆ ಹೆಣ್ಣು ಮಗಳು ನನಗೆ ಮಗುವನ್ನು ಕೊಟ್ಟು ಅದೇ ದೇವಸ್ಥಾನದಲ್ಲಿ ದೇವರು ನನ್ನ ಗಂಡನನ್ನು ಕಿತ್ತುಕೊಂಡ ಎಂದು ಅಳುತ್ತಿರುವ ಧಾರುಣವಾದ ದೃಶ್ಯವನ್ನು ಅಲ್ಲಿ ನೋಡಬೇಕಾಯಿತು. ನಾನು ಅಲ್ಲಿಯ ಜಿಲ್ಲಾಧಿಕಾರಿಗಳನ್ನು, ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳನ್ನು ಮತ್ತು ಅಲ್ಲಿ ಇರುವ ಅಧಿಕಾರಿಗಳನ್ನು ಭೇಟಿಯಾದೆ. ಎಷ್ಟು ಸಾಧ್ಯವೊ ಅಷ್ಟು ಎಲ್ಲಾ ಆಸ್ಪತ್ರೆಗಳಿಗೆ ಭೇಟಿ ಕೊಟ್ಟು ಬಂದಿದ್ದೇನೆ. 14ನೇ ತಾರೀಖಿನಂದು ಬೆಳಗ್ಗೆ 9 ಗಂಟೆಗೆ ಪೂಜೆ-ಪುನಸ್ಕಾರವಾದ ನಂತರ ಪ್ರಸಾದವನ್ನು ವಿತರಣೆ ಮಾಡಲಾಗುತ್ತದೆ. ಆ ಪ್ರಸಾದವನ್ನು ಸ್ವೀಕರಿಸಿದ ಸುಮಾರು 100 ಕ್ಕೂ ಹೆಚ್ಚು ಜನರು ಅಸ್ವಸ್ಥರಾಗುತ್ತಾರೆ. ದೇವಸ್ಥಾನದಲ್ಲಿ ಅಸ್ವಸ್ಥರಾಗಿ ಬಿದ್ದಿರುವಾಗ ಎರಡು-ಮೂರು ಗಂಟೆಗಳ ಮೊದಲು ಚಿಕಿತ್ಸೆ ಸಿಕ್ಕಿದ್ದರೆ ಕೆಲವರಾದರೂ ಉಳಿಯುತ್ತಿದ್ದರು. ಸುಳವಾಡಿ ಗ್ರಾಮ ಹನೂರು ತಾಲ್ಲೂಕಿನ ವ್ಯಾಪ್ತಿಗೆ ಬರುತ್ತದೆ. ವಿಷಪ್ರಾಶನ ಮಾಡಿದವರನ್ನು ಅಲ್ಲಿ ಇರುವ ಕೆಲವು ಎತ್ತಿಕೊಂಡು ಹೋಗಿ ಹನೂರಿನ ತಾಲ್ಲೂಕಾ ಆಸ್ಪತ್ರೆಗೆ ಸೇರಿಸುತ್ತಾರೆ. ಆ ತಾಲ್ಲೂಕು ಆಸ್ಪತ್ರೆಯಲ್ಲಿ ಒಂದೇ ಒಂದು ವೆಂಟಿಲೇಟರ್ ಇಲ್ಲ. ಯಾರೋ ಒಬ್ಬ ವೈದ್ಯಾಧಿಕಾರಿ ಇದ್ದಾರೆ, ಅವರು ಈಗ ಬರುತ್ತಾರೆ ಆಗ ಬರುತ್ತಾರೆ ಎನ್ನುವ ಸುದ್ದಿಯನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಹೀಗಿರುವಾಗ ಅಸ್ವಸ್ಥರಾಗಿ ಪ್ರಜ್ಞೆ ಕಳೆದುಕೊಂಡವರನ್ನು ಒಂದು ಟೆಂಪೋದಲ್ಲಿ ಮೂಟೆಗಳ ಹಾಗೆ ಹನೂರಿನಿಂದ ಕೊಳ್ಳೇಗಾಲ ಅಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ಇದು ಆ ಸಮಯದಲ್ಲಿ ಅನಿವಾರ್ಯವಿರಬಹುದು. ಈ ದೇವಸ್ಥಾನದಿಂದ ಹನೂರಿಗೆ ಸುಮಾರು 45 ಕಿ.ಮೀ. ಅಲ್ಲಿಂದ ಕೊಳ್ಳೇಗಾಲ ಆಸ್ಪತ್ರೆ 35 ಕಿ.ಮೀ ಇದೆ. ಅಲ್ಲಿ ಹನೂರಿಗಿಂತ ಚಿಂತಾಜನಕ ಸ್ಥಿತಿಯಲ್ಲಿ ಆಸ್ಪತ್ರೆಗಳು. ಅಲ್ಲಿಂದ ನೇರವಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದಾರೆ. ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಹೋಗುವುದಕ್ಕಿಂತ ಮೊದಲು ಚಾಮರಾಜನಗರ ಜಿಲ್ಲೆಯ ಜಿಲ್ಲಾ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ಇರುವ ಅತ್ಯಂತ ಆತಂಕದ ಸಂಗತಿ ಎಂದರೆ, ಒಂದು ಜಿಲ್ಲಾ ಆಸ್ಪತ್ರೆಯಲ್ಲಿ ಈಗ ಇರುವ ಪರಿಸ್ಥಿತಿಯಲ್ಲಿ ಕನಿಷ್ಠ 50

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೆಂಟಿಲೇಟರ್‌ಗಳಾದರೂ ಇರಬೇಕು. ಆದರೆ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಎರಡು ವೆಂಟಿಲೇಟರ್‌ಗಳು ಇವೆ, ಅವು ಕೂಡಾ ಕೆಟ್ಟು ಹೋಗಿವೆ. ಇದರ ಬಗ್ಗೆ ಸರ್ಕಾರ ಗಮನಿಸಬೇಕಾಗುತ್ತದೆ. ಕೆ.ಆರ್.ಆಸ್ಪತ್ರೆಯಲ್ಲಿ 50 ವೆಂಟಿಲೇಟರ್‌ಗಳು ಇರಬೇಕಾಗಿತ್ತು ಆದರೆ 14–15 ವೆಂಟಿಲೇಟರ್‌ಗಳು ಇವೆ ನಾವೇನು ಮಾಡುವುದು ಎಂದು ಅಲ್ಲಿಯ ವೈದ್ಯಾಧಿಕಾರಿಗಳು ಅಸಹಾಯಕತೆಯನ್ನು ತೋರಿಸುತ್ತಾರೆ. ಆದರೆ ಇಡೀ ತಂಡಗಳಾಗಿ ಅವರು ಕೆಲಸವನ್ನು ಮಾಡಿದ್ದಾರೆ ಎನ್ನುವುದು ಅಲ್ಲಿ ಇರುವವರನ್ನು ಮಾತನಾಡಿಸಿದಾಗ ನಮಗೆ ಗೊತ್ತಾಯಿತು. ಈ ದುರಂತಕ್ಕೆ ಸರ್ಕಾರ ಕಾರಣ ಎಂದು ನಾನು ಆಪಾದನೆ ಮಾಡುವುದಿಲ್ಲ. ಕಾಲ–ಕಾಲಕ್ಕೆ ಇಂತಹ ದುರಂತಗಳು ಹಲವಾರು ನಡೆದಿವೆ. ಆದರೆ ಒಂದು ಸರ್ಕಾರವಾಗಿ, ಆರೋಗ್ಯ ಇಲಾಖೆ ಒಂದು ತಂಡವಾಗಿ ದುರಂತವನ್ನು ನಿಭಾಯಿಸುವ ರೀತಿಯಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ಇಲ್ಲಿ ನಾನು ಹೇಳಬೇಕಾಗುತ್ತದೆ. ಅಲ್ಲಿ ಇರುವ ambulance ನಲ್ಲಿಯೂ ಕೂಡಾ ವೆಂಟಿಲೇಟರ್ ಇಲ್ಲ. ಆದರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಶುಕ್ರವಾರ ನಾವು ಅಧಿವೇಶನ ಮುಗಿಸಿಕೊಂಡು ಮನೆ ಸೇರುವ ಮೊದಲೇ ಮಾನ್ಯ ಮುಖ್ಯಮಂತ್ರಿಗಳು ಮೈಸೂರಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ಮತ್ತು ಆಸ್ಪತ್ರೆಯಲ್ಲಿ ಇರುವವರನ್ನು ನೋಡಿ ಬಂದಿದ್ದಾರೆ. ವ್ಯಕ್ತಿಗತವಾಗಿ ನಾನು ಹೇಳುತ್ತಿಲ್ಲ. ಆದರೆ ಈ ರಾಜ್ಯದಲ್ಲಿ ಒಂದು ಆರೋಗ್ಯ ಇಲಾಖೆ ಇದೆ, ಅದಕ್ಕೆ ಒಬ್ಬರು ಮಂತ್ರಿಗಳು ಇದ್ದಾರೆ. ಘಟನೆ ನಡೆದು 48 ಗಂಟೆಗಳಾದರೂ ಅವರು ಅಲ್ಲಿಗೆ ಹೋಗಿ ನೋಡಿರುವುದಿಲ್ಲ. ನಾವು ನೋಡಿಕೊಂಡು ಬಂದಮೇಲೆ ಅವರು ಅಲ್ಲಿಗೆ ಹೋಗಿದ್ದಾರೆ. ಇಲ್ಲಿ ವ್ಯಕ್ತಿಗತವಾಗಿ ದೂರುಗಳು ಇಲ್ಲದಿದ್ದರೂ ಸಹ ಒಂದು ಸರ್ಕಾರವಾಗಿ ಹೇಗೆ ವಿಫಲವಾಗಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಆರೋಗ್ಯ ಇಲಾಖೆ ಮಂತ್ರಿಗಳು ಘಟನೆ ನಡೆದು 48 ಗಂಟೆಗಳಾದ ಮೇಲೆ ಹೋಗಿದ್ದಾರೆ. ಅಲ್ಲಿಯ ಮಾಧ್ಯಮದವರು ನೀವು ಸ್ವಲ್ಪ ಬೇಗ ಬಂದಿದ್ದರೆ, ನಿಮ್ಮ ಆರೋಗ್ಯ ಇಲಾಖೆ ಒಂದಾಗಿ ಕೆಲಸ ಮಾಡಿದ್ದರೆ ಈಗ ಮೃತರಾದವರಲ್ಲಿ ಕನಿಷ್ಠ 6–7 ಜನರ ಜೀವವಾದರೂ ಉಳಿಸಬಹುದಾಗಿತ್ತು. ಈ ಘಟನೆಯಿಂದ ನಿಮಗೇನನಿಸುತ್ತದೆ ಎಂದು ಕೇಳಿದಾಗ, ಆರೋಗ್ಯ ಸಚಿವರು ನನ್ನಗಿಂತ ಮೊದಲು ಮಾನ್ಯ ಮುಖ್ಯಮಂತ್ರಿಗಳು ಬಂದಿದರು, ನಾನು ಬಂದು ಏನು ಮಾಡಬೇಕಾಗಿತ್ತು ಎನ್ನುವ ಹಾರಿಕೆ ಮಾತನ್ನು ಹೇಳುತ್ತಾರೆ. ಅಲ್ಲಿ ಅವರು ಯಾವ ಶಬ್ದಗಳನ್ನು ಬಳಸಿದ್ದಾರೆ ಎನ್ನುವುದನ್ನು ಮಾಧ್ಯಮದವರು ಹೇಳಿದ್ದಾರೆ. ಅದರ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಎರಡು ತಂಡಗಳ ಮಧ್ಯೆ ಕೋಮುಕತೆಯಾಗಿ, ಯಾರೋ ಕಿಡಿಗೇಡಿಗಳು ಇಷ್ಟು ದೊಡ್ಡ ದುರಂತವನ್ನು ಉಂಟು ಮಾಡಿರುವಾಗ ಅದರ ಸಮಗ್ರವಾದ ತನಿಖೆಯಾಗಬೇಕು. ನಾವು ಕೆಲವು ದಿವಸಗಳ ಆಡಳಿತ ನಡೆಸಿದ್ದೇವೆ. ಯಾವುದೇ ದೇವಸ್ಥಾನದಲ್ಲಿ ಆಡಳಿತ ವಿಷಯವಾಗಿ ಗೊಂದಲಗಳಾದಾಗ, ಆರ್ಥಿಕ ಅಪರಾಧಗಳಾದಾಗ, ಕಾನೂನು ಸುವವಸ್ಥೆಯ ಸಮಸ್ಯೆ ಬಂದಾಗ ಧಾರ್ಮಿಕ ದತ್ತಿ ಇಲಾಖೆ ಆ ದೇವಸ್ಥಾನಕ್ಕೆ ಒಂದು ನೋಟಿಸ್ ಕೊಟ್ಟು ಅದನ್ನು ವಶಕ್ಕೆ ತೆಗೆದುಕೊಂಡು, ಅಲ್ಲಿಗೆ ಒಬ್ಬ ತಹಸೀಲ್ದಾರರನ್ನು ನೇಮಕ ಮಾಡಿದರೆ ಈ ಸಮಸ್ಯೆ ಬರುತ್ತಾ ಇರಲಿಲ್ಲ ಅನ್ನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾನು ಇಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಾವು ಕಂಡ ಹಾಗೆ ಪ್ರಪಥಮ ಬಾರಿಗೆ ಈ ಘಟನೆ ನಡೆದಿದೆ. ಇದು ನಡೆಯಬಾರದಾಗಿತ್ತು. ಪ್ರಸಾದ ಎಂದರೆ, ಅದನ್ನು ಸ್ವೀಕಾರ ಮಾಡಿ ಮೊದಲು ಮಕ್ಕಳಿಗೆ ಕೊಡುತ್ತೇವೆ. ಆದರೆ ಈ ಘಟನೆ ನಡೆದಿರುವುದು ದುರ್ದೈವ. ಆದರೆ ಒಂದು ವಿಚಾರವನ್ನು ನಾನು ಹೆಮ್ಮೆಯಿಂದ ಹೇಳಬಲ್ಲೆ. ಈ ಘಟನೆ ನಡೆದ ವಿಚಾರ ತಿಳಿದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಚೆನ್ನೈಯಿಂದ ಆಗಮಿಸಿ ಅಲ್ಲಿಯ ಎಲ್ಲರ ಯೋಗಕ್ಷೇಮವನ್ನು ವಿಚಾರಿಸಿಕೊಂಡು, ಸಚಿವರಾದ ಮಾನ್ಯ ಪುಟ್ಟರಾಜುರವರನ್ನು ಅಲ್ಲಿಗೆ ನೇಮಕ ಮಾಡಿ. ವೆಂಟಿಲೇಟರ್ ಎಲ್ಲೆಲ್ಲಿ ಇವೆ ಅವುಗಳನ್ನು ಬೇಕಾದ ಆಸ್ಪತ್ರೆಗಳಿಗೆ ತಕ್ಷಣ ಕೊಡಿ, ಏನೇನು ಅನುಕೂಲಗಳ ಬೇಕು ತಕ್ಷಣ ಒದಗಿಸಿಕೊಡಿ ಎಂದು ಸೂಚನೆ ಕೊಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಕೂಡಾ ಸ್ಥಳಕ್ಕೆ ಬಂದು ವಿಚಾರಿಸಿದ್ದಾರೆ. ಆಹಾರ ಮಂತ್ರಿಗಳು ಹೋಗಿದ್ದಾರೆ. ಬಹಳ ಜನರು ಅಲ್ಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಗೆ ಏನು ಅನುಕೂಲಗಳು ಬೇಕು ಅವುಗಳನ್ನು ಒದಗಿಸಲಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ, ಈ ಘಟನೆ ನಡೆಯಬಾರದಿತ್ತು, ಈಗಾಗಲೇ ನಾವು 14 ಜೀವಗಳನ್ನು ಕಳೆದುಕೊಂಡಿದ್ದೇವೆ. ಇನ್ನು ಕೆಲವರು ಅನಾರೋಗ್ಯದಿಂದ ಹೋರಾಟ ನಡೆಸುತ್ತಿದ್ದಾರೆ. ಇವರನ್ನು ಉಳಿಸಲು ನಾವು ಏನು ಮಾಡಬೇಕು ಅದನ್ನು ಖಂಡಿತವಾಗಿ ಮಾಡುತ್ತೇವೆ. ತನಿಖಾ ವರದಿಯನ್ನು C.F.T.R.I. ಗೆ ಕಳುಹಿಸಲಾಗಿದೆ. ವರದಿ ಬರುತ್ತದೆ. ಈ ಸಂದರ್ಭದಲ್ಲಿ ನಾವು ನೀವು ಒಂದಾಗಿ ಕೆಲಸ ಮಾಡಬೇಕಾಗಿದೆ. ಮುಂದಿನ ದಿನಗಳಲ್ಲಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಆಲೋಚನೆಯನ್ನು ನಾವು ಮಾಡಬೇಕಾಗಿದೆ ಎಂದು ಹೇಳಬಯಸುತ್ತೇನೆ.

(485)17–12–2018(02–20)ಬಿಎಸ್‌ಡಿ–ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಒಟ್ಟಾಗಿ ಕೆಲಸ ಮಾಡುವುದು ಬೇಡ ಎಂದು ಹೇಳುವುದಿಲ್ಲ. ಅವರು ಮಾಡುವ ಒಳ್ಳೆಯ ಕೆಲಸಕ್ಕೆ ನಾವು ಬೆಂಬಲ ಕೊಡುತ್ತೇವೆ. ಅದರಲ್ಲಿ ಗೊಂದಲ ಇಲ್ಲ. ಆದರೆ ಸರ್ಕಾರವು ವಿಫಲವಾಗಿರುವುದರ ಬಗ್ಗೆ ಹೇಳಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಇಲ್ಲದ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ? ತಾವೇ ಇದರ ಬಗ್ಗೆ ಯೋಜನೆ ಮಾಡಬೇಕು. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ 50 ವೆಂಟಿಲೇಟರ್ ಇರಬೇಕು ಎನ್ನುವ ವ್ಯವಸ್ಥೆ ಇರುವಾಗ ಕೇವಲ ಎರಡು ವೆಂಟಿಲೇಟರ್ ಮಾತ್ರ ಇದೆ ಎಂದು ದಾಖಲೆಗಳಲ್ಲಿ ಹೇಳಿ, ಆ ಎರಡೂ ವೆಂಟಿಲೇಟರ್ ಹಾಳಾಗಿದೆ ಎಂದು ಒಪ್ಪಿಕೊಂಡಾಗ ಸರ್ಕಾರದಲ್ಲಿ ಆರೋಗ್ಯ ಇಲಾಖೆ ಎನ್ನುವುದು ಇದೆಯೇ? ಇದ್ದರೆ ಅದು ಜೀವಂತವಾಗಿದೆಯೇ ಎನ್ನುವಂತಹ ಪ್ರಶ್ನೆಗಳನ್ನು ನಾನು ಕೇಳಬೇಕಾಗಿದೆ. ನಾನು ಆ ಸ್ಥಳಕ್ಕೆ ಭೇಟಿ ನೀಡಿದ್ದಾಗ ಒಬ್ಬ ಹೆಣ್ಣುಮಗಳು ' ನನ್ನ ಮಗು ಮತ್ತು ನನ್ನ ಗಂಡ ಇಬ್ಬರೂ ತೀರಿಹೋಗಿದ್ದಾರೆ, ನನ್ನ ಜೊತೆ ಇರುವ ಇಡೀ ಕುಟುಂಬ ಅನಾಥವಾಗಿದೆ' ಎಂದು ಹೇಳುತ್ತಾಳೆ. ಸರ್ಕಾರದವರು ರೂ.5 ಲಕ್ಷ ಪರಿಹಾರ ಘೋಷಣೆ ಮಾಡಿರುವುದರಿಂದ ನಾನು ಅಭಿನಂದನೆಯನ್ನು ಸಲ್ಲಿಸಿದೆ. ಆದರೆ ಅಲ್ಲಿನ ಪರಿಸ್ಥಿತಿಯನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದಾಗ ರೂ. 5ಲ್ಕಕ್ಷ ಪರಿಹಾರವನ್ನು ಕನಿಷ್ಠ ರೂ.10 ಲಕ್ಷಗಳಿಗೆ ಹೆಚ್ಚಿಸಬೇಕಾದ ಅನಿವಾರ್ಯತೆ ಇದೆ ಎಂದು ನನಗನಿಸುತ್ತದೆ. ಅದಕ್ಕೆ ಗಮನ ಕೊಡಬೇಕೆಂದು ನನ್ನ ಆಗ್ರಹ.

ಇನ್ನು ದೇವಸ್ಥಾನವನ್ನು ತಕ್ಷಣ ಸ್ವಾಧೀನಪಡಿಸಿಕೊಳ್ಳಬೇಕು. ಸರ್ಕಾರಕ್ಕೆ ಆ ದೇವಸ್ಥಾನವನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ ಇದೆ. ತುಂಟಾಟ ಮಾಡುವುದಕ್ಕಾಗಿ ದೇವಸ್ಥಾನ ಇರುವುದಲ್ಲ. ಭಾವುಕ–ಭಕ್ತರಿಗೆ ವಿಶ್ವಾಸ ತುಂಬಬೇಕಾದ್ದು ಧಾರ್ಮಿಕ ಇಲಾಖೆಯ ದೇವಸ್ಥಾನದ ಜವಾಬ್ದಾರಿ. ಅಲ್ಲಿರುವಂತಹ ಅನಾಹುತವನ್ನು ಕಂಡು ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಜಿಲ್ಲಾಧಿಕಾರಿಯವರ ಮೂಲಕ ದೇವಸ್ಥಾನವನ್ನು ತಕ್ಷಣ ವಶಪಡಿಸಿಕೊಂಡು ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು. ಅಲ್ಲಿ ಸಮಗ್ರ ತನಿಖೆ ಮಾಡಬೇಕಾದ ಅವಶ್ಯಕತೆ ಇದೆ. ಅದಕ್ಕೆ ಸರ್ಕಾರ ಏನು ಮಾಡಿದೆ ಎಂದು ನನ್ನ ಆಗ್ರಹ. ಹಾಗಿದ್ದರೆ ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಇದೇ ಮಟ್ಟದಲ್ಲಿಟ್ಟುಕೊಂಡು ಮುಂದುವರೆಸಬೇಕು ಎಂದು ಅನಿಸುತ್ತದೆಯೇ? ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ಇಲಾಖೆಯನ್ನು ಅತ್ಯಂತ ವ್ಯವಸ್ಥಿತವಾಗಿ ಸಜ್ಜುಗೊಳಿಸಬೇಕಾದ ಅವಶ್ಯಕತೆಗಳು ಕಂಡು ಬರದಿದ್ದರೆ ಸರ್ಕಾರ ಎಲ್ಲಿದೆ ಎಂದು ಹೇಳಬೇಕು? ಒಂದೆರಡು ಮೂರು ಗಂಟೆಗಳಲ್ಲಿ ಸರಿಯಾದ ಚಿಕಿತ್ಸೆ ಸಿಕ್ಕಿದ್ದರೆ ಅರ್ಧದಷ್ಟು ಜನರ ಜೀವ ಉಳಿಯುತ್ತಿತ್ತು. ಹನೂರು ಆಸ್ಪತ್ರೆಯಿಂದ ಕೊಳ್ಳೇಗಾಲ ಆಸ್ಪತ್ರೆಗೆ ಹೋಗಿ, ಅಲ್ಲಿಂದ ಮೈಸೂರಿನ ಕೊಳ್ಳೇಗಾಲ ಆಸ್ಪತ್ರೆಯಿಂದ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಹೋಗಿ ಕೆ.ಆರ್ ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ 12 ಜನ ಮಕ್ಕಳು ವೆಂಟಿಲೇಟರ್‌ನಲ್ಲಿ ಇರುವ ದಾರುಣ ಪರಿಸ್ಥಿತಿ ನೋಡಿದರೆ ಮರುಕ ಬರುತ್ತದೆ. ಒಂದು ವೇಳೆ ಖಾಸಗಿ ಸುಸಜ್ಜಿತ ಆಸ್ಪತ್ರೆಗಳು ಇಲ್ಲದೇ ಕೇವಲ ಸರ್ಕಾರಿ ಆಸ್ಪತ್ರೆಗಳನ್ನು ನಂಬುವ ಸ್ಥಿತಿ ನಿರ್ಮಾಣವಾಗಿದ್ದರೆ ಬದುಕು ಮತ್ತಷ್ಟು ಘೋರವಾಗುತ್ತಿತ್ತು.

**ಶ್ರೀ ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ನಾಯಕರು ಮಾತನಾಡುವುದನ್ನು ಒಪ್ಪಿಕೊಂಡರೂ, ನಮ್ಮ ಜಿಲ್ಲೆಯಲ್ಲಿ ನಾನು ಇರಬಹುದು ಅಥವಾ ಜಿಲ್ಲೆಯ ಶಾಸಕರು ಇರಬಹುದು ಅಥವಾ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾಜಿ ಮುಖ್ಯಮಂತ್ರಿಗಳೆಲ್ಲರೂ ಬಹಳ ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಎಲ್ಲರೂ ಸತ್ತು ಹೋಗಲಿ ಎಂದು ಯೋಚನೆ ಮಾಡಿದವರಲ್ಲ. 14ನೇ ತಾರೀಖು ಅಧಿವೇಶನವನ್ನು ಮುಗಿಸಿ ಬೆಳಿಗ್ಗೆಯೇ ಅಲ್ಲಿಗೆ ಹೋಗಿದ್ದೇವೆ. ಅಲ್ಲಿ ಕಿಚ್ಚುಗುತ್ತಿ ಮಾರಮ್ಮನ ದೇವಸ್ಥಾನ ಕಾಡಿನಲ್ಲಿದೆ. ಆ ದೇವಸ್ಥಾನ ಕೊಳ್ಳೇಗಾಲಕ್ಕೆ 60 ಕಿ.ಮೀ ಮತ್ತು ಚಾಮರಾಜನಗರಕ್ಕೆ 100 ಕಿ.ಮೀ.ಗಳ ದೂರದ ಹಳ್ಳಿಯಲ್ಲಿದೆ. ಬಹುಶ: ಆ ದಿನ ಗೋಪುರ ಮಾಡಬೇಕು ಎನ್ನುವ ಉದ್ದೇಶ ಇತ್ತು. ಇಬ್ಬರೂ ಸ್ವಾಮೀಜಿಗಳಲ್ಲಿ ಸಾಲೂರು ಮಠದ ಸ್ವಾಮೀಜಿಗಳು ಅದನ್ನು 20 ವರ್ಷಗಳಿಂದ ನೋಡುತ್ತಿದ್ದರು. ಆದರೆ ಆ ದಿನ ದೊಡ್ಡವರು ಏಕಾಏಕಿ ಬಂದು ಪೂಜೆ ಮಾಡುವಾಗ ಘಟನೆ ಆಗಿದೆ ಎಂಬುದು ಒಂದು ವಿಷಯ. ಇಂತಹ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಯಾವತ್ತೂ ನಡೆದಿಲ್ಲ. ಇದೊಂದು ಹೇಯವಾದ ಘಟನೆ. ನಮ್ಮಲ್ಲಿ ವೆಂಟಿಲೇಟರ್ ಸಹ ಇದೆ.

ಪ್ರಸಾದದಲ್ಲಿ ವಿಷ ಪ್ರಾಶನವಾಗಿದೆ ಎಂದು ಗೊತ್ತಾದ ವಿಷಯ ಅಲ್ಲ. ಆದರೂ ಸ್ವಲ್ಪ ತಡವಾದರೂ ಕೊಳ್ಳೇಗಾಲದ ಹತ್ತಿರ ಇರುವ ಕಾಮಗೆರೆಯ ಹೋಲಿ ಆಸ್ಪತ್ರೆಗೆ ಸೇರಿಸಲಾಗಿದೆ. ಆಸ್ಪತ್ರೆಗೆ ಬರುವಾಗಲೇ 8 ಜನರು ಸಾವನ್ನಪ್ಪಿದ್ದಾರೆ. ಹಾಗಾಗಿ ಉಳಿದ ಜನರನ್ನು ತಕ್ಷಣವೇ ಮೈಸೂರಿನಲ್ಲಿ 13 ಆಸ್ಪತ್ರೆಗಳಿಗೆ ಸೇರಿಸಿ, ಬಹಳ ಎಚ್ಚರಿಕೆ ಕೆಲಸಗಳನ್ನು ಮಾಡಿದ್ದೇವೆ. ಹಾಗಾಗಿ ಸರ್ಕಾರವಾಗಲೀ, ಸಚಿವರಾಗಲಿ ನಿರ್ಲಕ್ಷ್ಯತೆ ವಹಿಸಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ರಾತ್ರಿಯೇ ಬಂದು ಎಲ್ಲವನ್ನು ವಿಚಾರಿಸಿದ್ದಾರೆ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಎಲ್ಲಾ ವಿಚಾರಗಳನ್ನು ವಿರೋಧ ಮಾಡುವುದಕ್ಕೆ ಆಗುವುದಿಲ್ಲ. ಅವರು ಹೇಳಿರುವ ವಿಚಾರಗಳಲ್ಲಿ ಸಮಂಜಸವೂ ಇದೆ. ಅಲ್ಲಿಗೆ ತದನಂತರ ಅಲ್ಲಿಗೆ ಹೋಗಿರುವುದು ಸತ್ಯ. ಬಹಳ ದಾರುಣ ಘಟನೆ ನಡೆದಿದ್ದು, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಕ್ರಮ ಕೈಗೊಂಡಿರುವುದು ಬೇರೆ ವಿಚಾರ. ಆದರೆ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ವೆಂಟಿಲೇಟರ್ ಇರಬೇಕಾಗಿತ್ತು.

**ಶ್ರೀ ಪುಟ್ಟರಂಗಶೆಟ್ಟಿ:–** ತಕ್ಷಣವೇ ಹೋಲಿ ಆಸ್ಪತ್ರೆಗೆ ಸೇರಿಸಿದ್ದೇವೆ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ವಿರೋಧ ಪಕ್ಷದ ನಾಯಕರ ಮಾತುಗಳು ವಿರೋಧ ಮಾಡುವ ಗುರಿ ಹೊಂದಿದೆ ಎಂದು ನಾನು ಹೇಳುವುದಿಲ್ಲ. ಕೆಲವೊಂದು ವಿಚಾರಗಳನ್ನು ಒಪ್ಪಬೇಕಾಗುತ್ತದೆ. ಆ ದೇವಸ್ಥಾನವನ್ನು ಮುಜರಾಯಿಗೆ ಸೇರಿಸಬೇಕು ಎಂದು ಹೇಳಿರುವುದು ಸೂಕ್ತವಾದ ಸಲಹೆ ಎಂದು ಹೇಳಬಯಸುತ್ತೇನೆ. ನಂತರ ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀ ಪುಟ್ಟರಾಜುರವರು, ಮಾನ್ಯ ಮುಖ್ಯಮಂತ್ರಿಗಳೆಲ್ಲರೂ ಸೂಕ್ತ ಕ್ರಮ ಕೈಗೊಂಡಿದ್ದಾರೆ. ಆದರೂ ಇಂತಹ ಘಟನೆ ನಡೆದಾಗ ವೆಂಟಿಲೇಟರ್ ಇದ್ದಿದ್ದರೆ ಜೀವ ಉಳಿಯುತ್ತಿತ್ತು ಎಂಬುದು ಮಾನ್ಯ ವಿರೋಧ ಪಕ್ಷದ ನಾಯಕರ ಅಳಲಾಗಿದೆ. ಇನ್ನು ಮುಂದೆ ಜಿಲ್ಲಾಸ್ಪತ್ರೆಗಳಲ್ಲಿ ವೆಂಟಿಲೇಟರ್ ವ್ಯವಸ್ಥೆ ಇರಬೇಕೆಂಬುದು ನನ್ನ ಆಗ್ರಹವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಘಟನೆಗೆ ಸರ್ಕಾರ ಕಾರಣವಲ್ಲ, ಘಟನೆ ನಡೆದ ನಂತರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಸರ್ಕಾರ ವಿಫಲವಾಗಿದೆ. ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಇಲ್ಲ, ವೈದ್ಯಾಧಿಕಾರಿಗಳು ಇಲ್ಲ, ಸಿಬ್ಬಂದಿಗಳು ಇಲ್ಲ, ಅಂಬುಲೆನ್ಸ್‌ಗಳಲ್ಲಿ ವೆಂಟಿಲೇಟರ್ ಸಮರ್ಪಕವಾಗಿ ಇಲ್ಲ, ಆನಂತರ ಕೊಳ್ಳೇಗಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅದು ಎಷ್ಟು ದೂರ ಇದೆ ಎಂದು ನಾನು ಗೂಗಲ್‌ನಲ್ಲಿ ನೋಡಿದೆ. ಮಾನ್ಯ ಸಚಿವರಿಗೆ ಇರುವಷ್ಟು ಅಲ್ಲಿನ ಸ್ಥಳದ ಪರಿಚಯ ನನಗೆ ಇಲ್ಲ. ಅವರು ಮಂತ್ರಿಗಳಾಗಿ ಸರ್ಕಾರದ ಪರವಾಗಿ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಎರಡು ವೆಂಟಿಲೇಟರ್‌ಗಳು ಇದ್ದು, ಅವು ಹಾಳಾಗಿರುವುದು ನಿಜವೋ ಎಂಬುದನ್ನು ತಿಳಿಸಲಿ.

**ಶ್ರೀ ಪುಟ್ಟರಂಗಶೆಟ್ಟಿ:–** ಇಲ್ಲ, ಅಲ್ಲಿ ನಾಲ್ಕು ವೆಂಟಿಲೇಟರ್‌ಗಳು ಇವೆ. ನಾಲ್ಕು ರೆಡಿ ಇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ ಮಂತ್ರಿಗಳಿಗೆ ಇರುವ ಮಾಹಿತಿ ಪ್ರಕಾರ ನಾಲ್ಕು ವೆಂಟಿಲೇಟರ್‌ಗಳು ಇವೆ. ಈ ನಾಲ್ಕು ಒಂದು ಜಿಲ್ಲೆಗೆ ಸಾಕೇ? ಅತ್ಯಂತ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರನ್ನು ಹೊಂದಿರುವ ಜಿಲ್ಲೆಯಲ್ಲಿ ನಾಲ್ಕು ವೆಂಟಿಲೇಟರ್‌ಗಳು ಮಾತ್ರ ಇವೆ ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಾದರೆ ಸರ್ಕಾರವು ಎಲ್ಲಿದೆ? ಆರೋಗ್ಯ ಇಲಾಖೆ ಎಲ್ಲಿದೆ? ಜಿಲ್ಲಾಸ್ಪತ್ರೆಯ ಕೆಲಸಗಳೇನು?

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ನಮ್ಮಲ್ಲಿ ರೂ.113 ಕೋಟಿ ವೆಚ್ಚದಲ್ಲಿ ಜಿಲ್ಲಾಸ್ಪತ್ರೆ ನಿರ್ಮಾಣ ಆಗುತ್ತಿದ್ದು, ಎಲ್ಲವನ್ನು ಅಳವಡಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಸರ್ಕಾರದ ಉತ್ತರ ಕೇಳಿ. ಸರ್ಕಾರವಾಗಿ ಉತ್ತರ ಕೊಡುವ ಅವರು ಹೋದವರೆಲ್ಲರೂ ಹೋಗಿ ಆಯಿತು, ಇನ್ನು ಆಸ್ಪತ್ರೆ ಮಾಡುತ್ತೇವೆ, ಆಂಬುಲೆನ್ಸ್ ಮಾಡುತ್ತೇವೆ ಎಂದು ಹೇಳಲಿ. ನಾನು ಅದನ್ನು ಕೇಳುವುದಿಲ್ಲ. ಈ 14 ಜನ ಪ್ರಾಣ ಬಿಟ್ಟಾಗ ಒಂದು ಸರ್ಕಾರ, ಆರೋಗ್ಯ ಇಲಾಖೆ ಒಂದೆರಡು ಗಂಟೆಗಳಲ್ಲಿ ಅಲ್ಲಿ ನಿಂತು ಎಲ್ಲರೂ ಕೆಲಸ ಮಾಡಿದ್ದರೆ ಕನಿಷ್ಠ ಐದಾರು ಜನರ ಜೀವ ಉಳಿಯುತ್ತಿತ್ತು ಎಂದು ನಿಖರವಾದ ಮಾಹಿತಿ ಇದೆ. ಇದನ್ನು ಇಲ್ಲ ಎಂದು ಅವರು ಹೇಳುತ್ತಾರೆಯೇ? ಮೃತರಾದವರಿಗೆ ಸರ್ಕಾರವು ರೂ.10 ಲಕ್ಷಗಳ ಪರಿಹಾರ ಘೋಷಣೆ ಮಾಡಲಿ. ಯಾವುದೇ ದೇವಸ್ಥಾನವಾದರೂ ಸರ್ಕಾರ ನಡೆಸುವ ಇವರು ತಕ್ಷಣ ಎ.ಸಿ. ರವರಿಂದ ನೋಟೀಸ್ ಕೊಟ್ಟು, ದೇವಸ್ಥಾನವನ್ನು ವಶಪಡಿಸಿಕೊಂಡು ತಹಶೀಲ್ದಾರ್ ಅಥವಾ ಎ.ಸಿ. ರವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ, ಸಮಗ್ರ ತನಿಖೆ ಮಾಡಬೇಕು.

**ಸಭಾಪತಿಯವರು:–** ಈಗ ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 3–30ರ ವರಗೆ ಮುಂದೂಡಲಾಗಿದೆ.

**(ಸದನವು 2 ಗಂಟೆ 29 ನಿಮಿಷಗಳಿಗೆ ಮುಂದೂಡಲ್ಪಟ್ಟಿತು, ಪುನ: ಭೋಜನ ವಿರಾಮದ ನಂತರ 3 ಗಂಟೆ 30 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(486) 17.12.2018 3.40 ಪಿಕೆ:ವಿಕೆ

**(ಭೋಜನ ವಿರಾಮದ ನಂತರ ಸದನವು 3 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಪತಿಗಳಾದ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಪೀಠವನ್ನು ಅಲಂಕರಿಸಿದರು)**

**8. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ(ಕೃಷಿ ಸಚಿವರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):–**ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ(ಕೃಷಿ ಸಚಿವರು)(ಉನ್ನತ ಶಿಕ್ಷಣ ಸಚಿವರ ಪರವಾಗಿ):–ಮಾನ್ಯ ಸಭಾಪತಿಯವರೇ,** ರೈ ತಾಂತ್ರಿಕ ವಿಶ್ವವಿದ್ಯಾಲಯ; ಈ ಖಾಸಗಿ ವಿಶ್ವವಿದ್ಯಾಲಯವು 2013ರಲ್ಲಿ ಅಸ್ತಿತ್ವಕ್ಕೆ ಬಂತು. ಈ ವಿಶ್ವವಿದ್ಯಾಲಯದಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಬೋಧಿಸುತ್ತಿದ್ದ ವಿಷಯಗಳನ್ನು ಕೈಬಿಡಬೇಕು ಎಂದು ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಂದ ಬಹು ದೊಡ್ಡ ಮಟ್ಟದಲ್ಲಿ ಹೋರಾಟ ನಡೆಯಿತು. ತಮಗೂ ಗೊತ್ತಿರುವ ಹಾಗೆ ರಾಜ್ಯದಲ್ಲಿ ಸುಮಾರು 6 ತೋಟಗಾರಿಕೆ, ಕೃಷಿ ಮತ್ತು ಪಶುಸಂಗೋಪನಾ ವಿಶ್ವವಿದ್ಯಾಲಯಗಳು ಇವೆ. ಇವೆಲ್ಲವೂ ಕೂಡ ಕೇಂದ್ರದ ಐಸಿಎಆರ್ ಮಾನದಂಡಗಳನ್ನನುಸರಿಸಿ ಕಾರ್ಯ ನಿರ್ವಹಿಸುತ್ತವೆ. ಆದರೆ, 2013ರಲ್ಲಿ ಖಾಸಗಿ ವಿಶ್ವವಿದ್ಯಾಲಯವಾಗಿ ರೈ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಟ್ಟ ಸಂದರ್ಭದಲ್ಲಿ, ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ವಿಷಯಗಳನ್ನು ಬೋಧಿಸಬಹುದೆಂದು ಅನುಮತಿ ಕೊಟ್ಟಿದ್ದಾರೆ. ಈ ವಿಶ್ವವಿದ್ಯಾಲಯದವರು ಐಸಿಎಆರ್ ನಿಯಮಗಳನ್ನು ಪಾಲಿಸದೆ, ವಿದ್ಯಾರ್ಥಿಗಳನ್ನು ಭರ್ತಿ ಮಾಡಿಕೊಳ್ಳುವಾಗ ಸಿಇಟಿ ವ್ಯಾಪ್ತಿಗೂ ಒಳಪಡಿಸದೆ ನೇರವಾಗಿ ಪ್ರವೇಶ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡೊನೇಷನ್ಸ್ ಕಲೆಕ್ಟ್ ಮಾಡಿದ್ದಾರೆ. ಅಲ್ಲದೇ, ಐಸಿಎಆರ್ ಗೈಡ್‌ಗಳನ್ನು ಬಹಳಷ್ಟು ಉಲ್ಲಂಘನೆ ಮಾಡಿದ್ದಾರೆ. ಹಾಗಾಗಿ, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಇದಕ್ಕೆ ಪ್ರತಿರೋಧ ವ್ಯಕ್ತವಾಯಿತು. ಈ ಕುರಿತು ಸರ್ವ ಪಕ್ಷಗಳ ಸಭೆಯನ್ನು ಕರೆದು, ವಿಶ್ವಾಸಕ್ಕೆ ತೆಗೆದುಕೊಂಡು ಒಂದು ತಿದ್ದುಪಡಿ ತರಬೇಕೆಂದು ತೀರ್ಮಾನಿಸಿ ಹಿಂದಿನ ಅಧಿವೇಶನದಲ್ಲಿ ತಿದ್ದುಪಡಿ ತರಲಾಯಿತು. ಕೆಳಮನೆಯಲ್ಲಿ ಈ ತಿದ್ದುಪಡಿ ವಿಧೇಯಕ ಪಾಸ್ ಕೂಡ ಆಯಿತು. ಈಗ ಮೇಲ್ಮನೆಯಲ್ಲಿ ಇದಕ್ಕೆ ಅಂಗೀಕರ ಸಿಗಬೇಕಿರುವುದರಿಂದ ಸದರಿ ವಿಧೇಯಕವನ್ನು ಮಂಡಿಸುತ್ತಿದ್ದೇನೆ.

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):**-ಮಾನ್ಯ ಸಭಾಪತಿಯವರೇ, ಸರ್ಕಾರ ಒಳ್ಳೆಯ ತಿದ್ದುಪಡಿಯನ್ನು ತಂದಿದೆ. ಸದರಿ ತಿದ್ದುಪಡಿ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಹೋದ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ವ್ಯಾಪಕವಾಗಿ, ದೊಡ್ಡ ಮಟ್ಟದಲ್ಲಿ ಚರ್ಚೆಯಾಯಿತು. ಪ್ರೈವೇಟ್ ಯುನಿರ್ವಸಿಟಿ ಆ್ಯಕ್ಟ್ ಅನ್ನು ತರಬೇಕಾದರೆ, ರೈ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ, ಕೃಷಿಗೆ ಸಂಬಂಧಪಟ್ಟ ಎಲ್ಲಾ ಕೋರ್ಸ್‌ಗಳನ್ನು ನಡೆಸಬಹುದು ಎಂದು ಬ್ಲ್ಯಾಂಕ್ ಪರ್ಮಿಷನ್‌ನ ಮಾದರಿಯಲ್ಲಿ ಅನುಮತಿ ಕೊಡುವುದರ ಮೂಲಕ, ಕೃಷಿ ವಿಶ್ವವಿದ್ಯಾಲಯಕ್ಕೆ ಇದ್ದ ಪಾವಿತ್ರತೆಗೆ ಧಕ್ಕೆ ತರುವ ಕೆಲಸ ಮಾಡಿದ್ದೆವು.

(487)17-12-2018 ಡಿಎಸ್-ವಿಕೆ 3.50

ಡಾ:ವೈ.ಎ.ನಾರಾಯಣಸ್ವಾಮಿ(ಮುಂದು):-
ಮಾನ್ಯ ಪರಮೇಶ್ವರ್‌ರವರು ಕೃಷಿಯಲ್ಲಿ ಪಿ.ಹೆಚ್.ಡಿ. ಮಾಡಿದ್ದಾರೆ. ನಾನು ಬಿ.ಎಸ್.ಸಿ. ಯಲ್ಲಿ ಒಂದು ವರ್ಷ ಕೃಷಿಯನ್ನು ಓದಿದ್ದೇನೆ. ಅದನ್ನು ಪೂರ್ತಿ ಮಾಡದೆ ಬಿಇ, M.Tech ಮಾಡಿ, ಪಿ.ಹೆಚ್.ಡಿ. ಮಾಡಿದ್ದೇನೆ. ಆದರೆ, ಕೃಷಿ ಪದವಿಯನ್ನು ಪೂರ್ತಿ ಮಾಡುವುದಕ್ಕಾಗಲಿಲ್ಲ. ಇವತ್ತು ನಮ್ಮ ರಾಜ್ಯದ ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ 1350 ಹುದ್ದೆಗಳು ಖಾಲಿ ಇದ್ದರೂ, ಆ Veterinary Council of India ದಿಂದ ಅನುಮತಿಯನ್ನು ತೆಗೆದುಕೊಂಡು intake ಜಾಸ್ತಿ ಮಾಡಿದರೂ ನಮಗೆ ಸಾಧ್ಯವಾಗುತ್ತಿಲ್ಲ. ಎಲ್ಲಾ ವಿಶ್ವವಿದ್ಯಾಲಯಗಳು ಸೇರಿ ಸುಮಾರು 650 ಪದವೀಧರರನ್ನಷ್ಟೇ ನಾವು ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತಿದೆ. ಆದರೆ ರೈ ತಾಂತ್ರಿಕ ವಿಶ್ವವಿದ್ಯಾಲಯದವರು ಕೃಷಿ ವಿಶ್ವವಿದ್ಯಾಲಯದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ICAR (Indian Council of Agriculture Research) ಅವರಿಂದ ಅನುಮತಿಯನ್ನು ಸಹ ತೆಗೆದುಕೊಳ್ಳದೆ, UGC Norms ಅನ್ನು violate ಮಾಡಿ, ಅವರು ಬೇಕಾಬಿಟ್ಟಿ ಒಂದೊಂದು ಕೋರ್ಸ್‌ಗೆ 300-400 ಜನರನ್ನು admission ಮಾಡಿಕೊಂಡು ಈಗಾಗಲೇ ವಿದ್ಯಾರ್ಥಿಗಳ ಒಂದು ಬ್ಯಾಚ್ ಅಲ್ಲಿಂದ ಪದವಿ ಪಡೆದು ಹೊರಗಡೆ ಬಂದುಬಿಟ್ಟಿದೆ. ಹೀಗಾಗಿ ಬಹುಶಃ ಈ ವಿಧೇಯಕವನ್ನು ಕೃಷಿ ವಿಶ್ವವಿದ್ಯಾಲಯದ ಯಾವ ಒಂದು ಭವಿಷ್ಯವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನಸ್ಸಿನಲ್ಲಿಟ್ಟುಕೊಂಡು ತಂದಿದ್ದರು; ಕೃಷಿಗೆ ಪೂರಕವಾದ ವಾತಾವರಣ ಸೃಷ್ಟಿ ಮಾಡುವುದಕ್ಕೆ R&D ಮುಖಾಂತರ ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಬೇಕೆನ್ನುವ ಆಸೆಯನ್ನಿಟ್ಟುಕೊಂಡು ಈ ಕೃಷಿ ವಿಶ್ವವಿದ್ಯಾಲಯ ಏನು ಕೆಲಸ ಮಾಡುತ್ತಿದೆಯೋ, ಅದಕ್ಕೆ ಬಹಳ ದೊಡ್ಡ ಪೆಟ್ಟು ಬಿದ್ದಿತ್ತು. ಇವತ್ತು ಅದನ್ನು ತೆರವುಗೊಳಿಸುವುದಕ್ಕೆ ಸರ್ಕಾರ ಒಳ್ಳೆಯ ಕಾಯ್ದೆಯನ್ನು ತಂದಿದೆ. ಆದರೆ ಮಾನ್ಯ ಸಚಿವರು ಈ ಸಂದರ್ಭದಲ್ಲಿ ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದು, ಈಗಾಗಲೇ ರೈ ತಾಂತ್ರಿಕ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದು ಹೊರ ಬಂದಿರುವ ವಿದ್ಯಾರ್ಥಿಗಳ ಭವಿಷ್ಯ ಏನು? ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಎರಡನೆಯದು, ಇನ್ನು ಮುಂದೆ ಯಾವುದೇ ವಿಶ್ವವಿದ್ಯಾಲಯಗಳಲ್ಲಿ Traditional University ಗಳಲ್ಲಿರುವ ಕೋರ್ಸ್‌ಗಳ ಬಗ್ಗೆ ಅನುಮತಿಯನ್ನು ಕೊಡಬೇಕಾದರೆ ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆ ಮಾಡಿ ಅನುಮತಿಯನ್ನು ಕೊಡಬೇಕು. ಒಂದು ಸಣ್ಣ ತಪ್ಪಿನಿಂದ ಉದ್ಭವಿಸಿರುವಂತಹ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಇವತ್ತು ನಾವು ದೊಡ್ಡ ಮಟ್ಟದಲ್ಲಿ ಯೋಚನೆ ಮಾಡಬೇಕಾಗಿದೆ. ಈಗಾಗಲೇ ಅಲ್ಲಿ 4 ಬ್ಯಾಚ್‌ಗಳಲ್ಲಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಒಂದು ಬ್ಯಾಚ್ ಈಗಾಗಲೇ ಪದವಿ ಪಡೆದು ಹೊರಗಡೆ ಬಂದುಬಿಟ್ಟಿದೆ. ಆ ಪದವೀಧರರು ಕೋರ್ಟ್‌ಗೆ ಹೋಗುತ್ತಾರೆ, ತಡೆಯಾಜ್ಞೆಯನ್ನು ತೆಗೆದುಕೊಂಡು ಬರುತ್ತಾರೆ. ಅವರ ಭವಿಷ್ಯದ ಬಗ್ಗೆ ಚರ್ಚೆ ಮಾಡುತ್ತಾರೆ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಹೆಜ್ಜೆ ಇಡಬೇಕೆಂದು ಮನವಿ ಮಾಡಿಕೊಳ್ಳುತ್ತಾ, ಈ ವಿಧೇಯಕವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ವಿಧೇಯಕ ವಿಧಾನ ಪರಿಷತ್ತಿಗೆ ಬಂದಂತಹ ಸಂದರ್ಭದಲ್ಲಿ ಕೆಳಮನೆಯಲ್ಲಿ ಪಾಸ್ ಆಗಿದ್ದರೂ ಕೂಡ ಅದರಲ್ಲಿದ್ದಂತಹ ನ್ಯೂನತೆಗಳ ಬಗ್ಗೆ ಇಡೀ ದಿನ ಚರ್ಚೆ ಮಾಡಿದ್ದೇವೆ. ಇವತ್ತು ನಾನು ಮಾನ್ಯ ಉಗ್ರಪ್ಪನವರನ್ನು ನೆನಪಿಸಿಕೊಳ್ಳುತ್ತೇನೆ. ಮಾನ್ಯ ಉಗ್ರಪ್ಪನವರು ಅದರ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದರು. ಅವರು ಯಾವುದೇ ವಿಧೇಯಕ ಬಂದರೂ ಕೂಡ ವಿಧೇಯಕದ ಬಗ್ಗೆ ಮಾತನಾಡುತ್ತಿದ್ದರು. ಈಗ ಮಾನ್ಯ ಉಗ್ರಪ್ಪನವರು ಇಲ್ಲಿ ಇಲ್ಲ, ಅವರನ್ನು ನಾವು ಲೋಕಸಭೆಗೆ ಕಳುಹಿಸಿದ್ದೇವೆ. ಡಾ:ಪರಮೇಶ್ವರ್‌ರವರು ಕೂಡ ಕೃಷಿಯಲ್ಲಿ ಪಿ.ಹೆಚ್.ಡಿ. ಮಾಡಿದ್ದಾರೆ. ಈಗ ಆ ಪದವಿ ಪಡೆದು ಹೊರ ಬಂದಿರುವಂತಹ ವಿದ್ಯಾರ್ಥಿಗಳಿಗೂ ತೊಂದರೆಯಾಗಿದೆ. ಅವರಿಗೆ ಕೆಲಸವೂ ಸಿಗುತ್ತಿಲ್ಲ, ಅವರಿಗೆ ಕೆಲಸ ಕೊಡದಿದ್ದರೆ ಅದು ಮಾನವೀಯತೆಯೂ ಅಲ್ಲ. ಅದರಲ್ಲೂ ಖಾಸಗಿ ಸಂಸ್ಥೆಯವರು, ನಮ್ಮ ಜಿ.ಕೆ.ವಿ.ಕೆ. ಯಲ್ಲಾದರೆ ಅವರಿಗೊಂದು ಬದ್ಧತೆ ಇದೆ, ನಿಯಂತ್ರಣವಿದೆ, ಈ ವಿಶ್ವವಿದ್ಯಾಲಯಕ್ಕೆ ಯಾವುದೇ ನಿಯಂತ್ರಣವಿಲ್ಲ. ಅಲ್ಲಿ ಲಂಗು ಇಲ್ಲ, ಲಗಾಮು ಇಲ್ಲ. ಹಾಗಾಗಿ ಕೆಟ್ಟಿರುವ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಇವತ್ತೇನು ಈ ವಿಧೇಯಕ ತಂದಿದ್ದಾರೆ, ಅದಕ್ಕೆ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತಿದ್ದೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ:ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶಿಕ್ಷಣ ಕ್ಷೇತ್ರದಲ್ಲಿ ಉದ್ದೇಶ ಒಳ್ಳೆಯದು ಇದ್ದರೂ ಕೆಲವೊಮ್ಮೆ ಅನುಷ್ಠಾನದ ಮಟ್ಟದಲ್ಲಿ ನಿರ್ದಿಷ್ಟವಾದಂತಹ ಕಾನೂನುಗಳನ್ನು ಮತ್ತು ಶಾಸನಗಳನ್ನು ತರದಿದ್ದರೆ ಹೇಗೆ ಅನಾಹುತಗಳು ಸಂಭವಿಸಬಹುದು ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ. ಇದರಿಂದ ನಾವು ಈ ಸದನದಲ್ಲಿ ಕಲಿಯತಕ್ಕಂಥದ್ದು ಸಾಕಷ್ಟಿದೆ. ಇದನ್ನು ಇನ್ನಷ್ಟು ಸ್ಪಷ್ಟೀಕರಣಗೊಳಿಸಿ ವಿಶೇಷವಾಗಿ ಇವತ್ತು ಕೃಷಿ ವಲಯದಲ್ಲಿರುವಂತಹ ರೈತಾಪಿ ಮಕ್ಕಳು ಏನಿದ್ದಾರೆ, ಭಾರತ ದೇಶದಲ್ಲಿ ಬಡತನ ನಿರ್ಮೂಲನೆ ಮಾಡಬೇಕಾದರೆ ರೈತಾಪಿ ಮಕ್ಕಳಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿರುವಂಥದ್ದು ಗ್ರಾಮೀಣ ಪ್ರದೇಶದ ಅನ್ನದಾತನ ಮಕ್ಕಳು. ಅವರಿಗೆ ಬೇರೆ ಕ್ಷೇತ್ರದಲ್ಲಿ ಅವಕಾಶ ಸಿಗುವುದಿಲ್ಲವೆನ್ನುವುದು ಒಂದು ಕಾರಣವಾದರೆ, ಇವತ್ತು ಕೃಷಿ ಕ್ಷೇತ್ರ ಅಷ್ಟು ಆಕರ್ಷಕವಾಗಿಲ್ಲ. ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪದವಿಗಳನ್ನು ಮುಗಿಸಿಕೊಂಡು ಬಂದ ಮೇಲೆ ಅವರಿಗೆ ಉದ್ಯೋಗಾವಕಾಶಗಳು ಸಿಗತಕ್ಕಂಥದ್ದು ಅಥವಾ ಸಮಾಜದಲ್ಲಿ ಗೌರವ ಕೊಡುವಾಗಲೂ ಕೂಡ ಕೃಷಿ ಪದವೀಧರರಿಗೆ ಮತ್ತು ಬೇರೆಯವರ ನಡುವೆ ತಾರತಮ್ಯವಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸಮಯದಲ್ಲಿ ತೊಂದರೆಗೊಳಗಾದ ಮಕ್ಕಳ ಭವಿಷ್ಯವನ್ನು ರೂಪಿಸಲು ತಕ್ಷಣ ಅವರಿಗೆ ಒಳ್ಳೆಯದನ್ನು ಮಾಡುವುದರ ಜೊತೆಗೆ ಈಗಾಗಲೇ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ ಹಾಗೆ ಇದು ನ್ಯಾಯಾಲಯಕ್ಕೆ ಹೋಗಿ ಮತ್ತೆ ಅವರ ಭವಿಷ್ಯ 2–3 ವರ್ಷ ಹಾಳಾಗಬಾರದು. ವಯೋಮಿತಿ ಮೀರಿದರೆ ಅವರಿಗೆ ಉದ್ಯೋಗಾವಕಾಶ ಸಿಗಲು ತೊಂದರೆಯಾಗುತ್ತದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಅಡಕೆ, ಕೋಕೋವಾ, ತಂಬಾಕಿಗೆ ಸಂಬಂಧಿಸಿದಂತೆ ಐದು ಸಂಶೋಧನಾ ಕೇಂದ್ರಗಳಿವೆ. 'ಕಿದು' ಎನ್ನುವ ಕಡೆ 300 ಎಕರೆ ಪ್ರದೇಶದಲ್ಲಿ 2 ಕೋಟಿ ಲಾಭ ತರತಕ್ಕಂಥ ಕೃಷಿ ಸಂಶೋಧನಾ ಸಂಸ್ಥೆ, ಉತ್ತಮ ಬೀಜ ತಳಿಗಳ ಸಂಶೋಧನಾ ಸಂಸ್ಥೆಯನ್ನು ನಾನು ನೋಡಿದ್ದೇನೆ. ಈ ಸಂದರ್ಭವನ್ನು ಸದ್ಬಳಕೆ ಮಾಡಿಕೊಂಡು ನಾನು ಮಾನ್ಯ ಪರಮೇಶ್ವರ್‌ರವರಲ್ಲಿ ಹಾಗೂ ಮಾನ್ಯ ಸಚಿವರ ಗಮನಕ್ಕಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಭಾರತ ದೇಶವೇ ಮೆಚ್ಚುವಂಥ, ಹೊಸ ಸಂಶೋಧನಾ ಕೇಂದ್ರಗಳಿಗೆ ಅವಕಾಶ ಕೊಡದೇ ಇರುವ ಹಿನ್ನೆಲೆಯಲ್ಲಿ ಇದನ್ನು ಆಂಧ್ರ ಪ್ರದೇಶಕ್ಕೆ ತೆಗೆದುಕೊಂಡು ಹೋಗಬೇಕೆನ್ನುವ ಹುನ್ನಾರವೂ ಸಹ ನಡೆದಿತ್ತು. ಆದರೆ ಮಾನ್ಯ ವೀರಪ್ಪ ಮೊಯ್ಲಿಯವರು, ಮಾನ್ಯ ದೇವರಾಜ ಅರಸುರುವರು, ಇಂತಹ ಗಣ್ಯರ ಕಾಲದಲ್ಲಿ ಸ್ಥಾಪನೆಯಾಗಿರುವಂಥ ಒಂದು ಸಂಸ್ಥೆ ಇದು. ಅಲ್ಲಿ ಅತ್ಯುತ್ತಮವಾದ ಸ್ಥಳವಿದೆ. ತಾವುಗಳು ಅಲ್ಲಿಗೆ ಭೇಟಿ ಕೊಟ್ಟು ಆ ಸಂಸ್ಥೆಯನ್ನು ಕರ್ನಾಟಕದ ಒಂದು ಪ್ರತಿಷ್ಠಿತ ಸಂಶೋಧನಾ ಸಂಸ್ಥೆಯನ್ನಾಗಿ ಮಾಡಿ, ಎಲ್ಲಾ ಕೃಷಿ ಪದವೀಧರರಿಗೂ ಅಲ್ಲಿ ಅತ್ಯುನ್ನತ ವ್ಯಾಸಂಗಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಸರ್ಕಾರ ಸಕಾಲದಲ್ಲಿ ಎಚ್ಚೆತ್ತುಕೊಂಡು ಈ ಒಂದು ವಿಧೇಯಕವನ್ನು ಸದುದ್ದೇಶದಿಂದ ತಂದಿದೆ. ಹಾಗಾಗಿ ಯಾರೂ ದುರ್ಬಳಕೆ ಮಾಡಿಕೊಳ್ಳದ ರೀತಿಯಲ್ಲಿ ಹಾಗೂ ಕೃಷಿ ವಲಯದಲ್ಲಿರುವಂಥ ಮಕ್ಕಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತಷ್ಟು ನಿರುತ್ತೇಜನಗೊಳಿಸದೆ ಅವರನ್ನು ಉತ್ತೇಜಿಸುವಂಥ ಎಲ್ಲ ಲಕ್ಷಣಗಳಿರುವ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ ಮತ್ತು ಇಂತಹ ಒಂದು ಉತ್ತಮ ವಿಧೇಯಕವನ್ನು ತಂದಿರುವಂತಹ ಸರ್ಕಾರವನ್ನು ಅಭಿನಂದಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇಲ್ಲಿಯೂ ಸಹ ಸರ್ಕಾರ ಸ್ಪಷ್ಟವಾಗಿ ಹೇಳಿಲ್ಲ. "ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದಲ್ಲಿ, ಮೊದಲು ಪ್ರವೇಶ ಪಡೆದ ಕೋರ್ಸುಗಳನ್ನು ಪೂರ್ಣಗೊಳಿಸಿದಂಥ ವಿದ್ಯಾರ್ಥಿಗಳಿಗಾಗಿ ಅಗತ್ಯ ಸೇವೆಗಳನ್ನು ವಿಶ್ವವಿದ್ಯಾನಿಲಯ ಮಾಡತಕ್ಕದ್ದು." ಎಂದು ತಿಳಿಸಲಾಗಿದೆ. ಆದರೆ ಅಗತ್ಯ ಸೇವೆಗಳು ಎಂದರೆ ಏನೆಂದು ಸ್ಪಷ್ಟವಾಗಿ ಸರ್ಕಾರ ನಿರ್ದೇಶನವನ್ನು ಕೊಡದೇ ಇದ್ದರೆ ಇದು ಹೆಚ್ಚಿನ ಗೊಂದಲಕ್ಕೀಡಾಗುತ್ತದೆ ಮತ್ತು ವಿದ್ಯಾರ್ಥಿಗಳು ಬೀದಿ ಪಾಲಾಗುತ್ತಾರೆ. ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ಕೆಲವೊಂದು ಸಲಹೆಗಳನ್ನು ನಾನು ಎರಡು ವರ್ಷಗಳ ಹಿಂದೆಯೇ ಕೊಟ್ಟಿದ್ದೇನೆ. ಇನ್ನು ಮುಂದೆ ಬಿಇ., ಎಂಇ., ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಬರಲಿಕ್ಕಿಲ್ಲ. ಇವತ್ತು ದೇಶ ಕೃಷಿ ಕ್ಷೇತ್ರದಲ್ಲಿ ಅಂದರೆ ಅಡಕೆ, ತೆಂಗು, ಹಿಪ್ಪುನೇರಳೆ ಇಂತಹ ತೋಟಗಾರಿಕೆ ಬೆಳೆಗಳಿರಬಹುದು ಅಥವಾ ಇನ್ನಿತರ ಬೇರೆ ಬೇರೆ ಬೆಳೆಗಳನ್ನು ನಮ್ಮ ಭೂಮಿಯಲ್ಲಿ ಬೆಳೆದು ನಾವು ಹೇಗೆ ಹೆಚ್ಚಿನ ಫಸಲನ್ನು ಪಡೆಯಬಹುದು ಎಂಬುದನ್ನು ಯೋಚಿಸಬೇಕು. ಸ್ನಾತಕೋತ್ತರ ಪದವಿಗಳು ಅಂದರೆ, ಎಂಬಿಬಿಎಸ್ ಮಾಡಿದ ನಂತರ ಎಂಡಿ ಕೋರ್ಸ್‌ಗಳನ್ನು ಹೇಗೆ ಮಾಡುತ್ತಾರೆಯೋ, ಅದೇ ರೀತಿ ಕೃಷಿ ಪದವಿ ನಂತರ ಮುಂದೆ ಎರಡು–ಮೂರು ವರ್ಷ ಉನ್ನತ ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಕೃಷಿ ವಿಶ್ವವಿದ್ಯಾನಿಲಯದಲ್ಲಿಯೂ ಕೂಡ ಉನ್ನತ ಕೋರ್ಸ್‌ಗಳನ್ನು ವ್ಯಾಸಂಗ ಮಾಡುವಂತಹ ವ್ಯವಸ್ಥೆಯನ್ನು ಕಲ್ಪಿಸದೇ ಇದ್ದರೆ, ಸುಮಾರು 20 ವರ್ಷಗಳ ನಂತರ ಖಂಡಿತವಾಗಿಯೂ ನಮ್ಮಲ್ಲಿ ನೀರಿಗೆ ಹಾಹಾಕಾರ ಬರುತ್ತದೆ. ಇವರುಗಳಿಗೆ ಕೃಷಿಯಲ್ಲಿ ತಂತ್ರಜ್ಞಾನವನ್ನು ಕಲಿಸುವುದರ ಜೊತೆಗೆ ನೀರಿನ ಸದ್ಬಳಕೆಯನ್ನು ಹೇಗೆ ಮಾಡಬೇಕೆಂಬುದನ್ನು ಸಹ ತಿಳಿಸಬೇಕು. ಆ ತಂತ್ರಜ್ಞಾನವನ್ನು ಇಸ್ರೇಲ್‌ನಿಂದ ತರುತ್ತೀರೋ ಅಥವಾ ಅಮೆರಿಕಾದಿಂದ ತರುತ್ತೀರೋ ನನಗೆ ಗೊತ್ತಿಲ್ಲ. ಇದನ್ನು ನಾನು ಪ್ರಥಮವಾಗಿ ಸ್ವಾಗತ ಮಾಡಿದ್ದೇನೆ. ಇಸ್ರೇಲ್ ಎಂದರೆ ಮುಸ್ಲಿಮರಿಗೆ ಆಗುವುದಿಲ್ಲ ಎನ್ನುತ್ತಾರೆ, ಹಾಗೇನೂ ಇಲ್ಲ. ಶತ್ರುವಾಗಿದ್ದರೂ ಸಹ ಅವನಿಂದ ಮಾನವ ಕುಲಕ್ಕೆ ಒಳ್ಳೆಯದಾಗುತ್ತದೆ; ಕೃಷಿಗೆ ಒಳ್ಳೆಯದಾಗುತ್ತದೆ ಎಂದರೆ, ಅಲ್ಲಿನ ತಾಂತ್ರಿಕತೆಯನ್ನು ಬಳಸಿಕೊಳ್ಳಲು ನಾವು ಹಿಂಜರಿಯಬಾರದು.

ಎರಡನೆಯದಾಗಿ ಈ ವಿದ್ಯಾರ್ಥಿಗಳನ್ನು ತಕ್ಷಣವೇ ಒಂದೊಂದು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕೃಷಿಕ ಸಹಾಯಕರಾಗಿ ನೇಮಕಾತಿ ಮಾಡಿದರೆ, ಆ ರೈತರಿಗೆ ಯಾವ ಬೆಳೆಯನ್ನು ಯಾವ ಸಮಯದಲ್ಲಿ ಬಿತ್ತನೆ ಮಾಡಬೇಕು, ಯಾವ ತಳಿಯನ್ನು ಬಿತ್ತನೆ ಮಾಡಿದರೆ ಎಷ್ಟು ಇಳುವರಿ ಬರುತ್ತದೆ ಎನ್ನುವುದರ ಬಗ್ಗೆಯೂ ಸಹ ಅವರು ತಿಳುವಳಿಕೆ ನೀಡುವಂತಹ ವ್ಯವಸ್ಥೆಯಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತು ಈ ವಿಧೇಯಕವನ್ನು ತಂದಿರುವುದು ಸಂತೋಷದ ವಿಚಾರ. ಕಳೆದ ಬಾರಿಯೂ ಸಹ ನಾವು ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದೆವು. ಇವತ್ತು ಈ ವಿಧೇಯಕ ಸಂಪೂರ್ಣವಾಗಿ, ಅವಿರೋಧವಾಗಿ ಅನುಮೋದನೆಗೊಳ್ಳುತ್ತದೆ. ಅನುಮೋದನೆಗೊಂಡ ನಂತರ ಪ್ರಸ್ತಾವನೆಯಲ್ಲಿ, ಎಲ್ಲದಕ್ಕೂ ಐಎಎಸ್, ಐಪಿಎಸ್ ಎನ್ನುವುದಕ್ಕಿಂತ ಇದರಲ್ಲಿ ಮಾತ್ರ ಕೃಷಿಯಲ್ಲಿ ಪರಿಣಿತಿಯನ್ನು ಹೊಂದಿರುವವರು, ಇಲಾಖೆಯಲ್ಲಿ ಬಡ್ತಿಯನ್ನು ಹೊಂದಿರುವವರಿಗೆ ಇದನ್ನು ಒಪ್ಪಿಸಿದರೆ ಅವರು ತಮ್ಮ ಅನುಭವದಿಂದ ಅದಕ್ಕೆ ಒಂದು ದಿಕ್ಕನ್ನು ಸೂಚಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಾನು ಏನು ಹೇಳಿದ್ದೇನೆಯೋ, ಅದನ್ನು ಎರಡು ವರ್ಷಗಳ ಹಿಂದೆ ವರದಿಯಲ್ಲಿಯೂ ಸಹ ತಿಳಿಸಿದ್ದೇನೆ. ನಾವು ಕೃಷಿ ಕ್ಷೇತ್ರದ ಮೇಲೆ ಅವಲಂಬಿತರಾಗಬೇಕು. ಇವತ್ತು ನಮ್ಮ ದೇಶದಲ್ಲಿ ಆಹಾರದ ಹಾಹಾಕಾರವಿಲ್ಲ. ಏಕೆಂದರೆ, ರೂಪಾಯಿ ಕೊಟ್ಟರೆ ನಮಗೆ ಅನ್ನ ಸಿಗುತ್ತಿದೆ. ಆದರೆ ಡಾಲರ್ ಕೊಟ್ಟು ಅನ್ನ ಖರೀದಿಸುವುದಾದರೆ ಇಲ್ಲಿ ಅಶಾಂತಿ ಪ್ರಾರಂಭವಾಗುತ್ತದೆ. ಆದ್ದರಿಂದ ರೂಪಾಯಿಗೆ ನಮಗೆ ಆಹಾರ ಸಿಗಬೇಕೆಂದರೆ, ನಮ್ಮ ಕೃಷಿ ಪದ್ಧತಿ, ಬೆಳೆ ಮತ್ತು ಸಂಶೋಧನೆ, ನಮ್ಮ ಸಹೋದರಿ ಹೇಳಿದ ಹಾಗೆ ಆ ಸಂಶೋಧನಾ ಸಂಸ್ಥೆ ಏನಿದೆ, ಅದಕ್ಕೆ ಸರ್ಕಾರ ಹೆಚ್ಚಿನ ಹಣವನ್ನು ಖರ್ಚು ಮಾಡಿ ಮಾಡತಕ್ಕಂಥದ್ದಾಗಬೇಕು.

(488)17–12–2018(4–00)ಬಿಕೆಪಿ–ಬಿಎನ್ಎಸ್

**ಶ್ರೀ ಸಿ.ಎಂ. ಇಬ್ರಾಹಿಂ(ಮುಂದು. .)**

ಬೆಳೆಯನ್ನು ಬೆಳೆದ ಮೇಲೆ by-product ಏನು ಬರುತ್ತದೆ, ಈಗ ಅದನ್ನು Arecanut tea ಎಂದು ಹೇಳಿ ಪ್ರಾರಂಭ ಮಾಡಿದ್ದಾರೆ. ಅಡಿಕೆಯಿಂದ ಮಾಡತಕ್ಕಂತಹ ಟೀ ಅನ್ನು ನೀವು ಎರಡು ಬಾರಿ ಕುಡಿದರೆ ಷುಗರ್ ಲೆವಲ್ ಸಹಜ ಸ್ಥಿತಿಗೆ ಬರುತ್ತದೆ ಎಂದು ಹೇಳಿ ಸಂಶೋಧನೆಯಿಂದ ತಿಳಿದು ಬಂದಿದೆ. ಹೀಗಾಗಿ, ಜನರು ಇವತ್ತು ಅದನ್ನು ಒಪ್ಪಿಕೊಂಡಿದ್ದಾರೆ. ಈಗ ಅದು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಂದಿದೆ. ಅಡಿಕೆ, ಗುಟ್ಕಾ, ತಂಬಾಕು ಎಂದರೆ ಮೊದಲು ಭಯ ಪಡುತ್ತಿದ್ದರು. ಅಡಿಕೆ ಬೆಳೆ ಎಂದು ಹೇಳಿದರೆ ಗಾಂಜಾ ಬೆಳೆ ಎನ್ನುವ ರೀತಿಯಲ್ಲಿ ತಂದಿಟ್ಟಿದ್ದರು. ಈಗ ಅಡಿಕೆಯಿಂದ ಟೀ ಮಾಡುವುದನ್ನು ಪ್ರಾರಂಭ ಮಾಡಿದ ಮೇಲೆ ಏನಾಗಿದೆ ಎಂದು ಹೇಳಿದರೆ ಅಡಿಕೆ ಬೆಲೆ ಸ್ವಲ್ಪ ಹೆಚ್ಚಾಗಿ ರೈತರಿಗೆ ಒಳ್ಳೆಯ ಬೆಲೆ ಸಿಕ್ಕುತ್ತಿದೆ. ಆದ್ದರಿಂದ, ನಾನು ಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಕಳೆದ ಸಲ ಇದರ ವಿಚಾರವಾಗಿ ಚರ್ಚೆ ಮಾಡಲಾಗಿತ್ತು. ಈ ಸದನದಲ್ಲಿ ಈಗ ಉಗ್ರಪ್ಪನವರು ಇಲ್ಲವೆಂದರೆ ಅವರು ಅಲ್ಲಿ ಶ್ರೀಮಾನ್ ಮೋದಿಯವರನ್ನು ನೋಡಲಿಕ್ಕೆ ಹೋಗಿದ್ದಾರೆಂದು ತಿಳಿದುಕೊಳ್ಳಬೇಕು. ಇವತ್ತು ಈ ಬಿಲ್ ಅನ್ನು ಸರ್ವಾನುಮತದಿಂದ ಪಾಸ್ ಮಾಡಬೇಕೆಂದು ಹೇಳಿ ನಾನು ನನ್ನ ಅಭಿಮತವನ್ನು ವ್ಯಕ್ತ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಕೃಷಿ ಸಚಿವರು ಇಲ್ಲಿಯೇ ಇದ್ದಾರೆ. ಇದರಲ್ಲಿ ವಿಶೇಷವಾಗಿ Indian Council of Agricultural Research (I.C.A.R.) ಅದರ ಅನುಮತಿಯನ್ನು ತೆಗೆದುಕೊಳ್ಳದೆಯೇ Rai



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Institutions ಅನೇಕ ಕೋರ್ಸ್‌ಗಳನ್ನು ನಡೆಸುತ್ತಿತ್ತು, ಮತ್ತೆ ಬಹಳ commercialized fee structure ಅನ್ನು ಅವರು ಇಟ್ಟುಕೊಂಡಿದ್ದರು. ಅದರ ಪರಿಣಾಮವಾಗಿ ನಮ್ಮ ಸರ್ಕಾರಿ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಿರೋಧ ಮಾಡಿದ್ದರು. ಅಲ್ಲಿನ ವಿದ್ಯಾರ್ಥಿಗಳು ಸಹ ವಿರೋಧ ಮಾಡಿದ್ದರು. ಈ ನಿಟ್ಟಿನಲ್ಲಿ ಸರ್ಕಾರ ಎಚ್ಚೆತ್ತುಕೊಂಡು, ಅದಕ್ಕೊಂದು ವಿಧೇಯಕವನ್ನು ತರುತ್ತಿರುವುದನ್ನು ನಾನು ಅತ್ಯಂತ ಮನಃಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದೇನೆ. ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ॥ ಜಿ.ಪರಮೇಶ್ವರ್‌ರವರು ಸಹ ಸದನದಲ್ಲಿದ್ದಾರೆ. ನಮ್ಮ ರಾಜ್ಯದಲ್ಲಿ ಶಿಕ್ಷಣ ಎಷ್ಟು commercialized ಆಗಿದೆ ಎನ್ನುವುದು ಅವರಿಗೆ ಗೊತ್ತಿದೆ. ಅದಕ್ಕೂ ಮುಂದೆ ಬಿಲ್ ತರುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತಾ, ಈ ಬಿಲ್ ಅನ್ನು ನಾನು ಸ್ವಾಗತ ಮಾಡುತ್ತೇನೆ ಮತ್ತು ಈ ಬಿಲ್‌ಗೆ ಅನುಮೋದನೆಯನ್ನು ಕೊಡುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–**ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಅನೇಕ ಕೋರ್ಸ್‌ಗಳಿವೆ, right from Medical, Engineering, Law, ಇರಬಹುದು. ಆದರೆ, ಇವತ್ತು demand and supply ಮಾಡುವುದರಲ್ಲಿ equal ಆಗಿ ನಿರ್ವಹಣೆ ಮಾಡಿರುವಂತಹ ಕೋರ್ಸ್‌ಗಳಲ್ಲಿ B.Sc., (Agriculture) is one among them. ಮತ್ತೆ, ಯಾರು B.Sc., (Agriculture) ಮಾಡಿದ್ದಾರೆ, ಅವರಿಗೆ ನಿರುದ್ಯೋಗ ಉಂಟಾಗಿರುವುದು ನನ್ನ ಗಮನದಲ್ಲಿ ಇಲ್ಲ. ಎಲ್ಲಿಯೋ ಒಂದು ಕಡೆ ಆ ವಿಭಾಗದ Graduates shortage ಇದ್ದಾರೆ ಎನ್ನುವುದನ್ನು ಬಿಟ್ಟರೆ, unemployment create ಆಗಿದೆ, ಅವರಿಗೆ ಎಲ್ಲಿಯೂ ಕೆಲಸ ಸಿಕ್ಕುವುದಿಲ್ಲ ಎನ್ನುವುದು ಇಲ್ಲ. ಸರ್ಕಾರ ಬಹಳ ಸೂಕ್ತ ಸಮಯದಲ್ಲಿ ಎಚ್ಚರಿಕೆಯನ್ನು ವಹಿಸಿಕೊಂಡಿದೆ. ಕಳೆದ ಬಾರಿ Agriculture ವಿಭಾಗದ students agitation ಮಾಡಿದರು. ಎಲ್ಲಾ ಕಾಲೇಜುಗಳಲ್ಲಿಯೂ ಸಹ ಈಗ Agricultural Engineering courses ಪ್ರಾರಂಭ ಮಾಡಿದ್ದಾರೆ. B.Sc., (Agriculture) ಮಾಡುವುದರಿಂದ ನಮ್ಮ ಬೇಡಿಕೆ ಕಡಿಮೆಯಾಗುತ್ತದೆ ಎನ್ನುವ ಎಚ್ಚರಿಕೆಯನ್ನುಂಟು ಮಾಡಿದ್ದು, ಸರ್ಕಾರಕ್ಕೆ ಇದು ಒಂದು ಎಚ್ಚರಿಕೆಯ ಗಂಟೆ ಆಯಿತು ಎಂದು ನಾನಂತೂ ಭಾವಿಸಿಕೊಂಡಿದ್ದೇನೆ. ಮತ್ತೆ, ಇಲ್ಲಿ ನಾನು ಹೇಳುವಂತಹದ್ದು ಏನೆಂದರೆ, ಇದರ Section 4 ರಲ್ಲಿ ಈ ರೀತಿಯಾಗಿ ಹೇಳಿದ್ದಾರೆ. ಈ ತಿದ್ದುಪಡಿ ಅಧಿನಿಯಮವು ಕೃಷಿ ವಿಜ್ಞಾನಗಳು ಮತ್ತು ತಂತ್ರಜ್ಞಾನ ಕೋರ್ಸಿಗೆ ಈಗಾಗಲೇ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಬಾಧಿಸತಕ್ಕದ್ದಲ್ಲ. ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಕೃಷಿ ವಿಜ್ಞಾನಗಳು ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಕೊನೆಯ ಬ್ಯಾಚಿನ ಅಂಥ ವಿದ್ಯಾರ್ಥಿಗಳು ಅವರ ಕೋರ್ಸಿನ ಕ್ರಮಬದ್ಧ ವ್ಯಾಸಂಗವನ್ನು ಮುಗಿಸುವವರೆಗೆ, ವಿಶ್ವವಿದ್ಯಾಲಯದ ಆಡಳಿತಕ್ಕೆ ಅಂಥ ವ್ಯವಸ್ಥೆಗಳನ್ನು ವಿಶ್ವವಿದ್ಯಾಲಯವು ಮಾಡತಕ್ಕದ್ದು ಎಂದು ಹೇಳಿದ್ದಾರೆ. ಅವರಿಗೆ ಎಲ್ಲೋ ಒಂದು ಕಡೆ ವಿಶ್ವವಿದ್ಯಾಲಯ ಅವರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

affiliation ಅನ್ನು withdraw ಮಾಡಲಿಕ್ಕೆ ಯಾವುದೇ ಕಾರಣಕ್ಕೂ ಆಗದ ರೀತಿಯಲ್ಲಿ ನಾವು ಎಚ್ಚರಿಕೆಯನ್ನು ವಹಿಸುವುದು ಅವಶ್ಯ ಇದೆ. ಎಷ್ಟು ಜನ ವಿದ್ಯಾರ್ಥಿಗಳು ಇವತ್ತು ಈ ಒಂದು Institution ಮೂಲಕ ಡಿಗ್ರಿಯನ್ನು ಪಡೆದುಕೊಂಡು ಬಂದಿದ್ದಾರೆ, there should be guarantee for their employment ಅಥವಾ ಅವರ ಡಿಗ್ರಿಗೆ devaluation ಆಗತಕ್ಕಂತಹದ್ದು ಇರಲಿಕ್ಕೆ ಕೂಡದು. ಮತ್ತು ಈ Institution ಗೆ ಎಲ್ಲಿಯೋ ಒಂದು ಕಡೆ ನಿಯಮವನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಎಷ್ಟು ಜನ ಪದವೀಧರರು ಆಗಿ ಹೋಗಿದ್ದಾರೆ ಅವರಿಗೆ ಮುಂದೆ ಬರತಕ್ಕಂತಹ ದಿನಗಳಲ್ಲಿ ವೆರಿಫಿಕೇಷನ್ ಇರಬಹುದು, ಸರ್ಟಿಫಿಕೇಟ್ಸ್ ಇರಬಹುದು, ಎಲ್ಲಾ ರೆಕಾರ್ಡ್‌ಗಳನ್ನು maintain ಮಾಡಲಿಕ್ಕೆ ಕಾನೂನಿನ ನಿಯಮಗಳಲ್ಲಿ ಅದನ್ನು ಅಳವಡಿಸಿಕೊಳ್ಳಬೇಕೆಂದು ಈ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ. ಮತ್ತೆ, I.C.A.R. recognition ಇಲ್ಲದೆ, ಸಂಸ್ಥೆಗಳನ್ನು ನಡೆಸುವುದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ಮುಂದೆ ಸಚಿವರು ತಮ್ಮ ರೂಲ್ಸ್‌ಗಳಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿ ಈ ತಿದ್ದುಪಡಿ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಎನ್.ಹೆಚ್. ಶಿವಶಂಕರ್ ರೆಡ್ಡಿ(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿಯವರು, ಡಾ॥ ತೇಜಸ್ವಿನಿಗೌಡ ರವರು, ಹಿರಿಯ ಸದಸ್ಯರಾದ ಶ್ರೀ ಸಿ.ಎಂ. ಇಬ್ರಾಹಿಂ ರವರು, ಶ್ರೀ ಎನ್.ರವಿಕುಮಾರ್‌ರವರು ಮತ್ತು ಶ್ರೀ ಐವನ್ ಡಿ'ಸೋಜಾ ರವರು ಈ ವಿಧೇಯಕದ ಬಗ್ಗೆ ಮಾತನಾಡಿ ಬಹಳಷ್ಟು ವಿಚಾರಗಳನ್ನು, ಹಲವಾರು ಸಲಹೆಗಳನ್ನು ನೀಡಿದ್ದಾರೆ. ಇದರಲ್ಲಿ ಎರಡು ಅಂಶಗಳಿವೆ. ಈ ಒಂದು ವಿಧೇಯಕದಿಂದ ತತ್‌ಕ್ಷಣ ಅವರು further ಯಾವುದೇ ಒಂದು admissions ಮಾಡಬಾರದು ಎನ್ನುವುದು ಮತ್ತು ಅದಕ್ಕೆ ಕಡಿವಾಣ ಹಾಕುವುದು ಒಂದು ಅಂಶ.

ಮತ್ತೆ, ಈಗಾಗಲೇ ಯಾವ ವಿದ್ಯಾರ್ಥಿಗಳು pass out ಆಗಿದ್ದಾರೆ, ಅವರುಗಳು ಕೋರ್ಟ್‌ಗೆ ಬೇರೆ ಹೋಗಿದ್ದಾರೆ. ಅವರಿಗೂ ಸಹ Saving Clause, ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ. ಇಬ್ರಾಹಿಂ ರವರು ಏನು ಹೇಳಿದರು, ಆ ಒಂದು Saving Clause ಅನ್ನು ಅಳವಡಿಸಿ, ಅವರಿಗೆ ನಾಳೆ ಏನಾದರೂ ಸಹ ಹೈಕೋರ್ಟ್‌ನಲ್ಲಿ ನಿರ್ದೇಶನ ಬಂದಾಗ ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು, ಆ ವಿದ್ಯಾರ್ಥಿಗಳ ಭವಿಷ್ಯಕ್ಕೂ ಕೂಡ ಯಾವುದೇ ರೀತಿಯಲ್ಲಿ ಕುಂದು ಬಾರದ ರೀತಿಯಲ್ಲಿ ನೋಡಲು ಅದಕ್ಕೂ ಕೂಡ Saving Clause ಅನ್ನು introduce ಮಾಡಿದ್ದೇವೆ. ಹೀಗಾಗಿ, ಆ ವಿದ್ಯಾರ್ಥಿಗಳು ಕೂಡ ಈ Clause ನಲ್ಲಿ protect ಆಗುತ್ತಾರೆ. ಅಂದರೆ, ಕೆಲವರು pass out ಆಗಿದ್ದು, ಅದರಲ್ಲಿ ಕೆಲವರು ಅವರ ಭವಿಷ್ಯತ್ತಿನ ವಿಚಾರವಾಗಿ ಕೋರ್ಟ್‌ಗೆ ಹೋಗಿದ್ದಾರೆ. Further admissions ವಿಚಾರವಾಗಿ ತತ್‌ಕ್ಷಣ ನಿಲ್ಲಿಸಲಿಕ್ಕೆ ವಿಧೇಯಕದಲ್ಲಿ ಅಡಕವಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತೆ, Kidu ನಲ್ಲಿರುವ ಸಂಸ್ಥೆಯ ಬಗ್ಗೆ ಮತ್ತು ಇಸ್ರೇಲಿ ತಂತ್ರಜ್ಞಾನದ ಬಗ್ಗೆ ಹಲವಾರು ಸಲಹೆಗಳನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಅದರ ಬಗ್ಗೆಯೂ ಸಹ ಸರ್ಕಾರ ತೀವ್ರವಾಗಿ ಆ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಿಕ್ಕೆ ಪ್ರಯತ್ನಗಳನ್ನು ಮಾಡುತ್ತದೆ. ಹೀಗಾಗಿ, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ ವೈ.ಎಲ್.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರುಗಳು U.G.C. (University Grants Commission) approval ಇಲ್ಲದೆ, I.C.A.R. ಗಮನಕ್ಕೆ ತಾರದೆ ಅವರುಗಳು ಕೊಟ್ಟಂತಹ ಡಿಗ್ರಿಗಳಿಗೆ ಮಾನ್ಯತೆ ಇದೆಯೇ? ಮಾನ್ಯತೆ ಇಲ್ಲವೆಂದ ಮೇಲೆ . . . .

**ಶ್ರೀ ಎನ್.ಹೆಚ್. ಶಿವಶಂಕರ್ ರೆಡ್ಡಿ(ಕೃಷಿ ಸಚಿವರು):–** ಅವರು I.C.A.R. Guidelines ಪ್ರಕಾರ ಪ್ರಾರಂಭ ಮಾಡಿರುವುದಿಲ್ಲ. U.G.C. Guidelines ಪ್ರಕಾರ ಖಾಸಗಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುವುದಕ್ಕೆ 2012–13 ರಲ್ಲಿ ಅನುಮತಿಯನ್ನು ಕೊಟ್ಟಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವೇ ಇಲ್ಲ. ಇಲ್ಲಿ I.C.A.R. ಪ್ರಶ್ನೆಯೇ ಬರುವುದಿಲ್ಲ. U.G.C. ಯವರು ಅನುಮತಿಯನ್ನು ಕೊಟ್ಟಿದ್ದಾರೆ. ಇಲ್ಲಿಯೇ ವ್ಯತ್ಯಾಸವಾಗಿದೆ. U.G.C.ಯಲ್ಲಿ ಏನು ಮಾನದಂಡಗಳಿವೆ, ಖಾಸಗಿ ವಿಶ್ವವಿದ್ಯಾನಿಲಯದಲ್ಲಿ Agriculture and Agriculture related subjects ಗೆ ಕೊಡುವಂತಹ ಅವಕಾಶ ಇರುವುದಿಲ್ಲ. ಅದನ್ನು ಕೊಟ್ಟಿದ್ದಾರೆ, ಅದನ್ನು ತೆಗೆಯಬೇಕೆಂದು ಈ ವಿಧೇಯಕವನ್ನು ತಂದಿದ್ದೇವೆ.

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕವನ್ನು ತಂದಿರುವುದು ಸ್ವಾಗತಾರ್ಹವಾದ ವಿಚಾರ. ಆದರೆ, ಇಲ್ಲಿ Agricultural Engineering, B.Tech., ಈ ರೀತಿ Engineering and Technical Graduates, ಏನು ಇದ್ದಾರೆ, ಅವರುಗಳಿಗೆ ಸಂಬಂಧಪಟ್ಟಂತೆ ಹುದ್ದೆಗಳು ಖಾಲಿ ಇದ್ದರೂ ಸಹ

ಆ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. ಆ ಹುದ್ದೆಗಳನ್ನು ಭರ್ತಿ ಮಾಡಬೇಕು. ಅವರುಗಳು ಇವತ್ತಿನ ದಿವಸ ಪದವೀಧರರಾಗಿ ಅವರು ಪಡತಕ್ಕಂತಹ ಕಷ್ಟ ಹೇಳತೀರದು. ಈಗಾಗಲೇ MGNREG (Mahatma Gandhi National Rural Employment Guarantee) Scheme ನ ಅಡಿಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರುಗಳಿಗೆ ಒಂದು ತಿಂಗಳಿಗೆ 20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವರುಗಳಿಗೆ ಒಂದು ವರ್ಷದಿಂದ ಸಂಬಳ ಕೂಡ ಪಾವತಿಯಾಗಿರುವುದಿಲ್ಲ. ಹೀಗಿರುವಾಗ ಅವರುಗಳ ಪರಿಸ್ಥಿತಿ ಏನು? ಈಗ ಏನು ಖಾಲಿ ಹುದ್ದೆಗಳಿವೆ, ಅವುಗಳನ್ನು ಭರ್ತಿ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಅವರುಗಳು ತುಂಬಾ ಕಷ್ಟಕರ ಪರಿಸ್ಥಿತಿಯಲ್ಲಿದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018 ನೇ ಸಾಲಿನ ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು(ತಿದ್ದುಪಡಿ)ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** “ಖಂಡ 2 ರಿಂದ 4 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 4 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಪ್ರಸ್ತಾವದ ಅಂಗೀಕಾರ**

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(489) 17.12.2018 04.10 SV-BNS

**(ಸಭಾಪತಿಯವರ ಉಪಸ್ಥಿತಿ)**

**ಆ) ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2018**

**ಶ್ರೀ ಶಿವಾನಂದ ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಶಿವಾನಂದ ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸದುದ್ದೇಶದಿಂದ 2016–17ರಲ್ಲಿ ಎರಡೂ ಸದನಗಳಲ್ಲಿ ಅಂಗೀಕರಿಸಲಾಗಿದೆ. ಈ ವಿಧೇಯಕವು ಕೇಂದ್ರಕ್ಕೆ ಹೋದಾಗ ಸ್ವಲ್ಪ ತಿದ್ದುಪಡಿಗಳನ್ನು ಮಾಡಿ ಕಳುಹಿಸುವಂತೆ ಹೇಳಿದ್ದು, ರಾಷ್ಟ್ರಪತಿಗಳೂ ಸಹ ಅಂಗೀಕರಿಸಿದ್ದಾರೆ. ಜೀವರಕ್ಷಕ ವ್ಯಕ್ತಿಯ ಸದುದ್ದೇಶ ಅಥವಾ ದುರುದ್ದೇಶವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಯಾರು ಸದುದ್ದೇಶದಿಂದ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾಡಿರುತ್ತಾರೆಯೋ ಅವರಿಗೆ criminal or civil liability ಯಿಂದ exemption ಅನ್ನು ಕೊಡಬೇಕು. ಯಾರು ದುರುದ್ದೇಶದಿಂದ ಮಾಡಿ civil or criminal liability ಯಿಂದ exemption ಅನ್ನು ಪಡೆದುಕೊಳ್ಳುತ್ತಾರೆಯೋ, ಅಂತಹವರಿಗೆ ಕೊಡಬಾರದೆನ್ನುವ ಒಂದು ಸಣ್ಣ ತಿದ್ದುಪಡಿ. Identify ಮಾಡಬೇಕಾದಂತಹ ಮೂರು Clause ಗಳನ್ನು ವಿಧೇಯಕದಲ್ಲಿ ಹೇಳಲಾಗಿದೆ. (ಎ) ಉದ್ದೇಶಪೂರ್ವಕವಾಗಿ ಮರಣ ಸಂಭವಿಸುವುದಕ್ಕೆ ಕಾರಣವಾದಾಗ ಅಥವಾ ಮರಣ ಸಂಭವಿಸಲು ಪ್ರಯತ್ನಿಸಿದಾಗ (ಬಿ) ವ್ಯಕ್ತಿಯು ತಾನು ಮಾಡುತ್ತಿರುವ ಕಾರ್ಯದಿಂದ ಮರಣವು ಸಂಭವಿಸಬಹುದೆಂದು ತಿಳಿದಿದ್ದರೂ ಹಾಗೆ ಮಾಡಿದಾಗ; ಮರಣ ಅಥವಾ ತೀವ್ರ ಗಾಯಗೊಳ್ಳುವುದನ್ನು ರಕ್ಷಿಸುವ ಹೊರತಾಗಿ ಯಾವುದೇ ಇತರ ಉದ್ದೇಶದಿಂದ ಮಾಡಿದಾಗ (ಸಿ) ಮರಣ ಅಥವಾ ಘಾಸಿಗೊಳ್ಳುವುದರಿಂದ ರಕ್ಷಿಸುವ ಹೊರತಾಗಿ ಯಾವುದೇ ಇತರ ಉದ್ದೇಶವಿರುವಾಗ ಸ್ವಯಂಕೃತವಾಗಿ ಘಾಸಿಗೊಳಿಸಿದಾಗ ಅಥವಾ ಘಾಸಿ ಮಾಡಲು ಪ್ರಯತ್ನಿಸಿದಾಗ – ಈ ರೀತಿಯಾಗಿ ಮೂರು Clause ಗಳನ್ನು ಹಾಕಿದೆ. ಮರಣ ಹೊಂದುತ್ತಿದ್ದಾನೆಂದು ತಿಳಿದಿದ್ದರೂ ಸುಮ್ಮನೆ ನಿಂತು, ಅವನು ಮೃತಪಟ್ಟ ನಂತರ ಎಲ್ಲವನ್ನು ತೆಗೆದುಕೊಂಡು civil or criminal liability ಯಿಂದ exemption ಅನ್ನು ಪಡೆಯುವಂತಹವರಿಗೆ ಇದು ಸಾಧ್ಯವಾಗಬಾರದು ಎನ್ನುವುದು ಇದರ ಉದ್ದೇಶ. ಇದರಲ್ಲಿ ಅಂತಹ ವಿಶೇಷವಾದ ತಿದ್ದುಪಡಿ ಏನೂ ಇರುವುದಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಷ್ಟ್ರಪತಿಗಳ ಬಳಿ ಅನುಮೋದನೆಗೆ ಹೋದಾಗ ಮೂರು Clause ಗಳನ್ನು ತೆಗೆಯಬೇಕೆಂದು ಹೇಳಿದ್ದು, ಅದರ ಬಗ್ಗೆ ಮಾನ್ಯ ಸಚಿವರು ಇನ್ನೂ ಸ್ವಲ್ಪ ವಿವರಿಸಿದರೆ ಒಳ್ಳೆಯದು.

**ಶ್ರೀ ಶಿವಾನಂದ ಪಾಟೀಲ:–** ಮಾನ್ಯ ಸಭಾಪತಿಯವರೇ, ಉದ್ದೇಶಪೂರ್ವಕವಾಗಿ ಮರಣ ಸಂಭವಿಸುವುದಕ್ಕೆ ಕಾರಣವಾದಾಗ ಅಥವಾ ಮರಣ ಸಂಭವಿಸಲು ಪ್ರಯತ್ನಿಸಿದಾಗ – ಇದು ಒಂದು ಉದ್ದೇಶ. ಎರಡನೆಯದಾಗಿ ವ್ಯಕ್ತಿಯು ತಾನು ಮಾಡುತ್ತಿರುವ ಕಾರ್ಯದಿಂದ ಮರಣವು ಸಂಭವಿಸಬಹುದೆಂದು ತಿಳಿದಿದ್ದರೂ ಹಾಗೆ ಮಾಡಿದಾಗ; ಮರಣ ಅಥವಾ ತೀವ್ರ ಗಾಯಗೊಳ್ಳುವುದನ್ನು ರಕ್ಷಿಸುವ ಹೊರತಾಗಿ ಯಾವುದೇ ಇತರ ಉದ್ದೇಶದಿಂದ ಮಾಡಿದಾಗ, ಅಂತಹವರಿಗೆ civil or criminal liability ಯಿಂದ exemption ಸಿಗಬಾರದು. ಮೂರನೆಯದಾಗಿ ಮರಣ ಅಥವಾ ಘಾಸಿಗೊಳ್ಳುವುದರಿಂದ ರಕ್ಷಿಸುವ ಹೊರತಾಗಿ ಯಾವುದೇ ಇತರ ಉದ್ದೇಶವಿರುವಾಗ ಸ್ವಯಂಕೃತವಾಗಿ ಘಾಸಿಗೊಳಿಸಿದಾಗ ಅಥವಾ ಘಾಸಿ ಮಾಡಲು ಪ್ರಯತ್ನಿಸಿದಾಗ ಅಂತಹ ವ್ಯಕ್ತಿಗೂ ಸಹ ಇದರಿಂದ exemption ಸಿಗಬಾರದು. ಈ ಮೂರು ದುರುದ್ದೇಶಗಳು ಹಾಗೂ ಮೇಲೆ ತಿಳಿಸಿದ ಮೂರು ಸದುದ್ದೇಶಗಳು ಇವೆ. ಈ ಮೂರು ಸದುದ್ದೇಶಗಳನ್ನು ಯಾರು ಮಾಡಿಕೊಡುತ್ತಾರೆಯೋ ಅಂತಹವರು ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ಎಡತಾಕುವಂತಾಗಬಾರದು. ನ್ಯಾಯಾಲಯದಲ್ಲಿ ಅವರು ಪದೇ ಪದೇ ಸಾಕ್ಷಿಗೆ ಬಂದಾಗ ನ್ಯಾಯಾಲಯವೂ ಸಹ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅವರಿಗೆ ದಿನಾಂಕವನ್ನು ನಿಗದಿಪಡಿಸಿ ವಿನಾಯ್ತಿಯನ್ನು ನೀಡಿ, ಸಾಕ್ಷಿ ಹೇಳುವಂತೆ ಮಾಡಬೇಕು. ಪೊಲೀಸ್ ಠಾಣೆಯಲ್ಲಿ ಅವರನ್ನು repeatedly ಕರೆಯಬೇಕೆನ್ನದೆ, ಕರೆಯಲಾರದೆ ಅವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ಮಾಡಿ ಕೇಸ್ ಅನ್ನು ಕಾನೂನಾತ್ಮಕವಾಗಿ ಪರಿಗಣಿಸಿ ಬೇಗ ಮುಗಿಸುವಂತಹ ಪ್ರಯತ್ನವನ್ನು ಮಾಡಬೇಕು. ಇಂತಹ ಕೆಲವು ಉದ್ದೇಶಗಳು ಈ ವಿಧೇಯಕದಲ್ಲಿದ್ದು, ಬೇರೆ ಯಾವ ಉದ್ದೇಶಗಳಿರುವುದಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರಾಷ್ಟ್ರಪತಿಗಳಿಗೆ ಹೋಗುವ ಮುಂಚೆ ಈ ವಿಧೇಯಕದ ಕುರಿತು ಸಾಕಷ್ಟು ಚರ್ಚೆಯಾಗಿದೆ ಎಂದು ಭಾವಿಸುತ್ತೇನೆ. ಇದನ್ನು ವೈದ್ಯರಿಗೆ ಸಂಬಂಧಪಟ್ಟ ಹಾಗೆ ತರಲಾಗಿದೆಯೆಂದುಕೊಂಡಿದ್ದೇನೆ.

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ವೈದ್ಯರಿಗೆ ಏನೂ ಸಂಬಂಧವಿಲ್ಲ. ಇದು ಕೇವಲ ಜೀವರಕ್ಷಕ. ಅಂದರೆ ಯಾವುದೇ ಒಂದು ಅಪಘಾತ ಸಂಭವಿಸಿದಾಗ ಅಲ್ಲಿರುವಂತಹವರು ಗಾಯಾಳುವನ್ನು ಉಳಿಸತಕ್ಕಂತಹ ಕೆಲಸವನ್ನು ಮಾಡುತ್ತಾರೆ. ಅಂತಹವರಿಗಾಗಿ ಈ ವಿಧೇಯಕ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಂದರೆ ಸಾರ್ವಜನಿಕರು ಧೈರ್ಯವಾಗಿ ಮುಂದೆ ಬಂದು ಗಾಯಾಳುವಿಗೆ ಸಹಾಯ ಮಾಡಬಹುದು. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಐವನ್ ಡಿ'ಸೋಜ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವು ಹಿಂದೆಯೂ ಚರ್ಚೆಯಾಗಿತ್ತು. 2016ರಲ್ಲಿ ಈ ಸದನದ ಮುಂದೆ ಬಂದಾಗ, ಯಾರು ಜೀವವನ್ನು ರಕ್ಷಿಸುತ್ತಾರೆಯೋ, ಅವರಿಗೆ ಕಾನೂನಿನಿಂದ ವಿನಾಯ್ತಿಯನ್ನು ನೀಡಬೇಕು. ಅವರಿಗೆ ತೊಂದರೆಯಾಗಬಾರದು. ಒಂದು ವೇಳೆ ಅವರಿಗೆ ತೊಂದರೆಯಾದರೆ ಯಾರೂ ಹತ್ತಿರ ಬರುವುದಿಲ್ಲ ಎಂಬುದು ಈ ಒಂದು ತಿದ್ದುಪಡಿಯ ಉದ್ದೇಶವಾಗಿತ್ತು. ಹಿಂದೆ ಸದನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಯಾರಾದರೂ ವ್ಯಕ್ತಿಯು ಗಾಯಾಳುವನ್ನು ಬಿಟ್ಟು ಹೋದರೆ, ಬಿಟ್ಟು ಹೋದ ವ್ಯಕ್ತಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಸದನ ಅಭಿಪ್ರಾಯ ವ್ಯಕ್ತಪಡಿಸಿತ್ತು. ಗಾಯಾಳುವನ್ನು ಆಸ್ಪತ್ರೆಗೆ ದಾಖಲು ಮಾಡಿದ ಸಂದರ್ಭದಲ್ಲಿ ಅನೇಕ ಬಾರಿ ಇಂತಹ malpractice ಗಳು ಆಗುತ್ತಿರುತ್ತವೆ. ಸೌಖ್ಯವಿಲ್ಲದ ವ್ಯಕ್ತಿಯು ಆಸ್ಪತ್ರೆಯಲ್ಲಿದ್ದಾಗ ಅಥವಾ ಆಸ್ಪತ್ರೆಗೆ ಕೊಂಡೊಯ್ದಾಗ immediately consent ಕೊಡಬೇಕೆಂದು ಹೇಳಿದರೆ, consent ಕೊಡಲು ಯಾವ ವ್ಯಕ್ತಿಯೂ ಇರುವುದಿಲ್ಲ. The Indian Medical Council Act ಏನು ಹೇಳುತ್ತದೆಯೆಂದರೆ ಯಾವ ವ್ಯಕ್ತಿಗಾದರೂ operation ಮಾಡಬೇಕಾದರೆ ಅಥವಾ treatment ಕೊಡಬೇಕಾದರೆ ಅವರ ರಕ್ತಸಂಬಂಧಿಯೊಬ್ಬರು consent ಕೊಡಬೇಕು. ನಾವು ಆಸ್ಪತ್ರೆಯಲ್ಲಿ operation ಮಾಡಿಸಿಕೊಳ್ಳಲು ಹೋದರೂ, ನಮ್ಮ ಪೈಕಿಯವರೊಬ್ಬರು consent ಕೊಡದಿದ್ದರೆ ವೈದ್ಯರು ನಮ್ಮನ್ನು ಮುಟ್ಟುವ ಹಾಗೆ ಇಲ್ಲ. ಮುಟ್ಟಿದರೆ ಅದು ಕಾನೂನಿಗೆ ವಿರೋಧವಾಗುತ್ತದೆ. ಈ ವಿಧೇಯಕದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿರುವಂತೆ ಅವರು ಅಸಮರ್ಥರಾಗಿದ್ದರೆ ಮತ್ತೊಬ್ಬರು consent ಕೊಡಬಹುದು. ಅಷ್ಟರ ಮಟ್ಟಿಗೆ ರಾಷ್ಟ್ರಪತಿಗಳು ಒಪ್ಪಿಕೊಂಡಿರುತ್ತಾರೆ. ಒಂದು ವೇಳೆ ಉದ್ದೇಶಪೂರ್ವಕವಾಗಿ ಒಬ್ಬ consent ಕೊಡದಿದ್ದರೆ, ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬ ಪ್ರಶ್ನೆಯನ್ನು ರಾಷ್ಟ್ರಪತಿಗಳು ನಮ್ಮ ಮುಂದೆ ಇಟ್ಟಿದ್ದಾರೆ. ಈ ಎರಡೂ ಕಾನೂನುಗಳು ಆಚೆಗೂ ಅಲ್ಲ, ಈಚೆಗೂ ಅಲ್ಲ. Two sides of the same coin ಇದ್ದ ಹಾಗೆ. ಒಂದು ವೇಳೆ consent ಕೊಟ್ಟರೂ ಸಮಸ್ಯೆ. ಕೊಡದಿದ್ದರೂ ಸಮಸ್ಯೆ. ಹಾಗಾಗಿ ಎಲ್ಲರೂ consent ಕೊಡುವುದಕ್ಕೆ ಮುಂದಾಗಬೇಕು ಎಂಬುದನ್ನು ಈ ಕಾನೂನಿನಲ್ಲಿ ತೋರಿಸಲಾಗಿದೆ ಎಂದು ನನಗನ್ನಿಸುತ್ತದೆ. ಹಾಗಾಗಿ ಕೊಡದಿರುವವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಯಾವ ಮಾನದಂಡವನ್ನು ಅಳವಡಿಕೆ ಮಾಡಲಾಗಿದೆ ಎಂದು ಕಾನೂನಿನಲ್ಲಿ ಸ್ಪಷ್ಟನೆ ಇಲ್ಲ. In what way, a person is not willingly giving consent for continuing the treatment, ಎಂದು ಹೇಳುವುದಕ್ಕೆ ಈ ವಿಧೇಯಕದಲ್ಲಿ ಎಲ್ಲಿಯೂ ಕಾಣಿಸುತ್ತಿಲ್ಲ. ಅದಕ್ಕೆ ಸ್ವಲ್ಪ ವಿವರಣೆ ಬೇಕಿತ್ತೆಂದು ಮಾನ್ಯ ಸದಸ್ಯರು ಕೂಡ ಹೇಳಿದರು. ಒಬ್ಬರ ಮೇಲೆ ನಾವು ಆರೋಪ ಮಾಡಬೇಕಾಗಿದ್ದರೆ, ಅಥವಾ criminal prosecution ಮಾಡಬೇಕಾಗಿದ್ದರೆ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ operation ಮಾಡಬೇಕೆಂದು ಹೇಳಿದಾಗ ಬೇಡ ಎಂದು ಹೇಳಿ ಅವರೇನಾದರೂ ಮೃತರಾದರೆ, whether that person is liable for facing the criminal prosecution ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದು ನೈತಿಕತೆಯ ಪ್ರಶ್ನೆ. ಒಬ್ಬರಿಗೆ ಉಪಕಾರ ಮಾಡಲು ಹೋಗಿ ಉಪದ್ರವವನ್ನು ಅನುಭವಿಸುವಂತಹ ಪರಿಸ್ಥಿತಿ ಇದಾಗಿದೆ. ಹಾಗಾಗಿ ಇದರ ಬಗ್ಗೆ ಮಾನ್ಯ ಸಚಿವರಿಂದ ಇನ್ನಷ್ಟು ವಿವರಣೆಯನ್ನು ಬಯಸುತ್ತೇನೆ.

**ಡಾ.ತೇಜಸ್ವಿನಿ ಗೌಡ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಧೇಯಕದ ಆಂಗ್ಲ ಭಾಷೆಯ ಪ್ರತಿಯಲ್ಲಿ ಸ್ವಲ್ಪ ಸ್ಪಷ್ಟತೆ ಇರುವುದರಿಂದ ನಾನು ಅದನ್ನು ತೆಗೆದುಕೊಳ್ಳುತ್ತೇನೆ. "Protection for Good Samaritan from Civil or Criminal Liability." ಸದುದ್ದೇಶ ಇಟ್ಟುಕೊಂಡು ಜೀವರಕ್ಷಣೆಯನ್ನು ಮಾಡಲು ಹೋದಂತಹ ವ್ಯಕ್ತಿಗಳಿಗೆ ವಿನಾಕಾರಣ ಕೋರ್ಟುಗಳಲ್ಲಿ ಕರೆಸಿ harassment ಮಾಡುವುದರಿಂದ ತಪ್ಪಿಸುವ ಸಲುವಾಗಿ ಈ ಕಾನೂನನ್ನು ನಾವು ತಂದಿರುತ್ತೇವೆ. ಇದರಲ್ಲಿ accident ಆದ ಸಂದರ್ಭದಲ್ಲಿ ದುರ್ಘಟನೆಗೆ ಒಳಗಾದ ವ್ಯಕ್ತಿ ಯಾವ ಸ್ಥಿತಿಯಲ್ಲಿರುತ್ತಾರೆಯೋ ಗೊತ್ತಿರುವುದಿಲ್ಲ. ಗಾಯದ ಸ್ವರೂಪದ ಮೇಲೆ ಅದು ಅವಲಂಬಿತವಾಗಿರುತ್ತದೆ. ಅವರ ಬಳಿ ತಕ್ಷಣಕ್ಕೆ identity ಸಿಗದೆ ಹೋಗಬಹುದು. ಅವರ ಪೋಷಕರನ್ನು ಅಥವಾ guardian ಅನ್ನು ಸಂಪರ್ಕಿಸಲು ಸಾಧ್ಯವಾಗದಿರಬಹುದು. ಈ ತರಹದ harassment ಗಳಿಂದಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಪಘಾತಕ್ಕೆ ಒಳಗಾದವರನ್ನು ಮುಟ್ಟುವುದಕ್ಕೆ ಹೆದರುವುದನ್ನು ಇತ್ತೀಚೆಗೆ ನಾವು ಮಾಧ್ಯಮಗಳಲ್ಲಿ ನೋಡುತ್ತಿರುತ್ತೇವೆ. ವಿಮಾನವೊಂದು ಉಗ್ರಗಾಮಿಗಳಿಂದ ಹೈಜಾಕ್ ಆದಂತಹ ಸಂದರ್ಭವನ್ನು ವಿವರಿಸುವ ಬಗ್ಗೆ ನೀರಜಾ ಎನ್ನುವ ಸಿನಿಮಾ ಒಂದು ಬಂದಿತ್ತು. ತಮ್ಮ ಜೀವವು ಅಪಾಯದಲ್ಲಿದೆಯೆಂಬುದನ್ನೂ ಲೆಕ್ಕಿಸದೆ ಮತ್ತೊಬ್ಬರ ಜೀವವನ್ನು ರಕ್ಷಣೆ ಮಾಡಲು ಹೋದಂತಹವರನ್ನು ಬೆಂಬಲಿಸುವುದಕ್ಕಾಗಿ ರಾಷ್ಟ್ರಪತಿಗಳ ಪದಕವನ್ನು ಕೊಟ್ಟು ಉತ್ತೇಜನವನ್ನು ನೀಡುತ್ತೇವೆ. ಸಮಾಜದಲ್ಲಿ ಅಂತಹ ಒಂದು ಸತ್ಪ್ರಯತ್ನವನ್ನು ಪ್ರೋತ್ಸಾಹ ಮಾಡಬೇಕೆಂದು ಇದನ್ನು ಮಾಡಲಾಗುತ್ತದೆ. ಗಾಯಾಳು ವ್ಯಕ್ತಿಯು ಮಾತನಾಡಲು ಆಗದೆ ಸನ್ನೆಯಿಂದ ಮಾತನಾಡಬಹುದು. Operation ಮಾಡಿಸಬೇಕೇ ಅಥವಾ ಖರ್ಚು ವೆಚ್ಚ ಅಡಕವಾಗಿರಬಹುದು.

(490) 17.12.2018 ಕೆಜಿ.ಕೆಎಸ್ 4.20

**ಡಾ॥ ತೇಜಸ್ವಿನಿ ಗೌಡ (ಮುಂದು...):–**

ಅಂತಹ ಸನ್ನಿವೇಶದಲ್ಲಿ ಅವರು ಒಂದು ಸದುದ್ದೇಶದಿಂದ ಕಾಯಿದೆಯನ್ನು ತೆಗೆದುಕೊಳ್ಳುತ್ತಾರೆ. ಆಸ್ಪತ್ರೆಗೆ admit ಮಾಡುವುವಂಥದ್ದು ಹಾಗೂ ಮೊದಲ ಮೂರು ಗಂಟೆಯನ್ನು 'Golden Hour' ಎಂದು ನಾವು medical term ನಲ್ಲಿ ಕರೆಯುತ್ತೇವೆ. ಅಂತಹ ವೇಳೆಯಲ್ಲಿ ಅವರು ತನ್ನ ಒಂದು ಒಳ್ಳೆಯ ಮನಸ್ಥಿತಿಯನ್ನು ಉಪಯೋಗಿಸಿಕೊಂಡು ಮುಂದುವರಿದರೆ ಆಕಸ್ಮಿಕವಾಗಿ ಸಾವು ಸಂಭವಿಸಬಹುದಾದ ಅಥವಾ coma ಗೆ ಹೋಗಬಹುದನ್ನು ತಪ್ಪಿಸಬಹುದು. ನ್ಯಾಯಾಲಯದಲ್ಲಿ ನಡೆಯುವಂತಹ ಪ್ರಕ್ರಿಯೆಯಲ್ಲಿ ಇವನೇ ಅರ್ಧ ಹೆಣವಾಗಿ ಬಿಡುತ್ತಾನೆ. ಅದಕ್ಕೆ ಮನೆ ಮಂದಿಗೆ ಎಲ್ಲಾ ಖರ್ಚು ಬರುತ್ತೆ. ಅವರು ಆರ್ಥಿಕವಾಗಿ ತೊಂದರೆಗೆ ಒಳಗಾಗುತ್ತಾರೆ. *'Proviso (a)'* of *Section 3 (1)* of *'THE KARNATAKA GOOD SAMARITAN AND MEDICAL PROFESSIONAL (PROTECTION AND REGULATION DURING EMERGENCY SITUATION) ACT, 2016'* reads as follows;

> "(a) the intentional causing of death, or the attempting to cause death;"

ಇದನ್ನು ಯಾವ ರೀತಿ analyse ಮಾಡಬೇಕು ಎನ್ನುವುದು ನನಗೂ ಸಹ ಸ್ವಲ್ಪ ಅನುಮಾನ ಕಾಣುತ್ತದೆ.

**ಶ್ರೀ ಶಿವಾನಂದ ಎಸ್.ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಓದಿರುವಂತಹ *Proviso (a) of Section 3(1)* ಅದರ ಮೇಲೆ *'Provided further*

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*that the protection from criminal liability shall not extend to,'* ಎನ್ನುವಂತಹ ಲೈನ್ ಮೇಲೆ ಯಾರು ದುರುದ್ದೇಶದಿಂದ ಈ ಪ್ರಯತ್ನವನ್ನು ಮಾಡುತ್ತಾರೆ ಅಂತಹವರಿಗೆ ಇದು applicable ಆಗುವುದಿಲ್ಲ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುವಂಥದ್ದು ಅದು Criminal Offence ಗೆ ಬರುತ್ತದೆ.

**ಶ್ರೀ ಶಿವಾನಂದ ಎಸ್.ಪಾಟೀಲ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಅಂತಹವರಿಗೆ exemption ಸಿಗಬಾರದು. ಸದುದ್ದೇಶವನ್ನು ಇಟ್ಟುಕೊಂಡು ಆಂಗ್ಲ ಭಾಷೆಯಲ್ಲಿರುವಂತಹ ಮೂರು intension ಗಳನ್ನು ಇಟ್ಟುಕೊಂಡು ಯಾರು protection ಕೊಡುತ್ತಾರೆ, ಅಂತಹವರಿಗೆ harassment ಆಗಬಾರದು. ಯಾರು ದುರದ್ದೇಶ ಇಟ್ಟುಕೊಂಡು ಕೆಲವರು ಮಾಡುತ್ತಾರೆ ಅಲ್ಲವೇ; ಮಾನ್ಯ ಸಚಿವರು ಆ ಕೆಳಗಡೆ ಇರುವಂತಹ ಮೂರು ಲೈನ್‌ಗಳನ್ನು ಓದಿದ್ದಾರೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈಗ ಇಬ್ಬರು ಜಗಳ ಆಡುತ್ತಿರುತ್ತಾರೆ. ಇಂತಹದ್ದರಲ್ಲಿ ತುಂಬ ಜನ ಸಾವನ್ನಪ್ಪಿದ್ದಾರೆ. ಜಗಳವನ್ನು ತಪ್ಪಿಸುವುದಕ್ಕೆ ಹೋದವರಲ್ಲಿ ಅನೇಕ ಮಂದಿ ಇರಿತಕ್ಕೆ ಒಳಗಾಗಿ ಸಾವನ್ನಪ್ಪಿದ್ದಾರೆ. ಈಗ ಜಗಳ ಬಿಡಿಸುವುದಕ್ಕೆ ಹೋದವನು ಜೀವ ಉಳಿಸಲಿಕ್ಕೆ ಹೋದನೋ ಅಥವಾ ಅವನೇ ತಿವಿದನೋ ಎಂಬುದನ್ನು ಹೇಗೆ define ಮಾಡುವುದು? ಅಂದರೆ, ಇದು ಸ್ವಲ್ಪ sensitive ಇದೆ. ಇದನ್ನು ಶಬ್ದಗಳಲ್ಲಿ ಇನ್ನಷ್ಟು clarity ಅನ್ನು ತಂದರೆ, ಒಂದರೆಡು ಪದಗಳನ್ನು ತಂದರೆ ಒಳ್ಳೆಯದು. ಅದರಲ್ಲಿ ವಿಡಿಯೋ ನೋಡಬೇಕಾಗುತ್ತದೆ ಅಥವಾ ಸಾಕ್ಷ್ಯವನ್ನು ಕೇಳಬೇಕಾಗುತ್ತದೆ. ಆ ರೀತಿ ಬಂದವನ ದೃಷ್ಟಿಕೋನ ಸಾಯಿಸಲು ಬಂದಿದ್ದು ಅಲ್ಲವೆಂದು, how to protecti him?

**ಶ್ರೀ ಶಿವಾನಂದ ಎಸ್.ಪಾಟೀಲ:–** ಮಾನ್ಯ ಸಭಾಪತಿಯವರೇ, ಕೆಳಗಿನ ಮೂರು ಉದ್ದೇಶಗಳನ್ನು ಓದಿದರೆ, ಯಾರು ಉದ್ದೇಶಪೂರ್ವಕವಾಗಿ ಮರಣ ಸಂಭವಿಸುವುದಕ್ಕೆ ಕಾರಣೀಭೂತ ಯಾರು ಆಗುತ್ತಾರೆ ಮತ್ತು ಆ ವ್ಯಕ್ತಿ ತಾನು ಮಾಡುತ್ತಿರುವ ಕಾರಣದಿಂದ ಮರಣ ಸಂಭವಿಸುತ್ತದೆ ಎಂದು ತಿಳಿದಿದ್ದರೂ ಸಹ, ಈ Criminal act ಅನ್ನು ಮಾಡುತ್ತಾನೆ ಅಂತಹವರಿಗೆ ಮಾತ್ರ ಇದರಿಂದ exemption ಸಿಗುವುದಿಲ್ಲ. ಮೇಲಿನ ಮೂರು ಸದುದ್ದೇಶ ಏನಿದೆ, ಅದಕ್ಕೆ ಮಾತ್ರ exemption ಸಿಗುತ್ತದೆ. ಇದರಲ್ಲಿ ಬೇರೆ ಏನು ಇಲ್ಲ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದಕ್ಕೆ ನಮ್ಮ ಗೃಹ ಇಲಾಖೆಯಲ್ಲಿ ಈ ಕುರಿತಾಗಿ 'Definition' ಇರುತ್ತದೆ. ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಲೇಬೇಕು ಎನ್ನುವಂತಹ ಪ್ರಯತ್ನದಲ್ಲಿ ಬರುತ್ತದೆ. ಇದಕ್ಕೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಅದಕ್ಕೂ clear ಆಗಿ differentiate ಮಾಡಬೇಕು ಅನಿಸುತ್ತದೆ. ನ್ಯಾಯಾಲಯದಲ್ಲಿ ಪದದ ಆಧಾರದ ಮೇಲೆಯೇ ಶಿಕ್ಷೆ ಆಗುವುದು ಇದೆ. ಆದ್ದರಿಂದ, ಸದನದಲ್ಲಿ ಪದ ಬಳಕೆ ಮಾಡುವಂತಹ ಸಂದರ್ಭದಲ್ಲಿ clarity ಇರಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ಕನ್ನಡದಲ್ಲಿ ಓದಿದರೆ ಒಂದು ಅರ್ಥ ಬರುತ್ತದೆ. ಆಂಗ್ಲ ಭಾಷೆಯಲ್ಲಿ ಓದಿದರೆ ಒಂದು ಅರ್ಥದಲ್ಲಿ ಬರುತ್ತದೆ. ಈಗ ಅದಕ್ಕೆ ಮೊದಲು ಕನ್ನಡದಲ್ಲಿ ಬಿಲ್ಲು ಮಾಡಬೇಕಾದರೆ ಗಂಟು ನಮ್ಮ ಅಧಿಕಾರಿಗಳಿಗೆ ಹೋಗಿಲ್ಲ. ಈ ವಿಧೇಯಕದ 2ನೇ ಪುಟದಲ್ಲಿ, "ಮೊದಲನೇ ಪರಂತುಕವನ್ನು ಬಿಟ್ಟುಬಿಡುವುದಕ್ಕೆ ಒಳಪಟ್ಟು, ಸದರಿ ಅಧಿನಿಯಮಕ್ಕೆ ಭಾರತದ ಸನ್ಮಾನ್ಯ ರಾಷ್ಟ್ರಪತಿಯವರು ಅನುಮತಿಯನ್ನು ನೀಡಿರುವುದರಿಂದ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಪರಂತುಕವನ್ನು ಬಿಟ್ಟುಬಿಡುವುದು ಬಿಚ್ಚಿ ಇಡಲಾಗುವುದು ಇದು ಸಾಹಿತಿಗಳಿಗೂ ಅರ್ಥವಾಗದಂತಹ ನಿಘಂಟು. ಅದಕ್ಕೆ ದಯವಿಟ್ಟು, ಈ ಬಿಲ್ಲುಗಳನ್ನು ಮಾಡಬೇಕಾದರೆ, ಕನ್ನಡದ ನಿಘಂಟನ್ನು soft ಅಗಿ ಇರುವಂಥದ್ದನ್ನು ಮಾಡಿ ಎನ್ನುವಂಥದ್ದು ಒಂದು ಸಲಹೆ. ಎರಡನೆಯದಾಗಿ, ಈ ಬಿಲ್ಲು ಕೇವಲ ಆರೋಗ್ಯ ಇಲಾಖೆಗೆ ಅಷ್ಟೇ ಬರುವುದಿಲ್ಲ. ಇಲ್ಲಿ ಪೊಲೀಸರು ಮುಖ್ಯ. ಇದನ್ನು Police and Health Department ಸೇರಿ ತರಬೇಕಾಗಿತ್ತು. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಬಿಲ್ಲನ್ನು ತಂದಿದ್ದಾರೆ. ಈ ಬಿಲ್ಲು ಸರಿಯಾಗಿದೆ. ಈ ಕುರಿತಾಗಿ ಮಾಹಿತಿಯು ಪೊಲೀಸ್ ಠಾಣೆಗೆ ಹೋದ ತಕ್ಷಣ ಮೊದಲು ನೀನು ಕುಳಿತಿಕೋ, ಆ ಮೇಲೆ ನೋಡುತ್ತೇವೆಂದು ಹೇಳುತ್ತಾರೆ. ಹಾಗಾಗಿ, ಯಾರು ಸತ್ತರೂ ಹೇಳುವುದಕ್ಕೆ ಹೋಗುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಅದಕ್ಕಾಗಿಯೇ ಈ ಬಿಲ್ಲನ್ನು ತಂದಿದ್ದಾರೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದನ್ನು Police Department ಗೆ ಸೂತ್ತೋಲೆ ಕಳುಹಿಸಿ. ಇದು ಈ ತರಹ ಆಗಿದೆ. ಹಾಗಾಗಿ, ಇದನ್ನು ಮೊದಲು ನೀವು ಮಾಡಿ ಎಂದು ಹೇಳಬೇಕು. ಮಾನ್ಯ ಗೃಹ ಮಂತ್ರಿಯವರು ಮತ್ತು ಆರೋಗ್ಯ ಸಚಿವರು ಒಟ್ಟಿಗೆ ಸಭೆಯನ್ನು ಕರೆದು, SHO (Station House Officer), Constables and Dafedar level ಗೆ ಇದು ಹೋಗಬೇಕು. ಮಾನ್ಯ ಸಚಿವರು ಬಿಲ್ಲನ್ನು ತಂದಿದ್ದಾರೆ. ಆದರೆ, ಅವರ ತಲೆಗೆ ಹೋಗುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ವೈಯಕ್ತಿಕವಾಗಿ ಏನಾಗಿದೆ ಎಂದರೆ, ಇಷ್ಟು ವರ್ಷ ನಡೆದಿರುವುದು ಅಪಘಾತವಾದಾಗ ಆ ವ್ಯಕ್ತಿ ಉಳಿಯುತ್ತಾನೆ ಎಂದರೂ ಸಹ, ಉಳಿಸುವುದಕ್ಕೆ ಹೋಗುತ್ತಿರಲಿಲ್ಲ. ಉಳಿಸುವುದಕ್ಕೆ ಹೋದರೆ ಸಿಕ್ಕಿ ಹಾಕಿಕೊಳ್ಳುತ್ತಾನೆ ಎಂದು ಭಯವಿತ್ತು. ಏಕೆಂದರೆ, ಠಾಣೆಯಲ್ಲಿ ಆ ರೀತಿಯೇ ಪ್ರಶ್ನೆಗಳನ್ನು ಕೇಳುತ್ತಾರೆ. ಅಲ್ಲಿಗೆ ನೀನು ಏಕೆ ಹೋಗಿದ್ದೆ? ಅವನಿಂದ ನಿನಗೆ ಏನು ಆಗಬೇಕಾಗಿತ್ತು? ನೀನು ಏಕೆ ಆತನನ್ನು ಎತ್ತಬೇಕಾಗಿತ್ತು ಎಂದೆಲ್ಲಾ ಕೇಳುತ್ತಾರೆ. ಅವನು ಅದರಲ್ಲಿಯೇ ಅರ್ಧ ಮುಗಿದು ಹೋಗುತ್ತಾನೆ. ಇನ್ನು

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಕ್ಷ್ಯ ವಿಚಾರಣೆಗೆ ಕರೆಯುವುದು ಮತ್ತು ಒಂದು ಬಾರಿ ಆತನ statement ಅನ್ನು ತೆಗೆದುಕೊಂಡರೆ ಪದೇ ಪದೇ ಆತನು ನ್ಯಾಯಾಲಯಕ್ಕೆ ಹೋಗುವಂಥ ವ್ಯವಸ್ಥೆ ಇರಬಾರದು. ಅದಕ್ಕೆ ಏನಾದರೂ ಈ ತಿದ್ದುಪಡಿಯಲ್ಲಿ ಸೇರಿಸುವುದು ಉತ್ತಮ.

**ಶ್ರೀ ಪ್ರಕಾಶ್ ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, *'THE KARNATAKA GOOD SAMARITAN AND MEDICAL PROFESSIONAL (PROTECTION AND REGULATION DURING EMERGENCY SITUATIONS)' ACT* ಅಂದರೆ, ಜೀವ ರಕ್ಷಕರಿಗೆ ಮಾತ್ರ ಇದನ್ನು ತಂದಿದ್ದಾರೆ. ನಾವು ವೈದ್ಯರ ಮೇಲೆ ಹಲ್ಲೆ ಆಗುವಂತಹ ಹಲವಾರು ನಿದರ್ಶನಗಳನ್ನು ನೋಡಿದ್ದೇವೆ. ಅದು ಬೇರೆ. ಅದರ ಬಗ್ಗೆ ಚರ್ಚೆಯ ಅವಶ್ಯಕತೆ ಇದೆ. ಅದರ ಬಗ್ಗೆಯೂ ಸಹ ಒಂದು ವಿಧೇಯಕವನ್ನು ತರಬೇಕಾಗುತ್ತದೆ. ಅದು ಇದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೂ ಸಹ, ನಾನು ಇದನ್ನು ಪ್ರಸ್ತಾಪ ಏಕೆ ಮಾಡಿದೇನೆಂದರೆ, ನೀವು ಜೀವರಕ್ಷಕರಿಗೆ protection ಅನ್ನು ಕೊಡುತ್ತಿದ್ದೀರಿ. ಇದರ ಜೊತೆಗೆ Medical Profession ನಲ್ಲಿ ಇರುವವರಿಗೂ ಸಹ protection ಕೊಡುವಂತಹ ಅಗತ್ಯ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದ್ದರಿಂದ, ಅದರ ಬಗ್ಗೆಯೂ ತಾವು ಒಂದು ವಿಧೇಯಕವನ್ನು ಮಂಡಿಸಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, It is not at all an amendment. ಇವತ್ತು ನಮ್ಮ ಮುಂದೆ ಇರುವಂತಹ ತಿದ್ದುಪಡಿಯನ್ನು ತಿದ್ದುಪಡಿ ಎನ್ನುವುದಕ್ಕಿಂತ, ಒಂದು ratification. ಇದು ಇಲ್ಲಿಂದ ಹೋಗಿರುವಂತಹ ತಿದ್ದುಪಡಿಗೆ, the Hon'ble President of India ದಲ್ಲಿ ಒಪ್ಪಿಗೆ ಕೊಟ್ಟು, ಇದನ್ನು ಕೈಬಿಡಿ ಎನ್ನುವ condition ಅನ್ನು ಹಾಕಿದ್ದಾರೆ. ನಮ್ಮ ಮುಂದೆ ಅಷ್ಟಕ್ಕೆ ಮಾತ್ರ ಇದು record ಬಂದಿರುತ್ತದೆ. ನಾವು ಸದನದಲ್ಲಿ ಏನೂ ಚರ್ಚೆ ಮಾಡದರೂ ಸಹಾ, ಇದು ಆಗಲೇ ಬೇಕು. ಮತ್ತೆ ಇದರಲ್ಲಿ ಇಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಅಲ್ಲಿಗೆ ಹೋಗಲೇಬೇಕಾಗುತ್ತದೆ.

**ಶ್ರೀ ಐವನ್ ಡಿ' ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, observation ಅನ್ನು ಮತ್ತೆ ತಿದ್ದುಪಡಿ ಮಾಡಲಿಕ್ಕೆ ಹೇಳಿದ್ದಾರೆ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವರು ಏನು ಒಪ್ಪಿಗೆ ಕೊಟ್ಟಿದ್ದಾರೆ ಅದಕ್ಕೆ ಮಾತ್ರ ನಾವು ಒಪ್ಪಿಗೆ ಕೊಡಬೇಕಾಗುತ್ತದೆ. ಹಾಗಾಗಿ, ಇದು 2016 ರಲ್ಲಿ ನಮ್ಮ ಮುಂದೆ ಅನುಮೋದನೆ ಪಡೆದಿದೆ. ಅನುಮತಿ ಪಡೆದಿರುವಂಥದ್ದು, ಚರ್ಚೆಯಾದ ಮೇಲೆ ಇವತ್ತು the Hon'ble President of India has given his assent, ಅದಕ್ಕೆ ನಾವು ಒಪ್ಪಿಗೆ ಕೊಡುವಂಥದ್ದು. ಹಾಗಾಗಿ, ಇದು ಬಹಳ ಅವಶ್ಯಕತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ. ಇಲ್ಲಿ ಬಹಳಷ್ಟು ಅಪಘಾತ ಆಗಬಹುದು, ಇನ್ನು ಬೇರೆ ಬೇರೆ ಚಟುವಟಿಕೆಗಳು ಆಗುವಂಥದ್ದು, ಅಂತಹ ಸಂದರ್ಭದಲ್ಲಿ ಜನ ಮುಂದೆ ಬಾರದೆ ಇರುವಂಥದ್ದು ಆಗುತ್ತಿತ್ತು. ಇವತ್ತು ಈ ಬಿಲ್ಲಿನಿಂದ ನಮಗೆ ಮುಂದಿನ ದಿವಸಗಳಲ್ಲಿ ಜನ ಕಾಪಾಡುವಂತಹ ಆಗುವಂಥದ್ದು ಆಗುತ್ತದೆ ಮತ್ತು ಜೀವ ಉಳಿಯುವಂಥದ್ದಕ್ಕೂ ಬೇಕಾದರೆ ದಾರಿ ಆಗುತ್ತದೆ. ಹಾಗಾಗಿ, ಇದು ಸರಿ ಇದೆ ಎನ್ನುವುದು ನನ್ನ ಭಾವನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಈ ವಿಧೇಯಕವನ್ನು ಪ್ರಶ್ನೆ ಮಾಡುತ್ತಿಲ್ಲ. ಈ ವಿಧೇಯಕ ಸರಿ ಇದೆ. ಆದರೆ, ಇಲ್ಲಿ ಏನೇ ಮಾಡಿದರೂ ಸಹ, ನಮ್ಮ ಸದಸ್ಯರಾದ ಐವನ್ ಡಿ'ಸೋಜಾ ಅವರಂತಹ ವಕೀಲರು ನಮ್ಮ ಎದುರಾಳಿಯಾಗಿ ಇದ್ದರೆ ಹೇಗಾದರೂ ಮಾಡಿ ಸಿಕ್ಕಿಸಿಕೊಳ್ಳುವುದಕ್ಕೆ ಅವಕಾಶಗಳು ಇದೆ. ನಮ್ಮ ಮಾನ್ಯ ಸದಸ್ಯರಾದ ಇಬ್ರಾಹಿಂ ಸಹೇಬರು ಹೇಳಿದಂತೆ ಇದಕ್ಕೆ ಸಹಾಯ ಮಾಡುವುದಕ್ಕೆ ಹೋದರೆ ಪೊಲೀಸರಿಂದ ಮತ್ತು ವಕೀಲರಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ. ಅಪಘಾತವಾದ ವ್ಯಕ್ತಿಯನ್ನು ಆಸ್ಪತ್ರೆಗೆ ತರಬೇಕಾದರೆ ಸತ್ತು ಹೋದರೆ, ನಿಮಗೆ ಅವನು ಸಾಯಿಸುತ್ತಾನೆ ಎಂದು ಗೊತ್ತಿದ್ದರೂ ಸಹ ನೀನು ಈ ರೀತಿ ಮಾಡಿದೆ, ಆ ರೀತಿ ಮಾಡಿದೆ ಎನ್ನುವಂತಹ ಸಾಧ್ಯತೆಗಳು ಇರುತ್ತವೆ. ಎರಡನೆಯದಾಗಿ, ಸಹಾಯ ಮಾಡುವುದಕ್ಕೆ ಹೋದವನಿಗೆ ಸಹಾಯ ಮಾಡುವುದು ಬಿಟ್ಟು ಬೇರೆ ಉದ್ದೇಶಗಳು ಇರುವುದಿಲ್ಲ. ಅಲ್ಲಿ ಪ್ರಶ್ನೆ ಏನು ಬರುತ್ತದೆ ಎಂದರೆ, ಉದ್ದೇಶ ಪೂರ್ವಕವಾಗಿ ಮರಣ ಸಂಭವಿಸಿದ್ದಕ್ಕೆ ಕಾರಣವಾದಾಗ ಅದನ್ನು ಯಾವ ರೀತಿ clarify ಮಾಡುವುದು? ಉದ್ದೇಶ ಪೂರ್ವಕವಾಗಿ ಸಹಾಯ ಮಾಡಲು ಹೋದಾಗ ಮರಣ ಸಂಭವಿಸುವ ಹಾಗೆ ಮಾಡಿದೆ ಎಂದರೆ, ನಾನು ಅದನ್ನು ಅದನ್ನು ಹೇಗೆ defend ಮಾಡಿಕೊಳ್ಳಬೇಕು? ನಾಳೆ ದಿವಸ ಆ clause ಗಳೇ harass ಮಾಡುವುದಕ್ಕೆ ದಾರಿಗಳು ಆಗುತ್ತವೆ. ಈ Bill ಗೆ ನಮ್ಮ ಸಂಪೂರ್ಣ ಬೆಂಬಲ ಇದೆ. ನಾಳೆ ಮಸೂದೆಯಾಗಿ ಹೋದಂತಹ ಸಂದರ್ಭದಲ್ಲಿ, between the lines ಹಾಕಿ ಹಿಡಿದುಕೊಂಡು ಚೆನ್ನಾಗಿ ರುಬ್ಬಿಯಾದ ಮೇಲೆ ಗುಂಡು ಕಲ್ಲಿನ ಕೆಳಗೆ ಬಾಕಿ ಉಳಿದಿದ್ದರೆ ಅದನ್ನು ಮೇಲೆ ಹಾಕಿ ಮತ್ತೆ ಮೇಲೆ ಹಾಕಿಕೊಂಡು ಚೆನ್ನಾಗಿ ರುಬ್ಬುತ್ತಾರೆ. ಮಾನ್ಯ ಸದಸ್ಯರಾದ ಇಬ್ರಾಹಿಂ ರವರು ಹೇಳಿದಂತೆ, ಪೊಲೀಸ್ ಠಾಣೆಗೆ ಹೋದ ತಕ್ಷಣ ಸುಮ್ಮನೆ ಬಿಟ್ಟು ಕಳುಹಿಸುವುದಿಲ್ಲ. ಅಪಘಾತವಾದಾಗ ಅಲ್ಲಿ ಯಾರು ಇದ್ದರು? ಅದನ್ನು ನೀನು ಯಾವ ರೀತಿ ನೋಡಿದೆ? ಅಪಘಾತವಾದ ಮೇಲೆ ಆ ವ್ಯಕ್ತಿಯನ್ನು ಯಾವ ವಾಹನದಲ್ಲಿ ಹಾಕಿಕೊಂಡು ಬಂದೆ ಎಂದು ಇದನ್ನೆಲ್ಲಾ ಕೇಳುತ್ತಾರೆ. ಬಹುಶಃ ಈ ರೀತಿ ನಮ್ಮ Scotland Yard ನವರು ಪ್ರಶ್ನೆಗಳನ್ನು ಕೇಳುವುದಿಲ್ಲ. ಆ ರೀತಿ ನಮ್ಮ ಪೊಲೀಸರು ಕೇಳುತ್ತಾರೆ. ಅದಕ್ಕೆ ಉತ್ತರಿಸುವುದಕ್ಕೆ ಬಹುಶಃ ನಮ್ಮ S.P. (Superintendent of Police) ಸಾಹೇಬರನ್ನು ಸಿವಿಲ್ ಡ್ರಸ್‌ನಲ್ಲಿ ಕಳುಹಿಸಿದರೂ ಆಗುವುದಿಲ್ಲ. ಆ ರೀತಿಯ ವಿಚಾರಣೆ ಮಾಡುವಂತಹ ತರಬೇತಿ ಇವರಿಗೆ ಇರುವುದಿಲ್ಲ. ಅನುಮಾನ ಬಂದಾಗ ಅವರನ್ನು ಗುಮಾನಿ ಮೇಲೆ ಕರೆದುಕೊಂಡು ಹೋಗಿ ಲಟ್ಟೆಯಿಂದ ಒಪ್ಪಿಕೊಳ್ಳುತ್ತೀಯಾ ಅಥವಾ ಇಲ್ಲವಾ ಎಂದು ನಾಲ್ಕು ಬಾರಿಸುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(491)17–12–2018(4–30)ಎಂವಿ–ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್ (ಮುಂದು...):–**
ಈ ತರಹದ ಸ್ಥಿತಿ ಇರುವಾಗ, ಗೊಂದಲಕ್ಕೆ ಅವಕಾಶವಾಗದ ರೀತಿ ಈ ವಾಕ್ಯಗಳನ್ನು ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಎಲ್ಲಾ ಮಾನ್ಯ ಹಿರಿಯ ಸದಸ್ಯರು ಈ ವಿಧೇಯಕದ ಬಗ್ಗೆ ಈಗಾಗಲೇ ಅವರವರ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ, ಅದೇ ರೀತಿ ಯಾವಾಗಲೊ ಒಂದು ಅಪಘಾತವಾಗಿರಬಹುದು ಅಥವಾ ಯಾರಾದರೂ ಹುಷಾರು ತಪ್ಪಿದರೆ, ಆಸ್ಪತ್ರೆಗೆ ಹೋದಾಗ ನಾವು ವೈದ್ಯರನ್ನು ದೇವರ ರೂಪದಲ್ಲಿ ನೋಡುತ್ತೇವೆ. ಆದರೆ, ಇತ್ತೀಚೆಗೆ ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಯಾರು ಹೆಚ್ಚಿಗೆ ಹಣವನ್ನು ಪಾವತಿ ಮಾಡುತ್ತಾರೆಯೋ; ಬಹಳ ಒಳ್ಳೆಯ ಖಾಸಗಿ ಆಸ್ಪತ್ರೆಗೆ ಹೋಗಿ ನಾವು ಚಿಕಿತ್ಸೆ ಪಡೆಯಬೇಕಾದರೆ, ಇತ್ತೀಚೆಗೆ ಬೆಂಗಳೂರಿನಲ್ಲಿ, ಶ್ರೀ ಏಳುಮಲೈ ಎನ್ನುವ ನಗರ ಸಭಾ ಸದಸ್ಯರು, ಅವರಿಗೆ ಏನೂ ಆಗಿರಲಿಲ್ಲ. ಅವರು ಚೆನ್ನಾಗಿಯೇ ಮಾತನಾಡಿಕೊಂಡು ಇದ್ದರು. ಅವರು ಒಂದು ಸಣ್ಣ ಗುಳ್ಳೆಗೋಸ್ಕರ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದಾರೆ. ಒಬ್ಬ ಡಾಕ್ಟರು anesthesia ವನ್ನು ಮೂಗಿಗೆ ಕೊಟ್ಟಿದ್ದಾರೆ. ಅದು ನೇರವಾಗಿ brain ಗೆ ಹೋಗಿದೆ. ಅದು brain ಗೆ ಹೋಗಿದ್ದರಿಂದ, ಅವರು ಸುಮಾರು 20 ರಿಂದ 25...

**ಸಭಾಪತಿಯವರು:–** ಆ ವಿಷಯ ಬೇರೆ ಬೇರೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಕೇಳಿ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸದಸ್ಯರಾದ ಮಾನ್ಯ ಹೆಚ್.ಎಂ.ರಮೇಶ್ ಗೌಡರು ಮಾತನಾಡಲಿ. ಆದರೆ, ಅವರು ಮಾತನಾಡುತ್ತಿರುವುದಕ್ಕೂ ಈ ವಿಧೇಯಕಕ್ಕೂ ಸಂಬಂಧವಿದೆಯೇ? ಡಾಕ್ಟರು ಕೊಡುವಂತಹ ಚಿಕಿತ್ಸೆಯೇ ಬೇರೆ. ಇಲ್ಲಿ ನಡೆಯುತ್ತಿರುವಂತಹ ವಿಷಯವೇ ಬೇರೆ. ದಯಮಾಡಿ ಅವರು ಮೊದಲು ವಿಷಯವನ್ನು ತಿಳಿದುಕೊಳ್ಳಲಿ. ಅದನ್ನು ಆರೋಗ್ಯದ ವಿಷಯದ ಬಗ್ಗೆ ಚರ್ಚೆ ಬಂದಂತಹ ಸಂದರ್ಭದಲ್ಲಿ ಚರ್ಚೆ ಮಾಡೋಣ. ಅವರು ಈಗ ವಿಧೇಯಕಕ್ಕೆ ಸಂಬಂಧಪಟ್ಟಂತೆ ಏನಾದರೂ ಸಲಹೆ ನೀಡುವುದಿದ್ದರೆ ನೀಡಲಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:–** ಮಾನ್ಯ ಸಭಾಪತಿಯವರೆ, ವಿಧೇಯಕದ ಬಗ್ಗೆ ಈಗಾಗಲೇ ಸುಮಾರು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅದರ ಬಗ್ಗೆ ಮಾತನಾಡುವಂಥದ್ದು ಏನು ಇಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶಿವಾನಂದ ಎಸ್. ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, the Hon'ble President of India has already given his assent. ಈಗಾಗಲೇ ಈ ವಿಧೇಯಕ ಕೇಂದ್ರ ಸರ್ಕಾರದಲ್ಲೂ ಆಗಿದೆ ಮತ್ತು ಇಲ್ಲಿಯೂ ಕೂಡ ಒಂದು ಸಣ್ಣ ತಿದ್ದುಪಡಿ ಆಗಬೇಕಾಗಿದೆ. ಈಗಾಗಲೇ ಸದಸ್ಯರಾದ ಮಾನ್ಯ ಪಿ.ಆರ್.ರಮೇಶ್‌ರವರು ಹೇಳಿದ ಹಾಗೆ, ಇದು ಒಂದು ratification ಅಷ್ಟೆ ಮತ್ತೇನು ಇಲ್ಲ. ಹಾಗೆಯೇ ಸದಸ್ಯರಾದ ಮಾನ್ಯ ಪ್ರಕಾಶ್ ರಾಥೋಡ್‌ರವರು ಹೇಳಿದ ಹಾಗೆ, ಡಾಕ್ಟರುಗಳಿಗೆ ಈಗಾಗಲೇ ರಕ್ಷಣೆ ಕೊಟ್ಟಿರುವಂತಹ ಕಾನೂನು. ಅದು ಸೆಕ್ಷನ್ 5ರಲ್ಲಿ ಇದೆ. ಅದು ಇದರಲ್ಲಿ ಬಂದಿಲ್ಲ. ಆದುದರಿಂದ ಇದಕ್ಕೆ ಅನುಮತಿ ಕೊಡಬೇಕು.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

ಖಂಡ 2

**ಸಭಾಪತಿಯವರು:–** “ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಶಿವಾನಂದ ಎಸ್. ಪಾಟೀಲ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಜೀವರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ (ತುರ್ತು ಸನ್ನಿವೇಶಗಳಲ್ಲಿ ರಕ್ಷಣೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

ಇ) **ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದಲ್ಲಿ 1998–99ರಲ್ಲಿ KTPP (The Karnataka Transparency in Public Procurements) Act ಅನ್ನು ಮಾಡಿಕೊಂಡಿದ್ದೇವೆ. ಸರ್ಕಾರ ತನ್ನ ಖರೀದಿಯಲ್ಲಿ ಪಾರದರ್ಶಕತೆಯನ್ನು ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ. ತದನಂತರ ಕಾಲ ಬದಲಾವಣೆಯಾದ ಹಾಗೆ ಇವತ್ತಿನ ದಿನಕ್ಕೆ ಅಗತ್ಯ ಇರುವಂತಹ ಕೆಲವು ಮಾರ್ಪಾಡುಗಳನ್ನು ಈ ಮೂಲ ಕಾನೂನಿನಲ್ಲಿ ತರಬೇಕು ಎಂಬ ಉದ್ದೇಶದಿಂದ, 2014–15ನೇ ಸಾಲಿನಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಸಮಿತಿಯವರು ಈ ವಿಧೇಯಕದ ಕಾನೂನನ್ನು ಪರಿಶೀಲನೆ ಮಾಡಿ, ಇವತ್ತಿನ ದಿವಸಕ್ಕೆ ಅವಶ್ಯಕತೆ ಇರುವಂತಹ, ಮಾರ್ಪಾಡುಗಳು ಏನು ಎಂಬುದನ್ನು ಚರ್ಚೆ ಮಾಡಿ, ಅವರು ಕೆಲವು ಶಿಫಾರಸ್ಸುಗಳನ್ನು ಮಾಡಿದರು. ತದನಂತರದಲ್ಲಿ ಸರ್ಕಾರ ಅವುಗಳನ್ನು ಹಂತ–ಹಂತವಾಗಿ ಪರಿಶೀಲನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ, ಕೆಲವುಗಳನ್ನು ಒಪ್ಪಿಕೊಂಡು, ಇವತ್ತು ಅವುಗಳನ್ನು ಮೂಲ ಕಾನೂನಿಗೆ ತಿದ್ದುಪಡಿ ಮಾಡುವಂಥದ್ದಕ್ಕೆ ಈ ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದೇವೆ. ಇದರಲ್ಲಿ ಕೆಲವು ಕಾಲಕ್ಕೆ ಅನುಗುಣವಾಗಿ ತಂತ್ರಜ್ಞಾನ ಬದಲಾವಣೆ ಆದಹಾಗೆ ಏನು ಬದಲಾವಣೆಗಳು ಬೇಕಾಗಿವೆ  ಅಂತಹ ತಿದ್ದುಪಡಿಗಳು ಇದರಲ್ಲಿ ಅಡಕವಾಗಿವೆ.

ಎರಡನೆಯದಾಗಿ ಅನುಭವದ ಆಧಾರದ ಮೇಲೆ ಏನು ಸುಧಾರಣೆಗಳನ್ನು ಮಾಡಬಹುದು ಎನ್ನುವಂತಹ ಕೆಲವು ವಿಚಾರಗಳು ಸಹ ಇದರಲ್ಲಿ ಅಡಕವಾಗಿವೆ. ಇನ್ನು ಸಾಕಷ್ಟು ವಿಚಾರಗಳು ಮತ್ತು ಬದಲಾವಣೆಗಳು, ಬಹುಶಃ KTPP ಕಾನೂನಿನ ಬಗ್ಗೆ ಸಾಕಷ್ಟು ಅಭಿಪ್ರಾಯಗಳು ಇರಬಹುದು. ಮೂರು ವರ್ಷಗಳ ಪ್ರಯತ್ನದಿಂದ ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಇವತ್ತು ತೆಗೆದುಕೊಂಡು ಬಂದಿದ್ದೇವೆ. ಅದರಲ್ಲಿ ಮುಖ್ಯವಾಗಿ ಹೇಳುವುದಾದರೆ, ಮೊದಲಿಗೆ Tender Notifying Authority ಎಂದು ಇರುತ್ತಿತ್ತು. ಈಗ ಆ Tender Notifying Authority ಯನ್ನು ತೆಗೆದು, ಎಲ್ಲವನ್ನು ಸಹ e-Portal ಮುಖಾಂತರ ನೋಟಿಫಿಕೇಶನ್ ಮಾಡುವುದು ಒಂದು ಸಣ್ಣ ಬದಲಾವಣೆ. ಮೊದಲಿಗೆ ಅವರು ಕೇವಲ Tendering Authority ಆಗಿರುತ್ತಿದ್ದರು. ಯಾರು ಟೆಂಡರ್ ಮಾಡುತ್ತಿದ್ದರು, ಅವರು ಟೆಂಡರ್‌ನ್ನು ಅವಾರ್ಡ್ ಮಾಡುವವರೆಗೆ ಮಾತ್ರ ಅವರ ಜವಾಬ್ದಾರಿ ಸೀಮಿತವಾಗಿರುತ್ತಿತ್ತು. ಈಗ ಅದನ್ನು ತಿದ್ದುಪಡಿ ಮಾಡಿ, ಅವರು *‘Contract Execution Management’* ಸಹ ಅವರ ಜವಾಬ್ದಾರಿಯಾಗಿರುತ್ತದೆ. ಅಂದರೆ, ಟೆಂಡರ್ ಅವಾರ್ಡ್ ಮಾಡಿದ ನಂತರ ಆ ಕೆಲಸ ಸರಿಯಾಗಿ ಆಗಿದೆಯೇ? ಇಲ್ಲವೇ? ಎನ್ನುವ ಜವಾಬ್ದಾರಿಯನ್ನು ಕಾನೂನು ಮುಖಾಂತರ ಅದೇ Tendering Authority ಗೂ ಸಹ ಕೊಡುತ್ತೇವೆ. ಅದನ್ನು ಕೊಡುವುದು ಅಷ್ಟೆ ಅಲ್ಲ. ಅದನ್ನು ನಿಯಮಾವಳಿ ರಚನೆ ಮಾಡುವಾಗ compliance satisfactory ಆಗಿದೆಯೇ? ಇಲ್ಲವೇ? ಎನ್ನುವುದಕ್ಕೆ ಮಾನದಂಡಗಳು ಸಹ ನಿಗದಿಯಾಗುತ್ತದೆ. ಆಗ ಇದರ ಅನುಕೂಲ ಏನೆಂದರೆ, ಯಾರು ಟೆಂಡರ್ ಮಾಡುತ್ತಾರೆ, ಟೆಂಡರ್ ಮಾಡಿ ಅವಾರ್ಡ್ ಮಾಡುವುದು ಅಷ್ಟೆ ಅಲ್ಲ. Performance Evaluation ಸಹ ಈಗ ಕಾನೂನಿನಲ್ಲಿ ಬರುತ್ತಿದೆ. ಹಿಂದೆ compliance ಆಗಿಲ್ಲವೆಂದು ನಿಯಮದಲ್ಲಿ ಇಲ್ಲದೇ ಇರಬಹುದು. ಈಗ ಅದಕ್ಕೆ ಕಾನೂನಿನ ಬಲವನ್ನು ಕೊಟ್ಟು, ನಿರ್ದಿಷ್ಟವಾದಂತಹ ಮಾನದಂಡಗಳನ್ನು ನಿಗದಿ ಮಾಡುವಂಥದ್ದು ಈ ತಿದ್ದುಪಡಿ ಮುಖಾಂತರ ಆಗುತ್ತಿದೆ. ಅದು ಸೆಕ್ಷನ್ ಎರಡರಲ್ಲಿ ಬರುತ್ತಿದೆ.

ಹಾಗೆಯೇ ಸೆಕ್ಷನ್ ಎರಡರಲ್ಲಿ, *‘e-Procurement Platform’* ಬಗ್ಗೆ ಮಾತನಾಡುತ್ತಾ. ಈಗ ಹೊಸದಾಗಿ ಇನ್ನೊಂದು innovation ಅನ್ನು ಇದರಲ್ಲಿ ಪರಿಚಯ ಮಾಡುತ್ತಿದ್ದೇವೆ. ಈಗ ಟೆಂಡರ್ ಕರೆಯುತ್ತೇವೆ, L-1 ಎಂದು ನಿಗದಿ ಮಾಡುತ್ತೇವೆ. L-1 ಅನ್ನು ನಿಗದಿ ಮಾಡಿದ ಮೇಲೆ, L-1 ಅನ್ನು ಅವರನ್ನು ನಾವು negotiation ಗೆ ಕರೆಯುತ್ತೇವೆ. ಈಗ ಇರುವಂತಹ ಕಾನೂನು ಪ್ರಕಾರ ನಾವು L-1 ಅನ್ನು ಬಿಟ್ಟು ಬೇರೆ ಯಾರನ್ನು ಸಹ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

negotiation ಗೆ ಕರೆಯುವಂತಿಲ್ಲ. ಇವತ್ತು ತಿದ್ದುಪಡಿ ಮಾಡಿ ನಾವು ಏನನ್ನು ಮಾಡುತ್ತಿದ್ದೇವೆ ಎಂದರೆ ಒಂದು *'Electronic Reverse Auction'* ಗೆ provision create ಮಾಡುತ್ತಿದ್ದೇವೆ. ಈಗ L-1 ನವರು ಶೇಕಡಾ 5ರಷ್ಟು premium ಅನ್ನು ಹಾಕಿದ್ದಾರೆಂದು ಇಟ್ಟುಕೊಳ್ಳಿ. ಅದನ್ನು ಯಾರು ಹಾಕಿದ್ದಾರೆಂದು ನಾವು publish ಮಾಡುವುದಿಲ್ಲ. ಆದರೆ, ನಿಮ್ಮ ಪೈಕಿ ಒಬ್ಬರು ಶೇಕಡಾ 5ರಷ್ಟು premium ಅನ್ನು ನಮೂದಿಸಿದ್ದಾರೆಂದು publish ಮಾಡಿ, ಅದಕ್ಕೆ ಇಂತಿಷ್ಟು ಸಮಯವೆಂದು ಕೊಡುತ್ತೇವೆ. ಟೆಂಡರ್‌ಗೆ ಯಾರ್‍ಯಾರು technically qualify ಆಗಿರುತ್ತಾರೆ, ಅವರೆಲ್ಲರಿಗೂ ಸಹ Bid ಮಾಡುವುದಕ್ಕೆ ಇನ್ನೊಂದು ಅವಕಾಶವನ್ನು ಕೊಡುತ್ತೇವೆ. ಅವರ ಪೈಕಿ ಯಾರಾದರೂ ಶೇಕಡಾ 5ಕ್ಕಿಂತಲೂ ಕಡಿಮೆಗೆ ಬರುತ್ತೇವೆಂದರೆ, technically qualified ಇದ್ದರೆ ಆಗುತ್ತದೆ.

(492)17–12–2018(04–40)ಎಲ್‌ಎಲ್–ಜಿಆರ್

**(ಸಭಾಪತಿಯವರ ಉಪಸ್ಥಿತಿ)**

ಶ್ರೀ ಕೃಷ್ಣಭೈರೇಗೌಡ(ಮುಂದುವರೆದಿದ್ದು...):–
ಹೀಗಾಗಿ ತ್ವರಿತವಾಗಿ ಎರಡನೇ ಸುತ್ತಿನ ಬಿಡ್ಡಿಂಗ್ ಮಾಡುವುದರಿಂದ ಎಲ್ಲಿಯೋ ಒಂದು ಕಡೆ ಸರ್ಕಾರಕ್ಕೆ ಇನ್ನೂ ಕಡಿಮೆ ದರದಲ್ಲಿ ಟೆಂಡರುದಾರರು ಸಿಗಬಹುದೆಂಬ ನಿರೀಕ್ಷೆಯನ್ನು ಅದರ ಮುಖಾಂತರ ನಾವು ಇಟ್ಟುಕೊಂಡಿದ್ದೇವೆ. ಆ ಒಂದು ಬದಲಾವಣೆಯನ್ನು ಸಹ ಇದರಲ್ಲಿ ತರುತ್ತಿದ್ದೇವೆ. ಆ ನಂತರ 'tender' ಮುಂತಾದ ಕೆಲವು definitions ಗಳ ಬಗ್ಗೆ ಸಾಕಷ್ಟು ಅನುಮಾನಗಳಿದ್ದವು. ಅವುಗಳನ್ನು ಇದರಲ್ಲಿ ಸ್ಪಷ್ಟೀಕರಿಸುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಇನ್ನು ಮೂಲ ಕಾನೂನಿನಲ್ಲಿ ಯಾವತ್ತೂ ಉಪಯೋಗಕ್ಕೆ ಬಾರದೇ ಇರುವಂತಹ ಕೆಲವು ವಿಚಾರಗಳಿದ್ದವು. ಅಂದರೆ, ಪ್ರಾಕ್ಟಿಕಲಿ ಅವುಗಳನ್ನು ನಾವು ಯಾವತ್ತೂ ಸಹ ಉಪಯೋಗ ಮಾಡಿರುವುದಿಲ್ಲ. ಇವತ್ತಿನ ದಿವಸ ಅವುಗಳು ಉಪಯೋಗವಿರುವುದಿಲ್ಲ. ಅಂತಹ ಪ್ರಾವಿಷನ್‌ಗಳನ್ನು ತೆಗೆದು ಹಾಕುತ್ತಿದ್ದೇವೆ. We are omitting certain provisions.

ಇನ್ನೊಂದು ಬಹಳ ಮುಖ್ಯವಾಗಿ ಭಾರತ ಸರ್ಕಾರದವರು 3–4 ವರ್ಷಗಳ ಹಿಂದೆ *Government e-Marketplace* ಎಂದು ಒಂದು ಲಿಸ್ಟ್ ಅನ್ನು ಅವರು publish ಮಾಡುತ್ತಿದ್ದಾರೆ. ಅದಕ್ಕೆ 'GeM' ಎಂದು ಕರೆಯುತ್ತಾರೆ. It is an e-Market portal. ಅದರಲ್ಲಿ ಕೇಂದ್ರ ಸರ್ಕಾರದಿಂದ ಪುರಸ್ಕೃತರಾಗಿರುವಂತಹವರು ಅವರವರ ಉತ್ಪನ್ನಗಳಿಗೆ ದರವನ್ನು ಘೋಷಣೆ ಮಾಡಬಹುದು. Voluntary ಆಗಿ ಡಿಕ್ಲೇರ್ ಮಾಡುತ್ತಾರೆ. ಕೇಂದ್ರ ಸರ್ಕಾರದ ಅಧಿಕೃತ ಛಾಪು ಅಥವಾ ಮಾನ್ಯತೆ ಇದೆ. 'GeM' ಎಂಬ ಪೋರ್ಟಲ್ ಅನ್ನು ರನ್ ಮಾಡಿದ್ದಾರೆ. It is a competitive portal ಮತ್ತು ಯಾರು ಸರ್ಟಿಫೈಡ್ ಸಪ್ಲೈಯರ್ಸ್ ಇದ್ದಾರೆ, ಅಂತಹವರು ಮಾತ್ರ ಅದರಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ. ಹಾಗಾಗಿ, 'GeM' ನಲ್ಲಿ ಅವರು ಇದ್ದರೆ, ಅಂದರೆ, ಕೇಂದ್ರ ಸರ್ಕಾರದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೋರ್ಟಲ್‌ನಲ್ಲಿದ್ದರೆ ಅವರಿಗೆ ನಾವು ನೇರವಾಗಿ ಖರೀದಿ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಡುತ್ತಿದ್ದೇವೆ. ಏಕೆಂದರೆ, ಈಗಾಗಲೇ ಅಲ್ಲಿ already competitive process ಇರುವುದರಿಂದ, ಕೇಂದ್ರ ಸರ್ಕಾರದ ಪೋರ್ಟಲ್‌ನಲ್ಲಿ ಯಾರು ತಮ್ಮ ದರವನ್ನು quote ಮಾಡಿದ್ದಾರೆ, ಆ ದರವನ್ನು ಉಪಯೋಗಿಸಿಕೊಂಡು ಇಲಾಖೆಗಳು procurement ಮಾಡಿಕೊಳ್ಳಬಹುದು ಎನ್ನುವಂತಹ ಅವಕಾಶಗಳನ್ನು ಮಾಡಿಕೊಡುತ್ತಿದ್ದೇವೆ.

ಆ ನಂತರ, ಸಣ್ಣ ಮತ್ತು ಅತೀ ಸಣ್ಣ ಉದ್ಯಮಗಳಿಗೆ ಆದ್ಯತೆ ಕೊಡಬೇಕೆಂದು ನಾವು ಹೇಳುತ್ತಿದ್ದೇವೆ. ಅದರ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಈಗ ಕೇಂದ್ರ ಸರ್ಕಾರದ ಕಾನೂನಿನಲ್ಲಿ ಸಣ್ಣ ಮತ್ತು ಅತೀ ಸಣ್ಣ ಉದ್ದಿಮೆದಾರರ ಬಗ್ಗೆ ವ್ಯಾಖ್ಯಾನ ಇದೆ. ಅದನ್ನು adopt ಮಾಡಿಕೊಳ್ಳುವುದರ ಜೊತೆಗೆ ಶೇಕಡ 15ರಷ್ಟು cost benefit advantage ಅನ್ನು ಅವರಿಗೆ ನಾವು ಕೊಡುವುದಕ್ಕೂ ಸಹ ಇದರಲ್ಲಿ M.S.M.E., (Micro, Small and Medium Enterprises) Sector ಗೆ ಶೇಕಡ 15ರಷ್ಟು price preference ಕೊಡುವುದಕ್ಕೆ and this is applicable as per the Central Government's guidelines ಅನ್ನುವುದಕ್ಕೆ ಈ ರೀತಿಯ ಕೆಲವು ತಿದ್ದುಪಡಿಗಳನ್ನು ನಾವು ಕೆ.ಟಿ.ಪಿ.ಪಿ., ಕಾನೂನಿಗೆ ತೆಗೆದುಕೊಂಡು ಬಂದಿದ್ದೇವೆ. ಅದರಲ್ಲಿ ಕೆಲವು ಪ್ರಮುಖವಾಗಿರುವುದನ್ನು ನಾನು ಹೇಳಿದ್ದೇನೆ. ಇನ್ನೂ ಸಣ್ಣ ಪುಟ್ಟ ಬದಲಾವಣೆಗಳು, ಕೆಲವು ಸ್ಪಷ್ಟತೆ, ಇವೆಲ್ಲವೂ ತುಂಬಾ ಇವೆ. ಈ ಹಿಂದೆ debarment of tenderers ಅದಕ್ಕೆ ಸ್ಪಷ್ಟೀಕರಣ ಇರಲಿಲ್ಲ. Blacklisting ಮಾಡುತ್ತಿದ್ದರು. ಆದರೆ, ಈಗ ಅದಕ್ಕೆ ಸ್ಪಷ್ಟವಾಗಿ Tendering Authority ಗೆ ಹೆಚ್ಚಿನ ಅಧಿಕಾರ ಕೊಟ್ಟಿದ್ದೇವೆ. ಅಂದರೆ, ಈ ಬಗ್ಗೆ ನಾನು ಆರಂಭದಲ್ಲಿ ಹೇಳಿದ ರೀತಿ ಕೇವಲ ಟೆಂಡರ್ ಕರೆಯುವುದಕ್ಕೆ ಅಷ್ಟೇ ಅವರ ಕೆಲಸ ಮುಗಿಯುತ್ತಿತ್ತು. ಈಗ project execution powers ಕೊಡುತ್ತಿದ್ದೇವೆ. ಇದರ ಜೊತೆಗೆ debarment powers ಅವರಿಗೆ ಕೊಡುತ್ತಿದ್ದೇವೆ. ಏಕೆಂದರೆ, compliance is not satisfactory ಎಂದು ಬಂದ ಮೇಲೆ ಏನು ಮಾಡುತ್ತೀರೆಂದು ನಾವು ಹೇಳಬಹುದು. ಆ ಒಂದು ಅಧಿಕಾರಗಳನ್ನು ಸಹ ಈ ತಿದ್ದುಪಡಿ ಮುಖಾಂತರ ತೆಗೆದುಕೊಂಡು ಅವರನ್ನು ನಾವು ಡಿಬಾರ್ ಮಾಡುವಂಥದ್ದಾಗಲೀ, ಅಂದರೆ ನಾವು ಏನು ವಾಡಿಕೆಯಲ್ಲಿ Blacklisting ಎಂದು ಕರೆಯುತ್ತೇವೆ ಅದನ್ನು ಲೀಗಲ್ ಆಗಿ debarment ಎಂದು ಕರೆಯುತ್ತಾರೆ. ಈ ರೀತಿ debarment ಅನ್ನು ಆ ಇಲಾಖೆಯ ಮಟ್ಟಿಗಾದರೂ ಮಾಡಬಹುದು ಮತ್ತು ಇಲಾಖೆಗಳಲ್ಲಿ ಅಲ್ಲದೇ ಇಡೀ ರಾಜ್ಯಕ್ಕೂ ಸಹ ಅವರನ್ನು ಡಿಬಾರ್ ಮಾಡಬಹುದು. ಅದಕ್ಕೆ ಸಹ ಈ ವಿಧೇಯಕದಲ್ಲಿ ಅವಕಾಶವನ್ನು ಮಾಡಿಕೊಂಡಿದ್ದೇವೆ. ಇದೆಲ್ಲಾ ಅನುಭವದ ಆಧಾರದ ಮೇರೆಗೆ ತೆಗೆದುಕೊಂಡಿರುವ ಬದಲಾವಣೆಗಳು.

ಟೆಂಡರ್ ಹಂತದಲ್ಲಿ ಯಾವುದಾದರೂ ವ್ಯಾಜ್ಯ ಬಂದರೆ, ಟೆಂಡರುದಾರರಿಗೆ ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶವಿದೆ. ಅದರಲ್ಲಿ ಯಾರು ಮೇಲ್ಮನವಿದಾರರು ಎನ್ನುವುದು ಪ್ರತಿಯೊಂದು ಇಲಾಖೆಯಲ್ಲಿಯೂ ಅದು ಮೊದಲೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಗದಿಯಾಗಿರುತ್ತದೆ. ಅವರು designated ಇರುತ್ತಾರೆ. ಡೈರೆಕ್ಟರ್ ಟೆಂಡರ್ ಕರೆದರೆ, ಕಮೀಷನರ್ ಇರುತ್ತಾರೆ. ಕಮೀಷನರ್ ಟೆಂಡರ್ ಕರೆದರೆ ಪ್ರಧಾನ ಕಾರ್ಯದರ್ಶಿಗಳು Appellate Authority ಇರುತ್ತಾರೆ. ಇದಕ್ಕೆ ಈ ಹಿಂದೆ 30 ದಿನಗಳ ಸಮಯಾವಕಾಶ ಇತ್ತು. ಕೆಲಸ ಕಾರ್ಯಗಳು ನಿಧಾನವಾಗುತ್ತದೆ ಎನ್ನುವ ಕಾರಣಕ್ಕಾಗಿ ಅಪೀಲು ಮಾಡುವುದಕ್ಕೆ 15 ದಿನಗಳಿಗೆ ಸೀಮಿತ ಮಾಡುತ್ತಿದ್ದೇವೆ. ಇವು ಕೆಲವು ತಿದ್ದುಪಡಿಗಳು. ಇವೆಲ್ಲವೂ ಸಹ ಸಕಾರಾತ್ಮಕ ದಿಕ್ಕಿನಲ್ಲಿರುವುದರಿಂದ ಇದಕ್ಕೆ ಸದನ ಸಹಕಾರ ಕೊಡಬೇಕು ಮತ್ತು ಈ ವಿಧೇಯಕವನ್ನು ಅಂಗೀಕಾರ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, e-Tender, e-Marketing ಮಾಡುವುದು ಎಲ್ಲಾ ಸರಿ ಇದೆ. ಈ pre-qualification ಮಾಡುತ್ತಾರಲ್ಲಾ ಅಲ್ಲೇ ಸಮಸ್ಯೆ ಇರುವುದು. ಯಾರು ಟೆಂಡರ್ ಹಾಕಬೇಕು ಎನ್ನುವಂತಹ ಏನು pre-qualification ಇಡುತ್ತಾರೆ ಅಲ್ಲಿಯೇ ಕರ್ನಾಟಕದವರು ಸತ್ತು ಹೋಗಿದ್ದಾರೆ. ಈಗ ಏನಿದ್ದರೂ ಆಂಧ್ರಪ್ರದೇಶ, ಬೊಂಬಾಯಿ, ದಿಲ್ಲಿಯ ಕಂಟ್ರಾಕ್ಟರ್‌ಗಳು ಟೆಂಡರು ತೆಗೆದುಕೊಂಡು, ನಮ್ಮವರಿಗೆ ಸಬ್–ಟೆಂಡರ್ ಕೊಡುತ್ತಾರೆ. ಈ ಹಿಂದಿನ ಯಾವುದೇ ದೊಡ್ಡ ಟೆಂಡರುಗಳನ್ನು ತೆಗೆದು ನೋಡಿದರೂ ಸಹ ಅದರಲ್ಲಿ ಕೆಲಸ ಮಾಡುತ್ತಿರುವುದು ನಮ್ಮ ರಾಜ್ಯದ ಟೆಂಡರುದಾರರು. ಆದರೆ, ಟೆಂಡರು ಮಾತ್ರ ಹೊರಗಿನವರ ಹೆಸರಿನಲ್ಲಿರುತ್ತದೆ. ಏಕೆಂದರೆ, ಅವರು pre-qualified ಆಗಿದ್ದಾರೆ. ಈ ಖಾಯಿಲೆಗೆ ಏನು ಮದ್ದು? ಈಗಾಗಲೇ ಕರ್ನಾಟಕದ ಜನ ಕೆಲಸ ಏನು ಮಾಡುತ್ತಿದ್ದಾರೆ, ಇಂತಹ ಟೆಂಡರುಗಳಲ್ಲಿ ನೇರವಾಗಿ ಅವರಿಗೆ ಕೆಲಸ ಸಿಗತಕ್ಕಂತಹ pre-qualification conditions ಗಳು ಇವೆ, ಅದನ್ನು ಟೆಂಡರಿಂಗ್ ಅಥಾರಿಟಿಗೆ ಕೊಡುತ್ತಾರೆಯೇ?

ಎರಡನೆಯದಾಗಿ, ಒಂದು ಸಲ lowest ಎಂದು ಮಾಡಿದ ಮೇಲೆ ಮತ್ತೆ ಪುನಃ ಅವರನ್ನು discussion ಗೆ ಕರೆದರೆ, ಪುನಃ process late ಆಗುತ್ತದೆ. ಅದು ಹೇಗೆ ಎಂದು ಹೇಳಿದರೆ, ಅಪ್ಪ ಬಜೆಟ್ ಮಂಜೂರು ಮಾಡಿದರೆ, ಮಗ ಟೆಂಡರ್ ಕರೆಯುವಂತಹ ಸಮಯ ಬಂದಿರುತ್ತದೆ. ಆ ಟೆಂಡರ್ ಪ್ರೋಸೆಸ್ ಪೂರ್ತಿಯಾಗಿ ಬರಬೇಕೆಂದರೆ, ಬಜೆಟ್ ಸೆಷನ್ ಬಂದಿರುತ್ತದೆ. ಇದಕ್ಕೆ ನನ್ನ ಉದಾಹರಣೆಯನ್ನೇ ಹೇಳುತ್ತೇನೆ. ನನ್ನ ಊರಾದ ಭದ್ರಾವತಿ–ಕಳಾಸದ ಒಂದು ಸೇತುವೆಗೆ ಟೆಂಡರ್ ಕರೆಯುವುದಕ್ಕೆ ಒಂದೂವರೆ ಎರಡು ವರ್ಷವಾಯಿತು. ಟೆಂಡರ್ನ್ನ ಕರೆದ ನಂತರ ನಕಾಶೆ ಸರಿಯಿಲ್ಲವೆಂದು ಪುನಃ ಟೆಂಡರ್ ಬದಲಾವಣೆ ಮಾಡಬೇಕೆಂದು ಹೇಳುತ್ತಾರೆ. ಹೀಗಾಗಿ, ಟೆಂಡರ್ ಕೊಟ್ಟಂತಹ ಸಂದರ್ಭದಲ್ಲಿ ಟೆಂಡರ್ ದರ 40 ಇರುತ್ತದೆ, ಸರ್ಕಾರದಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾದರೆ ಗುತ್ತಿಗೆದಾರ, *"ಈ ಹಿಂದೆ ಟೆಂಡರ್‌ಗೆ ಇಷ್ಟು ದರ ಇತ್ತು, ಈಗ ಟೈಮ್ ಲ್ಯಾಪ್ಸ್ ಆಗಿದೆ. ದರ ಜಾಸ್ತಿ ಮಾಡಿಕೊಡಿ"* ಎಂದು ಕೇಳುತ್ತಾನೆ. ಅದಕ್ಕೆ ಸರ್ಕಾರದವರು ಟೆಂಡರಿಂಗ್ ಅಥಾರಿಟಿಗೆ ಪೂರ್ಣವಾದಂತಹ ಅಧಿಕಾರ ಕೊಡಬೇಕಾಗಿದೆ. ಉದಾಹರಣೆಗೆ, Tannery Road ಅಗಲವಾಗಬೇಕು. 3 ವರ್ಷದ ಹಿಂದೆ ಶ್ರೀ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿದ್ದರಾಮಯ್ಯನವರು ಚೌಡ(ಅಗಲೀಕರಣ) ಮಾಡುತ್ತಿದ್ದೇವೆಂದು ಹೇಳಿದರು. 3 ವರ್ಷ ಕಳೆದರೂ ಸಹ ಇನ್ನೂ ಚೌಡ ಆಗಿರುವುದಿಲ್ಲ. ಏಕೆಂದರೆ, TDR ಗೆ ಸಂಬಂಧಿಸಿದ ಆ ಫೈಲ್ ಇಲ್ಲಿದೆ, ಈ ಫೈಲ್ ಅಲ್ಲಿದೆ ಎಂದು ಉತ್ತರ ನೀಡುತ್ತಾರೆ. ಓಡಾಡುವಂತಹ ಫೈಲ್‌ಗಳಿಗೆ ಆಮೆ ಕಾಲುಗಳಿದ್ದು, ಅವುಗಳಿಗೆ ನಾಯಿ ಕಾಲುಗಳನ್ನು ಕೊಡಬೇಕು. ಅದರಿಂದ, ಅವು ಧಗ, ಧಗ ಎಂದು ಓಡಬೇಕು. ಈ ಆಮೆ ಕಾಲುಗಳನ್ನು ತೆಗೆದು, ನಾಯಿ ಕಾಲುಗಳನ್ನು ಕೊಟ್ಟರೆ, ಆ ಫೈಲ್‌ಗಳ ಓಡಾಟ ಜಾಸ್ತಿಯಾಗುತ್ತದೆ. ಹಾಗಾಗಿ, ಇವೊತ್ತಿನ ದಿವಸ ಕೆ.ಟಿ.ಪಿ.ಪಿ., ಆಕ್ಟ್ ನ್ನು ಸರ್ಕಾರ ಸದುದ್ದೇಶದಿಂದ ತಂದಿರಬಹುದು. ಆದರೆ, ದಯಮಾಡಿ ಹಿಂದಿನ ಟೆಂಡರ್‌ಗಳನ್ನು ಪರಿಶೀಲಿಸಿ ನೋಡಿ, ಕರ್ನಾಟಕ ರಾಜ್ಯದಲ್ಲಿ ಕರ್ನಾಟಕದವರಿಗೆ ಎಷ್ಟು ಜನರಿಗೆ ಕೆಲಸ ಸಿಕ್ಕಿದೆ, ಎಷ್ಟು ಜನ ನಮ್ಮ ಲೋಕಲ್ ಕಂಟ್ರಾಕ್ಟರ್‌ಗಳಿದ್ದಾರೆ? ಈ ಹಿಂದೆ ಶ್ರೀ ನಾರಾಯಣಶೆಟ್ಟಿ ಇನ್ನೂ ಮುಂತಾದ ದೊಡ್ಡ ದೊಡ್ಡ ಲೋಕಲ್ ಕಂಟ್ರಾಕ್ಟರ್‌ಗಳಿದ್ದರು. ಇಲ್ಲಿ ಏನಾಗಿದೆಯೆಂದರೆ, pre-qualification ನಂತಹ ವ್ಯವಸ್ಥೆಗಳು ನಮ್ಮನ್ನು ಸಾಯಿಸಿಬಿಡುತ್ತವೆ. ಇವೊತ್ತಿನ ದಿವಸ ದೊಡ್ಡ ದೊಡ್ಡ ಟನಲ್‌ಗಳಿಗೆ ನಮ್ಮ ಕಂಟ್ರಾಕ್ಟರ್‌ಗಳು ಕೆಲಸ ಮಾಡುತ್ತಿದ್ದಾರೆ. ಆದುದರಿಂದ, ಈ ಕೆ.ಟಿ.ಪಿ.ಪಿ., ಆಕ್ಟ್‌ನಲ್ಲಿ ಕರ್ನಾಟಕ ರಾಜ್ಯದಲ್ಲಿರುವಂತಹ ಕನ್ನಡಿಗರಿಗೆ ಆದ್ಯತೆ ಕೊಡತಕ್ಕಂಥದ್ದಕ್ಕೆ ಏನಾದರೂ ತಿದ್ದುಪಡಿ ತರುವುದಕ್ಕೆ ಸಾಧ್ಯವಿದೆಯೇ? ಈ ಬಗ್ಗೆ ಕೇಂದ್ರ ಸರ್ಕಾರದವರು ಯಾವುದೇ ಆಕ್ಷೇಪ ಮಾಡುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರಿಗೆ quality ಬೇಕು. ಆ ನಂತರ ಕ್ವಾಲಿಟಿಯನ್ನು maintain ಮಾಡಿಕೊಳ್ಳಬಹುದು. ಅದರ ಬದಲಾಗಿ, ಆಂಧ್ರಪ್ರದೇಶದವರು ಕೆಲಸ ಮಾಡಿ, ಹೊರಟು ಹೋಗುತ್ತಾನೆ. ಅವನು ಮತ್ತೆ ಬರುವುದಿಲ್ಲ. ಅವನನ್ನು ಹಿಡಿಯಬೇಕಾದರೆ, ಆಂಧ್ರಪ್ರದೇಶಕ್ಕೆ ಹೋಗಿ ವಾರೆಂಟ್ ಕೊಟ್ಟು, ಅವನನ್ನು ಕರೆದುಕೊಂಡು ಬರಬೇಕು. ಬ್ಲಾಕ್‌ಲಿಸ್ಟ್‌ಗೆ ಸೇರಿಸಬೇಕು. ಒಂದು ಬಾರಿ ಅವನನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸಿದರೆ, ಅವನೇ ಮತ್ತೊಂದು ಕಂಪನಿ ಮಾಡಿಕೊಂಡು white list ನಲ್ಲಿ ವಾಪಸ್ಸು ಬರುತ್ತಾನೆ. ಅದನ್ನು ಪತ್ತೆ ಹಚ್ಚುವುದಕ್ಕೆ ಸರ್ಕಾರ ಏನು ಮಾಡುತ್ತದೆ? ಅವನೇ ಮನುಷ್ಯ, ಆದರೆ ಕಂಪನಿ ಹೆಸರು ಬೇರೆ. ಆದುದರಿಂದ, ಸರ್ಕಾರ ಈ ವಿಧೇಯಕದಲ್ಲಿ ಮನುಷ್ಯನಿಗೆ ಬ್ಲಾಕ್‌ಲಿಸ್ಟ್‌ನಲ್ಲಿ ತರುತ್ತಾರೋ ಅಥವಾ ಕಂಪನಿಗೆ ಬ್ಲಾಕ್‌ಲಿಸ್ಟ್ ತರುತ್ತಾರೋ ಅದನ್ನು ತಿಳಿಸಬೇಕು. ಈ ಎಲ್ಲಾ ಸ್ಪಷ್ಟೀಕರಣ ನೀಡಬೇಕು. ಅಲ್ಲದೇ, ಈ ವಿಧೇಯಕ ಕೆಳಮನೆಯಲ್ಲಿ ಪಾಸ್ ಆಗಿದೆ. ಆದರೆ, ಮೇಲ್ಮನೆಯ ಸದಸ್ಯರಿಗೆ ತಲೆ ಜಾಸ್ತಿ ಇರುವುದರಿಂದ, ಈ ವಿಧೇಯಕದ ಬಗ್ಗೆ ಜಾಸ್ತಿ ಸಲಹೆಗಳನ್ನು ಕೊಡುತ್ತಿದ್ದೇವೆ. ಅಲ್ಲದೇ, ಈ ವಿಧೇಯಕದ ಬಗ್ಗೆ ಚರ್ಚಿಸಲು ನಮಗೆ ಸಮಯ ಸಹ ಜಾಸ್ತಿ ಸಿಗುತ್ತದೆ. ಆದರೆ, ಕೆಳಮನೆಯಲ್ಲಿ ಸಮಯ ಜಾಸ್ತಿ ಸಿಗುವುದಿಲ್ಲ. ಆದುದರಿಂದ, ನಾವು ವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಆದುದರಿಂದ, ಇದನ್ನು ವಿಧೇಯಕದಲ್ಲಿ ಒಳಪಡಿಸುವುದಕ್ಕೆ ಸಾಧ್ಯವೇ ಎನ್ನುವಂಥದ್ದನ್ನು ಸರ್ಕಾರ ಉತ್ತರ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(493) 17–12–2018 (4.50) ವೈಎಲ್–ಜಿಆರ್ (ಸಭಾಪತಿಯವರ ಉಪಸ್ಥಿತಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಮಾನ್ಯ ಸಚಿವರು ಈಗ ಇರುವಂಥ executive responsibility ಬಗ್ಗೆ ಬಹಳ ಅರ್ಥ ಪೂರ್ಣವಾಗಿ ಹೇಳಿದ್ದಾರೆ. ಈಗ ತಂದಿರುವಂಥ ಕಾನೂನು ಕೇವಲ ಟೆಂಡರ್‌ಗಳನ್ನು ತೆಗೆದುಕೊಂಡು, ಟೆಂಡರ್‌ಗಳನ್ನು ಸ್ವೀಕರಿಸಿ ಬಿಟ್ಟುಬಿಡುವುದಲ್ಲ. Time bound ಆಗಿ ಆ ಕಾಮಗಾರಿಗಳನ್ನು ಮುಗಿಸಬೇಕೆಂಬುದು ಸರ್ಕಾರದ ಉದ್ದೇಶವೇನಿದೆ ಅದು ಒಳ್ಳೆಯ ರೀತಿಯದಾಗಿದೆ. Time bound execution of the project is the most essential thing for any tendering work. ಯಾವುದೇ ಒಂದು ಕಾಮಗಾರಿಯನ್ನು ಕಾಲಮಿತಿಯೊಳಗೆ ಮುಗಿಸುವುದರಿಂದ ಸರ್ಕಾರಕ್ಕೆ ಬರುವ ಆದಾಯ ಮತ್ತು ಉಳಿಕೆಯಾಗುವ ಹಣ ಏನಿದೆ ಅದು ಸರ್ಕಾರದ ಬೊಕ್ಕಸಕ್ಕೆ ಉಳಿಕೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಬಹಳ ಅರ್ಥ ಪೂರ್ಣವಾಗಿ ಮಾತನಾಡಿದ್ದಾರೆ. ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಯಾವ ರೀತಿ ಕೇಂದ್ರ ಸರ್ಕಾರದಲ್ಲಿ 'Make in India' ಎಂದು ಹೇಳಿದ್ದಾರೆ, ಅದೇ ರೀತಿ 'Make in Karnataka' ಎಂದು ಏಕೆ ಮಾಡಬಾರದೆಂಬುದು ನಮ್ಮ ಪ್ರಶ್ನೆಯಾಗಿದೆ. ಯಾವ ರೀತಿ ಬಹಳಷ್ಟು ಸಂದರ್ಭಗಳಲ್ಲಿ ನಮ್ಮ ದೇಶದಲ್ಲಿರುವ ಅನೇಕ ಜನರಿಗೆ 'Make in India' ಉದ್ಯೋಗಾವಕಾಶವನ್ನು ಒದಗಿಸಿದೆ ಅದೇ ರೀತಿ ಕರ್ನಾಟಕದಲ್ಲಿರುವ ಕನ್ನಡಿಗರಿಗೂ ಉದ್ಯೋಗಾವಕಾಶವನ್ನು ಒದಗಿಸುವುದರಿಂದ ಕನ್ನಡಿಗರೂ ಸಹಿತ ಒಳ್ಳೆಯ ರೀತಿಯಲ್ಲಿ ಅತ್ಯಂತ ಶಕ್ತಿಶಾಲಿಯಾಗಿ ಮತ್ತು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ. ಇದರಿಂದ ಕನ್ನಡಿಗರಿಗೆ ಆದ್ಯತೆ ನೀಡಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಒಂದು ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುವುದೇನೆಂದರೆ, execution ಮಾಡುವಂತಹ ಸಂದರ್ಭದಲ್ಲಿ time limitಗೆ ಹೆಚ್ಚು ಮಹತ್ವವನ್ನು ಕೊಡಬೇಕಾಗಿದೆ. ಒಂದು ವೇಳೆ ಅವರು time boundನಲ್ಲಿ ಕಾಮಗಾರಿಯನ್ನು ಮಾಡದೇ ಹೋದರೆ ಯಾವ ರೀತಿ ಅವರನ್ನು control ಮಾಡುತ್ತೀರಿ ಎಂಬುದು ಬಹಳ ಮುಖ್ಯವಾಗಿದೆ. Are you going to disqualify them? ಅದಕ್ಕಾಗಿ guidelines ನಲ್ಲಿ ಸರಿಯಾಗಿ ಸ್ಪಷ್ಟಪಡಿಸಬೇಕು. ಇದರ ಬಗ್ಗೆ ಸಹ clarity ಬೇಕು ಹಾಗೂ ಸ್ಪಷ್ಟವಾಗಿ ತಮ್ಮ ನಿಲುವನ್ನು ಹೇಳಬೇಕೆಂದು ಮನವಿ ಮಾಡುತ್ತೇನೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಬಗ್ಗೆ ಏನು ವಿವರಣೆ ನೀಡಲಾಗಿದೆ, ಅಂದರೆ ಅದರಲ್ಲಿ ಯಾರಿಗೆ ವಿನಾಯಿತಿ ಅಥವಾ ಪ್ರೋತ್ಸಾಹ ನೀಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡುತ್ತಾ, ಈ ರೀತಿಯ ಕಾನೂನು ತಂದಿರುವುದಕ್ಕೆ ಮತ್ತೊಮ್ಮೆ ಸ್ವಾಗತ ಬಯಸುತ್ತಾ ನನ್ನ ಒಂದೆರಡು ಸಲಹೆಯನ್ನು ನೀಡುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅನುಭವದ ಆಧಾರದ ಮೇಲೆ ತಂದಿರತಕ್ಕಂಥ ಕಾಯ್ದೆ ಏನಿದೆ ಅದರ ಬಗ್ಗೆ ಹೇಳುವುದಾದರೆ, execution of the project ನಲ್ಲಿ ಏನೇನು hurdles ಬರುತ್ತಿದೆ ಅದನ್ನು remove ಮಾಡುವುದಕ್ಕೆ ತಂದಿರುವ ವಿಧೇಯಕವನ್ನು ಸ್ವಾಗತಿಸುತ್ತೇನೆ. ಇದಕ್ಕೆ ಖಂಡ 2 ರಲ್ಲಿ “ … after the words processing and acceptance of tenders”, the words “and includes Contract execution Management shall be inserted." ಎಂದು ಬಹಳ ಚೆನ್ನಾಗಿ ಹೆಸರನ್ನು ನೀಡಿದ್ದಾರೆ. ಅಂದರೆ A to Z ಸಂಬಂಧಪಟ್ಟ ಹಾಗೆ e-procurement portal ಅನ್ನು ಏನು ಪ್ರಾರಂಭ ಮಾಡಲಾಗುತ್ತದೆ, ಅದೆಲ್ಲವನ್ನೂ ನಿರ್ವಹಣೆ ಮಾಡಿ, fieldಗೆ ಹೋಗಿ ಎಲ್ಲವನ್ನೂ ಪೂರ್ಣಗೊಳಿಸುವ ಹಾಗೆ ಮಾಡುವ ಜವಾಬ್ದಾರಿಯನ್ನು ಈ ವಿಧೇಯಕದಲ್ಲಿ ತಂದಿರುವುದಕ್ಕೆ ಸ್ವಾಗತಿಸುತ್ತೇನೆ. ನನಗೆ ಇದರಲ್ಲಿ ಒಂದೆರಡು ಸ್ಪಷ್ಟೀಕರಣ ಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ 1999ರಲ್ಲಿ ಕೆ.ಟಿ.ಪಿ.ಪಿ., ಕಾಯ್ದೆ ಜಾರಿಗೆ ಬಂದಿದ್ದು, ಇಂದಿಗೆ ಹೆಚ್ಚು ಕಡಿಮೆ ಸುಮಾರು 15 ವರ್ಷಗಳಾಗಿದೆ. ಮೊದಲನೆಯದಾಗಿ, ಕರ್ನಾಟಕ ರಾಜ್ಯದಲ್ಲಿ ಏನೇನು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ, ಏನೇನು ಸರಬರಾಜು ಮಾಡಲಾಗುತ್ತಿದೆ ಅದನ್ನು ಎಲ್ಲಾ ಇಲಾಖೆಗಳಲ್ಲಿಯೂ ಈ ಕೆ.ಟಿ.ಪಿ.ಪಿ., ಕಾಯ್ದೆಯಡಿ ಜಾರಿಗೊಳಿಸುವಂಥದ್ದು. ಎರಡನೆಯದಾಗಿ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಹೇಳಿದ ಹಾಗೆ ಮೊದಲ ಹಂತದಲ್ಲಿ ಕಡಿತಗೊಳಿಸಿ ಪಕ್ಕಕ್ಕೆ ಹಾಕುವ ವ್ಯವಸ್ಥೆ ಮಾಡಲಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಬೆಂಗಳೂರಿನಲ್ಲಿ M/s.Ramalingam Constructions ಎಂಬುವವರಿಗೆ 2 ಸಾವಿರದ 81 ಕೋಟಿ ರೂಪಾಯಿಗಳಷ್ಟು ವೆಚ್ಚದಲ್ಲಿ ಆಗುವ ಕೆಲಸವನ್ನು ಕೊಟ್ಟಿದ್ದಾರೆ. White topping ನಿಂದ ಹಿಡಿದು ಬಿ.ಡಿ.ಎ.,ವತಿಯಿಂದ ನಿರ್ಮಿಸಲಾಗಿರುವ ಅರ್ಕಾವತಿ ಬಡಾವಣೆಯ ಎಲೆಕ್ಟ್ರಿಫಿಕೇಷನ್, ಪಿ.ಡಬ್ಲ್ಯೂ.ಡಿ. ಕೆಲಸಗಳು, ದೊಡ್ಡಬಳ್ಳಾಪುರ–ಗೌರಿಬಿದನೂರು ಮುಖ್ಯ ರಸ್ತೆ, ಹಿಂದೂಪುರ ಮುಖ್ಯ ರಸ್ತೆ, ಯಲಹಂಕದಲ್ಲಿ ಮನೆಗಳನ್ನು ನಿರ್ಮಿಸುವುದು ಹಾಗೂ ಹೊಸಕೋಟೆಯ ಹತ್ತಿರ ಬಿದರಹಳ್ಳಿಯಲ್ಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಬ್ಬರೇ ಗುತ್ತಿಗೆದಾರರಿಗೆ ವಹಿಸಲಾಗಿದೆ. ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚಿಸಿದಾಗ ಕರ್ನಾಟಕದ ಜನರು ಅವರ ಕೈ ಕೆಳಗೆ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವ ಮಟ್ಟಕ್ಕೆ ಬಂದು ನಿಂತಿದ್ದಾರೆ. ಹಾಗೆಯೇ 7000 ದಿಂದ 8000 ಕೋಟಿ ರೂಪಾಯಿ ವೆಚ್ಚದ ಎತ್ತಿನಹೊಳೆ ಯೋಜನೆಯ ಗುತ್ತಿಗೆಯನ್ನು ಮೆ:ಮೆಗಾ ಇಂಜಿನಿಯರಿಂಗ್ ಕಂಪನಿಯವರಿಗೆ ಕೊಟ್ಟಿದ್ದಾರೆ. ಅವರು ಡಾಲರ್ಸ್ ಕಾಲೋನಿಯಲ್ಲಿ ಕುಳಿತುಕೊಂಡು ಕರೆಯುತ್ತಾರೆ, ನಿಮಗೆ ಎಷ್ಟು ದುಡ್ಡು ಬೇಕೋ ಕೊಡುತ್ತೇವೆ, ಕೆಲಸವನ್ನು ನೀವು ಮಾಡಿ, ಒಂದು ಕಾಮಗಾರಿಗೆ 5% ಅಥವಾ 10% ನಮಗೆ ನೀಡಿ ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಗುತ್ತಿಗೆದಾರರು ಎಂದ ತಕ್ಷಣ ನೆನಪಿಗೆ ಬರುವುದು ಆಂಧ್ರ ಪ್ರದೇಶದವರು ಕಾಶ್ಮೀರಾದಲ್ಲಿ ಬ್ರಿಡ್ಜ್ ಕಟ್ಟಿದ್ದಾರೆ, ಹೊಸಕೋಟೆ ರಸ್ತೆಯನ್ನು ನಿರ್ಮಿಸಿದ್ದಾರೆ ಎಂದು ದೊಡ್ಡ ದೊಡ್ಡ ಯೋಜನೆಯನ್ನು

“ ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಉಲ್ಲೇಖ ಮಾಡುತ್ತಾ ಹೋದರೆ, ನಮ್ಮ ರಾಜ್ಯದ ಗುತ್ತಿಗೆದಾರರನ್ನು ಮತ್ತು ಉದ್ದಿಮೆದಾರರನ್ನು ಯಾವಾಗ promote ಮಾಡುವುದು? ಅದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ, ಅದಕ್ಕೆ ಕಾನೂನಾತ್ಮಕವಾಗಿ.... ಇಲ್ಲಿನ ಪದ್ಧತಿ ಏನೆಂಬುದು ನನಗೂ ಗೊತ್ತಾಗುತ್ತದೆ. ಆದರೆ, ಮಾನ್ಯ ಸಚಿವರು ಹೇಳುವುದಿಲ್ಲ ನಾವು ಹೇಳುತ್ತೇವೆ ಅಷ್ಟೇ. Pre-qualificationನಲ್ಲಿ reject ಮಾಡುವುದು ಒಂದು ಕಡೆಯಾದರೆ, financial bid and technical bid ಮಾಡುವುದು ಮತ್ತೊಂದು ಕಡೆಯಾಗುತ್ತದೆ. Technical bidನಲ್ಲಿಯೇ ಮುಗಿಸಿದರೆ financial bid ಕಡೆ ಬರುವ ಹಾಗೆ ಇರುವುದಿಲ್ಲ. ಅಲ್ಲಿಯೇ ಮುಗಿದು ಹೋಗುತ್ತದೆ. ಇದರ ಬಗ್ಗೆ ಬಹಳ ಗಂಭೀರವಾಗಿ ಗಮನಹರಿಸಬೇಕೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮೂರನೆಯದಾಗಿ ಸೆಕ್ಷನ್ 14(ಎ) ಕಡೆ ಸ್ವಲ್ಪ ಜಾಸ್ತಿ ಗಮನಹರಿಸಬೇಕು. ಕೇವಲ ಅವರನ್ನು block listಗೆ ಸೇರಿಸುವುದಲ್ಲದೇ debar ಮಾಡುವಂತಹ ಕ್ಲಾಸನ್ನು ಹಾಕಲಾಗಿದೆ. ಆದರೆ, ಯಾರ್‍ಯಾರು ಅಧಿಕಾರಿಗಳು ತಪ್ಪು ಮಾಡುತ್ತಾರೆ, ಅವರಿಗೆ ಯಾವುದೇ ರೀತಿಯ ಕ್ಲಾಸನ್ನು ಅಳವಡಿಸಿರುವುದಿಲ್ಲ. ಇದನ್ನು ದಯವಿಟ್ಟು ಸೇರ್ಪಡೆಗೊಳಿಸಬೇಕು. ಅಧಿಕಾರಿಗಳು ಕೈ ಜೋಡಿಸದಿದ್ದರೆ ಗುತ್ತಿಗೆದಾರರು ತಪ್ಪು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಸರ್ಕಾರದ ಕೊನೆಯ ಅವಧಿಯಾದ ಫೆಬ್ರವರಿ, ಮಾರ್ಚ್ ತಿಂಗಳಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ 2,000 ಕೋಟಿ ರೂಪಾಯಿಗೆ ಟೆಂಡರ್ ಕರೆಯುತ್ತಾರೆ. ಆದರೆ, ಅದಕ್ಕೆ ಬಜೆಟ್‌ನಲ್ಲಿ 200.00 ಕೋಟಿ ರೂಪಾಯಿಗೆ ಅವಕಾಶ ಇತ್ತು. 2,000 ಕೋಟಿ ರೂಪಾಯಿಗೆ ಟೆಂಡರ್ ಕರೆದು, ಅದಕ್ಕೆ work qualificationನ್ನು ಸಹ ಅಧಿಕಾರಿಗಳೇ ಕೊಡಿಸುತ್ತಾರೆ. ಉದಾಹರಣೆಗೆ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂ ಸಾಹೇಬರಿಗೆ ಕೆಲಸ ಬೇಕಾದಾಗ ಅವರು ಎಲ್ಲಿಯೋ ಕೆಲಸ ಮಾಡಿರುವ ಕಡೆ ಹೋಗಿ ಇಲ್ಲಿಯೇ ಕೆಲಸ ಮಾಡಿದ್ದಾರೆ ಎಂದು ಸರ್ಟಿಫಿಕೇಟ್ ಕೊಡಿಸುತ್ತಾರೆ. ಟೆಂಡರ್ ಕೊಡಿಸಿ, ಅವರಿಗೆ mobilisation advance ಹಣವನ್ನು ಕೊಟ್ಟು Work Order ಕೊಡುತ್ತಾರೆ. ಇಲ್ಲಿ ಇದಕ್ಕೆ ಹೇಳುವವರು ಕೇಳುವವರು ಯಾರೂ ಇರುವುದಿಲ್ಲ. ಆದ್ದರಿಂದ ಈ ವಿಧೇಯಕವನ್ನು ಬಹಳ ಚೆನ್ನಾಗಿ ಮಾನ್ಯ ಸಚಿವರು ತಂದಿದ್ದಾರೆ ಇದರಲ್ಲಿ ಹಣ ಪೋಲಾಗದ ರೀತಿ ಜವಾಬ್ದಾರಿಯಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದು, ಸರ್ಕಾರಕ್ಕೆ ಮೋಸ ಮಾಡುವ ಗುತ್ತಿಗೆದಾರರ ಮೇಲೆ ನಿಗಾ ಇಡುವುದು, ಜೊತೆಗೆ ಸ್ಥಳೀಯ ಉದ್ಯಮಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾನೂನು ರೂಪಿಸಿದರೆ ಬಹುಶಃ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತು ಸಾರ್ವಜನಿಕರ ಹಣವನ್ನು ಸದುದ್ದೇಶದಿಂದ ಸಮರ್ಪಕವಾಗಿ ನಿಗದಿತ ಅವಧಿಯಲ್ಲಿ ಬಳಕೆ ಮಾಡಿದಾಗ ಮಾತ್ರ ರಾಷ್ಟ್ರದ ಅಥವಾ ರಾಜ್ಯದ ಸಾರ್ವಜನಿಕ ಆಸ್ತಿ–ಪಾಸ್ತಿ ಚೆನ್ನಾಗಿ ನಿರ್ಮಾಣವಾಗುತ್ತದೆ ಎಂಬುದು ನಮ್ಮ ನಂಬಿಕೆ. ಈ ಸದುದ್ದೇಶದಿಂದ “ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2018” ಅನ್ನು ತರಲಾಗುತ್ತಿದೆ. ಅದರ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉದ್ದೇಶ ಮತ್ತು ಕೆಲವು ಆಲೋಚನೆಗಳು ಚೆನ್ನಾಗಿ ಇದೆ. 'Contract Execution Management' ನ್ನು ವಿಶೇಷವಾಗಿ ನಿಗದಿತ ಅವಧಿಯೊಳಗೆ ನೀಡಿದಂಥ ಕಾಮಗಾರಿಯನ್ನು ಜಾರಿಗೊಳಿಸುವುದನ್ನು ನಿರ್ವಹಣೆ ಮಾಡುವುದು social responsibility ಆಗಿದ್ದು, ಆ ಒಂದು ಒಳ್ಳೆಯ ಅಂಶ ಈ ವಿಧೇಯಕದಲ್ಲಿ ಸೇರ್ಪಡೆಗೊಂಡಿದೆ. ಈ ನಿಟ್ಟಿನಲ್ಲಿ ವಿಧೇಯಕದ ಖಂಡ 5 ರಲ್ಲಿ ಹೇಳಿರುವಂತೆ Sections 6A, 6B and 6C ಇವುಗಳನ್ನು ಸೇರ್ಪಡೆ ಮಾಡಲಾಗಿದೆ. ಈ ವಿಧೇಯಕ ತಂದಿರುವುದು ತುಂಬಾ ಒಳ್ಳೆಯದು. ಇವತ್ತಿನ ಸಂದರ್ಭದಲ್ಲಿ ತಂತ್ರಜ್ಞಾನ ಬದಲಾದಂತೆ ನಾವು ಬದಲಾಗಬೇಕು. ಆದರೆ, ಮಾನ್ಯ ಸಚಿವರಾದ ಶ್ರೀ ಕೃಷ್ಣ ಭೈರೇಗೌಡರವರ ಗಮನಕ್ಕೆ ತರುವುದೇನೆಂದರೆ, ನಾವು ಇತ್ತೀಚೆಗೆ ಸೋಲಾರ್ ಇ–ಟೆಂಡರ್ ಕರೆದಿದ್ದೇವೆ ಕೇವಲ 7 ನಿಮಿಷಗಳ ಕಾಲ ಸಮಯಾವಕಾಶವನ್ನು ನೀಡಲಾಗಿತ್ತು. ಆ 7 ನಿಮಿಷದಲ್ಲಿ ಇವತ್ತಿಗೂ ಸಹ ಗ್ರಾಮೀಣ ಭಾಗದಲ್ಲಿ ಎಲ್ಲಾ ಸಮಯದಲ್ಲಿಯೂ ನೆಟ್‌ವರ್ಕ್ ಸಿಗುವ ವ್ಯವಸ್ಥೆ ಇಲ್ಲ. ವಿದ್ಯುತ್ ಇರುವುದಿಲ್ಲ. ಕರಾವಳಿ ಜಿಲ್ಲೆಗಳಲ್ಲಿ ಮಳೆ–ಗಾಳಿ ವಿಪರೀತವಾದರೆ ವಿದ್ಯುತ್ ಸಮಸ್ಯೆಯಿಂದ ಮೊಬೈಲ್ ಫೋನ್ ಚಾರ್ಜ್ ಮಾಡುವುದಕ್ಕಾಗುವುದಿಲ್ಲ, ಮೊಬೈಲ್ ಫೋನ್ ಸಹ ಕೆಲಸ ಮಾಡುವುದಿಲ್ಲ. ಇಂತಹ ಸನ್ನಿವೇಶವೂ ಇದೆ. ಇಂತಹ ಸಮಯದಲ್ಲಿ ಇವರಿಗೆ ಪರ್ಯಾಯ ರೀತಿಯಲ್ಲಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಆ ಒಂದು ವ್ಯವಸ್ಥೆ ಇಲ್ಲವೆಂದರೆ, ತಪ್ಪಿ ಹೋಗುವ ಸಾಧ್ಯತೆ ಇದೆ. 'Preferences to Micro and Small Enterprises' is a wonderful concept. Decentralisation ಎಂದು ಹೇಳುವಾಗ ಬೃಹತ್ ಉದ್ದಿಮೆಗಳಿಂದ job creation ದೃಷ್ಟಿಯಿಂದ ಹೆಚ್ಚಿನ ಪಾರದರ್ಶಕತೆ ಆಗುತ್ತದೆ.

**(494) 17-12-2018 SK-MD 5.00**

**(ಸಭಾಪತಿಯವರ ಉಪಸ್ಥಿತಿ)**

**ಡಾ. ತೇಜಸ್ವಿನಿ ಗೌಡ (ಮುಂದು):–** ಮಾನ್ಯ ಸಭಾಪತಿಯವರೇ, ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯನವರು ಜಗತ್ತು ಕಂಡ ಶ್ರೇಷ್ಠ ತಂತ್ರಜ್ಞರಲ್ಲಿ ಒಬ್ಬರು. ನಮ್ಮ ರಾಜ್ಯ ಮತ್ತು ರಾಷ್ಟ್ರ ನಿರ್ಮಾಣ ಮಾಡುವುದರಲ್ಲಿ, ನಮ್ಮ ದೊಡ್ಡ ದೊಡ್ಡ ಕಾಮಗಾರಿಗಳು ನಡೆದಿವೆ. ಅದು ರಸ್ತೆ ಕಾಮಗಾರಿಗಳು, ಸೇತುವೆ ಕಾಮಗಾರಿ ಇರಬಹುದು ಮತ್ತು ಜಲಾಶಯಗಳನ್ನು ಕಟ್ಟುವಂತಹದ್ದು ಇರಬಹುದು. ಪ್ರತಿಭೆಗೆ, ದಕ್ಷತೆಗೆ, ಹಣದ ಕೊರತೆ ಇಲ್ಲ. ಈ lapses ಏಕಾಗುತ್ತದೆಂದರೆ, I think this is the high time, ಇದರ ಬಗ್ಗೆ ಇವತ್ತು ಸದನದಲ್ಲಿ ನಾವು ಆಲೋಚನೆ ಮಾಡಬೇಕಾಗಿದೆ. ನೆರೆಯ ಅಂಧ್ರದವರು ನಮ್ಮ ರಾಜ್ಯಕ್ಕೆ ಬಂದು ಒಂದು ಅಧಿಪತ್ಯವನ್ನು ಹೊಂದಿದ್ದಾರೆ. 'ಮಾಫಿಯಾ' ಪದ ನಾನು ಕರೆಯುವುದಿಲ್ಲ. ನಮ್ಮ ಕಾನೂನಿನಲ್ಲಿ ಅವರು ಭೂಮಿಯನ್ನು ಮತ್ತು ಇಲ್ಲಿ ಇರುವುದಕ್ಕೆ, ಕಾಮಗಾರಿಗಳನ್ನು ಮಾಡುವುದಕ್ಕೆ ಅವಕಾಶವಿದೆ. ಎಲ್ಲೋ ಒಂದು ವ್ಯವಸ್ಥೆಯಲ್ಲಿ ಲೋಪವಿದೆ. ಕಳಪೆ ಕಾಮಗಾರಿಗಳಿಂದ ಜಲಾಶಯದ ಕಟ್ಟೆ ಹೊಡೆಯಿತು ಎಂದು, ಮತ್ತೊಂದು ಕಾಮಗಾರಿಗಳು ಕಳಪೆಯಾಗಿರುವುದನ್ನು ಕಂಡು ಹಿಡಿಯುವುದಕ್ಕೆ



"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಮಿಟಿಗಳನ್ನು ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಕಾಮಗಾರಿಗಳನ್ನು ಮಾಡುವುದು ಸದುದ್ದೇಶ ಒಳ್ಳೆಯದು ಇರಬಹುದು. ಆ ಕಾರಣದಿಂದ ಪಾರದರ್ಶಕತೆ ತರಬೇಕೆಂದು ಹೇಳಿ, ಸರ್ಕಾರ ಏನು ಸದುದ್ದೇಶವನ್ನಿಇಟ್ಟುಕೊಂಡಿದೆ, ಅದನ್ನು ಎಲ್ಲಾ ಕಾಲಕ್ಕೂ ತರಬೇಕು. ಈ ಹಿಂದೆ ಆಗಿರುವಂತಹ ಲೋಪದೋಷಗಳನ್ನು check ಮಾಡುವುದಕ್ಕೂ ಕೂಡ ಅವಕಾಶ ಇರಬೇಕು. ಮತ್ತೆ ಒಳ್ಳೆಯವರಿಗೆ ಮೆಚ್ಚುಗೆ ಸಿಗಬೇಕು. ತಪ್ಪು ಮಾಡಿದರವರಿಗೆ ಶಿಕ್ಷೆ ಆಗುವಂತಹ ಒಂದು ಪದ್ಧತಿ ಕೂಡ ಇಂತಹ ತಿದ್ದುಪಡಿಗಳನ್ನು ತರುವಾಗ ಅದರಲ್ಲಿ ಅವಕಾಶಗಳು ಇರಬೇಕೆಂದು ಹೇಳಿ, ನಾನು ಈ ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ The Karnataka Transparency in Public Procurements (Amendment) Bill, 2018 ನ್ನು ತಂದಿರುವಂಥಾದ್ದು ಬಹಳ ಸಮಂಜಸವಾದದ್ದು ಮತ್ತು ಅದರಲ್ಲಿ ತಂದಿರುವಂತಹ ತಿದ್ದುಪಡಿಯು ಸ್ವಾಗತಾರ್ಹ. ಆದರೆ, ಈ KTPP ಕಾಯಿದೆ ಅಡಿಯಲ್ಲಿ ಇದನ್ನು ಸರ್ಕಾರ ಬೇರೆ ಬೇರೆ ಇಲಾಖೆಗಳಿಗೆ ಮತ್ತು ಬೇರೆ ಬೇರೆ ಏಜೆನ್ಸಿಗಳಿಗೆ ಕೊಟ್ಟು ಪರಿಶೀಲನೆ ಮಾಡಿಸುತ್ತದೆ. ಇದೊಂದು ಘೋರವಾದ ಅನ್ಯಾಯವಾಗಿದೆ. ಸರ್ಕಾರದಲ್ಲಿ ಎಷ್ಟೊಂದು ಇಲಾಖೆಗಳಿವೆ. ಯಾವುದಾದರೊಂದು ಇಲಾಖೆಯಡಿಯಲ್ಲಿ ಸಚಿವಾಲಯದ ಇದನ್ನು ಇಟ್ಟುಕೊಂಡು, ಅವರೇ ಇದನ್ನು ಮಾಡಬೇಕು ಎನ್ನುವುದು ನನ್ನ ಕೋರಿಕೆಯಾಗಿದೆ. ಏಕೆಂದರೆ ನಾನು KEONICS ನಲ್ಲಿ Chairman ಆಗಿದ್ದೆ. ನಮಗೆ ಸ್ವಲ್ಪ ಜನರು ಬಂದು KTPP Act ಅಡಿಯಲ್ಲಿ ಪರಿಶೀಲನೆ ಮಾಡುವುದನ್ನು ತೆಗೆದುಕೊಳ್ಳಿ, ನಿಮಗೆ ಶೇಕಡ 5 ರಷ್ಟು ಹಣ ಬರುತ್ತದೆ. ಸರ್ಕಾರದಿಂದ ಸರ್ಕಾರದ ಕೆಲಸವನ್ನು ಮಾಡುವುದಕ್ಕೆ, ನಮಗೆ commission ಬರುತ್ತದೆ. ಇದರಲ್ಲಿ ಬೇಕಾದಷ್ಟು ದುರಪಯೋಗವಾಗುತ್ತದೆ. ಅದರಿಂದ, ಸಚಿವಾಲಯದ ಯಾವುದಾರೊಂದು ಇಲಾಖೆಯಲ್ಲಿ ಇದನ್ನು ಇಟ್ಟುಕೊಂಡು, KTPP Act ಅಡಿಯಲ್ಲಿ ಬರುವಂತಹ ಎಲ್ಲಾ procurements ನ್ನು ಅವರೇ ಮಾಡಬೇಕು ಎನ್ನುವುದು ಒಂದು ನನ್ನ ಕೋರಿಕೆ.

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇವತ್ತು ಏನು The Karnataka Transparency in Public Procurements (Amendment) Bill, 2018 ತಂದಿದ್ದಾರೆ. ಇವತ್ತು ಕೇಂದ್ರ ಸರ್ಕಾರದ ಒಂದು Gem (Government e-Market) ಎನ್ನುವುದು ಬಹಳ ಪ್ರಮುಖವಾಗಿರುವಂತಹದ್ದು. ಇದರ ಹಿನ್ನೆಲೆಯಲ್ಲಿ ತಂದಿರುವಂತಹದ್ದು ಎನ್ನುವುದು ನನ್ನ ಭಾವನೆಯಾಗಿದೆ. ಇದರಲ್ಲಿ “Tender Bulletin” and “Tender Bulletin Officers” ಇವರಿಬ್ಬರನ್ನು ತೆಗೆದು portal ಗೆ ಸಂಪೂರ್ಣವಾಗಿ ತಾವು ಕೊಡುತ್ತಿದ್ದೀರಿ. ಆದರೆ ಇದು ಯಾವ ರೀತಿ ಉಪಯೋಗವಾಗುತ್ತದೆ ಎಂಬುದನ್ನು ನೋಡಬೇಕು. ಮೊದಲನೆಯದಾಗಿ centralize ಆಗಿ ಅದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ದುರುಪಯೋಗವಾದರೆ, ಬಹಳಷ್ಟು monitor ಮಾಡುವಂತಹ mechanism ನ್ನು ನೀವು ಇದಕ್ಕೆ parallel ಆಗಿ ಇಟ್ಟುಕೊಂಡಿದ್ದಾರೆಯೇ? ಈ ತಿದ್ದುಪಡಿ ವಿಧೇಯಕದಲ್ಲಿ, Tender and Tender Documents redefine ಎಂದು ಹೇಳುತ್ತಾರೆ. How you are going to explain it? Tender and Tender Documents ನ್ನು ಯಾವ ರೀತಿ redefine ಮಾಡುತ್ತಾರೆ? ಇಲ್ಲಿ redefine ಮಾಡಿದ್ದೇವೆಂದು ಹೇಳುತ್ತೀದ್ದಾರೆ. Inclusion of “Contract Execution Management” ಎಂದು ಹೇಳುತ್ತಾರೆ. ಇದರಲ್ಲಿ quality and quantity audit ಗೆ ಏನಾದರೂ ಅವಕಾಶ ಕೊಟ್ಟಿದ್ದಾರೆಯೇ? ಏಕೆಂದರೆ, ಅದನ್ನು outsourcing ರೀತಿ ಮಾಡುತ್ತಿದ್ದಾರೆ. ಅಂದರೆ ಇದು ಆ contract ನ್ನು execute ಮಾಡುವಂತಹ ಒಂದು management. ಇಲ್ಲಿ ಒಂದು procurement ನಲ್ಲಿ ನಮಗೆ material and quantity ಸಿಗುತ್ತದೆ. Whereas in construction and other activities ಗೆ ತಕ್ಕಂತಹ audit ಮಾಡುವಂತಹ mechanism ಅನ್ನು ಇಟ್ಟುಕೊಂಡಿದ್ದಾರೆ? ಮತ್ತೆ ಈ ಒಂದು portal ನ್ನು ಏನು ಮಾಡುತ್ತಿದ್ದಾರೆ. ಇದರಲ್ಲಿ limitation ಏನಾದರೂ ಇದೆಯೇ? ಇದು ಐದು ಲಕ್ಷದಿಂದ ಪ್ರಾರಂಭವಾಗಿ 10 ಲಕ್ಷ ರೂಪಾಯಿಗಳವರೆಗೆ ಇರತಕ್ಕಂಥಾದ್ದೇ, ಇದು ಎಲ್ಲಿಯವರೆಗೂ ಹೋಗುತ್ತದೆ? ಇನ್ನೂ ಮೇಲೆ ಎಲ್ಲದಕ್ಕೂ portal ನಲ್ಲಿಯೇ ಬರುತ್ತದೆಯೇ? ‘Tender Officer’ ಆಗಲಿ, ‘Tender Bulletin Officer’ ಆಗಲಿ ಮತ್ತು ಕೆಳಮಟ್ಟದಲ್ಲಿ ಅವರಿಗೆ ಯಾವುದೇ ತರಹ ಕೆಲಸವೇ ಇಲ್ಲವೇ? ಈ ಹಿಂದೆ scrutiny ಮಾಡುವಂತಹ ಒಂದು ಕಮಿಟಿ ಇರುತ್ತಿತ್ತು. ಅವರು ಇದೆನ್ನೆಲ್ಲಾ manual ಆಗಿ ನಡೆಯುತ್ತಿತ್ತು. ಈಗ ಇದು ಯಾವುದೂ ಇಲ್ಲದೇ, ನೀವು ಪೂರ್ತಿ ಪ್ರಮಾಣದಲ್ಲಿ centralize ಮಾಡುತ್ತಿದ್ದರು. ಈ ರೀತಿ centralize ಮಾಡುವುದರಿಂದ ಯಾವ ರೀತಿ ನಿಮಗೆ ಇದರಿಂದ ದುರಪಯೋಗವಾಗುವುದಕ್ಕಿಂತ ಉಪಯೋಗ ಜಾಸ್ತಿಯಾಗುತ್ತದೆ ಎನ್ನುವುದು ಇಲ್ಲಿ ಬಹಳ ಪ್ರಮುಖವಾದದ್ದು. ಈ ತಿದ್ದುಪಡಿಯನ್ನು ತಂದಿರುವುದು ಬಹಳ ಸ್ವಾಗತಾರ್ಹ. ಆದರೆ ಈ ತಿದ್ದುಪಡಿ ನಾವು ಮಾಡಿ ಹೋಗುತ್ತೇವೆ, ಇದು ಮುಂದೆ ಉಳಿಯುತ್ತದೆ. ಮುಂದಿನ ದಿನಗಳಲ್ಲಿ ನಮ್ಮಲ್ಲಿ ಏನಾಗುತ್ತದೆ ಎಂದರೆ, ನಾನು ಕಾರ್ಪೋರೇಷನ್‌ಗಳಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡಿ ನೋಡಿದ್ದೇನೆ. ಈ Contractors or Tenderers ಯಾರು ತೆಗೆದುಕೊಳ್ಳುತ್ತಾರೆ, ಇಲ್ಲಿ ಎಷ್ಟೋ misuse ಆಗುತ್ತದೆ. ಅಲ್ಲಿ ಶೇಕಡ 30–40 ರಷ್ಟು ಕೆಲಸ ಕೂಡ ಆಗದೇ ಇರುವುದನ್ನು ಯಾರು ನೋಡುತ್ತಾರೆ? ನಾವು contract ಕೊಡುವುದಕ್ಕೆ ಮಾತ್ರ ಇದರಲ್ಲಿ provision ಮಾಡಿದ್ದೇವೆ. ಆದರೆ execution ಮಾಡುವಂತಹದ್ದಕ್ಕೆ, ನಾವು ಎಲ್ಲಿಯೂ ಕಠಿಣವಾದ ಒಂದು ಕಾನೂನನ್ನು ಅವರ ಮೇಲೆ ತೆಗೆದುಕೊಳ್ಳುವುದರ ಬಗ್ಗೆ ಇದರಲ್ಲಿ ಹಾಕಿಲ್ಲ. Execution ಮಾಡಿ public transparency ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತೇವೆ. ನಾವು ಪಾರದರ್ಶಕ ಕಾಯ್ದೆಯನ್ನು ತಂದಿದ್ದೇವೆ, ಇದು ಕೇವಲ contract ಕೊಡುವುದಕ್ಕೆ transparency ಅಷ್ಟೇ. ಜನರಿಗೆ transparency ಇಲ್ಲವೇ ಇಲ್ಲ. ಅವನು ಒಳಗಡೆ ಏನು ಕೊಡುತ್ತೇನೆ ಮತ್ತು ಏನು ಮಾಡುತ್ತೇನೆ ಎನ್ನುವುದು ಗೊತ್ತಿಲ್ಲ. ನಾವು ಬರೀ measurement book ನಲ್ಲಿ ಮಾಡಿ, ಅವರಿಗೆ bill payment ಮಾಡುವುದಕ್ಕೆ ಆಗುತ್ತದೆ ಹೊರತಾಗಿ, ಬೇರೆ ಏನೂ ಆಗುವುದಿಲ್ಲ. ಹಾಗಾಗಿ ಇದರಲ್ಲಿ execute ಮಾಡುವಂತಹದ್ದಕ್ಕೂ, audit ಮಾಡುವುದಕ್ಕೂ ಇಲ್ಲಿ ಒಂದು check list ಮಾಡುವಂತಹ ರೀತಿಯಲ್ಲಿ ಮಾತ್ರ ಒಂದು ಅವಕಾಶವಿದೆ. ಇದು ಬಹಳ centralize ಆಗುತ್ತದೆ. Centralize ಆದಾಗ ನಮಗೆ ಯಾರಿಗೂ ಏನೂ ಗೊತ್ತಾಗುವುದಿಲ್ಲ. ಆದರೆ ಎಲ್ಲೋ ಒಂದು ಕಡೆ transparency ಬಗ್ಗೆ ಹೇಳುತ್ತೇವೆ. ಇಲ್ಲಿ transparency ಯಾವ ರೀತಿಯಾಗುತ್ತದೆ? ಅದು ಕೆಳ ಮಟ್ಟದವರಿಗೂ ಹೋಗುತ್ತದೆಂಬುದು ಎಂಬುದರ ಬಗ್ಗೆ ದಯವಿಟ್ಟು ತಿಳಿಸಬೇಕು.

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ):**–ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ನಾನಾ ವಿಚಾರಗಳ ಬಗ್ಗೆ ಸಾಕಷ್ಟು ಗಮನ ಸೆಳೆದಿದ್ದಾರೆ. ಮಾನ್ಯ ರಮೇಶ್‌ರವರು ಕೆಲವು ಸೂಕ್ಷ್ಮವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಏನು 'Tender' and 'Tender Document' ಬಗ್ಗೆ ಏನು clarify ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ. ಇದನ್ನು ತಮಗೆ ಓದಿ ಹೇಳುತ್ತೇನೆ. ಈಗ ಹಾಲಿ ಇರುವಂತಹ definition ನಲ್ಲಿ ಏನಿದೆ ಎಂದರೆ,

> **'Tender' means the formal offer supply of goods or service in response to an invitation for tender published in a tender document.**

ಇವತ್ತಿನ proposed definition ಇರುವುದು,

> **"(h) 'tender' means the formal offer made for supply of goods or services or construction works and includes tenders done through Electronic Reverse Auctions' in response to an invitation for tender published in the Karnataka Public Procurement Portal."**

ಇಷ್ಟು ಪದಗಳು ಸೇರ್ಪಡೆಯಾಗುತ್ತಿದೆ. ಒಂದು construction works ಮತ್ತು ಈಗ ನಾವು Electronic Reverse Auctions' ನ್ನು introduce ಮಾಡುತ್ತಿದ್ದೇವೆ. ಅದಕ್ಕೂ legal sanctity ಕೊಡಬೇಕು. ಅದು definition ನಲ್ಲಿಯೇ ಬರಬೇಕಾಗುತ್ತದೆ. ಅದನ್ನು ಇಲ್ಲಿ ಸೇರಿಸಿಕೊಳ್ಳುತ್ತಿದ್ದೇವೆ. Tender Document ಗೂ

ಸಹ ಅದೇ ತರಹ definition ಇದೆ. ಇವೆಲ್ಲಾ Electronic Reverse Auctions'. Basically Tender Document ಎಂದರೆ, ಬರೀ paper document ಆಗಬಾರದು. Electronically ಏನು submit ಆಗುತ್ತದೆ. ಅದಕ್ಕೂ ಸಹ ಕಾನೂನು ಮಾನ್ಯತೆ ಸಿಗಬೇಕು. ಈ ತರಹ definition ನಲ್ಲಿ improvement ನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅದೊಂದು ಅಂಶವನ್ನು ಕೇಳಿದ್ದರು.

ಇನ್ನು 'Tender Bulletin' ಗೂ ಒಂದು Authority ಇದೆ. ಅದನ್ನು ತೆಗೆಯುತ್ತಿದ್ದೀರಿ. ಅವರು ಹಾಗಾದರೆ ಅದು ಅಪ್ರಸ್ತುತನಾ ಎಂದು ಕೇಳಿದರು. 'Tender Bullet' ಹೊರಡಿಸುವುದು ಮತ್ತು ಟೆಂಡರ್ ಮಾಡುವುದು ಮತ್ತು 'Execution Management' ಈ ಮೂರು task ಗಳನ್ನು combine ಮಾಡಿ, 'Execution Management' ಎಂದು ನಾವು ತರುತ್ತಿದ್ದೇವೆ. ಅವರೇ bulletin ಹೊರಡಿಸುತ್ತಾರೆ, ಟೆಂಡರ್ ಕರೆಯುತ್ತಾರೆ, award ಮಾಡುತ್ತಾರೆ ಮತ್ತು 'Execution Management' powers ಗೆ legal ಆಗಿ enable ಮಾಡುತ್ತಿದ್ದೇವೆ. Appeal Authority ಇದ್ದೇ ಇರುತ್ತದೆ ಮತ್ತು appeal ಉಳಿದುಕೊಳ್ಳುತ್ತದೆ. ಕೆಲವು ಮಾನ್ಯ ಸದಸ್ಯರು ಇನ್ನೊಂದು ಮಾತನ್ನು ಕೇಳಿದ್ದಾರೆ. ಬಹಳ ಕುಂಠಿತ ಇರುವುದು ಅನುಷ್ಠಾನದ ಹಂತದಲ್ಲಿ ಎಂದು. ಬಹುಶಃ ಈ ತಿದ್ದುಪಡಿಗಳು ಆ ಸಮಸ್ಯೆಗಳಿಗೆ ಪರಿಹಾರ ಕೊಡುತ್ತದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಅಷ್ಟೊಂದು ದೂರವಾಗಿ ನಾವು ಯೋಚನೆ ಮಾಡಿಲ್ಲ. ಆದರೂ 'Execution Management Authority' ಗೆ ನಾವು ಈಗ ಕಾನೂನು ಮಾನ್ಯತೆ ಕೊಡುತ್ತಿರುವುದರಿಂದ, ಈ ತಿದ್ದುಪಡಿಯಲ್ಲಿ they are legally empowered. ಈಗ performance criteria ಏನಿರಬೇಕು? Timelines ಏನಿರಬೇಕು? ನಾವು Tendering Authority. ಅದನ್ನು ಕಾಯ್ದೆಯಲ್ಲಿ ತರುವುದಕ್ಕೆ ಆಗುವುದಿಲ್ಲ. ಒಂದೊಂದು ಕೆಲಸಕ್ಕೆ ಒಂದೊಂದು ತರಹ ಇರುತ್ತದೆ. ನಾವು ಆ Tendering Authority ಈಗ ಗೆ execution powers ಕೊಡುತ್ತಿರುವುದರಿಂದ, ಕಾನೂನಿನಲ್ಲಿ we are validating them. So, it is up to them to get the work done.

(495)17.12.2018,5.10ಟಿಸಿಹೆಚ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ:– (ಮುಂದು)**

ಇಲಾಖೆಯಲ್ಲಿ not only on performance, ಟೆಂಡರ್‌ನಲ್ಲಿಯೂ ಸಹ ಯಾರಾದರೂ corruption ಮಾಡಿದರೆ, manipulation ಆದಲ್ಲಿ, ತಾವುಗಳು ಹೇಳಿದಂತೆ ಕಾನೂನಿನಲ್ಲಿ ಇದಕ್ಕೆ ಅವಕಾಶ ಮಾಡಿದರೂ ಸಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಎಷ್ಟರಮಟ್ಟಿಗೆ ಉಪಯೋಗ ಆಗುತ್ತದೆ ಗೊತ್ತಿಲ್ಲ. ಯಾರು tender manipulation ಮಾಡುತ್ತಾರೆ ಅಥವಾ tender process ನಲ್ಲೇ corruption ತರುತ್ತಾರೆ, ಅವರನ್ನು debar ಮಾಡುವುದಕ್ಕೆ ತಿದ್ದುಪಡಿಯನ್ನು ತಂದಿರುವಂಥದ್ದು. Not only performance, tendering ನಲ್ಲಿ ಅವರೇನಾದರೂ fraud ಮಾಡಿದರೆ, ಅಂತಹವರನ್ನು debar ಮಾಡುವುದಕ್ಕೂ ಸಹ ಈ ವಿಧೇಯಕದಲ್ಲಿ ಅವಕಾಶವನ್ನು ಮಾಡಿಕೊಳ್ಳುತ್ತಿದ್ದೇವೆ. ತಮಗೆ ಗೊತ್ತಿರುವಂತೆ, penalty clause, performance ಇದೆಲ್ಲವೂ ಸಹ tender document ನಲ್ಲಿ ಬರುತ್ತದೆ. ಆಮೇಲೆ ಒಂದೊಂದು ಇಲಾಖೆಯ ಅವಶ್ಯಕತೆ ಒಂದೊಂದು ರೀತಿ ಇರುತ್ತದೆ, ಇದನ್ನು ನಾವು ಕಾನೂನಿನಲ್ಲಿ ಅಡಕಗೊಳಿಸುವುದಕ್ಕೆ ಆಗುವುದಿಲ್ಲ. ಕೆಲವನ್ನು ಒಂದು ವಾರಕ್ಕೆ ಟೆಂಡರ್ ಕರೆದು, ಒಂದು ತಿಂಗಳಿನಲ್ಲಿ ಮುಕ್ತಾಯಗೊಳಿಸುವಂತಹ ಕೆಲಸಗಳು ಇರುತ್ತವೆ. ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ಹೇಳಿದಂತೆ, ಟೆಂಡರ್ ಕರೆಯಲಿಕ್ಕೆ ಕೆಲವು ಕ್ಲಿಷ್ಟಕರವಾದಂತಹ ಸವಾಲುಗಳಿರುತ್ತವೆ. ಇವುಗಳಿಗೆ ಸುಮಾರು 2–3 ವರ್ಷಗಳ ಕಾಲ ಸಮಯ ಬೇಕಾಗುತ್ತದೆ. ಅದನ್ನು ನಾವು ಇಲಾಖಾ ವ್ಯಾಪ್ತಿಗೆ ಬಿಡುತ್ತೇವೆ.

ಬಹಳ ಪ್ರಮುಖವಾಗಿ ಕೆಲವು ಸದಸ್ಯರು ಹೇಳಿದ್ದು ಏನೆಂದರೆ, technical qualification and pre-bid qualification ನಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿದೆ ಎಂಬುದಾಗಿ ನಾನು ಇಲ್ಲಿ ನಿಂತುಕೊಂಡು, ಇಲ್ಲವೆಂದು ಹೇಳದರೆ, ನನಗೆ ನಾನೇ ಸುಳ್ಳು ಹೇಳಿದಂತಾಗುತ್ತದೆ. ಅದು ನಿಜ. ಅನೇಕ ಇಲಾಖೆಗಳಲ್ಲಿ ಇದನ್ನು ಈ ರೀತಿ ಮಾಡುತ್ತಿದ್ದಾರೆ. ಆದರೆ ಇವೆಲ್ಲವೂ ಕೂಡ ಇಲಾಖಾ ಹಂತದಲ್ಲಿಯೇ ನಡೆಯುತ್ತದೆ. ಕಾನೂನಿನಲ್ಲಿ ಸ್ಪಷ್ಟತೆ ಇದೆ. ಆದರೆ, ಅವರು ಉಪಯೋಗ ಮಾಡುವಾಗ ಈ ರೀತಿಯ ದುರುಪಯೋಗ ಆಗುತ್ತಿರುವುದು ನಿಜ. ಅದಕ್ಕೆ ಸಂಬಂಧಪಟ್ಟಂತೆ, ಇವತ್ತು ಈ ಬಿಲ್ಲಿನಲ್ಲಿ ಯಾವುದೇ ತಿದ್ದುಪಡಿಯನ್ನು ನಾವು ತಂದಿಲ್ಲ. ಇದನ್ನು ಜಾರಿಗೆ ತರುತ್ತಿರುವುದರಿಂದ ಸ್ಥಳಿಯರಿಗೆ ಅನಾನುಕೂಲ ಆಗುತ್ತಿರಬಹುದು ಅಥವಾ ನಿಜವಾಗಿ ಯಾರು deserving ಇದ್ದಾರೆ, ಅಂತಹವರಿಗೂ ಕೂಡ ಅದರಿಂದ ಅನ್ಯಾಯ ಆಗುತ್ತಿರುವುದು ವಾಸ್ತವಾಂಶ. ಇವತ್ತು ಅದನ್ನು ತಂದಿಲ್ಲ. ಬಹುಶಃ ಮಾನ್ಯ ಸದಸ್ಯರುಗಳು ಕೊಟ್ಟಿರುವಂತಹ ಸಲಹೆಗಳ ಮೇಲೆ, ಯಾವ ರೀತಿ ಅದನ್ನು streamline ಮಾಡಬಹುದು. ಇದರಲ್ಲಿ technical qualification and pre-bid qualification ನಲ್ಲಿ ದುರುಪಯೋಗವನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದಕ್ಕೆ ನಾನು ಅಧಿಕಾರಿಗಳಿಗೆ ಹೇಳುತ್ತೇನೆ. ಮಾನ್ಯ ಸದಸ್ಯರು ಇದನ್ನು ಎಲ್ಲರಿಗೂ apply ಮಾಡುತ್ತೀರಾ ಎಂದು ಕೇಳಿದರು. ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಹೇಳಿದಂತೆ, KEONICS (Karnataka State Electronics Development Corporation Limited), KRIDL (Karnataka Rural Infrastructure Development Limited) ಮತ್ತು ನಿರ್ಮಿತಿ ಕೇಂದ್ರಕ್ಕೆ ವಿನಾಯಿತಿ ಇದೆ. ಸರ್ಕಾರವೇ ಈ ಸಂಸ್ಥೆಗಳನ್ನು ಇಟ್ಟುಕೊಂಡು ಆರ್ಥಿಕ ಇಲಾಖೆಗೆ ಅಧಿಕಾರ ಕೊಟ್ಟಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವುದೇ ಒಂದು proposal ಮೇಲೆ ಅವರಿಗೇನಾದರೂ ತುರ್ತು ಕೆಲಸ ಇದ್ದಾಗ ಅಥವಾ ಟೆಂಡರ್ ಕರೆಯಲು ಬೇರೆ ರೀತಿಯ ತೊಂದರೆ ಇತ್ತೆಂದರೆ, ಆ ಟೆಂಡರ್ ವಿನಾಯಿತಿ ಕೊಡುವುದಕ್ಕೆ ಕಾನೂನಿನಲ್ಲೇ ಆರ್ಥಿಕ ಇಲಾಖೆಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಇನ್ನು Gem (Government e-Market) ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದರು. ಉದಾಹರಣೆಗೆ computer peripherals ಇವೆ ಅಥವಾ ಸರ್ಕಾರ ವಾಹನಗಳನ್ನು ಖರೀದಿ ಮಾಡಬೇಕು. ಇವೆಲ್ಲಾ ಕೆಲವು standards ಇರುತ್ತವೆ. ಈ Gem portal ನಲ್ಲಿ competitive price discovery ಇದೆ. ಈ ರೀತಿಯ ಐಟಂಗಳೇನಿವೆ, ಅವುಗಳಿಗೆಲ್ಲಾ ನಾವು ಟೆಂಡರ್ ಕರೆಯುವಂತಹ ಅವಶ್ಯಕತೆ ಇರುವುದಿಲ್ಲ. ಆಮೇಲೆ ನಂತರದ ಕನಿಷ್ಟ ಅರ್ಹತೆಯನ್ನು ನಾವು set ಮಾಡಬಹುದು. ಈ ರೀತಿಯ ಕೆಲವು ಸರಳ ಸರಕು ಮತ್ತು ಸೇವೆಗಳು ಏನಿವೆ, ಅವುಗಳಿಗೆಲ್ಲಾ ನಾವು ಟೆಂಡರ್ ಕರೆಯುವಂತಹ ಅವಶ್ಯಕತೆ ಇಲ್ಲ. Gem portal ನಲ್ಲಿ ಅವರೇ ಏನು declare ಮಾಡಿಕೊಂಡಿರುತ್ತಾರೆ, ಅದರ ಪ್ರಕಾರ ಭಾರತ ಸರ್ಕಾರವು competitive price ಎಂದು ಒಪ್ಪಿಕೊಂಡಿರುತ್ತದೆ. ಕಂಪ್ಯೂಟರ್ಸ್, ಕಾರ್‌ಗಳು, ಮೊಬೈಲ್ಸ್ ಹಾಗೂ ಲ್ಯಾಪ್‌ಟಾಪ್ ಇವುಗಳನ್ನು ನಾವು ನೇರವಾಗಿ ಖರೀದಿ ಮಾಡಬಹುದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮತ್ತೊಮ್ಮೆ pre negotiation ಮಾಡಿದಾಗ ಇದು ಬೇರೆ ಕೆಲಸಕ್ಕೆ ಹಾದಿ ಮಾಡಿಕೊಟ್ಟಂತಾಗುತ್ತದೆ ಎಂದು ನನಗನ್ನಿಸುತ್ತದೆ. ಏಕೆಂದರೆ, ಒಮ್ಮೆ if a particular person or company bids for something and if he is qualified at the preliminary level and secondary level and able to get the tender, at the final negotiation somebody comes and intervenes, for what things it leads? ಅಂದರೆ, ಅರ್ಹತೆ ಹೊಂದಿರುವ ಬಿಡ್‌ದಾರರು ಇದ್ದು, ಸರ್ಕಾರ ವಿದಿಸಿರತಕ್ಕಂಥ ನಿಯಮಗಳಲ್ಲಿ fit in ಆಗಿ, ಅರ್ಹತೆ ಹೊಂದಿ, when he is about to get the tender, if another negotiation is called for that purpose what is the mere vision of the Government? ಅರ್ಹತೆ ಹೊಂದಿದವರನ್ನು ಬಿಟ್ಟು ಮತ್ತೊಮ್ಮೆ negotiation ಎಂದು ಹೇಳಿದರೆ, ಏಕೆ ಈ ರೀತಿ ಎಂದು ಕೇಳುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:–** ಪ್ರಸ್ತುತ negotiation ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ನಾವು ಬಿಡ್‌ನ್ನು ತೆರೆದ ನಂತರ, negotiation ಮಾಡುವುದಕ್ಕೆ ನಮಗೆ ಕೇವಲ L-1 (Lowest Evaluated) ಜೊತೆಗೆ ಮಾಡುವುದಕ್ಕೆ ಅವಕಾಶವಿದೆ. ಒಂದು ವೇಳೆ, ನಾವೇನಾದರೂ ಯಾವುದೋ ಸಂದರ್ಭದಲ್ಲಿ L-2 ನವರ ಜೊತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡುವಂತಿಲ್ಲ. ಒಂದು ವೇಳೆ ನಾವೇನಾದರೂ L-2 ಜೊತೆ negotiation ಮಾಡಿದರೆ, today it is against the law. ಅದನ್ನು open up...

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, it will open up by big box.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಆ ರೀತಿ ಏನೂ ಆಗುವುದಿಲ್ಲ. ನಾವು ಈಗ ಕುಳಿತುಕೊಂಡು negotiation ಮಾಡುತ್ತಿದ್ದೇವೆ. ಒಂದು ಅವಕಾಶ ಅಥವಾ ಎರಡು ಅವಕಾಶಗಳನ್ನು ನಾವು ಕೊಟ್ಟುಕೊಂಡು ಹೋಗುತ್ತಿದ್ದೇವೆ. ಈಗ ತಿದ್ದುಪಡಿಯಲ್ಲಿ ಏನು propose ಮಾಡುತ್ತಿದ್ದೇವೆಂದರೆ, 5 ಜನ technical bid ನಲ್ಲಿ ಅರ್ಹತೆಯನ್ನು ಹೊಂದಿರುತ್ತಾರೆ. 5 ಜನರದ್ದು financial bid ತೆರೆಯಲಾಗಿದೆ. ಈ 5 ಜನರಲ್ಲಿ, ಒಬ್ಬರು 5% ಕ್ಕಿಂತಲೂ ಹೆಚ್ಚಿನದಾಗಿ ಬಿಡ್ ಹಾಕಿಕೊಂಡಿರುತ್ತಾರೆ. ಇನ್ನೊಬ್ಬರು ಶೆ.6ಕ್ಕಿಂತಲೂ ಹೆಚ್ಚಿಗೆ ಬಿಡ್ ಹಾಕಿಕೊಂಡಿರುತ್ತಾರೆ. ಇನ್ನೊಬ್ಬರು ಶೇ.7, ಶೇ.8 ಮತ್ತು ಶೇ9 ಕ್ಕಿಂತಲೂ ಹೆಚ್ಚಿಗೆ ಬಿಡ್‌ನ್ನು ಹಾಕಿಕೊಂಡಿದ್ದಾರೆ. ಆದರೆ, ಯಾರೋ ಒಬ್ಬರು ಬಿಡ್‌ದಾರರಲ್ಲಿ ಶೇ.5ರಷ್ಟು ಬಿಡ್‌ನ್ನು ಹಾಕಿಕೊಂಡಿದ್ದರೆ, ಆಗ ಅವರು L-1 ಆಗಿದ್ದಾರೆ. ಆದರೆ ನಾವು ಯಾರು L-1 ಬಿಡ್‌ದಾರರು ಇದ್ದಾರೆಂದು ಪ್ರಚಾರ ಮಾಡುವುದಿಲ್ಲ. ಇದೆಲ್ಲಾ portal ನಲ್ಲಿಯೇ ಆಗುತ್ತದೆ. This is non-negotiating. ಅಂದರೆ ಇದನ್ನು ನಾವು ಮತ್ತು ನೀವು ಕುಳಿತುಕೊಂಡು ಚರ್ಚೆ ಮಾಡುವುದಲ್ಲ. Portal ನಲ್ಲಿ the lowest bidder is 5% ಎಂದು ಹೇಳುತ್ತೇವೆ. ಅದಕ್ಕೆ ನಾವು ಒಂದು ಅಥವಾ ಎರಡು ದಿನಗಳ ಕಾಲ ಸಮಯ ಕೊಡುತ್ತೇವೆ. ಉದಾಹರಣೆಗೆ ಇದನ್ನು ನಿಯಮದಲ್ಲಿ ತೆಗೆದುಕೊಂಡು ಬರುತ್ತೇವೆ. ಎರಡು ದಿನ ಸಮಯ ಕೊಟ್ಟರೆ, ಮತ್ತೆ ಅವರು automatically immediate bid ಮಾಡಬೇಕು. If they are willing to go below 5%, ಆದಾಗ, ಸರ್ಕಾರಕ್ಕೆ ಉಳಿತಾಯ ಆಗುತ್ತದೆ. ನನಗೆ ಹಿಂದಿನ ಇಲಾಖೆಯಲ್ಲಿ ಈ ರೀತಿಯ ಅನುಭವ ಆಗಿದೆ. I can only negotiate with L-1. ನನಗೆ ಈ flexibility ಇದೆ. L-2 ಆಗಿರುವಂತಹವನ್ನು ನಿಮಗೆ ನಾನು ಶೇ.4ಕ್ಕೆ ಬಿಡ್ ಹಾಕುತ್ತೇನೆ ಎಂದರೆ, why should we not exercise that opportunity? ಇದರಲ್ಲಿ ಮುಖಾಮುಖಿ ಯಾವುದೂ ಕ್ಲಿಯರ್ ಇಲ್ಲ. ನಾವು portal ನಲ್ಲಿ ಪ್ರಚಾರ ಮಾಡಿ, re-bid ಮಾಡುವುದಕ್ಕೆ ಇಂತಿಷ್ಟು ಸಮಯ ಕೊಡುತ್ತೇವೆ. ಅಧಿಕಾರಿಗಳು ವಿವರಣೆ ಕೊಟ್ಟಂತೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಇಲ್ಲಿ ವಿಳಂಬಕ್ಕೆ ಅವಕಾಶವೇ ಇಲ್ಲ. ಒಂದು ಅಥವಾ ಎರಡು ದಿನದಲ್ಲಿ ಮಾಡಿ ಮುಗಿಸಬಹುದು. ಇದು online ಅಷ್ಟೆ. Electronic bidding ಮುಖಾಂತರ reverse bidding ಗೆ ಅವಕಾಶ ಮಾಡಿಕೊಟ್ಟು, ಯಾವುದೇ ವಿಳಂಬ ಆಗದಂತೆ, in fact, L-1 ಜೊತೆಗೆ negotiation ಎಂದು ನಾವು

ದಿನಗಳನ್ನು ಕಳೆಯುತ್ತಿದ್ದೇವೆ. ಇದನ್ನು ತಾವು ಒಮ್ಮೆ ತೆಗೆಸಿ ನೋಡಬಹುದು. Negotiation ಗೆ ತಿಂಗಳಾನುಗಟ್ಟಲೆ ಕಳೆಯುತ್ತಿದ್ದೇವೆ. L-1 ಜೊತೆಗೆ further negotiation ಮಾಡುವಂತೆ ನಾವು ಕೂಡ ಒಂದು ನಿರ್ದೇಶನವನ್ನು ಕೊಡುತ್ತೇವೆ. ಅದಕ್ಕೆ ಒಂದೊಂದು ತಿಂಗಳು ಕಳೆದು ಹೋಗುತ್ತಿದೆ. ಇದರಲ್ಲಿ ಆ time lapse ಆಗುತ್ತಿರುವುದನ್ನು ಉಳಿತಾಯ ಮಾಡಿ, ಒಂದು ಅಥವಾ ಎರಡು ದಿನದಲ್ಲಿ second round of bidding ಅನ್ನು electronically ಮುಗಿಸಿ, it will be only on portal and no face to face. In fact, ಇದರಲ್ಲಿ L-1 ಯಾರು ಎಂದು ಕೂಡ ನಾವು ಪ್ರಚಾರ ಮಾಡುವುದಿಲ್ಲ. So that we can prevent collusion. ಅವರು ಯಾರು L-1 ಇದ್ದಾರೆ, ಆತನಿಗೆ ಮಾತ್ರ ನನ್ನದು ಶೇ.5 ಬಿಡ್ ಇದೆಯೆಂದು ಗೊತ್ತಾಗುತ್ತದೆ. ಹಾಗಾಗಿ, ಮಾನ್ಯ ಸದಸ್ಯರ ಆತಂಕ ಏನಿದೆ, ಆ ರೀತಿ ಆಗಲಿಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಯಾರು competitive ಆಗಿ ಬಿಡ್ ಮಾಡಿ ಅರ್ಹತೆಯನ್ನು ಹೊಂದಿರುತ್ತಾರೆ, ಅವರಿಗೆ ಮತ್ತೊಂದು ಹೊಸ ಅವಕಾಶಕ್ಕೆ ಆಹ್ವಾನ ನೀಡಿದಂತಾಗುತ್ತದೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಇದರಿಂದ ಸರ್ಕಾರಕ್ಕೆ ಹಣ ಉಳಿಸಿದಂತಾಗುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇದರಿಂದ ಸರ್ಕಾರಕ್ಕೆ ಹಣ ಉಳಿಸಲು ಹೋಗಿ, ಯಾರು ನಿಜವಾದ eligible bidder ಇರುತ್ತಾನೆ,....

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ, this is open only for technically qualified. ಯಾರು ಅರ್ಹತೆ ಹೊಂದಿದ್ದಾರೆಯೋ ಅವರಿಗೆ ಮಾತ್ರ ಇದು, ಬೇರೆಯವರಿಗೆ ಇಲ್ಲ. ಹಾಗಾಗಿ, ಈ ಬಿಲ್‌ಗೆ ಅನುಮೋದನೆ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರುಗಳಿಗೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನನ್ನ ಎಲ್ಲಾ ಮಾನ್ಯ ಸದಸ್ಯ ಮಿತ್ರರು ಸಲಹೆಗಳನ್ನು ಕೊಟ್ಟು ಬಹಳಷ್ಟು ಚರ್ಚೆ ಮಾಡಿದ್ದಾರೆ. ಇಲ್ಲಿ ಬಹಳ ಮುಖ್ಯವಾಗಿರುವಂಥದ್ದು, ಬಿಡ್‌ನಲ್ಲಿ ಅರ್ಹತೆ ಹೊಂದಿದವರು preliminary things follow ಮಾಡುತ್ತಿಲ್ಲ. ನಮ್ಮ ಬಳಿ ನಿಯಮ ಇದೆ, ಇಂತಹ ದಿನದಂದು ಕಾಮಗಾರಿಯನ್ನು ಪ್ರಾರಂಭ ಮಾಡಿ, ಇಂತಹ ದಿನದಂದು ಆ ಕಾಮಗಾರಿಯನ್ನು ಅಂತಿಮಗೊಳಿಸಬೇಕೆಂದು ಇದೆ. ಮತ್ತೆ ಆ ಕಾಮಗಾರಿಯ ಗುತ್ತಿಗೆದಾರರು ಯಾರು, ಬಿಡ್ಡುದಾರ ಯಾರು ಎಂದು ಆ ಬೋರ್ಡ್‌ನಲ್ಲಿ ನಮೂದಿಸಬೇಕಾಗುತ್ತದೆ. ಇದನ್ನು ಎಷ್ಟರಮಟ್ಟಿಗೆ ಪಾಲನೆ ಮಾಡುತ್ತಿದ್ದೇವೆಂದು ಇಲ್ಲಿರುವಂತಹ ಮಾನ್ಯ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಿದೆ. ಆ ಬಿಡ್‌ದಾರರು ಕಾಮಗಾರಿ ಪ್ರಾರಂಭದ ದಿನ ಹಾಗೂ ಅಂತಿಮಗೊಳಿಸುವ ದಿನವನ್ನು ಹಾಕಬೇಕು. ಆಮೇಲೆ ಆ stipulated period ನಲ್ಲಿ 30 ದಿನದೊಳಗೆ ಈ ಕಾಮಗಾರಿಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಗಿಸದಿದ್ದಲ್ಲಿ ಮತ್ತೆ ಏನು ಕ್ರಮ ತೆಗೆದುಕೊಳ್ಳಬೇಕೆಂಬ ವಿಚಾರಗಳು ಕೂಡ ಇವೆ. ಅದನ್ನು ಪರಿಪಕ್ವವಾಗಿ ಪಾಲನೆ ಮಾಡಿರುವಂಥದ್ದು ಅಥವಾ ಅಧಿಕಾರಿಗಳು ಅದನ್ನು ಸರಿಯಾದ ರೀತಿಯಲ್ಲಿ ಕ್ರಮಬದ್ಧಗೊಳಿಸಿರುವಂತಹ ನಿದರ್ಶನಗಳು ಬಹಳ ಕಡಿಮೆ. ಈಗ ತಾನೆ KEONICS, KRIDL, MSIL ಮತ್ತು ನಿರ್ಮಿತಿ ಕೇಂದ್ರದಿಂದ ಮಾಡಿಸಲಾಗುತ್ತಿದೆ ಎಂದು ಮಾನ್ಯ ಸಚಿವರು ಹೇಳಿದರು. ನಮ್ಮ ಸರ್ಕಾರಿ ಸಂಸ್ಥೆಗಳಲ್ಲೇ ಈ ರೀತಿಯ ಅನಾಹುತಗಳು ಆಗಿರುತ್ತವೆ. KEONICS ನಲ್ಲಿ ಆಗಿರುವಂತಹ ಅನಾಹುತವನ್ನು ನಾವು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು L-1 ಗೆ ಮಾತ್ರ ನಾವು ಅವಕಾಶ ಕೊಡುತ್ತೇವೆ ಎಂದು ಹೇಳಿದರು.

(496)17-12-2018(5-20)mm-ak

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):–**
ಉದಾಹರಣೆಗೆ ಒಂದು ಆಸ್ತಿ ವ್ಯಾಪಾರಕ್ಕೆ ಹೋಗುತ್ತೇನೆ, ವ್ಯಾಪಾರ ಆಯಿತು. ವ್ಯಾಪಾರವಾದ ಮೇಲೆ ನೋಂದಣಿ ಸಮಯದಲ್ಲಿ, 1000 ರೂಪಾಯಿ ಮುಂಗಡ ಹಣ ಕೊಟ್ಟ ಮೇಲೆ, ಅದಕ್ಕೆ ಇನ್ನೂ 1000 ರೂಪಾಯಿ ಹೆಚ್ಚಾಗಿ ಕೊಡುತ್ತೇನೆ ಎಂದು ಇನ್ನೊಬ್ಬ ಬರುತ್ತಾನೆ. ಅದು ವ್ಯಾಪಾರ ಆಗುವುದೇ?

**ಸಭಾಪತಿಯವರು:–** ಆಗ ಸರ್ಕಾರಕ್ಕೆ ಆದಾಯವಾಗುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅದು ಹೇಗೆ ಆಗುತ್ತದೆ? ಸರ್ಕಾರಕ್ಕೆ ಈ ರೀತಿ ಆದಾಯ ಆಗುವುದಲ್ಲ. ಎಲ್–1 ಎಲ್–2 ಎಂಥದ್ದು, you must honour the L-1 first. How are you going to honour L-2?

**Sri KRISHNA BYREGOWDA:** We will honour L-1. Who is saying 'no'? We are just giving one opportunity.

**ಶ್ರೀ ಎಸ್.ಎಲ್. ಭೋಜೇಗೌಡ:–** ಯಾವ ಮಾನದಂಡದಲ್ಲಿ ಎಲ್–2 ಅನ್ನು ಕರೆಯುತ್ತೀರಿ? ಎಲ್–2 ಕರೆಯುವುದಕ್ಕೆ ಸಾಧ್ಯವೇ ಇಲ್ಲ.

**Sri KRISHNA BYREGOWDA:** You take it as another level of bidding; that's all. ಅಂತಿಮವಾಗಿ ಎಲ್–1ಗೆ ಕೊಡುತ್ತೇವೆ. ಎಲ್–1 ಮೈನಸ್‌ಗೆ ಹೋಗುತ್ತೇವೆ. ಮೌಖಿಕವಾಗಿ ಇವೆಲ್ಲಾ negotiation ನಡೆಯುತ್ತಿತ್ತು. ತಾವೆಲ್ಲ ಹೇಳಿದ ಹಾಗೆ ಮೌಖಿಕವಾಗಿ ನಡೆದಾಗ ಏನೇನು ನಡೆಯುತ್ತದೆ ಗೊತ್ತಿಲ್ಲ. ಈಗ ಅದನ್ನೆಲ್ಲಾ ತೆಗೆದುಹಾಕಿ ಪಾರದರ್ಶಕವಾಗಿ electronically bid ಮಾಡುವುದಕ್ಕೆ ಅವಕಾಶ ಮಾಡುತ್ತಿದ್ದೇವೆ. We are removing human intervention in the process. ಅದರಲ್ಲಿ ಯಾರೂ ಬಿಡ್ ಮಾಡಲಿಲ್ಲ, ಶೇ.5ಕ್ಕೆ ನಿಂತುಕೊಂಡಾಗ ಅವರಿಗೇ ಕೊಡುತ್ತೇವೆ. ಶೇ.4ಕ್ಕೆ ಬಂದರೆ ಯಾವುದೋ ಒಂದು ಕೋಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿ ಸರ್ಕಾರಕ್ಕೆ ಉಳಿತಾಯವಾದರೆ ಆಗಲಿ ಎಂದು ಅಂತಿಮವಾಗಿ ಇದು ಎಲ್–1ಗೆ ಹೋಗುತ್ತದೆ. ಇದನ್ನು ಯಾರೂ ಗೊಂದಲ ಮಾಡಿಕೊಳ್ಳಬೇಡಿ. It will go to L-1 only. We will have two rounds of arriving at L-1; that's all.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಎಲ್–1ಗೂ ಕೂಡ ಎಲ್–2ನವರಲ್ಲಿ ಇನ್ನಷ್ಟು price competition ಇದೆಯೆಂದು ಅನಿಸಿದರೆ, ಪಾರದರ್ಶಕ ಕಾಯ್ದೆ ಎಂದು ಹೇಳುವುದೇ ಸರ್ಕಾರಕ್ಕೆ ನಿಧಿ ಉಳಿಸುವುದಕ್ಕೋಸ್ಕರ. So definitely it will improve the system.

**Sri KRISHNA BYREGOWDA:** True Price Discovery ಅನುಸಾರ. ಯಾವುದೋ ಕೆಲವು ಕಾರಣಗಳಿಂದ ಅವರು ನಮ್ಮನ್ನು manipulate ಮಾಡಿದರೆ, we should reserve the rights to exercise our options.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** ಖಂಡ 2 ರಿಂದ 13ವರೆಗಿನ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 13 ವರೆಗಿನ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಈ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2018**

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತಿದ್ದೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಜಿ.ಎಸ್.ಟಿ ಕಾನೂನನ್ನು ನಾವು, ಸಂಸತ್ ಹಾಗೂ ಎಲ್ಲಾ ವಿಧಾನಮಂಡಲಗಳು ಅನುಮೋದನೆ ಕೊಟ್ಟು 2017ರ ಜುಲೈನಿಂದ ಅನುಷ್ಠಾನ ಮಾಡಿದ್ದೇವೆ. ಕಳೆದ ಒಂದು ವರ್ಷದ ಅನುಭವದ ಆಧಾರದ ಮೇಲೆ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರ ಕುಳಿತು ಇದಕ್ಕೆ ಕೆಲವು ತಿದ್ದುಪಡಿಗಳನ್ನು ತಿದ್ದುಪಡಿ ವಿಧೇಯಕದ ಮುಖಾಂತರ ತಮ್ಮ ಮುಂದೆ ತಂದಿದ್ದೇವೆ. ಪ್ರಮುಖವಾಗಿ ಬಹಳ ಅನುಭವದ ಆಧಾರದ ಮೇಲೆ ಕೆಲವು ಸ್ಪಷ್ಟೀಕರಣವನ್ನು ನೀಡುತ್ತಿದ್ದೇವೆ. ನಿಯಮಾವಳಿಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಉದಾಹರಣೆಗೆ composition scheme ಎಂದು ಇದೆ. ಅಂದರೆ, ಸಣ್ಣ ಉದ್ದಿಮೆದಾರರು ಬಹಳ ವಿವರವಾದಂತಹ, ಪೂರಿತವಾದಂತಹ tax declaration ಕೊಡುವುದು ಬೇಕಾಗಿಲ್ಲ. ಅದೊಂದು ರೀತಿ Turnover Tax ಇದ್ದ ಹಾಗೆ. ನಾನು ಈ ತಿಂಗಳು 2–3 ಲಕ್ಷ turnover ಮಾಡಿದ್ದೇನೆ, ಆ 3 ಲಕ್ಷಕ್ಕೆ ಇಂತಿಷ್ಟು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

percentage ಕಟ್ಟುತ್ತೇವೆ. ಅದೇ ಕಸುಬು ಮಾಡುವವರು ದೊಡ್ಡ ಉದ್ದಿಮೆದಾರರಾಗಿದ್ದರೆ ಅವರು Invoice-wise tax return ಭರ್ತಿ ಮಾಡಬೇಕು. ಅಂದರೆ, ಎಷ್ಟು ಖರೀದಿ ಮಾಡಿದ್ದೇನೆ, ಎಷ್ಟು ಮಾರಾಟ ಮಾಡಿದ್ದೇನೆ ಪ್ರತಿಯೊಂದನ್ನೂ ವಿವರವಾಗಿ Tax Statement file ಮಾಡಬೇಕು. ಅದೆಲ್ಲವೂ ಸಣ್ಣ ಉದ್ದಿಮೆದಾರರಿಗೆ ಹೊರೆಯಾಗುತ್ತದೆ ಎಂದು ಅವರಿಗೆ ನಾವು composition ಕೊಡುತ್ತೇವೆ. Composition ಅಂದರೆ ಆಗಲೇ ಹೇಳಿದ ಹಾಗೆ ತನ್ನದು ಇಷ್ಟು turnover ಆಗಿದೆ ಅದರ ಮೇಲೆ ಇಷ್ಟು percentage ತೆಗೆದುಕೊಳ್ಳುವಂತೆ. ನಾವು ಅವರಿಗೆ ಬಹಳ ಕಡಿಮೆ ಪರ್ಸೆಂಟೇಜ್ ಅಂದರೆ ಶೇ.1, ಶೇ.2 ಎಂದು ಇಟ್ಟಿದ್ದೇವೆ. ಹಿಂದೆ ಕಾನೂನಿನಲ್ಲಿ ಕೇವಲ ಒಂದು ಕೋಟಿಯವರೆಗೆ ಮಾತ್ರ ಅವಕಾಶ ಇತ್ತು. ಸಣ್ಣ ಉದ್ದಿಮೆದಾರರಿಗೆ detailed tax return ಭರ್ತಿ ಮಾಡುವುದು ಹೊರೆಯಾಗುತ್ತದೆ ಎಂದು ಒಂದು ಕೋಟಿ turnover ನಾವೇನು eligibility ಎಂದು ಇಟ್ಟಿರುವುದು ಸಾಲದೆಂದು ಈಗ ಒಂದೂವರೆ ಕೋಟಿಗೆ ceiling ಅನ್ನು ಏರಿಸುತ್ತಿದ್ದೇವೆ. ಯಾರು ವರ್ಷದಲ್ಲಿ ಒಂದೂವರೆ ಕೋಟಿ turnover ಮಾಡುತ್ತಾರೆ ಅವರೂ ಕೂಡ ಈ ಸರಳೀಕೃತ ವಿಧಾನದಲ್ಲಿ ತೆರಿಗೆಯನ್ನು ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಇದರಲ್ಲಿ ಅಡಕವಾಗಿರುವಂತಹದ್ದರಲ್ಲಿ ಒಂದನ್ನು ಉದಾಹರಣೆಗೆ ಹೇಳುತ್ತಿದ್ದೇನೆ. ಇನ್ನು ಕೆಲವು ಸಮಯ ಕೆಲವರಿಗೆ monthly tax returns file ಮಾಡಬೇಕು. Composition dealers ಆದರೆ ಅವರಿಗೆ ತ್ರೈಮಾಸಿಕವಾಗಿ ಮಾಡುವಂತಹ ಸೌಲಭ್ಯವನ್ನು ಕೂಡ ಕೊಡುತ್ತಿದ್ದೇವೆ. ಈಗ e-Way Bill ಅನ್ನು ಕೂಡ ಪರಿಚಯಿಸಿದ್ದೇವೆ. ಅದರಲ್ಲಿ ಸರಳೀಕರಣ ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ಕೆಲವು ತಿದ್ದುಪಡಿಗಳು ಇಂದಿನ ವಿಧೇಯಕದಲ್ಲಿದೆ. ಈ ರೀತಿಯ ಸಣ್ಣ ಪುಟ್ಟ ವ್ಯಾಖ್ಯೆಗಳನ್ನೆಲ್ಲಾ ಸೇರಿಸಿ ಮಾಡಿಕೊಟ್ಟಿದ್ದೇವೆ. ಇದು ಮೊದಲು ಜಿ.ಎಸ್.ಟಿ ಕೌನ್ಸಿಲ್‌ನಲ್ಲಿ ಚರ್ಚೆಯಾಗಿ at least majority consensus ಬಂದ ನಂತರ ಅಲ್ಲಿಯೇ ಈ ಅಮೆಂಡ್‌ಮೆಂಟ್ ಮೊದಲು ಪಾಸ್ ಆಗುತ್ತದೆ. Draft Amendments ಜಿ.ಎಸ್.ಟಿ. ಕೌನ್ಸಿಲ್‌ನಲ್ಲಿ ಒಪ್ಪಿಗೆಯಾಗಿ ಅದಾದ ಮೇಲೆ ಸಂಸತ್‌ನಲ್ಲಿಯೂ ಕೂಡ ಇದು ಒಪ್ಪಿಗೆಯಾಗಿ, ಸುಮಾರು 27 ರಾಜ್ಯಗಳಲ್ಲಿ ಕೂಡ ಇದು ಒಪ್ಪಿಗೆಯಾಗಿದೆ. ಇದರ ತುರ್ತು ಅವಶ್ಯಕತೆ ಇದ್ದುದರಿಂದ ನಾವು ಕೂಡ ತಿದ್ದುಪಡಿಗಳಿಗೆ ಸಚಿವ ಸಂಪುಟದ ಒಪ್ಪಿಗೆ ಪಡೆದುಕೊಂಡು ಮಾನ್ಯ ರಾಜ್ಯಪಾಲರ ಮುಖಾಂತರ ಈಗಾಗಲೇ ನಾವು ordinance ಅನ್ನು ಹೊರಡಿಸಿದ್ದೇವೆ. ತಮ್ಮ ಒಪ್ಪಿಗೆಗೋಸ್ಕರ ಇದನ್ನು ತಮ್ಮ ಮುಂದೆ ತಂದಿದ್ದೇವೆ. ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಸದನದಲ್ಲಿ ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:– ಖಂಡ 2 ರಿಂದ 32ವರೆಗಿನ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ.**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 32 ವರೆಗಿನ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(497) 17–12–2018/05–30/ಕೆಹೆಚ್–ಎಕೆ

(ಸಭಾಪತಿಯವರ ಉಪಸ್ಥಿತಿ)

**9. ಪ್ರಕಟಣೆ**

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯ ದಿನಾಂಕ:17–12–2018 ರಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, 2018ನ್ನು ಕರ್ನಾಟಕ ವಿಧಾನಸಭೆಯು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**10. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಉ) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2018**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್.ವಿ. ದೇಶಪಾಂಡೆ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2018ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್.ವಿ. ದೇಶಪಾಂಡೆ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಒಂದು ಸಣ್ಣ ತಿದ್ದುಪಡಿ ಇದೆ. ಈ ಬಗುರ್ ಹುಕುಂ ಜಮೀನಿಗೆ ಮೊದಲು ನಮೂನೆ–50ನ್ನು ತರಲಾಯಿತು. ನಂತರ ನಮೂನೆ–53ನ್ನು ತಂದಿದ್ದೇವೆ. ಸೆಕ್ಷನ್ 94(ಬಿ) ರಲ್ಲಿ ತಿದ್ದುಪಡಿ ಮಾಡುವಾಗ, 2000ನೇ ಇಸವಿಯಿಂದ ಸೆಕ್ಷನ್ 94(ಬಿ)ಗೆ ತಿದ್ದುಪಡಿ ಮಾಡುತ್ತಾ ಎರಡು, ಮೂರು ವರ್ಷಗಳ ಕಾಲ time extend ಮಾಡುತ್ತಾ ಬಂದಿದ್ದೇವೆ.

ಕಳೆದ ಬಾರಿ 2017ನೇ ಇಸವಿಯಲ್ಲಿ ತಿದ್ದುಪಡಿ ಮಾಡಿದಾಗಲೂ ಸಹ ಸೆಕ್ಷನ್ 94(ಬಿ)ಯ ಅವಧಿ 18 ವರ್ಷಗಳ ಕಾಲ ಇದ್ದದ್ದನ್ನು 20 ವರ್ಷಗಳಾಗಿ ಮಾಡಿಕೊಂಡಿದ್ದೇವೆ. ಆ ಪ್ರಕಾರ ಇನ್ನೂ ಕೆಲವು ಪ್ರಕರಣಗಳು ಬಾಕಿ ಇವೆ. ನಮೂನೆ-50 ರಲ್ಲಿ 9,937 ಅರ್ಜಿಗಳು ವಿಲೇವಾರಿ ಆಗಬೇಕು. ಕೆಲವು ಭೂಮಿಗಳ ಸಕ್ರಮಕ್ಕಾಗಿ ಒಟ್ಟು 10,88,563 ಅರ್ಜಿಗಳು ಬಂದಿದ್ದು, ಅದರಲ್ಲಿ 10,78,626 ಅರ್ಜಿಗಳು ವಿಲೇವಾರಿಯಾಗಿದೆ. ಹಾಗಾಗಿ ಇನ್ನು 9,937 ಅರ್ಜಿಗಳು ಬಾಕಿ ಇವೆ. ಇದಕ್ಕೆ ಎರಡು ವರ್ಷಗಳ ಸಮಯವನ್ನು ಕೇಳುತ್ತಿದ್ದೇವೆ. ಅದೇ ಪ್ರಕಾರ ನಮೂನೆ-53ರಲ್ಲಿ ಒಟ್ಟು 10,96,877 ಅರ್ಜಿಗಳು ಬಂದಿದ್ದು, ಅದರಲ್ಲಿ 9,12,548 ಅರ್ಜಿಗಳು ವಿಲೇವಾರಿಯಾಗಿದೆ. ಇನ್ನೂ 1,84,320 ಅರ್ಜಿಗಳು ಬಾಕಿ ಇವೆ. ಈ ಅರ್ಜಿಗಳನ್ನು ಇತ್ಯರ್ಥ ಮಾಡುವುದಕ್ಕೆ ಮತ್ತು ಸೆಕ್ಷನ್ 94(ಬಿ)ಗೆ ತಿದ್ದುಪಡಿ ತರುವುದಕ್ಕೆ ಎರಡು ವರ್ಷಗಳ ಅನುಮತಿಯನ್ನು ಈ ಸದನದ ಮೂಲಕ ಕೇಳುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಯವನ್ನು ಕೇಳಿರುವಂತಹದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿ ಇದೆ. ಆದರೆ ಇದರಲ್ಲಿ ನನ್ನ ಒಂದು ಅನುಮಾನ ಏನಿದೆಯೆಂದರೆ, ತಾವು ವರ್ಷಂಪ್ರತಿ ಬೇರೆ ಬೇರೆ ಬಗುರ್ ಹುಕುಂ ಭೂಮಿಗಳ ಮೇಲೆ ಅಂದರೆ, ಅದು ಕೃಷಿ ಭೂಮಿ ಇರಬಹುದು, ಸರ್ಕಾರಿ ಭೂಮಿಗಳಲ್ಲಿ ವಾಸವಾಗಿರುವಂತಹವರು ಇರಬಹುದು, ಅರಣ್ಯ ಭೂಮಿಗಳಲ್ಲಿ ವಾಸವಾಗಿರುವಂತಹವರು ಇರಬಹುದು, ಅವರಿಗೆ ಕಾಲಕಾಲಕ್ಕೆ ಸರಿಯಾಗಿ ಫಾರಂ-ಎ, ಫಾರಂ-ಬಿ, ಫಾರಂ-ಸಿ ಎಂದು ಮಾಡಿ ತರುತ್ತಿದ್ದೇವೆ. ಪ್ರಕರಣ 94, 94(ಸಿ)(ಸಿ), 94(ಸಿ) ಯನ್ನು ತಂದಿದ್ದೇವೆ. ಈಗ 94(ಬಿ) ತಂದಿದ್ದೇವೆ. ಇದೇ ರೀತಿ ಅನೇಕ ಹೊಸ ಸರ್ಕಾರಗಳು ಹೊಸ ತಿದ್ದುಪಡಿಗಳನ್ನು ಮಾಡಿಕೊಂಡು ಬಂದಿದೆ. ನಮೂನೆ-50 ಮತ್ತು ನಮೂನೆ-53 ಬಹಳ ಹಿಂದೆ ತಂದಿರುವಂತಹ ಕಾಯ್ದೆಯಾಗಿದ್ದು, ಆ ಕಾಯ್ದೆಯಡಿಯಲ್ಲಿ ಇನ್ನೂ 9,937 ಅರ್ಜಿಗಳು ಮತ್ತು 1,84,329 ಅರ್ಜಿಗಳು ವಿಲೇವಾರಿಗೆ ಬಾಕಿ ಇದ್ದು, ಈ ರಾಜ್ಯದಲ್ಲಿ ಸುಮಾರು 2 ಲಕ್ಷ ಅರ್ಜಿಗಳು ಬಾಕಿ ಇವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ಈ ತಿದ್ದುಪಡಿಯನ್ನು ತಂದು ಪುನಃ ಪುನಃ ಸಮಯ ವಿಸ್ತರಿಸಿ, ವಿಲೇವಾರಿ ಆಗದೇ ಇದ್ದರೆ whether it can be transferred to some other Act? ಬೇರೆ ನಿಯಮಕ್ಕೆ ವರ್ಗಾವಣೆ ಮಾಡುವುದಕ್ಕೆ ಸಾಧ್ಯವೇ, 94(ಸಿ)(ಸಿ) ಮತ್ತು 94(ಸಿ) ಅರ್ಜಿಗಳನ್ನು ವರ್ಗಾವಣೆ ಮಾಡುವುದಕ್ಕೆ ಸಾಧ್ಯವೇ, ಬೇರೆ ಯಾವುದಕ್ಕಾದರೂ ವರ್ಗಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ? ಇನ್ನು ನಮೂನೆ-50 ರಲ್ಲಿ ಅರ್ಜಿಗಳು ಬಾಕಿ ಇವೆ. ಇದರ ಬಗ್ಗೆ ನಾವು ಸಹ ಅನೇಕ ಬಾರಿ ಕೇಳುತ್ತೇವೆ. ಹೊಸ ಕಾನೂನು ಬಂದಾಗ ನಮೂನೆ-50 ರಲ್ಲಿಯೂ ಅರ್ಜಿ ಬಾಕಿ ಇರುತ್ತದೆ. ಹೊಸ ಕಾನೂನು ಬಂದಾಗ ನಮೂನೆ-53 ರಲ್ಲಿಯೂ ಮತ್ತು 94(ಸಿ)(ಸಿ) ಯಡಿ ಅರ್ಜಿಗಳನ್ನು ಹಾಕುತ್ತಾರೆ. ಇನ್ನೊಂದರಲ್ಲಿಯೂ ಅರ್ಜಿಯನ್ನು ಹಾಕುತ್ತಾರೆ. So right from the beginning, they

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

are going on filing the applications. Nothing is coming out. ಇದರಿಂದ ಯಾವುದೇ ರೀತಿಯ ಫಲಿತಾಂಶ ಸಿಗುವುದಿಲ್ಲ. ಇದಕ್ಕೆ ನನ್ನ ಸಲಹೆಯೇನೆಂದರೆ, ಈ ಅರ್ಜಿಗಳನ್ನು ಯಾವುದಕ್ಕಾದರೂ ಪರಿವರ್ತಿಸುವುದಕ್ಕೆ ಸಾಧ್ಯವೇ? ಇದೊಂದು social legislation. ಅವರಿಗೆ ಸಹಾಯ ಮಾಡುವುದಕ್ಕೆ ಮಾಡುವಂತಹ ಕಾನೂನು. ಬಗುರ್ ಹುಕುಂ, ಸಕ್ರಮೀಕರಣ ಇರಬಹುದು, ಅವರು ಅಕ್ರಮವಾಗಿ ವಾಸಿಸುವಂತಹ ಭೂಮಿಗೆ ಸಕ್ರಮ ಮಾಡುವಂತಹದ್ದು ನಮ್ಮ ಉದ್ದೇಶವಾಗಿದೆ. ಹಾಗಾಗಿ ಇದನ್ನು ಎಷ್ಟು ಸಮಯಕ್ಕೋಸ್ಕರ ಬಾಕಿ ಇಡುತ್ತಾರೆ. ಇದಕ್ಕೆ ಏನಾದರೂ ಬೇರೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂಬುದು ನನ್ನ ಸಲಹೆಯಾಗಿದೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಷ್ಟು ವರ್ಷಗಳಾದರೂ ಯಾವ ಕಾರಣಕ್ಕಾಗಿ ಅರ್ಜಿಗಳು ಬಾಕಿ ಇವೆ. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳದೇ ಇದ್ದರೆ, ಮಾನ್ಯ ಐವನ್ ಡಿ'ಸೋಜಾ ರವರ ಅನುಮಾನ ನಿಜ ಎಂದಾಗುತ್ತದೆ. ನನ್ನ ಗಮನಕ್ಕೆ ಬಂದಿರುವ ಹಾಗೆ ಸರಿಯಾದ ಡಾಕ್ಯುಮೆಂಟ್‌ಗಳು ಇಲ್ಲದೆ ಇರುವುದರಿಂದ, ಅತಿ ಹೆಚ್ಚು ಅರ್ಜಿಗಳು ಬಾಕಿ ಇರುವುದಕ್ಕೆ ಕಾರಣವಾಗಿದೆ. ಎರಡನೆಯದು, ಅರಣ್ಯ ಇಲಾಖೆಯವರು ಇದಕ್ಕೆ objection ಹಾಕಿರುವುದು. ಈ ಬಗುರ್ ಹುಕುಂ ಸಮಿತಿಯು ಅರಣ್ಯ ಇಲಾಖೆಯವರಿಗೆ ಅಭಿಪ್ರಾಯವನ್ನು ಕೇಳಿದ್ದಾರೆ. ಅರಣ್ಯ ಇಲಾಖೆಯವರ ಹತ್ತಿರ ಯಾವುದೇ ದಾಖಲೆಗಳನ್ನು ಇಟ್ಟುಕೊಳ್ಳದೇ, ಇದು ಅರಣ್ಯಕ್ಕೆ ಸೇರಿದೆ ಎಂದು ಒಂದು objection file ಮಾಡುತ್ತಾರೆ. ಇದರಿಂದ dispose ಮಾಡುವುದಕ್ಕೆ ಆಗುವುದಿಲ್ಲ. ಅರಣ್ಯ ಇಲಾಖೆಯವರು ಉದಾಹರಣೆಗೆ, ಸರ್ವೆ ನಂ.10ರಲ್ಲಿ 500 ಎಕರೆ ಇದ್ದು, ಯಾವ portion ನ ಒಳಗೆ, ಯಾವ ದಿಕ್ಕಿನಲ್ಲಿ 200 ಎಕರೆ ನಮ್ಮದು, ಅದರ ಚೆಕ್‌ಬಂದಿ ಏನು? ಎಂಬುದು ನಮಗೆ ಗೊತ್ತಿಲ್ಲ. ಇವತ್ತಿನ ದಿವಸ ಅರಣ್ಯ ಇಲಾಖೆಯವರು ಸುಪ್ರೀಂ ಕೋರ್ಟ್ ಮತ್ತು Green Bench ತೀರ್ಮಾನವಿದೆ ಎಂಬ ಕಾರಣಕ್ಕೆ ಅವರು ಯಾರ ಮಾತನ್ನು ಕೇಳುವುದಿಲ್ಲ. ಇದರಿಂದ objection file ಮಾಡುತ್ತಾರೆ. ಈ ರಾಜ್ಯದಲ್ಲಿ ಎಲ್ಲಾ ದೃಷ್ಟಿಯಿಂದಲೂ ಪರಿಹಾರ ಆಗಬೇಕು. ಇದುವರೆಗೂ bifurcation ಆಗಲೇ ಇಲ್ಲ. ಕಂದಾಯ ಮತ್ತು ಅರಣ್ಯ ಭೂಮಿಗೂ ಒಂದು ಜಂಟಿ ಸರ್ವೆ ಮಾಡಿ, ಇದನ್ನು ಮೊದಲು ಇತ್ಯರ್ಥ ಮಾಡಬೇಕು. ಒಂದು ಹಂತದೊಳಗೆ ಶಿವಮೊಗ್ಗ ಜಿಲ್ಲೆಯ ಕೆಲವು ಕಡೆ ಯಾವುದೂ ಸರ್ವೆ ಮಾಡದೇ, ಯಾರೋ ಹೇಳಿದರು ಎಂಬ ಕಾರಣಕ್ಕೆ ಎಲ್ಲಾ ಭೂಮಿಯನ್ನು ಅರಣ್ಯ ಭೂಮಿ ಎಂದು ಬರೆದಿರುವಂತಹ ರೆವಿನ್ಯೂ ದಾಖಲೆಗಳು ಇವೆ. ರೆವಿನ್ಯೂ ಒಳಗಡೆ ಕಾನೂನು ಭಾಗದ ಅನುಸರಣೆ ಮತ್ತು ನಿಯಮಪಾಲನೆ ಆಗಬೇಕಾಗಿತ್ತು. ಅದು ಆಗಲೇ ಇಲ್ಲ. ಆ ರೀತಿಯಲ್ಲಿ ಮೊದಲು ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ, ಮತ್ತೆ ಏನಾದರೂ ಒತ್ತಡ ಬಂದರೆ ಹೊಸ ಅರ್ಜಿಗಳನ್ನು ತೆಗೆದುಕೊಳ್ಳುತ್ತೀರಾ ಮತ್ತು ಹೊಸ ಅರ್ಜಿಗಳನ್ನು ತೆಗೆದುಕೊಂಡರೆ ಇನ್ನೂ ಅಪಾಯವಾಗುತ್ತದೆ. ಈಗಾಗಲೇ ನಮೂನೆ–57 ಬಂದಿದ್ದು,

ಇದಕ್ಕೆ ಒಂದು dead-end ಬರಬೇಕು. ಒಂದು ಕಡೆ ಪರಿಸರದ ಮಾತು ಮತ್ತು ಅರಣ್ಯದ ಮಾತನ್ನು ಆಡುತ್ತಿದ್ದೇವೆ. ಇದಕ್ಕೆಲ್ಲಾ ಒಂದು deadline ಇರಬೇಕು. ಇಲ್ಲವಾದರೆ ನಾವು ಪರಿಸರದ ಬಗ್ಗೆ eco-balance ಬಗ್ಗೆ ಮಾತನಾಡುವುದು. ಒಂದು ಕಡೆಯಿಂದ ಮತ್ತು ಇನ್ನೊಂದು ಕಡೆಯಿಂದ ನಾವೇ ಮಾಡುತ್ತೇವೆಂದು ಎಲ್ಲೋ ಒಂದು ಕಡೆ ಬೂಟಾಟಿಕೆ ಆಗಬಾರದು. ಇದಕ್ಕೆ ಒಂದು deadline ಬರಬೇಕು. ಫಾರಂ–57 ಕೂಡ ಇದೆ.

**(498) 17–12–2018 (5–40) ಎಸ್‌ಪಿಆರ್–ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್(ಮುಂದು):–**

ಮೊದಲನೆಯದಾಗಿ ಮಾನ್ಯ ಕಂದಾಯ ಸಚಿವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರವು ರಾಜ್ಯದಲ್ಲಿರುವ ಅರಣ್ಯ ಹಾಗೂ ಕಂದಾಯ ಭೂಮಿಗಳನ್ನು ನಿಖರಪಡಿಸಿ ಆದೇಶ ಹೊರಡಿಸಲಿ. ಅರಣ್ಯ ಇಲಾಖೆಯವರು ಭೂಮಿಗೆ ಸಂಬಂಧಿತ ದಾಖಲೆಗಳನ್ನಿಟ್ಟುಕೊಂಡಿಲ್ಲ. ಯಾವುದೇ ತಾಲ್ಲೂಕಿನಲ್ಲಾದರೂ ಅರಣ್ಯ ಇಲಾಖೆಯವರು 1924–25 ನೇ ಸಾಲಿನ ಹಳೆಯ ಅಧಿಸೂಚನೆಗಳನ್ನು ತೆಗೆದುಕೊಂಡು ಬಂದು ತಮ್ಮದೇ ಭೂಮಿ ಎಂದು ಹೇಳುತ್ತಾರೆ. ಈಗ ಕಸ್ತೂರಿ ರಂಗನ್ ಆಯೋಗವೂ ಸಹ ಬಂದಿದೆ. ಅವರು ಮೇಲಿಂದ ನೋಡಿ ಇದೆಲ್ಲ ಅರಣ್ಯ ಪ್ರದೇಶ ಎಂಬುದಾಗಿ ಹೇಳಿರುವುದು. ಅವರಿಗೆ ಮೇಲಿನಿಂದ ನಮ್ಮ ಮಾವಿನ ತೋಪೂ ಸಹ ಅರಣ್ಯದ ರೀತಿ ಕಾಣುತ್ತದೆ. ಆ ವಿಚಾರವಾಗಿ ನಾನು ಮಾತನಾಡಲು ಬಯಸುವುದಿಲ್ಲ. ಏಕೆಂದರೆ ಅದು ಬೇರೆ ವಿಷಯವಾಗುತ್ತದೆ. ಅರಣ್ಯ ಮತ್ತು ಕಂದಾಯ ಭೂಮಿಗಳನ್ನು ಮೊದಲು ಪ್ರತ್ಯೇಕಿಸದೇ ಹೊರತು, ಪ್ರಸ್ತುತ ಉದ್ದೇಶ ಈಡೇರುವುದಿಲ್ಲ. ನಾನು ಹೆಚ್ಚಿಗೆ ಚರ್ಚೆ ಮಾಡುವುದಿಲ್ಲ. ಸರ್ಕಾರ ಜಂಟಿ ಸಮೀಕ್ಷೆಯನ್ನು ಮಾಡುವ ಭರವಸೆಯನ್ನು ನೀಡಲಿ ಅಥವಾ ಅದಕ್ಕೆ ತಿದ್ದುಪಡಿಯನ್ನು ತೆಗೆದುಕೊಂಡು ಬರಲಿ. ಬಗರ್ ಹುಕುಂ ಸಮಿತಿಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ಸದ್ಯದಲ್ಲಿಯೇ ಮಾಡಲಾಗುತ್ತದೆ ಎಂದು ಕೆಳಮನೆಯಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಓದಿದ್ದೇನೆ. ಇದು ಒಳ್ಳೆಯ ಹೆಜ್ಜೆ. ಆದರೆ ಎಲ್ಲೆಲ್ಲಿ ಶಾಸಕರುಗಳು ತಾಲ್ಲೂಕು ಮಟ್ಟದಲ್ಲಿನ ನೋಡಲ್ ತಾಲ್ಲೂಕುಗಳ ಸಮಿತಿಗ್ಳಳಲ್ಲಿ ಅಧ್ಯಕ್ಷರಾಗುತ್ತಾರೆ, ಅಲ್ಲಿ ವಿಧಾನ ಪರಿಷತ್ತಿನ ಸದಸ್ಯರುಗಳನ್ನು Co-President ಮಾಡಬೇಕೆಂದು ಇದೇ ಸದನದ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹಲವಾರು ಸುತ್ತೋಲೆಗಳಿವೆ. ಆದರೆ, ಬೇರೆ ಬೇರೆ ಇಲಾಖೆಯಿಂದ ಇತ್ತೀಚೆಗೆ ಹೊಸ ಹೊಸ ಸಮಿತಿಗಳನ್ನು ರಚಿಸಲಾಗುತ್ತಿದೆ. ಅಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ, ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಒಮ್ಮೊಮ್ಮೆ ಸದಸ್ಯರು, ಮತ್ತೊಮ್ಮೆ ಉಪಾಧ್ಯಕ್ಷರು ಎಂದು ಬರೆಯುತ್ತಾರೆ. ಸುತ್ತೋಲೆಗಳು ಬೇರೆ ಬೇರೆಯೇ ಇದೆ. ಕಂದಾಯ, ಹಿಂದುಳಿದ ವರ್ಗಗಳ ಕಲ್ಯಾಣ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಲಾಖೆಯವರು, ಮೀನುಗಾರಿಕೆ ಹಾಗೂ ಮತ್ತಿತರೆ ಇಲಾಖೆಗಳವರು ಬೇರೆ ಬೇರೆ ಸುತ್ತೋಲೆಗಳನ್ನೇ ಹೊರಡಿಸುತ್ತಿದ್ದಾರೆ. ವಿಧಾನ ಪರಿಷತ್ತಿನ ಶಾಸಕರುಗಳೂ ಸಹ ಜನರ ಮಧ್ಯದಿಂದಲೇ ಆಯ್ಕೆಗೊಂಡವರು. ಆದರೆ ಬಗರ್ ಹುಕುಂ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದು ಎಂದರೆ ಕೇವಲ ವಿಧಾನಸಭಾ ಸದಸ್ಯರನ್ನು ಮಾತ್ರವೇ ನೇಮಿಸುವುದಲ್ಲ. ವಿಧಾನ ಪರಿಷತ್ತಿನ ಸದಸ್ಯರೂ ಸಹ ಆಯಾಯ ಕ್ಷೇತ್ರಗಳಲ್ಲಿ ಜನರ ಮಧ್ಯೆಯಿಂದಲೇ ಬಂದಿದ್ದೇವೆ. ಮೇಲ್ಮನೆ ಸದಸ್ಯರು ಎಂದರೆ ಬೇರೆ ಕಡೆಯಿಂದ ಬಂದವರು ಹಾಗೂ ಅವರಿಗೆ ಜನ ಸಂಪರ್ಕ ಇರುವುದಿಲ್ಲ ಎಂಬುದಾಗಿ ಯಾರೂ ಸಹ ಭಾವಿಸುವುದು ಬೇಡ. ಇಲ್ಲಿ ಎರಡೂ ಸದನಗಳನ್ನು ನೋಡಿದಂತಹ ಬಹಳ ಹಿರಿಯ ಸದಸ್ಯರಿದ್ದಾರೆ. ಈ ಕಾರಣಕ್ಕಾಗಿ ಅಂತಹ ಸಮಿತಿಗಳಿಗೆ ನೋಡಲ್ ತಾಲ್ಲೂಕಿಗೆ ಬರುವ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸಹ–ಅಧ್ಯಕ್ಷರನ್ನಾಗಿ ನೇಮಿಸಬೇಕು. ಆ ನೋಡಲ್ ತಾಲ್ಲೂಕಿಗೆ ಒಬ್ಬರು ಅಥವಾ ಇಬ್ಬರು ವಿಧಾನ ಪರಿಷತ್ತಿನ ಸದಸ್ಯರುಗಳು ಬರಬಹುದು. ಸಮಿತಿಯ ಅಧ್ಯಕ್ಷರಾಗಿ ವಿಧಾನಸಭೆಯ ಸದಸ್ಯರೇ ಇರಲಿ. ಆದರೆ ವಿಧಾನ ಪರಿಷತ್ತಿನ ಸದಸ್ಯರಿಗೆ ಪಾತ್ರವೇ ಇಲ್ಲ ಎಂದು ಈ ಸದನದ ಶಾಸಕರುಗಳನ್ನು ನಗಣ್ಯಗೊಳಿಸಬಾರದು. ಈ ಕಾರಣಗಳಿಂದಾಗಿ ದಯಮಾಡಿ ಬಗರ್ ಹುಕುಂ ಸಮಿತಿ ಇರಲಿ ಅಥವಾ ಇನ್ಯಾವುದೇ ಸಮಿತಿಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವಾಗ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆಗಳನ್ವಯ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸಹ–ಅಧ್ಯಕ್ಷರನ್ನಾಗಿ ನೇಮಕ ಮಾಡುವಂತೆ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ವಿಧೇಯಕದ ಬಗ್ಗೆ ನಾವು ಈ ಸದನದಲ್ಲಿ ಎಷ್ಟೇ ಚರ್ಚೆಯನ್ನು ಮಾಡಿದರೂ ಸಹ ಅದು ಅನುಮೋದನೆಯಾಗುತ್ತದೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ನಾವಿಲ್ಲಿ ಚರ್ಚೆಯನ್ನು ಮಾಡುವಾಗ ನಮ್ಮ ಮಾತುಗಳು ಅರಣ್ಯ ರೋದನವಾಗಬಾರದು. ಮೊದಲನೆಯದಾಗಿ ಪ್ರಾಯೋಗಿಕವಾಗಿ ಇಲ್ಲಿರುವಂತಹ ಸಮಸ್ಯೆಗಳನ್ನು ಮೊದಲು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾನೂನು ಮತ್ತು ಕಂದಾಯ ಮಂತ್ರಿಗಳಿಗೆ ಇವುಗಳು ತಿಳಿದಿಲ್ಲ ಎಂದರ್ಥವಲ್ಲ. ಅವರುಗಳು ಮಲೆನಾಡು ಪ್ರದೇಶಗಳಲ್ಲಿಯೇ ಬೆಳೆದವರು. ಇಲ್ಲಿರುವ ಬಹಳ ಗಂಭೀರವಾದ ವಿಚಾರವೇನೆಂದರೆ, ಭೂ ಕಬಳಿಕೆ ಎಂಬುದು ಬಂತು. ಇದು ಏನೆಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಬೆಂಗಳೂರು ನಗರದಂತಹ ಪ್ರದೇಶಗಳಲ್ಲಿ ಕೆರೆ ಕಟ್ಟೆಗಳಿದ್ದಂತಹ ಜಾಗಗಳನ್ನು ಅತಿಕ್ರಮಿಸಿಕೊಂಡು ಅಲ್ಲಿ ಬಹುಮಹಡಿಗಳ ಕಟ್ಟಡಗಳನ್ನು ನಿರ್ಮಿಸಿದಂತಹವರಿಗೆ ಆ ರೀತಿಯ ಕಾನೂನನ್ನು ಜಾರಿಗೊಳಿಸಲಾಗಿದೆ. ಈಗ ಬೆಂಗಳೂರು ನಗರದಲ್ಲಿ ಕೆರೆ–ಕಟ್ಟೆ ಹಾಗೂ ಉದ್ಯಾನವನಗಳೇ ಇಲ್ಲ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಈ ಹಿಂದೆ ಇದ್ದ ನೂರಾರು ಕೆರೆ–ಕಟ್ಟೆಗಳನ್ನು ಅತಿಕ್ರಮಿಸಿಕೊಂಡಿದ್ದಾರೆ. ಅಂತಹ ಭೂಮಿಯನ್ನು ಅತಿಕ್ರಮಿಸಿಕೊಂಡಿರುವವರಿಗೆ ಭೂ ಕಬಳಿಕೆಯನ್ನು ಅನ್ವಯ ಮಾಡಿ. Why you are going to apply this on poor people who are depending on one or two acres of land for their

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

livelihood? ಯಾವುದೋ ಒಂದು ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ, ಅವರಿಗೆ ಬೇರೆ ಯಾವುದೇ ಜಾಗ ಇರುವುದಿಲ್ಲ. ಅಲ್ಲಿ ಅವರುಗಳು ತಮ್ಮ ದೈನಂದಿನ ಜೀವನಕ್ಕಾಗಿ, ಆಡು, ಕುರಿ, ಮೇಕೆ, ಹಸುಗಳಂತಹ ಪ್ರಾಣಿಗಳನ್ನು ಸಾಕಿಕೊಂಡು, ಅರ್ಧ–ಒಂದು ಎಕರೆಗಳಷ್ಟು ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಅಂತಹವರಿಗೂ ಸಹ ಭೂಕಬಳಿಕೆಯನ್ನು ಅನ್ವಯ ಮಾಡಲಾಗುತ್ತದೆ. ಇವತ್ತಿನ ದಿವಸ ನಿಜವಾಗಿಯೂ ಅಂತಹ ರೈತಾಪಿ ವರ್ಗದವರು ಕಣ್ಣೀರಿನಲ್ಲಿ ಕೈ ತೊಳೆಯುವಂತಹ ಪರಿಸ್ಥಿತಿಯುಂಟಾಗಿದೆ. ಒಂದು ಕಡೆ ಇಂತಿಷ್ಟು ಕಂದಾಯ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದಾಗಿ ಸರ್ಕಾರವು ಆದೇಶ ಹೊರಡಿಸುತ್ತದೆ. ಒಂದು ಕಡೆ ಕೆಲವು ಭೂ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಗೊಳಿಸಲಾಗಿದೆ ಎಂಬುದಾಗಿ ಹೇಳುತ್ತಾರೆ. ಮತ್ತೊಂದು ಕಡೆ ಇದು ಅರಣ್ಯ ಭೂಮಿ ಎಂದು ಪರಿಗಣಿಸಲ್ಪಟ್ಟದೆ ಎಂಬುದಾಗಿ ಹೇಳುತ್ತಾರೆ. ನಿಜವಾಗಿಯೂ ಸಹ ಪರಿಗಣಿಸಲ್ಪಟ್ಟ ಅರಣ್ಯ ಭೂಮಿ ಎಂದರೇನು? ಕಂದಾಯ ಇಲಾಖೆಯಿಂದ ವಶಪಡಿಸಿಕೊಂಡ ಜಮೀನು ಯಾವುದು? ಇವುಗಳಲ್ಲಿನ ವ್ಯತ್ಯಾಸವೇನು? ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಬಿಡಿ, ಪ್ರತಿದಿನ ಬೆಳಗ್ಗೆ ಅರಣ್ಯ ರಕ್ಷಕರು ಸ್ಥಳೀಯರಿಗೆ ಬೆದರಿಕೆಯನ್ನೊಡ್ಡುತ್ತಾರೆ. ಅವರುಗಳಿಗೆ ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಆಮೇಲೆ ಬ್ಲಾಕ್ ಮೇಲ್ ಮಾಡುತ್ತಾರೆ. ಫಾರಂ 53 ರನ್ವಯ ಸಲ್ಲಿಸಿರುವ ಅರ್ಜಿಗಳು ಲಕ್ಷಾಂತರ ಸಂಖ್ಯೆಯಲ್ಲಿ ವಿಲೇವಾರಿಯಾಗದೇ ಬಾಕಿ ಏಕೆ ಉಳಿದಿವೆ? ಅವುಗಳನ್ನು ವಿಲೇವಾರಿ ಮಾಡುವುದಕ್ಕೆ ಸಮಿತಿಯಲ್ಲಿರುವ ನಮ್ಮ ಶಾಸಕರಿಗೆ ಸಾಮರ್ಥ್ಯ ಇಲ್ಲವೇ? There are enormous politics in disposing the remaing applications ಎಂಬುದಾಗಿ ನಾನು ಈ ಸದನದಲ್ಲಿ ಹೇಳುತ್ತೇನೆ. ಅರ್ಜಿ ವಿಲೇವಾರಿ ಮಾಡುವುದರಲ್ಲಿ ತುಂಬಾ ತಾರತಮ್ಯವಿದೆ. ಯಾರಾದರೂ ಸಹ ಸದರಿ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡು ಅರ್ಜಿಗಳನ್ನು ವಿಲೇವಾರಿ ಮಾಡುವಂತಹ ಬದ್ಧತೆ ಇಲ್ಲ. ಅಧ್ಯಕ್ಷನಾದಾಗ ನನ್ನ ಪರವಾಗಿ ಹಾಗೂ ಪಕ್ಷದ ಪರವಾಗಿ ಯಾರು ಕಷ್ಟಪಟ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಪರಿಗಣಿಸಲಾಗುತ್ತದೆ. ಅಧಿಕಾರಿಗಳ ಪರಿಸ್ಥಿತಿಯಂತೂ ಸಹ ಹೇಳತೀರದಾಗಿದೆ. ಹೀಗಾಗಿ ನಾನು ಸರ್ಕಾರವನ್ನು ದೂರುತ್ತಿಲ್ಲ. ದಯಮಾಡಿ ಇದರಲ್ಲಿ ಫಾರಂ 53, 57 ಅಥವಾ 94(ಸಿ) ಯಾವುದನ್ನಾದರೂ ಸರಿ ಜಾರಿಗೆ ತನ್ನಿ. ಇದನ್ನು ಜಾರಿಗೊಳಿಸುವ ಮುನ್ನ ರೈತರಿಗೆ ಶೇಕಡಾ ನೂರರಷ್ಟು ಅನುಕೂಲವಾಗುವ ರೀತಿಯಲ್ಲಿ ಮಾಡಿ. ಅರ್ಜಿಗಳನ್ನು ಬಾಕಿ ಇಡದೇ ವಿಲೇವಾರಿ ಮಾಡಿ. ರೈತರ ದೈನಂದಿನ ಜೀವನಕ್ಕೆ ಅಡ್ಡಿಪಡಿಸಬೇಡಿ. ಅವರುಗಳು ಸಲ್ಲಿಸಿರುವ ಅರ್ಜಿಗೆ ನ್ಯಾಯ ದೊರೆಕಿಸಿ ಕೊಡಿ. ಫಾರಂ–53 ರಡಿ ಭೂಮಿಯನ್ನು ಉಳ್ಳವರೇ ಅರ್ಜಿ ಸಲ್ಲಿಸಿದ್ದಾರೆ. ಅವರಿಗೆ 10–20 ಎಕರೆ ಜಮೀನು ಇದೆ. Fragment ಮಾಡಿ, ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿ ಮೊಮ್ಮಕ್ಕಳ ಹೆಸರಿನಲ್ಲಿ ಫಾರಂ 53 ರನ್ನು ಸಲ್ಲಿಸಿದ್ದಾರೆ. ಬೇಕಾದರೆ ದಯಮಾಡಿ ಪರಿಶೀಲನೆ ಮಾಡಿ. ಅಲ್ಲಿ ಯಾವುದೇ ತೆರನಾದ ಪಾರದರ್ಶಕತೆ ಇಲ್ಲ. ನೂರಕ್ಕೆ ನೂರರಷ್ಟು ಫಾರಂ 53ನ್ನು ದುರುಪಯೋಗ ಮಾಡಿದ್ದಾರೆ. ನಾನು ಆ ಪ್ರದೇಶದಿಂದ ಬಂದವನಾಗಿರುವುದರಿಂದ ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈಗಲೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಕಾಲ ಮಿಂಚಿಲ್ಲ. ಮಾನ್ಯ ಕಂದಾಯ ಮಂತ್ರಿಗಳೇ, ಭೂ ಕಬಳಿಕೆ ಕಾಯ್ದೆಯನ್ನು ಕೇವಲ ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿ ತಂದಿದ್ದು, ಗುಡ್ಡಗಾಡು ಪ್ರದೇಶಗಲ್ಲಿ ವಾಸಿಸುವವರಿಗೆ ಬಡ ರೈತಾಪಿ ವರ್ಗದವರಿಗೆ ದಯಮಾಡಿ ಅದನ್ನು ಅನ್ವಯ ಮಾಡಬೇಡಿ, ಅವರುಗಳಿಗೆ ಪ್ರತ್ಯೇಕವಾದ ನಿಯಮಗಳನ್ನು ಜಾರಿಗೊಳಿಸಿ ಎಂಬುದಾಗಿ ವಿನಂತಿಸುತ್ತೇನೆ.

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥರವರು ಹೇಳಿರುವ ಕೆಲವು ಅಂಶಗಳನ್ನು ನಾನು ಉಲ್ಲೇಖಿಸ ಬಯಸುತ್ತೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸ್ವೀಕೃತಗೊಂಡಿರುವ ಫಾರಂ 53 ಅರ್ಜಿಗಳು ವಿಲೇವಾರಿ ಮಾಡದೇ ಬಾಕಿಯಿಡಲು ಇಲಾಖೆಯಲ್ಲಿ ಏಕೆ ವಿಳಂಬವಾಗಿದೆ ಎನ್ನುವ ನಿರ್ದಿಷ್ಟ ಕಾರಣ ಮೊದಲೇ ತಿಳಿದಿದ್ದರೆ ನಾವು ಇನ್ನೂ ಹೆಚ್ಚು ನಿರ್ದಿಷ್ಟವಾಗಿ ಮಾತನಾಡಬಹುದಿತ್ತು. ನನಗೆ ಮೇಲ್ನೋಟಕ್ಕೆ ಕಂಡು ಬಂದ ಅಂಶವೇನೆಂದರೆ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆಯ ಬಗ್ಗೆ ಕೇಳುತ್ತೇವೆ. ಅದೇ ರೀತಿಯಲ್ಲಿ ಯಾವುದೇ ಯೋಜನೆಗಳನ್ನು ಸಕಾಲದಲ್ಲಿ ಜಾರಿಗೊಳಿಸಲು ಕಂದಾಯ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆಯೂ ಸಹ ಇದೆ ಎನ್ನುವ ದೂರನ್ನು ನಾವು ಆಗಾಗ ಕೇಳುತ್ತಿರುತ್ತೇವೆ. ಅಕ್ರಮ–ಸಕ್ರಮ ಯೋಜನೆಗಳಲ್ಲಿ ಒಂದು ಬಾರಿಗೆ ಫಲಾನುಭವಿಗಳಾದವರು ಕುಟುಂಬ ವಿಭಜನೆಯಂಥ ಕಾರಣದಿಂದಾಗಿ ಪ್ರತ್ಯೇಕವಾಗಿ ಹೋದವರು ಪುನಃ ಅರ್ಜಿಗಳನ್ನು ಸಲ್ಲಿಸಿರುವುದನ್ನು ನಾವು ನೋಡುತ್ತೇವೆ. ಒಮ್ಮೊಮ್ಮೆ ಭೂಮಿ ಮಂಜೂರು ಆಗಿದ್ದು, ನಗರೀಕರಣದಿಂದಾಗಿ ಆ ಭೂಮಿಗೆ ಹೆಚ್ಚಿನ ಮೌಲ್ಯ ಬರುತ್ತದೆ. ಮನೆಯಲ್ಲಿನ ಕಷ್ಟ ಹಾಗೂ ಮತ್ತಿತರೆ ಕಾರಣಗಳಿಂದಾಗಿ ಸದರಿ ಭೂಮಿಯನ್ನು ಮಾರಿ, ಪುನಃ ಅರ್ಜಿಯನ್ನು ಸಲ್ಲಿಸುವಂತಹ ಪರಿಸ್ಥಿತಿ ಉಂಟಾಗುತ್ತದೆ. ಇಂತಹ ಎಲ್ಲಾ ಅಂಶಗಳನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಅರಣ್ಯ ಇಲಾಖೆಯು ಒಡ್ಡುವ ಅಡೆ–ತಡೆಗಳು ಸಕಾರಣವೋ ಅಥವಾ ಇಲ್ಲವೋ ಎಂಬ ಅಂಶವನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಕಡೆ ವನ್ಯಜೀವಿ ಮತ್ತು ಮಾನವ ಸಂಘರ್ಷದಿಂದಾಗಿ ಹಾಗೂ ಕೆಲವು ಕಡೆ ಯಥಾವತ್ತಾಗಿ ದುರ್ಗಮ ಅರಣ್ಯ ಪ್ರದೇಶದ ಕಡೆ ಅರಣ್ಯ ಒತ್ತುವರಿಯಾಗುವುದನ್ನು ತಡೆಗಟ್ಟುವ ಜವಾಬ್ದಾರಿ ಇದೆ. ನಮ್ಮ ಅರಣ್ಯ ಹಾಗೂ ಕಂದಾಯ ಇಲಾಖೆಗಳ ನಡುವಿನ ಸಮನ್ವಯ ಕೊರತೆ ಇದೆ. ಅನೇಕ ಬಾರಿ ಪಂಚಾಯಿತಿಯ ವತಿಯಿಂದ ಭೂಮಿ ಮಂಜೂರಾಗಿದ್ದರೂ ಸಹ ಅಲ್ಲಿ ರಸ್ತೆಗಳನ್ನು ನಿರ್ಮಿಸುವುದಕ್ಕೆ, ವಿದ್ಯುತ್ ಸಂಪರ್ಕ ನೀಡಲು ಅವಕಾಶ ನೀಡುವುದಿಲ್ಲ. ಉದಾಹರಣಗೆ ಬೆಳ್ತಂಗಡಿ ತಾಲ್ಲೂಕಿನ ಬಾಂಜಾರುಮಲೆ, ಬುಡಕಟ್ಟು ಜನಾಂಗ ವಾಸಮಾಡುವ ಮಲೆಕುಡಿ ಅಥವಾ ತೀರ್ಥಹಳ್ಳಿ ಭಾಗದ ಮಲ್ಲಂದೂರು ಪ್ರದೇಶಗಳಲ್ಲಿ 7–8 ಕಿಲೋಮೀಟರ್ ವಿಸ್ತೀರ್ಣ ಪ್ರದೇಶಕ್ಕೆ ವಿದ್ಯುತ್ ಸಂಪರ್ಕ ನೀಡಲು ಅನುಮೋದನೆ ದೊರೆತಿರುತ್ತದೆ ಆದರೆ ಮಧ್ಯದಲ್ಲಿ ಕೇವಲ ಒಂದು ಕಿಲೋಮೀಟರ್ ಪ್ರದೇಶಕ್ಕೆ ವಿದ್ಯುತ್ ಸಂಪರ್ಕಕ್ಕೆ ಅನುಮೋದನೆ ದೊರೆಯದೇ ಅಲ್ಲಿನ ನಿವಾಸಿಗಳು ತೊಂದರೆಗೆ ಒಳಗಾಗುವುದನ್ನು ನಾವು ನೋಡುತ್ತೇವೆ. ಹೀಗಾಗಿ ಸರ್ಕಾರಿ ಇಲಾಖೆಗಳ ನಡುವೆ ಸಮನ್ವತೆಯ ಅವಶ್ಯಕತೆ ಇದೆ. ಇ–ಆಡಳಿತ ಎಂಬ ವ್ಯವಸ್ಥೆಯನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಾರಿಗೊಳಿಸಲಾಗಿದೆ. ತಾಲ್ಲೂಕು ಕಛೇರಿಗಳಲ್ಲಿರುವ ಗಣಕ ಯಂತ್ರಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಿಲ್ಲ. ಹೀಗಾಗಿ ಅಲ್ಲಿ ಸಕಾಲದಲ್ಲಿ ಹಾಗೂ ಸುಲಭವಾಗಿ ಪಹಣಿಗಳು ದೊರೆಯುವುದಿಲ್ಲ. ಎಲೆಕ್ಟ್ರಾನಿಕ್ ಉಪಕರಣಗಳು ನಿರಂತರವಾಗಿ ಬಳಕೆ ಮಾಡದೇ ಇರುವುದೂ ಸಹ ವಿಳಂಬಕ್ಕೆ ಒಂದು ಕಾರಣವಾಗಿರುವುದನ್ನು ನಾವು ನೋಡಿದ್ದೇವೆ. ಇವತ್ತಿನ ದಿವಸ ಸಾರ್ವಜನಿಕ ಉಪಯೋಗಕ್ಕಾಗಿ, ಶಾಲೆಗಳನ್ನು ನಿರ್ಮಾಣ ಮಾಡಲು ಆಟದ ಮೈದಾನಗಳಿಗೆ ಹಾಗೂ ಗ್ರಾಮಗಳಿಗೆ ಅವಶ್ಯಕವಾದ ಕನಿಷ್ಠ ಸರ್ಕಾರಿ ವ್ಯವಸ್ಥೆಗಳಿಗೆ ಕೆರೆ, ಗೋಮಾಳ ಹಾಗೂ ಸರ್ಕಾರಿ ಜಮೀನುಗಳು ದೊರೆಯದೇ ಇರುವ ರೀತಿಯಲ್ಲಿ ಅವೈಜ್ಞಾನಿಕವಾಗಿ ಭೂಮಿಯನ್ನು ಮಂಜೂರು ಮಾಡಲಾಗಿದೆ. ಇವತ್ತಿನ ದಿವಸ ಸರ್ಕಾರವೇ ಅವಶ್ಯಕವಿದ್ದ ಜಮೀನುಗಳನ್ನು ಕೊಂಡುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಭೂಮಿ ಖರೀದಿಗಾಗಿ ಅಷ್ಟು ಹಣ ದೊರೆಯುತ್ತಿಲ್ಲ. ಅಕ್ರಮ–ಸಕ್ರಮ ಯೋಜನೆಯನ್ನು ಜಾರಿಗೊಳಿಸುವಾಗ ಮಾನ್ಯ ಮಂತ್ರಿಗಳು ಇಂತಹ ಸೂಕ್ಷ್ಮತೆಯ ಕಡೆಗೆ ಸ್ವಲ್ಪ ಹೆಚ್ಚಿನ ಗಮನವನ್ನು ನೀಡಬೇಕು. ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ ರವರು ಪ್ರಸ್ತಾಪಿಸಿದಂತೆ, ಕಸ್ತೂರಿ ರಂಗನ್ ವರದಿಯಲ್ಲಿ ತಿಳಿಸಿರುವಂತೆ ಗ್ರಾಮಗಳಿಗೆ ಗಡಿಯನ್ನು ಗುರ್ತು ಮಾಡದೇ ಇರುವುದೂ ಸಹ ಒಂದು ದೊಡ್ಡ ಸಮಸ್ಯೆಯಾಗಿದೆ. ಗ್ರಾಮಗಳಲ್ಲಿ ಅಕ್ರಮ ಒತ್ತುವರಿಯನ್ನು ತಡೆಯಬೇಕು. ಇಲ್ಲವೆಂದಾದರೆ ಸಕ್ರಮವನ್ನು ಎಲ್ಲಿಯವರೆಗೆ ಮಾಡಬೇಕಾಗುತ್ತದೆ ಎನ್ನುವುದು ಸರ್ಕಾರಕ್ಕೆ ದೊಡ್ಡ ಸವಾಲಾಗುತ್ತದೆ. I think this is the high-tide situation. ಈಗಲಾದರೂ ಸರಿ ಆ ಬಗ್ಗೆ ಗಮನ ಹರಿಸಬೇಕಾಗಿದೆ. ಕೊಡಗು ಹಾಗೂ ಇನ್ನಿತರೆ ಮಲೆನಾಡು ಪ್ರದೇಶಗಳಲ್ಲಿ ಪ್ರಕೃತಿ ವಿಕೋಪದಿಂದಾಗಿ ಅನಾಹುತಗಳು ಸಂಭವಿಸಿದವು. ಗುಡ್ಡಗಾಡುಗಳು ಸಮತಟ್ಟಾಗಿ ಹೋಗಿವೆ. ಹೀಗಾಗಿ ಭೂಮಾಪನ ಇಲಾಖೆಗೆ ದೊಡ್ಡ ಸವಾಲಾಗಿದೆ. ಗುಡ್ಡಗಾಡು ಪ್ರದೇಶಗಳ ಭೂ ವಿಸ್ತೀರ್ಣವನ್ನು ಮತ್ತೆ ಗುರ್ತಿಸಬೇಕಾಗಿದೆ. ಈ ಹಿಂದೆ ಅಕ್ರಮ–ಸಕ್ರಮ ಯೋಜನೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕಾಫಿ ಬೆಳೆಗಾರರ ಹೋರಾಟವನ್ನು ಕೈಗೊಂಡಾಗ, ಭೂಮಿ ಅಳತೆ ಮಾಡುವಂತಹ ದೊಡ್ಡ ಸವಾಲು ಭೂಮಾಪನ ಇಲಾಖೆಗೆ ಎದುರಾಯಿತು. ಹೀಗಾಗಿ ಉಪಗ್ರಹ ಅಥವಾ ಬೇರೆಯ ರೀತಿಯಾಗಿ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸಿ ಹಾಗೂ ಸಿಬ್ಬಂದಿಗಳ ಮುಖೇನ ಈ ಎರಡೂ ಅಂಶಗಳ ಆಧಾರದ ಮೇಲೆ ಕಾಲಮಿತಿಯೊಳಗೆ ಭೂಮಾಪನವನ್ನು ಮಾಡಬೇಕು.

(499) 17–12–2018 5:50 ಸಿಎಸ್/ಆರ್‌ಎನ್

**ಡಾ॥ತೇಜಸ್ವಿನಿ ಗೌಡ(ಮುಂದು):–**

ಭೂಮಿಯಲ್ಲಿ ಖರಾಬು ಎಂದು ಬಿಟ್ಟಿರುತ್ತೇವೆ. ಖರಾಬು ಎಂದರೆ ಬಂಡೆ ಅಥವಾ ಗುಡ್ಡ ಇರಬಹುದು ಫಲವತ್ತತೆ ಇಲ್ಲದಿರುವ ಜಾಗಗಳಲ್ಲಿ ಮನೆ ಅಥವಾ ಶೆಡ್‌ಗಳನ್ನು ಕಟ್ಟಿಕೊಂಡಿರುತ್ತಾರೆ. ಈಗ ಮಾಡಿರುವ ಕಾನೂನಿನ ಉದ್ದೇಶ ಒಳ್ಳೆಯದಿರಬಹುದು, ಆದರೆ ಈಗ ತಂದಿರುವ ಕಾನೂನನ್ನು ಪ್ರಯೋಗಿಕವಾಗಿ ಜಾರಿಗೆ ತರುವಾಗ ತೊಂದರೆಯಾಗಬಹುದು. ಆದಕಾರಣ ಮುಖ್ಯವಾಗಿ ಸಿಬ್ಬಂದಿ ಕೊರತೆ ತುಂಬುವುದು ಮತ್ತು ನಿಯಮಿತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲಮಿತಿಯೊಳಗೆ ಕಾನೂನನ್ನು ಜಾರಿಗೆ ತರುವುದರಿಂದ ಉಂಟಾಗುವ ನಷ್ಟವನ್ನು ಸರಿಯಾದ ರೀತಿಯಲ್ಲಿ ಪರಿಷ್ಕರಣೆ ಮಾಡಬಹುದೆಂದು ಅನಿಸುತ್ತದೆ. ಧನ್ಯವಾದಗಳು.

**ಶ್ರೀಮತಿ ವೀಣಾ ಅಚ್ಚಯ್ಯ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಕಳೆದ ಸಾಲಿನಲ್ಲಿ ನಾನು ಅಕ್ರಮ–ಸಕ್ರಮ ಸಮಿತಿಯ ಅಧ್ಯಕ್ಷಳಾಗಿ ಕೆಲಸವನ್ನು ಮಾಡಿದ್ದೆನು. ಈ ಅಕ್ರಮ–ಸಕ್ರಮ ಸಮಿತಿಗೆ ತಹಶೀಲ್ದಾರ್‌ರವರು ಕಾರ್ಯದರ್ಶಿಯಾಗಿರುತ್ತಾರೆ. ಇಲ್ಲಿ ಏನಾಗಿದೆ ಎಂದರೆ, ಒಬ್ಬ ತಂದೆಗೆ ಇಬ್ಬರು ಮಕ್ಕಳಿದ್ದು ಅವರಿಗೆ ತನ್ನ 10 ಎಕರೆ ಜಮೀನನ್ನು ಅರ್ಧ–ಅರ್ಧ ಭಾಗ ಮಾಡಿ ತಲಾ 5–5 ಎಕರೆ ಜಮೀನನ್ನು ಮಕ್ಕಳಿಗೆ ಕೊಟ್ಟರೆ ಅವರು ಒಂದು ಎಕರೆಯಷ್ಟು ಭೂಮಿಯನ್ನು ವಶ ಮಾಡಿಕೊಂಡು ಅಕ್ರಮ ಸಕ್ರಮಕ್ಕೆ ಅರ್ಜಿ ಸಲ್ಲಿಸಿದರೆ ಅದನ್ನು ಪರಿಗಣಿಸುವುದಿಲ್ಲ. ಏಕೆಂದರೆ ಈ ಅಕ್ರಮ–ಸಕ್ರಮಕ್ಕೆ ಅರ್ಜಿ ಹಾಕಿದವರು 4 ಎಕರೆ 95 ಸೆಂಟ್ ಜಮೀನನ್ನು ಮಾತ್ರ ಹೊಂದಿರಬೇಕು ಎನ್ನುವ ಒಂದು ಸರ್ಕಾರದ ಸುತ್ತೋಲೆ ಇದೆ. ಇದರಿಂದಲೇ ಸಾಕಷ್ಟು ಕಡತಗಳು ಬಾಕಿ ಉಳಿದಿವೆ ಎನ್ನುವುದು ನನ್ನ ಭಾವನೆ. ಏಕೆಂದರೆ 4 ಎಕರೆ 95 ಸೆಂಟ್‌ಗಿಂತ ಅರ್ಧ ಎಕರೆ ಅಥವಾ 1 ಎಕರೆ ಜಮೀನನ್ನು ಒತ್ತುವರಿ ಮಾಡಿದವರಿಗೂ ಆ ಜಮೀನನ್ನು ಸಕ್ರಮಗೊಳಿಸುವುದಕ್ಕೆ ಅವಕಾಶ ಇರುವುದಿಲ್ಲ. ಇದಕ್ಕೆ ಕಂದಾಯ ಸಚಿವರು ತಿದ್ದುಪಡಿಯನ್ನು ತರಬೇಕಾಗುತ್ತದೆ. ಈ ಹಿಂದೆ 10 ಎಕರೆ ಜಮೀನು ಇದ್ದವರು 5 ಎಕರೆ ಜಮೀನನ್ನು ಒತ್ತುವರಿ ಮಾಡಿದರೂ ಸಹ ಅದನ್ನು ಸಕ್ರಮಗೊಳಿಸುವ ವ್ಯವಸ್ಥೆ ಹಿಂದೆ ಇತ್ತು ಎನ್ನುವುದು ನನ್ನ ಗಮನದಲ್ಲಿದೆ. ಹಾಗಾಗಿ ಕಂದಾಯ ಸಚಿವರ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಈ ವಿಧೇಯಕದ ಮೇಲೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ಈಗಾಗಲೇ ಸಾಕಷ್ಟು ಜನರು ಈ ವಿಧೇಯಕದ ಬಗ್ಗೆ ಮಾತನಾಡಿದ್ದಾರೆ. ಯಾವುದೇ ಸರ್ಕಾರ ಹೊಸದಾಗಿ ವಿಧೇಯಕವನ್ನು ತರುವಾಗ ಅಥವಾ ವಿಧೇಯಕಕ್ಕೆ ತಿದ್ದುಪಡಿಗಳನ್ನು ತರಬೇಕಾದ ಸಂದರ್ಭದಲ್ಲಿ ನಾವು ಜನಪ್ರತಿನಿಧಿಗಳು ಜನರ ಸಮಸ್ಯೆಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡು ಈ ಕಾನೂನುಗಳನ್ನು ಜಾರಿಗೆ ತರಬೇಕು. ಅದನ್ನು ಬಿಟ್ಟು ಯಾವುದೋ ಒತ್ತಡಕ್ಕೆ ಒಳಗಾಗಿ ಕಾನೂನುಗಳನ್ನು ಜಾರಿಗೆ ತರುವುದು ಅಷ್ಟು ಸೂಕ್ತ ಎಂದು ನನಗನಿಸುವುದಿಲ್ಲ. ಇವತ್ತು ಅರಣ್ಯ ಮತ್ತು ಕಂದಾಯ ಇಲಾಖೆಯವರಲ್ಲಿ ಯಾರು ಬಲಾಢ್ಯರು ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಏಕೆಂದರೆ ಇವತ್ತು ಇರುವಂತಹ ವ್ಯವಸ್ಥೆಯಲ್ಲಿ ಹೆಚ್ಚುಕಡಿಮೆ ಅರಣ್ಯ ಮತ್ತು ಕಂದಾಯ ಇಲಾಖೆಯಿಂದ overlapping ಇದೆ. ಅರಣ್ಯ ಇಲಾಖೆಯವರು ಯಾವಾಗಲೂ ತಮ್ಮ ಸರ್ವೆಯನ್ನು ಪ್ರಾರಂಭ ಮಾಡಿದಾಗ ಒಂದು ಕಡೆಯಿಂದ ಸರ್ವೆ ಮಾಡಿಕೊಂಡು ಬಂದು ಅವರ ಜಾಗವನ್ನು ನಿಗದಿಪಡಿಸಿಕೊಳ್ಳುತ್ತಾರೆ. ಆದರೆ ರೆವಿನ್ಯೂ ಇಲಾಖೆಯವರು ಸರ್ವೆ ಮಾಡುವಾಗ overlapping ಆಗಿರುತ್ತದೆ, ಅರಣ್ಯದ ಕಡೆಗೆ ಈ ಜಾಗ ಹೋಗಿರುತ್ತದೆ. ಕೊನೆಯ ಹಂತದಲ್ಲಿ ಅರಣ್ಯದವರು ಏನು ಗಡಿಯನ್ನು ನಿಗದಿ ಮಾಡುತ್ತಾರೆ, ಅದೇ ಅಂತಿಮವಾಗಿ ಕಂದಾಯ ಇಲಾಖೆಯವರು ಕೈ ಕಟ್ಟಿ

ಕೂರುವ ಪರಿಸ್ಥಿತಿ ಇದೆ. ಇದರ ಪರಿಹಾರಕ್ಕಾಗಿ ಈ ವಿಧೇಯಕದಲ್ಲಿ ಏನಾದರೂ ತಿದ್ದುಪಡಿಯನ್ನು ತರುವುದಕ್ಕೆ ಅವಕಾಶ ಇದೆಯೇ ಎನ್ನುವುದನ್ನು ಪರಿಶೀಲಿಸಬೇಕು. ಕಾರಣ ಏನೆಂದರೆ ಫಾರಂ ನಂಬರ್ 50-53ರಲ್ಲಿ ಸಾಕಷ್ಟು ಜಾಗ ಜನರಿಗೆ ಅಲಾಟ್ ಆಗಿದೆ. ಈ ಜಾಗಕ್ಕೆ ಅರಣ್ಯದ ಪಾಣಿ ಆಗಿದ್ದರೂ ಕೂಡ ಸರ್ವೆ ಮಾಡಿದಾಗಿ ಫಾರಂ ನಂ.50-53ನಲ್ಲಿ ಜನರಿಗೆ ಜಾಗವನ್ನು ಏನು ಅಲಾಟ್ ಮಾಡಿದ್ದೇವೆ ಅದು ಊರ್ಜಿತ ಆಗುವುದಿಲ್ಲ. ಏಕೆಂದರೆ ಆ ಕಡೆಯಿಂದ ಸರ್ವೆ ಮಾಡಿದಾಗ ಅದು ಅರಣ್ಯ ಇಲಾಖೆಗೆ ಬಂದು, ಅವರು ಈ ಜಾಗವನ್ನು ಖಿಲ್ಲಾ ಮಾಡಿ, ಈ ಜಾಗ ನಿನಗೆ ಅಲಾಟ್ ಆಗಿದ್ದರೂ ಸಹ ಇದು ಅರಣ್ಯ ಇಲಾಖೆಗೆ ಸೇರಿರುವ ಕಾರಣ ಖಿಲ್ಲಾ ಮಾಡಿ ಎಂದು ಎಷ್ಟೋ ಜಾಗವನ್ನು ಅರಣ್ಯ ಇಲಾಖೆಯವರು ಖಿಲ್ಲಾ ಮಾಡಿಸಿದ್ದಾರೆ. ಇದಕ್ಕೆ ಪರಿಹಾರ ಇಲ್ಲ. ಏಕೆಂದರೆ ಫಾರಂ ನಂ.53ರಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷರಾಗಿದ್ದು, ಅಲ್ಲಿ ಬೇರೆ ಸದಸ್ಯರು ಕೂಡ ಇರುತ್ತಾರೆ. ಇವರೆಲ್ಲರೂ ಸಭೆ ಸೇರಿ ಚರ್ಚೆ ನಡೆಸಿ, ತೀರ್ಮಾನ ಕೈಗೊಂಡು ಜಮೀನನ್ನು ನೀಡಿದ ನಂತರವೂ ಈ ಜಾಗವನ್ನು ಖಾಲಿ ಮಾಡಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಲ್ಲಾ ಸಮಸ್ಯೆಗಳಿಗೆ ತಿದ್ದುಪಡಿ ತರಬೇಕಾಗಿದೆ. ಒಂದು ಸಲ ಫಾರಂ ನಂ.53 ಅಡಿಯಲ್ಲಿ ನೀಡುವಂತಹ ಜಮೀನನ್ನು ಪುನಃ ಯಾರು ಸಹ ಹಿಂದಕ್ಕೆ ಪಡೆಯಬಾರದು ಎನ್ನುವ ನಿಯಮ ಕೂಡ ಈ ವಿಧೇಯಕದಲ್ಲಿ ಬರಬೇಕು. ಏಕೆಂದರೆ ಭೂಮಿ ಇಲ್ಲದವರಿಗೆ ಭೂಮಿ ನೀಡುವಾಗಲೇ ಯೋಚನೆ ಮಾಡಿ ಭೂಮಿಯನ್ನು ನೀಡಬೇಕು. ಒಬ್ಬ ಬಡವನಿಗೆ ಭೂಮಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಅವನು ಆ ಜಾಗದಲ್ಲಿ ಮನೆ ಕಟ್ಟಿ, ಕಾಫಿ, ತೆಂಗು ಅಥವಾ ಅಡಕೆ ಬೆಳೆಗಳನ್ನು ಬೆಳೆದಿರುತ್ತಾನೆ, ಅದನ್ನು ಅರಣ್ಯದವರು ಬಂದು ಇದು ನಮ್ಮ ಜಾಗ ಎಂದು ಕಡಿದು ಹಾಕುವ ಪರಿಸ್ಥಿತಿಗಳು ಬಂದಿದೆ. ಇದಕ್ಕೆ ನಮ್ಮ ಕಾನೂನಿನಲ್ಲಿರುವ ನಿಯಮಗಳೇ ಕಾರಣ ಎಂದು ನಾನು ಭಾವಿಸಿದ್ದೇನೆ. Deemed Forest ಬಗ್ಗೆ ಹೇಳುವುದಾದರೆ ಏನು ಖಾಲಿ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಯಾವುದೇ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದಲೇ ಆ ಭೂಮಿಯನ್ನು ಸಿ ಮತ್ತು ಡಿ ಎಂದು ಗುರುತು ಮಾಡಲಾಗಿದೆ. ಆದರೆ ಅಂತಹ ಭೂಮಿಯಲ್ಲಿ ಒಬ್ಬ ರೈತ ಭೂಮಿಯನ್ನು ಹದಗೊಳಿಸಿ ಗಿಡ ಮರಗಳನ್ನು ಬೆಳೆಸಿ, ಆ ಜಾಗವನ್ನು ಅಭಿವೃದ್ಧಿ ಮಾಡಿದ ಮೇಲೆ ಅರಣ್ಯ ಇಲಾಖೆಯವರು ಇದು ನಮ್ಮ ಜಾಗವೆಂದು, 8-10 ಮರಗಳಿದ್ದರೆ ಅದು Deemed Forest ಎಂದು ಘೋಷಣೆ ಮಾಡತಕ್ಕ ಒಂದು ಪರಿಸ್ಥಿತಿ ಈಗ ನಿರ್ಮಾಣ ಆಗಿದೆ. ಆದ್ದರಿಂದಲೇ ಯಾರು ಸಹ ಗಿಡ ಮರಗಳನ್ನು ಬೆಳೆಸಿ, ಪರಿಸರವನ್ನು ಬೆಳೆಸುವ ಯೋಚನೆಯನ್ನು ಮಾಡುವುದಿಲ್ಲ. ಒಂದು ವೇಳೆ ಅಲ್ಲಿ ಹೋಗಿ ಆ ಜಾಗವನ್ನು ಅಭಿವೃದ್ಧಿ ಮಾಡಿದ ಮೇಲೆ ಅದು ಅರಣ್ಯ ಇಲಾಖೆಯವರ ಪಾಲಾಗುತ್ತದೆ. ಈ ಬಗ್ಗೆ ಯೋಚಿಸಿ, ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಏಕೆಂದರೆ ಇವತ್ತು ರೈತ ಬೆಳೆಯುವ ಮರ-ಗಿಡಗಳು ಅವನಿಗೇ ಮಾರಕವಾಗುವಂತಹ ಪರಿಸ್ಥಿತಿ ಬಂದು ಒದಗಿದೆ. ಇದರ ಬಗ್ಗೆ ಕೂಡ ನಾವು ಯೋಚನೆಯನ್ನು ಮಾಡಬೇಕಾದ ಪರಿಸ್ಥಿತಿ ಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆಲ್ಲದರ ನಂತರವೂ ಕೂಡ ನಾವು ರೈತರ ಪರ, ಬಡವರ ಪರ, ಅವರ ಪರವಾಗಿಯೇ ನಾವಿಲ್ಲಿ ಪ್ರತಿನಿಧಿಸುತ್ತಿದ್ದೇವೆ, ಆದರೂ ಸಹ ಕೊನೆಯ ಹಂತದಲ್ಲಿ ನಾವೆಲ್ಲರೂ ಕೈ ಎತ್ತಿ hands-off ಮಾಡುವ ಪರಿಸ್ಥಿತಿ ನಿರ್ಮಾಣ ಆಗಿದೆ. ಇದೆಲ್ಲ ಆಗುತ್ತಿರುವುದು ಅರಣ್ಯ ಇಲಾಖೆಯಿಂದ, ಕಂದಾಯ ಇಲಾಖೆಗಿಂತಲೂ ಅರಣ್ಯ ಇಲಾಖೆ ಬಲಾಢ್ಯವಾಗಿದೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಪ್ರತಿ ಸಂದರ್ಭದಲ್ಲಿ ಇದರ ಬಗ್ಗೆ ಇಲಾಖೆಯವರನ್ನು ನಾವೇನೇ ಕೇಳಿದರೂ ಸಹ ಅವರು ನಮಗೆ ಇದು ಗೊತ್ತಿಲ್ಲ ಎನ್ನುವಂತಹ ಉತ್ತರ ಸಿಗುತ್ತದೆ. ಏಕೆ ಅರಣ್ಯ ಇಲಾಖೆಯವರು ಇಲ್ಲವೇ? ಅರಣ್ಯ ಇಲಾಖೆಯ ಅಧಿಕಾರಿಗಳ ಸಲಹೆ ಪಡೆದು ಈ ವಿಧೇಯಕಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಏನಾದರೂ ಬದಲಾವಣೆಗಳನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲವೇ? ಇವೆಲ್ಲವೂ ಸಹ ನಮ್ಮ ಮುಂದೆ ಇರುವ ಸಮಸ್ಯೆಗಳು. ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸರ್ಕಾರ ಸಾಕಷ್ಟು ಯೋಚನೆ ಮಾಡಿದ ನಂತರ ವಿಧೇಯಕವನ್ನು ಜಾರಿಗೆ ತರುವುದು ಬಹಳ ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಮ್ಮ ಕಂದಾಯ ಸಚಿವರು ಕಾರವಾರ ಕಡೆಯಿಂದ ಬಂದಿರುವ ಕಾರಣ ಅವರಿಗೆ ಅರಣ್ಯದ ಬಗ್ಗೆ ಸಾಕಷ್ಟು ಅನುಭವವಿದೆ. ಹಾಗಾಗಿ ನಾನೇನು ಅವರಿಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಫಾರಂ ನಂ.57 ರಲ್ಲಿ ಜಾಗ ಇಲ್ಲದಿದ್ದವರಿಗೆ ಜಾಗ ಕೊಡಬೇಕೆಂದಿದೆ. ಅಧಿಕಾರಿಗಳು ಫಾರಂ ನಂ.57ರಲ್ಲಿ ಭೂಮಿಯನ್ನು ನೀಡಿದರೂ ಸಹ ಅರಣ್ಯ ಇಲಾಖೆಯವರು ದಾಖಲಾತಿಗಳ ಪ್ರಕಾರ ಇದು ಅರಣ್ಯಕ್ಕೆ ಸೇರಿದೆ ಎಂದು ಹೇಳುತ್ತಾರೆ. ನಾನು ಕೂಡ 15–20 ದಿವಸಗಳ ಹಿಂದೆ ಅರಣ್ಯ ಇಲಾಖೆಯ ಪ್ರಮುಖ ಅಧಿಕಾರಿಗಳ ಜೊತೆಯಲ್ಲಿ ಒಂದು ಸಭೆಯನ್ನು ಕರೆದಿದ್ದೆನು. ಆ ಸಂದರ್ಭದಲ್ಲಿ ಕೇಳಿದಾಗ ಈ ವಿಚಾರದಲ್ಲಿ ನಾವೇನು ಮಾಡಲು ಸಾಧ್ಯವಿಲ್ಲ, ಇದು ಸುಪ್ರೀಮ್ ಕೋರ್ಟಿನ ಆದೇಶವೆಂದು ಹೇಳಿದರು. ಒಂದೇ ಜಾಗ ಒಂದು ಕಡೆ ಅರಣ್ಯ ಭೂಮಿ ಎಂದು ದಾಖಲಾಗಿದ್ದರೆ, ಮತ್ತೊಂದು ಕಡೆ ಕಂದಾಯ ಭೂಮಿ ಎಂದು ದಾಖಲಾಗಿರುತ್ತದೆ. ಪಹಣಿಯಲ್ಲಿ ಈ ಜಾಗ ಎಲ್ಲಿಂದ ಬಂದಿದೆ, ಯಾರಿಗೆ ಪರಭಾರೆ ಆಗಿದೆ ಎನ್ನುವ ದಾಖಲಾತಿಯನ್ನು ತೋರಿಸುತ್ತದೆ. ಈ ಪಹಣಿಯಲ್ಲಿ ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಎನ್ನುವುದು ನಮೂದಾದರೆ ಬಹಳ ಸೂಕ್ತವಾಗುತ್ತದೆ. ಆದ್ದರಿಂದ ಈ ಸಮಸ್ಯೆಗಳನ್ನು ಬದಲಾವಣೆ ಮಾಡುವಂತಹ ದೃಷ್ಟಿಯಿಂದ ಈ ವಿಧೇಯಕವನ್ನು ಜಾರಿಗೆ ತರಬೇಕೆನ್ನುವುದು ನನ್ನ ಒಂದು ವಿನಂತಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಗಳೆ, ಈಗ ಕಂದಾಯ ಇಲಾಖೆಯ ವಿಧೇಯಕಕ್ಕೆ ಏನು ತಿದ್ದುಪಡಿಗಳನ್ನು ತರಲಾಗಿದೆ ಅದನ್ನು ಸ್ವಾಗತ ಮಾಡಿದರೂ ಸಹ ಈ ತಿದ್ದುಪಡಿ 1,94,266 ಅರ್ಜಿಗಳಿಗೆ ಮಾತ್ರ ಎಂದು ತಿದ್ದುಪಡಿಯನ್ನು ತರಲಾಗಿದೆ. ಈ ಅರ್ಜಿಗಳು ಆದ ಮೇಲೆ ಇದಕ್ಕೆ prospective ಆಗಿ effect ಬರುತ್ತದೆಯೇ? ಈ ಕಾಯಿದೆಯಿಂದ gate open ಮಾಡಿದಂತಾಗುತ್ತದೆ. ಆದ್ದರಿಂದ ಒಂದು specific date ನಿಗದಿ ಮಾಡಿದರೆ, ಅದು ಅರ್ಜಿಗೆ ಸೀಮಿತವಾಗಿ ಇರುತ್ತದೆ, ಮುಂದೆ ಬರುವ ಅರ್ಜಿಗಳು ಊರ್ಜಿತ ಆಗುವುದಿಲ್ಲ. ಈ ತಿದ್ದುಪಡಿಯಲ್ಲಿ ಒಂದು cut-off date ದಿನಾಂಕವನ್ನು ಹಾಕಿದರೆ ಆ ದಿನಾಂಕದಿಂದ ಕಾನೂನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಚಾಲನೆ ಆಗುತ್ತದೆ. ಅದಾಗದಿದ್ದರೆ, it will open the gate ಎಂಬಂತಾಗುತ್ತದೆ, ಮುಂದೆ ಯಾವಾಗ ಏನು ಬೇಕಾದರೂ ಸಹ ಆಗಬಹುದು. ಮತ್ತೆ ಮತ್ತೆ ತಿದ್ದುಪಡಿಗಳನ್ನು ತರುವುದಕ್ಕೆ ಅವಕಾಶ ನೀಡುವ ರೀತಿಯಲ್ಲಿ ಈ ಕಾನೂನು ರಚನೆ ಆಗುತ್ತದೆ. ಈಗಾಗಲೇ 10 ಲಕ್ಷಕ್ಕಿಂತಲೂ ಹೆಚ್ಚು ಅರ್ಜಿಗಳನ್ನು ವಿಲೇವಾರಿ ಮಾಡಿರುವುದು ಬಹಳ ಒಳ್ಳೆಯ ಕೆಲಸ. ಈಗ ಉಳಿದಿರುವ ಅರ್ಜಿಗಳನ್ನು ವಿಲೇವಾರಿ ಮಾಡುವುದರ ಜೊತೆಗೆ retrospective ಆಗಿ ಕೊಡುವಂತಹ ವ್ಯವಸ್ಥೆಯಾಗಬೇಕೇ ಹೊರತು prospective ಆಗಿ ಕೊಡುವ ಕೆಲಸ ಆಗಬಾರದು. ಅರಣ್ಯ ಭೂಮಿಯಾಗಲಿ ಕಂದಾಯ ಭೂಮಿಯಾಗಲಿ, ಅದನ್ನು ಉಳಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು.

(500) 17-12-2018 6-00 ಎಲ್ಎಂ/ವಿಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಈ ತಿದ್ದುಪಡಿಯಲ್ಲಿ 18 ವರ್ಷಗಳಿಂದ 20 ವರ್ಷಗಳವರೆಗೆ ಎಂದು ಬಹಳ ಸರಳವಾದ ತಿದ್ದುಪಡಿಯನ್ನು ತಂದಿದ್ದಾರೆ. ನಾನು ತಮ್ಮಲ್ಲಿ ವಿವರಣೆ ಕೇಳುವುದು ಏನೆಂದರೆ. 1,84,329 ಅರ್ಜಿಗಳು ಫಾರ್ಮ ನಂಬರ್ 53ರಲ್ಲಿ ಇವೆ. ನೀವೇ ಕೊಟ್ಟ ಮಾಹಿತಿ ಪ್ರಕಾರ 9937 ಅರ್ಜಿಗಳು 50ರಲ್ಲಿ ಬಾಕಿ ಇವೆ. ಯಾವ ಉದ್ದೇಶದಿಂದ ಈ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬವಾಗಿದೆ? ಭೂಮಿ ವ್ಯವಸ್ಥೆಯಲ್ಲಿ, ಉದಾಹರಣೆಗೆ Deemed Forest ಎನ್ನುವುದಕ್ಕಾಗಿಯೇ, ಅರಣ್ಯ ಒತ್ತುವರಿ ಆಗಿದೆ ಎನ್ನುವ ಕಾರಣಕ್ಕಾಗಿ ವಿಳಂಬವಾಗಿದೆಯೇ? ಇಂತಹ ಕಾರಣಗಳನ್ನು ಬಿಟ್ಟು ಈ ಅರ್ಜಿ ಬೇರೆ ಯಾವುದಕ್ಕಾದರೂ ಬಳಕೆಯಾಗಿದ್ದರೆ ಅದನ್ನು ವಿಲೇವಾರಿ ಮಾಡಲು Deemed Forest ಗೆ ಏನಾದರೂ ತಿದ್ದುಪಡಿಯನ್ನು ತರುತ್ತೀರಾ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಎಲ್ಲ ದಾಖಲೆಗಳು ಸರಿ ಇದ್ದೂ ಕೂಡಾ ಶಾಸಕರ ನೇತೃತ್ವದಲ್ಲಿರುವ ಅಕ್ರಮ-ಸಕ್ರಮ ಸಮಿತಿಯನ್ನು ಉಳಿಕೆ ಮಾಡಲು ಏನು ಕಾರಣ ಗೊತ್ತಿಲ್ಲ. ಏಕೆಂದರೆ ಚುನಾವಣೆ ಬಂದಾಗ ಜನರನ್ನು ಓಲೈಸುವ ದೃಷ್ಟಿಯಿಂದ, ಜನರಿಗೆ ಸವಲತ್ತು ಕೊಡುವ ದೃಷ್ಟಿಯಿಂದ ಅನೇಕ ಶಾಸಕರು ಕೆಲಸ ಮಾಡುವುದನ್ನು ನೋಡಿದ್ದೇವೆ. ಇಷ್ಟಾದರೂ ಕೂಡಾ 1,84,329 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ ಎಂದರೆ, ಏನಾದರೂ ಭೂಮಿಯ ತಗಾದೆಗಳು ಇವೆಯಾ? Deemed Forest, ಅರಣ್ಯ ಒತ್ತುವರಿ, ಗೋಮಾಳ ಇಂತಹ ಸಮಸ್ಯೆಗಳು ಇವೆಯಾ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಎರಡು ವರ್ಷಗಳ ಅವಧಿಗೆ ತಾವು ವಿಸ್ತರಣೆಯನ್ನು ತೆಗೆದುಕೊಂಡಿದ್ದೀರಿ. ಕೆಲವು ಕಡೆ ಸಾವಿರಾರು ಅರ್ಜಿಗಳ ವಿಲೇವಾರಿಯಾಗಿದೆ. ನಾನು ಒಂದು ಉದಾಹರಣೆ ಕೊಡುತ್ತೇನೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫಾರ್ಮ್ ನಂಬರ್ 50 ಮತ್ತು 53ರ ಅಡಿಯಲ್ಲಿ ಕೊಟ್ಟಿರುವ ಅರ್ಜಿಗಳನ್ನು ಅಕ್ರಮ-ಸಕ್ರಮ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಕುಳಿತುಕೊಂಡು 1200 ಅರ್ಜಿಗಳಿಗೆ ಮಂಜೂರು ಮಾಡಿದ್ದಾರೆ. ಆದರೆ ಮಂಜೂರು ಮಾಡಿ ಒಂದು ವರ್ಷವಾದರೂ ಇನ್ನು ಹಕ್ಕುಪತ್ರವನ್ನು ಕೊಟ್ಟಿರುವುದಿಲ್ಲ. ಇದರ ಬಗ್ಗೆ ಉತ್ತರ ಕೊಡುವಾಗ ಸ್ಪಷ್ಟಪಡಿಸಬೇಕೆಂದು ಇದಕ್ಕೆ ಪೂರಕವಾಗಿ ಹೇಳಿದ್ದೇನೆ. ಶಾಸಕರು ಮಂಜೂರಾತಿ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಕ್ಕುಪತ್ರವನ್ನು ಕೊಡುವ ಜವಾಬ್ದಾರಿ ಅಧಿಕಾರಿಗಳ ಮೇಲೆ ಇದೆ. ಆ ಬಡವ ಪ್ರತಿದಿನ ಹೋಗಿ ಅಲ್ಲಿ ಕಾಯಬೇಕಾಗಿದೆ. 1,84,329 ಇಷ್ಟು ಅರ್ಜಿಗಳನ್ನು ಮಂಜೂರಾತಿ ಮಾಡಲು ಇರುವ ಆಡಳಿತಾತ್ಮಕ ಮತ್ತು ಕಾನೂನಾತ್ಮಕ ತೊಂದರೆಗಳು ಏನು? ಎರಡು ವರ್ಷಗಳ ವಿಸ್ತರಣೆ ಮಾಡಿದರೆ ಅದನ್ನು ಹೇಗೆ ಸರಿಪಡಿಸುತ್ತೀರಿ? ಮಂಜೂರಾತಿ ಮಾಡಿಯೂ ಕೂಡ ಹೀಗೆ ವಿಲೇವಾರಿ ಇಡಲು ಕಾರಣವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು ಎನ್ನುವುದು ನನ್ನ ವಿನಂತಿ.

**ಸಭಾಪತಿಯವರು:–** ಮಾನ್ಯ ಸಚಿವರೆ ಇಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ, ಫಾರ್ಮ್ ನಂಬರ್ 50 ಮತ್ತು 57 ಇದರಲ್ಲಿ ವ್ಯತ್ಯಾಸವಿಲ್ಲ. ಆದರೆ ಫಾರ್ಮ್ ನಂಬರ್ 53ರಲ್ಲಿ 18 ವರ್ಷಗಳ ನಂತರ 1,84,329 ಕಡತಗಳು ಬಾಕಿ ಇವೆ. ಬಾಕಿ ಇರುವ ಮೂಲ ಉದ್ದೇಶ ಅರಣ್ಯದವರು ಎತ್ತಿರುವ ಆಕ್ಷೇಪ. ನೀವು extension ಕೊಟ್ಟರೂ, ಏನೇ ಕೊಟ್ಟರೂ ಅರಣ್ಯ ಇಲಾಖೆಯವರ ಆಕ್ಷೇಪ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ನೀವು ಏನೇ extension ಕೊಟ್ಟರೂ ಅದಕ್ಕೆ ಅರ್ಥವಿಲ್ಲ. ಆ ಹಂತದಲ್ಲಿ ತಾಂತ್ರಿಕವಾಗಿ ಈ ಸಮಸ್ಯೆಯನ್ನು ಏನಾದರೂ ಪರಿಹರಿಸಲು ಸಾಧ್ಯವಿದೆಯೇ ಎನ್ನುವುದು ಮಾನ್ಯ ಸಚಿವರ ಚಿಂತನಗೆ ಬಿಟ್ಟಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳು ಹೇಳಿರುವ ಸಮಸ್ಯೆಗಳನ್ನು ಮೊದಲು ಪರಿಹಾರ ಮಾಡದೆ ಬೇರೆ ಏನೇ ಮಾಡಿದರೂ ಸಮಸ್ಯೆಯನ್ನು ಪರಿಹಾರ ಮಾಡಲು ಆಗುವುದಿಲ್ಲ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು):–** ಮಾನ್ಯ ಸಭಾಪತಿಗಳೆ, ಪೀಠದಿಂದ ಒಂದೆರಡು ಸಲಹೆಗಳನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳು. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಐವನ ಡಿ'ಸೋಜಾರವರು, ಮಾನ್ಯ ಆಯನೂರು ಮಂಜುನಾಥ್‌ರವರು, ಡಾ: ತೇಜಸ್ವಿನಿಯವರು, ಮಾನ್ಯ ಭೋಜೇಗೌಡರು, ಶ್ರೀಮತಿ ವೀಣಾ ಅಚ್ಚಯ್ಯನವರು, ಮಾನ್ಯ ಪ್ರಾಣೇಶ್‌ರವರು ಮತ್ತು ಮಾನ್ಯ ಪಿ.ಆರ್.ರಮೇಶ್‌ರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಒಂದು ಕಡೆ ಪರಿಸರ ಸಂರಕ್ಷಣೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇನ್ನೊಂದು ಕಡೆ ಅರಣ್ಯ ಭೂಮಿಯ ಸಮಸ್ಯೆಗಳಿಂದ ಪ್ರಕರಣಗಳು ಇತ್ಯರ್ಥವಾಗುತ್ತಿಲ್ಲ ಎನ್ನುವುದನ್ನು ಗಮನಕ್ಕೆ ತಂದಿದ್ದಾರೆ. ಈಗ ತಂದಿರುವುದು ಬಹಳ ಸರಳವಾದ ತಿದ್ದುಪಡಿಯಾಗಿದೆ. ಕಡುಬಡವರು, ಕೃಷಿಕರು ಸರ್ಕಾರದ ಕಂದಾಯ ಜಮೀನನ್ನು ಏನು ಅತಿಕ್ರಮಣ ಮಾಡಿದ್ದಾರೆ, ಅವರ ಜೀವನ ಇದರ ಮೇಲೆಯೇ ಅವಲಂಬಿಸಿದೆ. ಹೀಗಾಗಿ ಅವರಿಗೆ ಜಮೀನನ್ನು ಮಂಜೂರು ಮಾಡಿ ಎಂದು ಹಿಂದೆ ಸದನದಲ್ಲಿ ಚರ್ಚೆಯಾದಾಗ ಸರ್ಕಾರ ಈ ಸಮಸ್ಯೆಗೆ ಸ್ಪಂದಿಸಿ ಎರಡು ಹೆಕ್ಟೇರ್‌ವರೆಗೆ including his holding, ಅವರದ್ದೇ holding ಇದ್ದರೆ ಆ ಜಮೀನನ್ನು ಏನು ಅವರಿಗೆ ಮಂಜೂರು ಮಾಡಬೇಕೆಂದು ನಿರ್ಣಯ ಮಾಡಲಾಯಿತು. ಆ ಪ್ರಕಾರ ಫಾರ್ಮ್ ನಂಬರ್ 50ರಲ್ಲಿ 10,78,626 ಅರ್ಜಿಗಳ dispose ಆಗಿದೆ. ಈಗ 9937 ಅರ್ಜಿಗಳು ಫಾರ್ಮ 50ರಲ್ಲಿ ಉಳಿದಿವೆ. ಫಾರ್ಮ್ ನಂಬರ್ 53ರಲ್ಲಿ 1,84,329 ಅರ್ಜಿಗಳು ಬಾಕಿ ಇದೆ. ಈ ನಂಬರ್ ದೊಡ್ಡದಾಗಿ ಕಾಣುತ್ತದೆ. ಆದರೆ 10,96,000 ಅರ್ಜಿಗಳು ಬಂದಿದ್ದವು. ಶಾಸಕರ ಅಧ್ಯಕ್ಷತೆಯಲ್ಲಿದ್ದ ಬಗರ್ ಹುಕುಂ ಸಮಿತಿ ಕೆಲಸ ಮಾಡಿದೆ. ಮಾನ್ಯ ಭೋಜೇಗೌಡರು ಹೇಳಿದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೆ ಇಲ್ಲಿ ರಾಜಕಾರಣ ಇದೆಯೇ ಇಲ್ಲವೇ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ಅರ್ಹತೆ ಇರುವವರಿಗೆ ಅವರ ಹಕ್ಕು ಸಿಗಬೇಕು. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿರಬಾರದು. ಮಾನ್ಯ ಐವನ್ ಡಿ'ಸೋಜಾರವರು 94ಸಿ ಇದೆ, 94ಸಿಸಿ ಇದೆ, 53ಇದೆ ಇವೆಲ್ಲವನ್ನು ಒಂದು ಮಾಡಿ ಎಂದು ಹೇಳಿದರು. ಆದರೆ ಹಾಗೆ ಮಾಡಲು ಆಗುವುದಿಲ್ಲ. Karnataka Land Revenue Act ಮಾಡಿದ ನಂತರ ಈ ಕಾನೂನಿಗೆ ತಿದ್ದುಪಡಿ ಮಾಡಿದ ಮೇಲೆ specific purpose ಗೆ ಮಾಡಿದ್ದೇವೆ. 94ಸಿ ಯಲ್ಲಿ ಗ್ರಾಮಾಂತರ ಪ್ರದೇಶ, ಪಟ್ಟಣ ಪ್ರದೇಶದಲ್ಲಿ ಯಾರಾದರೂ ಮನೆಗಳನ್ನು ಕಟ್ಟಿದ್ದರೆ ಮಂಜೂರು ಮಾಡಲಾಗುವುದು. ಇದು ಕೃಷಿ ವ್ಯವಸಾಯ ಮಾಡಲು. ಅದೇ ಪ್ರಕಾರ ಮಾನ್ಯ ಸ್ನೇಹಿತರಾದ ಆಯನೂರು ಮಂಜುನಾಥ್‌ವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯಲ್ಲಿ ಈ ಜಮೀನು ಬಗ್ಗೆ ಸಾಕಷ್ಟು ಸಮಸ್ಯೆಗಳು ಇವೆ. ಚಿಕ್ಕಮಗಳೂರಿನಲ್ಲಿ ಈ ಸಮಸ್ಯೆ ಬಂದಾಗ ಜಂಟಿ ಸರ್ವೇ ಮಾಡಲು ನಿರ್ಣಯ ಮಾಡಲಾಗಿದೆ. ಆ ರೀತಿ ಸರ್ವೇ ಮಾಡಿದಾಗ ಒಂದು ಇತ್ಯರ್ಥಕ್ಕೆ ಬರಲು ಸಾಧ್ಯವಿದೆ. ನಮ್ಮ ಇಲಾಖೆಯಿಂದ 880 ಸರ್ವೇಯರ್‌ಗಳನ್ನು ನೇಮಕ ಮಾಡಿದ್ದೇವೆ. ಹೀಗಾಗಿ ಈ ಸಮಸ್ಯೆ ಬಗೆಹರಿಸಬೇಕಾದರೆ ಅರಣ್ಯ ಇಲಾಖೆ, ಕಂದಾಯ ಇಲಾಖೆ ಕುಳಿತು ಚರ್ಚೆ ಮಾಡಿ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಇದರಲ್ಲಿ ಯಾವುದೇ ಸಂದೇಹ, ಸಂಶಯವಿಲ್ಲ. ಚಿಕ್ಕಮಗಳೂರಿನಲ್ಲಿ ಆ ಕೆಲಸ ಪ್ರಾರಂಭ ಮಾಡಲು ಆದೇಶವನ್ನು ಕೊಟ್ಟಿದ್ದೇವೆ. ಇದೇ ಸಮಸ್ಯೆ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇರಬಹುದು, ಕೊಡಗು ಜಿಲ್ಲೆಯಲ್ಲಿ ಇರಬಹುದು, ಶಿವಮೊಗ್ಗದಲ್ಲಿ ಇರಬಹುದು, ಉಡುಪಿ, South Canara ಇರಬಹುದು ಬಹುತೇಕ ಮಲೆನಾಡು ಜಿಲ್ಲೆಗಳಲ್ಲಿ ಈ ಸಮಸ್ಯೆಗಳು ಬರುತ್ತವೆ. ಫಾರ್ಮ್ ನಂಬರ್ 57ರಲ್ಲಿ ಅರ್ಜಿ ಹಾಕಲು 16–3–2019 ಕೊನೆಯ ದಿನ. ಆ amendment Section 94A ಕೆಳಗೆ ಆಗುತ್ತದೆ. ಮಾನ್ಯ ರಮೇಶ್‌ರವರು ಇದು prospective or retrospective ಎಂದು ಕೇಳಿದ್ದರು. ಇಲ್ಲಿ ಪುನ: ಅರ್ಜಿ ಹಾಕಲು ಅವಕಾಶವಿದೆಯಾ ಎಂದು ಕೇಳಿದರು. ಹಾಗೆ ಮಾಡಲು ಅವಕಾಶವಿಲ್ಲ. ಎರಡು ವರ್ಷ ಸಮಯವನ್ನು ಕೇವಲ pending cases ಗಳನ್ನು dispose ಮಾಡಲು ಕೇಳಲಾಗುತ್ತಿದೆ. ಹೊಸ ಅರ್ಜಿ ಕೊಡಲು ಅವಕಾಶವಿಲ್ಲ. ಆದರೆ 16ನೇ ಮಾರ್ಚ್ 2019ರವರೆಗೆ ಫಾರ್ಮ್ ನಂಬರ್ 57ರಲ್ಲಿ ಹೊಸ ಅರ್ಜಿ ಕೊಡಲು ಅವಕಾಶವಿದೆ. ಅರ್ಜಿ ಕೊಟ್ಟು ಯಾರ ಅರ್ಜಿ reject ಆಗಿದೆ ಅವರಿಗೂ ಕೂಡಾ ಅವಕಾಶವಿಲ್ಲ. Only fresh applications will be entertained. ಇನ್ನು ಚುರುಕಾಗಿ ಈ ಕೆಲಸ ನಡೆಯಬೇಕು ಎನ್ನುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಶಾಸಕರೇ ಈ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಅವರ ಮೇಲೆಯೂ ಜವಾಬ್ದಾರಿ ಇರುತ್ತದೆ. ಬಹಳ ಜನ ಶಾಸಕರು ಹೆಚ್ಚಿನ ಆಸಕ್ತಿ ತೆಗೆದುಕೊಂಡು ತಮ್ಮ ಕ್ಷೇತ್ರದ ಜನರಿಗೆ ಸಹಾಯವಾಗಬೇಕು ಎಂದು ಕೆಲಸವನ್ನು ಮಾಡಿದ್ದಾರೆ. ಕೆಲವು ಸಾರಿ ನಮ್ಮ ಕಡೆಯಿಂದಲೂ ವಿಳಂಬವಾಗಿದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಪ್ರಾಮಾಣಿಕವಾಗಿ ಹೇಳಬೇಕು ಎಂದರೆ, ಇನ್ನು ಕೂಡಾ ನಮಗೆ ಬಗರ್ ಹಕುಂ ಸಮಿತಿ ಮಾಡಲು ಆಗಿರುವುದಿಲ್ಲ. ಇದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ.

(501)17–12–2018(06–10)ಬಿಎಸ್‌ಡಿ–ವಿಕೆ
ಶ್ರೀ ಆರ್.ವಿ. ದೇಶಪಾಂಡೆ (ಮುಂದು)
ಆರು ತಿಂಗಳು ಕಳೆದರೂ ಆಗಿಲ್ಲ. ಕೆಲಸಗಳು ನಿಂತಿವೆ, ಇದು ಒಂದು ಕಾರಣ. ಇನ್ನು ತಹಶೀಲ್ದಾರರ ಕೊರತೆ ಇಲ್ಲ. ಸುಮಾರು 108 Probationary Tahsildar ಗಳಿಗೆ ಪೋಸ್ಟಿಂಗ್ ಕೊಡುತ್ತಿದ್ದೇವೆ. ಹಾಗಾಗಿ ಕಂದಾಯ ಇಲಾಖೆಯಲ್ಲಿ ಬಹುತೇಕ ತಹಶೀಲ್ದಾರರ ಸಮಸ್ಯೆ ಇಲ್ಲ. ಆದರೆ ಕೆಲವು ಎಫ್‌ಡಿಸಿ, ಎಸ್‌ಡಿಸಿ ಹುದ್ದೆಗಳ ಸಮಸ್ಯೆ ಇದ್ದು, ವಿಲೇಜ್ ಅಕೌಂಟೆಂಟ್ ಸಮಸ್ಯೆ ಇಲ್ಲ. ಏಕೆಂದರೆ ವಿಲೇಜ್ ಅಕೌಂಟೆಂಟ್ ನೇಮಕಕ್ಕೆ ಡಿ.ಸಿ ರವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಎಫ್‌ಡಿಸಿ, ಎಸ್‌ಡಿಸಿ ಹುದ್ದೆಗಳ ನೇಮಕಾತಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಸರ್ಕಾರದಲ್ಲಿ ಪರಿಶೀಲನೆ ನಡೆಯುತ್ತಿದೆ. ವಿಲೇಜ್ ಅಕೌಂಟೆಂಟ್ ಹುದ್ದೆಗಳು ಖಾಲಿಯಾದಾಗ ಡಿ.ಸಿ ರವರು ಅರ್ಜಿ ಕರೆದು ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ನೇಮಕಾತಿ ಮಾಡುತ್ತಾರೆ. ಕೆಪಿಎಸ್‌ಸಿ ಯಿಂದ ಸಹ ಕೆಲವು ನೇಮಕಾತಿ ಆಗಬೇಕಾಗಿದೆ. ಇದರಿಂದ ಕೆಲವು ಸಮಸ್ಯೆಗಳು ಇವೆ. ಈಗ ತಹಶೀಲ್ದಾರರ ಬಗ್ಗೆ ನಮಗೆ ಸಮಸ್ಯೆ ಇಲ್ಲ. ಶ್ರೀಮತಿ ವೀಣಾ ಅಚ್ಚಯ್ಯನವರು 5–10 ಎಕರೆ ಜಮೀನಿನ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅರಣ್ಯ ಜಿಲ್ಲೆಯಿಂದ ಬರುತ್ತಿದ್ದೇನೆ. ಆದರೆ ನಾನು ಒಂದು ಮಾತನ್ನು ಹೇಳುವುದೇನೆಂದರೆ, ಪರಿಸರದ ಸಂರಕ್ಷಣೆ ಆಗಬೇಕು. ಇದರಲ್ಲಿ compromising ಇರಬಾರದು. ಕೊಡಗಿನಲ್ಲಿ ಬಂದು ಅನಾಹುತ ಆಯಿತು, ಅದೊಂದು ಕಾರಣ, ಈ ಕಾರಣ ಎಂದಲ್ಲ, ಆದರೆ ಅದೊಂದು ಕಾರಣ. ಹಾಗಾಗಿ ಅರಣ್ಯ ಬೆಳಸಿ, ಅರಣ್ಯದ ಸಂರಕ್ಷಣೆ ಮಾಡಬೇಕಾಗುತ್ತದೆ. ಅದನ್ನು ಮಾಡುವಾಗ ಸಾಮಾಜಿಕ ನ್ಯಾಯವನ್ನು ಕೊಡಬೇಕಾಗುತ್ತದೆ. ಏಕೆಂದರೆ ಬಡವರು ಹಲವಾರು ವರ್ಷಗಳಿಂದ ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಬಂದಿದ್ದಾರೆ. ಕೇಂದ್ರ ಸರ್ಕಾರವು ಅರಣ್ಯ ಕಾಯಿದೆ, 2005ನ್ನು ಜಾರಿಗೆ ತಂದಿದೆ. ಅಲ್ಲಿ ಕೆಲವು ಸಮಸ್ಯೆಗಳಿವೆ. ಪರಿಶಿಷ್ಟ ಪಂಗಡದವರಿಗೆ ಸಮಸ್ಯೆ ಇಲ್ಲ. He has to be in possession as on 2005. ಆದರೆ ಇತರರು ಮೂರು ತಲೆಮಾರುಗಳಿಂದ ಅಂದರೆ 90 ವರ್ಷಗಳಿಂದ ಇದ್ದಾರೆ. ಅದನ್ನು ಸಾಬೀತುಪಡಿಸಲು 80–90 ವರ್ಷಗಳ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತೇವೆ. ಆದರೆ ಎರಡನೆಯ ಮತ್ತೊಂದು ಕಂಡೀಷನ್ ಅನ್ನು ಪ್ರೂವ್ ಮಾಡಬೇಕು. ಹಾಗಾಗಿ ಅಲ್ಲಿ ಸ್ವಲ್ಪ ಸಮಸ್ಯೆ ಆಗಿದೆ. ತಮ್ಮೆಲ್ಲರ ಸಹಕಾರದಿಂದ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ತಿದ್ದುಪಡಿ ಮಾಡಲು ಸಾಧ್ಯವಿದ್ದರೆ forest tribals ಗಳು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರುವವರಿಗೆ.... ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಕಷ್ಟ ಪಟ್ಟಿದ್ದೇವೆ. ಸಾಕಷ್ಟು ಸುತ್ತೋಲೆಗಳನ್ನು ಕಳುಹಿಸಿದ್ದೇವೆ, ಕ್ಯಾಬಿನೆಟ್‌ನಲ್ಲಿ ವಿಷಯವನ್ನು ಮಂಡಿಸಿ ಸಾಕಷ್ಟು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಿರ್ದೇಶನಗಳನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಆದರೂ ದೊಡ್ಡ ಪ್ರಮಾಣದಲ್ಲಿ ನಮಗೆ ಯಶಸ್ಸು ಸಿಕ್ಕಿಲ್ಲ ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಅರಣ್ಯ ಕಾಯ್ದೆ ಬಂದರೂ ಇತರರಿಗೆ ನ್ಯಾಯ ಕೊಡಲು ಸಾಕಷ್ಟು ಕಷ್ಟವಾಗುತ್ತಿದೆ, ಕಷ್ಟವಾಗಿದೆ. ಬಹಳಷ್ಟು ಅರಣ್ಯ ಭೂಮಿಯನ್ನು disforesting ಮಾಡಿ, denotification ಆಗಿಲ್ಲ. ಮಾನ್ಯ ಪ್ರಾಣೇಶ್‌ರವರು ಈ ಬಗ್ಗೆ ಮಾತನಾಡಿದರು ಎಂದು ಕಾಣುತ್ತದೆ. ಭೂಮಿ disforest ಆಗಿ denotify ಆಗಿಲ್ಲ. Denotification ಆಗುವವರೆಗೂ ಕಂದಾಯ ಭೂಮಿ ಎಂದು ಆಗುವುದಿಲ್ಲ. ಆ ಪ್ರಕ್ರಿಯೆ ಅರಣ್ಯ ಇಲಾಖೆಯಲ್ಲಿ ಪ್ರಾರಂಭವಾಗಿದೆ. ನಾನು ಇದರ ಬಗ್ಗೆ ಒತ್ತು ಕೊಡುತ್ತಿದ್ದೇನೆ. ಏಕೆಂದರೆ ಬಹಳಷ್ಟು ಜಮೀನು denotify ಆದರೆ ಲೀಗಲ್ ಆಗಿ ಅರಣ್ಯ ಇಲಾಖೆಯಿಂದ ಬಿಡುಗಡೆಯಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಹೆಜ್ಜೆ ಹಾಕುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳನ್ನು ಗಮನಕ್ಕೆ ತಂದಿದ್ದಾರೆ. ಸುಮಾರು 1100–1200 ಬಗರ್‌ಹುಕುಂ ಕೇಸ್‌ಗಳನ್ನು dispose ಮಾಡಿದ್ದರೂ ಹಕ್ಕು ಪತ್ರಗಳನ್ನು ಕೊಡಲು ಸಾಧ್ಯವಾಗಿಲ್ಲ ಎಂದು ಹೇಳಿದರು. ನಾನು ಉಡುಪಿ, ದಕ್ಷಿಣ ಕನ್ನಡಕ್ಕೆ 2–3 ಸಾರಿ ಹೋಗಿ ಬಂದಿದ್ದರೂ ನನ್ನ ಗಮನಕ್ಕೆ ಈ ವಿಚಾರವನ್ನು ಯಾರೂ ತಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ಸರಿಯಿರಬಹುದು. ನಾನು ಮೂರ್‍ನಾಲ್ಕು ಸಾರಿ ಹೋಗಿದ್ದಾಗ ಅಲ್ಲಿನ progress ಚೆನ್ನಾಗಿದೆ. ಒಂದು ವೇಳೆ ಹಕ್ಕುಪತ್ರ ಕೊಡುವ ಕೆಲಸ ಉಳಿದಿದ್ದರೆ ತಿಳಿಸಬಹುದು. ಆರ್‌ಡಿಪಿಆರ್ ಇಲಾಖೆಯಿಂದ 94(ಸಿ) ನಿಯಮದಂತೆ ಆದೇಶವಾದರೂ ರೆಕಾರ್ಡ್‌ನಲ್ಲಿ ಎಂಟ್ರಿ ಆಗಬಾರದು. ಇದಕ್ಕೆ ಮಾನ್ಯ ಕೃಷ್ಣ ಭೈರೇಗೌಡರು, ನಾವು ಸಭೆ ಮಾಡಿ clarity ಕೊಟ್ಟಿದ್ದೇವೆ, ಅವರು ಬಹಳ ಹಿಂದೆ ಸುತ್ತೋಲೆ ಹೊರಡಿಸಿದ್ದು, ಇದರ ಬಗ್ಗೆ ಯಾವುದೆ ಅಭ್ಯಂತರ ಇಲ್ಲ. ಒಮ್ಮೆ 94(ಸಿ) ನಲ್ಲಿ ತಹಶೀಲ್ದಾರ್ ಆದೇಶ ಕೊಟ್ಟರೆ ಆತನ ಹೆಸರಿನಲ್ಲಿ ಎಂಟ್ರಿ ಆಗಬೇಕು ಎಂದು ಆರ್.ಡಿ.ಪಿ.ಆರ್. ಗೆ ಸ್ಪಷ್ಟವಾದ ನಿರ್ದೇಶನ ಕೊಟ್ಟು ಬಹಳ ದಿನ ಆಗಿದೆ. ಅದು ಪಿಡಿಓ ಗಳ ಗಮನಕ್ಕೆ ಬಂದಿರಲಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಪರಿಹಾರ ಕಂಡು ಹಿಡಿದಿದ್ದೇವೆ. ಒಂದು ಕಡೆ ಅರಣ್ಯ ಸಂರಕ್ಷಣೆ ಆಗಬೇಕಾಗುತ್ತದೆ. ಮತ್ತೊಂದು ಕಡೆ ಬಗರ್‌ಹುಕುಂ ಜಮೀನು ಮಂಜೂರು ಮಾಡಬೇಕಾಗುತ್ತದೆ. ಗೋಮಾಳ ಭೂಮಿಯನ್ನು ದನ–ಕರುಗಳ ಸಂಖ್ಯೆಯ ಮೇಲೆ ಕಾದಿರಿಸುತ್ತಾರೆ. ಬಹಳ ಹಿಂದಿನ ಸಂಖ್ಯೆಯ ಆಧಾರದ ಮೇಲೆ ಮಾಡಿದ್ದಾರೆ. ಇವತ್ತು ಎಲ್ಲಾ ಕಡೆ ದನ–ಕರುಗಳ ಸಂಖ್ಯೆ (high breed cows) ಬಿಟ್ಟು, ನನ್ನ ದೃಷ್ಟಿಯಲ್ಲಿ ಕಡಿಮೆಯಾಗಿದೆ. ಯಾಂತ್ರಿಕ ಮೆಷಿನ್ ಉಪಯೋಗ ಆಗುತ್ತಿದೆ. ಹಾಗಾಗಿ ನಮ್ಮ ಇಲಾಖೆಯಿಂದ ಹೊಸ ಸರ್ವೆ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ. ಎಷ್ಟು ದನ–ಕರುಗಳು ಹಾಗೂ ಎಷ್ಟು ಗೋಮಾಳ ಭೂಮಿ ಇದೆ ಎಂದು ಸರ್ವೆ ಮಾಡಲು ತಿಳಿಸಿದ್ದೇನೆ. ಒಂದು ವೇಳೆ ದನ–ಕರುಗಳಿಗೆ ಮೇಯಲು ಅಗತ್ಯವಿರುವಷ್ಟು ಭೂಮಿಗಿಂತ ಹೆಚ್ಚಿನ ಭೂಮಿ ಇದ್ದರೆ ಆ ಭೂಮಿಯನ್ನು ಅಭಿವೃದ್ಧಿಗೆ ಉಪಯೋಗಿಸಲು ಅವಕಾಶ ಇದ್ದು, ಆ ದಿಕ್ಕಿನಲ್ಲಿ ಕ್ರಮ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತೆಗೆದುಕೊಳ್ಳುತ್ತಿದ್ದೇನೆ. ಹಾಗಾಗಿ ಇದೊಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇನೆ. ಇದು 2000ನೇ ಇಸವಿಯಿಂದ 94(ಬಿ)ಗೆ ತಿದ್ದುಪಡಿ ಮಾಡುತ್ತಾ ಬಂದಿದ್ದೇವೆ. ಆದ್ದರಿಂದ ಇದಕ್ಕೆ ಸದನ ಅನುಮತಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಆಯನೂರು ಮಂಜುನಾಥ್:– ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮಿತಿ ರಚನೆ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಸಭಾಪತಿಯವರೇ, ನನಗೆ ಕೌನ್ಸಿಲ್ ಸದಸ್ಯರು ಇರಬಾರದು ಎಂದೇನೂ ಇಲ್ಲ. ಎಂ.ಎಲ್.ಎ ಅಧ್ಯಕ್ಷರು ಎಂದಾಗ, it's just because of the Act. ಆ ಸಮಿತಿ ಯಾವರೀತಿ ರಚನೆ ಆಗಬೇಕು ಎಂಬುದು, there is a provision in the Act. ಇದು ಸರ್ಕಾರದ ಆದೇಶ ಅಲ್ಲ. ಆದರೆ ಕಾಯ್ದೆಯಿಂದ ಆಗಿದೆ.

ಸಭಾಪತಿಯವರು:– ಪ್ರಸ್ತಾವ ಏನೆಂದರೆ;

ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2018ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>

<u>ಖಂಡ 2</u>

ಸಭಾಪತಿಯವರು:– " ಖಂಡ 2 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

<u>ಖಂಡ 1 ಇತ್ಯಾದಿ</u>

ಸಭಾಪತಿಯವರು:– ಪ್ರಸ್ತಾವ ಏನೆಂದರೆ,

' ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕ್ಕೆ ಸೇರಿಸಲಾಯಿತು)

**<u>ಪ್ರಸ್ತಾವದ ಅಂಗೀಕಾರ</u>**

ಶ್ರೀ ಆರ್.ವಿ. ದೇಶಪಾಂಡೆ (ಕಂದಾಯ ಮಂತ್ರಿಗಳು):– ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2018ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭಾಪತಿಯವರು:– ಪ್ರಸ್ತಾವ ಏನೆಂದರೆ,

“ವಿಧಾನ ಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2018ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(502)17–12–2018(6–20)ಹೆಚ್‌ವಿಃಬಿಎನ್‌ಎಸ್**

(ಸಭಾಪತಿಯವರು ಉಪಸ್ಥಿತಿ)

**11. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

ವಿಷಯ: ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ ಕೆಲವರು ಮರಣ ಹೊಂದಿದ್ದು ಮತ್ತೆ ಕೆಲವರು ಜೀವನ್ಮರಣ ಹೋರಾಟ ನಡೆಸುತ್ತಿರುವ ಬಗ್ಗೆ

---

**ಶ್ರೀ ಶಿವಾನಂದ ಪಾಟೀಲ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು ರಾಮಪುರ ಹೋಬಳಿ ಸುಳ್ವಾಡಿ ಗ್ರಾಮದಲ್ಲಿ ಸಂಭವಿಸಿದ ವಿಷಪೂರಿತ ಆಹಾರ ದುರಂತದ ಬಗ್ಗೆ ಸರ್ಕಾರದ ವತಿಯಿಂದ ಹೇಳಿಕೆ ಮಾಡಲು ಬಯಸುತ್ತಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಬಹಳ ಹದಗೆಟ್ಟಿದೆ.

**ಡಾ:ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು ಹಾಗೂ ಒಳಾಡಳಿತ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಇಷ್ಟೆಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಪರಿಸ್ಥಿತಿ ಬಹಳ ಹದಗೆಟ್ಟಿದೆ ಎಂದು ಇವರು ಹೇಳಿದರೆ ಹೇಗೆ?

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸ್‌ನವರ ಕಡೆಯಿಂದ ಬಂದಿರುವ ಪೂರಕ ಮಾಹಿತಿಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈ ಬಗ್ಗೆ ಕೆಳಮನೆಯಲ್ಲಿ ಹೇಳಿಕೆಯನ್ನು ನೀಡುವ ಸಂದರ್ಭದಲ್ಲಿ ಮೃತಪಟ್ಟವರ ಹೆಸರನ್ನು ಹೇಳಿದ್ದೆ, ಆ ಹೆಸರುಗಳನ್ನು ಈ ಸದನಕ್ಕೂ ತಿಳಿಸಲು ಬಯಸುತ್ತಿದ್ದೇನೆ;

1. ಶಾಂತರಾಜು S/o ರಂಗಸ್ವಾಮಿ
2. ಗೋಪಿಯಮ್ಮ W/o ಮದನ್
3. ಶಿವಕುಮಾರ್ S/o ಬೆಳ್ಳಿ
4. ಪ್ರೀತಮ್ @ ಅವಿನಾಶ್ S/o ಷಣ್ಮುಗಂ
5. ಅಣ್ಣಯ್ಯ S/o ವೀರಣ್ಣ
6. ಕು.ಅನಿತಾ D/o ಲೋಕೇಶ್
7. ರಾಚಯ್ಯ S/o ಸಿದ್ಧಶೆಟ್ಟಿ
8. ಪಾಪಣ್ಣ S/o ಲೇ॥ರಾಮ
9. ಕೃಷ್ಣ ನಾಯಕ S/o ಶಂಕರನಾಯಕ
10. ದೊಡ್ಡ ಮಾದಯ್ಯ S/o ಬೊಕ್ಕಮಾದಯ್ಯ
11. ಶಕ್ತಿವೇಲು S/o ಲೇ॥ಪಳನಿಸ್ವಾಮಿ
12. ಸಾಲಮ್ಮ ಕೋಂ ಲೇ॥ಮುರುಗೇಶ್
13. ಮಗೇಶ್ವರಿ ಕೋಂ ಮುರುಗೇಶ್

ಇದರ ಜೊತೆಗೆ ವಿಧಿವಿಜ್ಞಾನ ಪ್ರಯೋಗಾಲಯದವರು ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ವರದಿಯಲ್ಲಿ ಅವರು, "*Colour tests, Thin-Layer Chromatographic and High-Performance Thin-Layer Chromatographic methods have responded for the presence of Monocrotophos.*" ಎಂದರೆ, Organo phosphorus insecticide, ಇದು ಕಂಡು ಬಂದಿದೆ ಎಂದು in Article No.1 ಅಂದರೆ, ರೈಸ್‌ಬಾತ್‌ನ ಸ್ಯಾಂಪಲ್ ಅನ್ನು, ಎರಡನೆಯದಾಗಿ in Article No.6, ಎಂದರೆ, ರೋಗಿಗಳು ವಾಂತಿ ಮಾಡಿಕೊಂಡಿರುವ ಸ್ಯಾಂಪಲ್ ಅನ್ನು ಸಂಗ್ರಹಿಸಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ಅವರ ಪ್ರಕಾರ, organo phosphorus ಎಂದು ಕಂಡು ಬಂದಿದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ. Organo phosphorus ಎಂದರೆ, "Organo *phosphorus compounds containing phosphorous. They are used primarily in pest control as an alternative to chlorinated hydrocarbons that persist in the environment. Some organo phosphorus are highly effective insecticides although same are extremely toxic to man.*" ಇದು ವಿಧಿವಿಜ್ಞಾನ ಪ್ರಯೋಗಾಲಯದವರು ಕಳುಹಿಸಿಕೊಟ್ಟಿರುವ ವರದಿಯಾಗಿದೆ. ಈ ಕಾರಣದಿಂದಾಗಿ ಪ್ರಸಾದ ಸೇವಿಸಿದ ಅರ್ಧ ಅಥವಾ ಮುಕ್ಕಾಲು ಗಂಟೆಗಳಲ್ಲಿ ಪ್ರಸಾದ ಸೇವಿಸಿದವರು ಮೃತ ಹೊಂದಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೆ, ಸುಮಾರು 13 ಆಸ್ಪತ್ರೆಗಳಲ್ಲಿ ಸುಮಾರು 107 ಜನರನ್ನು ದಾಖಲು ಮಾಡಿದ್ದಾರೆ. ಈಗ ತಾನೇ ನಾನು ಅಲ್ಲಿನ ಸ್ಥಳೀಯ ಶಾಸಕರಾದ ಮಾನ್ಯ ನರೇಂದ್ರರವರ ಜೊತೆಗೆ ಮಾತನಾಡುತ್ತಿದ್ದೆ. ಇನ್ನೂ 25 ಜನರು ತೀವ್ರನಿಗಾ ಘಟಕದಲ್ಲಿದ್ದಾರೆ ಎನ್ನುವ ಮಾತನ್ನು ಅವರು ತಿಳಿಸಿದ್ದಾರೆ. ಇದು ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಇದೊಂದು ಆಘಾತ ತರುವಂತಹ ಘಟನೆಯಾಗಿದೆ. ಏಕೆಂದರೆ, ಪ್ರಸಾದದಲ್ಲಿ ವಿಷ ಹಾಕಿಕೊಡುವುದನ್ನು ನಾವು ಇಲ್ಲಿಯವರೆವಿಗೂ ಎಲ್ಲಿಯೂ ಕೇಳಿರಲಿಲ್ಲ. ಜನರು ದೇವರ ಬಗ್ಗೆ ನಂಬಿಕೆ ಇಟ್ಟುಕೊಂಡು ಪ್ರಸಾದವೆಂದು ಏನೇ ಕೊಟ್ಟರೂ ಅದನ್ನು ಎರಡೂ ಕೈಗಳಲ್ಲಿ ಸ್ವೀಕಾರ ಮಾಡಿ ತಿನ್ನುತ್ತಾರೆ. ಇಂತಹ ಪ್ರಸಾದಕ್ಕೆ ವಿಷ ಬೆರಸಿ ಕೊಟ್ಟಿರುವವರನ್ನು ಯಾವುದೇ ಕಾರಣಕ್ಕೂ ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸಿ ಅವರಿಗೆ ಶಿಕ್ಷೆ ವಿಧಿಸಲೇಬೇಕಾಗಿದೆ. ಆ ಕಾರ್ಯವನ್ನು ನಮ್ಮ ಸರ್ಕಾರ ಮಾಡೇ ಮಾಡುತ್ತದೆ. ಇದಕ್ಕೆ ವಿರೋಧ ಪಕ್ಷದವರ ಸಹಕಾರ ಕೂಡ ಅತ್ಯಗತ್ಯವಾಗಿದೆಯೆಂದು ಹೇಳುವುದಕ್ಕೆ ಬಯಸುತ್ತೇನೆ.

(503) 17.12.2017 6.30 ಪಿಕೆ:ಬಿಎನ್ಎಸ್

(ಸಭಾಪತಿಗಳ ಉಪಸ್ಥಿತಿ)

**ಶ್ರೀ ಶಿವಾನಂದ ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಇನ್ನು ಕೆಲವು ಕ್ಲ್ಯಾರಿಫಿಕೇಷನ್ ಕೊಡಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಈ ಕುರಿತು ಮಾತನಾಡಿದಾಗ ನಾನು ಇಲ್ಲಿ ಇರಲಿಲ್ಲ; ಮುಧೋಳ್‌ನಲ್ಲಿರುವ ಮಾನ್ಯ ನಿರಾಣಿಯವರ ಫ್ಯಾಕ್ಟರಿಯಲ್ಲಾದ ಘಟನೆಯ ಸಂಬಂಧ ಅಲ್ಲಿಗೆ ಹೋಗಿದ್ದೆ. ಮಾನ್ಯ ಪ್ರತಿಪಕ್ಷದ ನಾಯಕರು ಪ್ರಮುಖವಾಗಿ ನಾಲ್ಕು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಅಲ್ಲಿನ ಆಸ್ಪತ್ರೆಯ ವ್ಯವಸ್ಥೆ ಇನ್ನೂ ಸುಸಜ್ಜಿತವಾಗಿರುತ್ತಿದ್ದರೆ ಇನ್ನೂ ಹೆಚ್ಚಿನ ಜೀವ ಉಳಿಸಬಹುದಿತ್ತು ಎಂದು ಹೇಳಿದಿರಿ. ಅದನ್ನು ನಾನು ಒಪ್ಪುತ್ತೇನೆ. ಅಲ್ಲಾಗಿರುವುದು mass casualty. ಒಬ್ಬರು ಅಥವಾ ಇಬ್ಬರಿಗೆ ವಿಷ ಪ್ರಾಶನವಾಗಿದ್ದರೆ ಖಂಡಿತವಾಗಿ ಉಳಿಸಬಹುದಿತ್ತು. ಆ ಸ್ಥಳದಲ್ಲಿ P.H.C. (Primary Health Centre) ಗಳು ಅಕ್ಕಪಕ್ಕದಲ್ಲಿತ್ತು. 2 C.H.C. (Community Health Centre) ಗಳು ಇರುವುದರಿಂದ ಅಲ್ಲಿ, I.P.H.S. (Indian Public Health Standards) ಪ್ರಕಾರ ಬಹಳ ಎಂದರೆ, ಎರಡು–ಅಥವಾ ಮೂರು ventilators ಇರುತ್ತದೆ.

ಮಾನ್ಯ ಸಭಾಪತಿಯವರೇ, ಘಟನೆ ಆಗಿರುವ ದಿವಸ ಇಲ್ಲಿಂದಲೇ ಅಧಿವೇಶನವನ್ನು ಮುಗಿಸಿ ನಾವೂ ಹೋಗಿದ್ದೇವೆ, ನೀವು ಹೋಗಿದ್ದೀರಿ. ನಾನು ನೇರವಾಗಿ ಬಿಜಾಪುರಕ್ಕೆ ಹೋದೆ. ಅಲ್ಲಿ ಸಾಯಂಕಾಲ ಟಿ.ವಿ. ನೋಡಿದವರು ನನ್ನ ಬಳಿ ಬಂದು ಈ ಪ್ರಕರಣದ ಬಗ್ಗೆ ಹೇಳಿದರು. ಅಲ್ಲಿಯ ತನಕ ನನಗೂ ಮಾಹಿತಿ ಇರಲಿಲ್ಲ. ತಕ್ಷಣ ನಾನು, ಬೆಂಗಳೂರಿಗೆ ಹೊರಟ್ಟಿದ್ದ Health Commissioner ರವರನ್ನು ಮೈಸೂರಿಗೆ ಕಳುಹಿಸಿದೆ.

ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸುದೈವದಿಂದ ಅವರು ನನ್ನ ಮಾತು ಒಪ್ಪಿಕೊಂಡು ನೇರವಾಗಿ ಮೈಸೂರಿಗೆ ಹೋದರು. ಸೆಕ್ರೆಟರಿಯವರನ್ನು ಬೆಂಗಳೂರಿಗೆ ಕಳುಹಿಸಿದೆ. ಬೆಂಗಳೂರಿನಿಂದ ತಕ್ಷಣ 2 ಟೀಮ್‌ಗಳನ್ನು ಮೈಸೂರಿಗೆ ಕಳುಹಿಸಲಾಗಿ, ಆ ಟೀಮ್‌ಗಳು ಸಾಯಂಕಾಲ ತಲುಪಿವೆ. ಅಲ್ಲಿ ಹೋಗಿ ಅವರು ಮಾಡಿದ ಮೊದಲ ಕೆಲಸ ಎಂದರೆ, ಆ ಸ್ಥಳದಿಂದ ಸುಮಾರು 70 ಕಿಲೋ ಮೀಟರ್‌ನಷ್ಟು ಸಮಾನ ದೂರದಲ್ಲಿದ್ದ ಚಾಮರಾಜನಗರ ಮತ್ತು ಮೈಸೂರು ಈ ಜಿಲ್ಲೆಗಳ ಪೈಕಿ ಯಾವ ಜಿಲ್ಲೆಗೆ ರೋಗಿಗಳನ್ನು ಕಳುಹಿಸಬೇಕು ಎಂದು ಯೋಚನೆ ಮಾಡಿ, ಕೊನೆಗೆ ಮೈಸೂರಿಗೆ ಕಳುಹಿಸಿ ಕೊಟ್ಟಿದ್ದಾರೆ. ಇದರಿಂದ ಒಳ್ಳೆಯದೇ ಆಯಿತು. ಏಕೆಂದರೆ, 70-80 ಜನಕ್ಕೆ ಏಕಕಾಲದಲ್ಲಿ ventilators ಸಿಗುವುದು ಬಹಳ ಕಷ್ಟ. ಮೈಸೂರಿನ ಎಲ್ಲಾ ಖಾಸಗಿ ಆಸ್ಪತ್ರೆಗಳಿಗೆ ಹೋಗಿ, ವಿನಂತಿ ಮಾಡಿಕೊಂಡು ಅಲ್ಲಿನ ಎಲ್ಲಾ ventilator ಗಳನ್ನು custody ಗೆ ತೆಗೆದುಕೊಂಡಿದ್ದಾರೆ. ಜೊತೆಗೆ ಅವರ ಸಹಕಾರವನ್ನು ಸಹ ಕೇಳಿದ್ದಾರೆ. ಮತ್ತೆ, ಅವರು ventilators ಸೌಕರ್ಯವನ್ನು ನೀಡಿದುದಲ್ಲದೇ ಚಿಕಿತ್ಸೆ ನೀಡುವುದಕ್ಕೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ಸಾಕಷ್ಟು ambulance ಗಳನ್ನು ಕಳುಹಿಸಿ ಕೊಟ್ಟಿಲ್ಲ ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಹೇಳಿದ್ದರು. ಅವತ್ತೇ 16 Advanced Life Support Ambulance ಗಳನ್ನು ಮತ್ತು 18 Basic Life Support Ambulance ಗಳನ್ನು ಮೈಸೂರಿನಿಂದ ಕಳುಹಿಸಲಾಗಿದೆ. ಆದುದರಿಂದಲೇ ರೋಗಿಗಳನ್ನು ತಕ್ಷಣ ಮೈಸೂರಿಗೆ ಸ್ಥಳಾಂತರಿಸಲು ಸಾಧ್ಯವಾಯಿತು. ಒಂದು ಆಂಬ್ಯುಲೆನ್ಸ್ ಒಬ್ಬ ಅಥವಾ ಇಬ್ಬರು ರೋಗಿಗಳನ್ನು ಕರೆತರಬಹುದು, ಅದಕ್ಕಿಂತ ಜಾಸ್ತಿ ರೋಗಿಗಳನ್ನು ಕರೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಇಂತಹ ಕೇಸ್‌ಗಳಲ್ಲಿ critical condition ಇರುತ್ತದೆ; ಹಾಗಾಗಿ ಒಬ್ಬೊಬ್ಬರನ್ನೇ ಕರೆತರಲಾಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ, 15 ದಿವಸಗಳ ಹಿಂದೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೇರಿ ಹೊಸದಾಗಿ ನಾವು permanent ಆಗಿ 20 ಆಂಬ್ಯುಲೆನ್ಸ್‌ಗಳನ್ನು ಕೊಟ್ಟಿದ್ದೇವೆ. ಆ ಆಂಬ್ಯುಲೆನ್ಸ್‌ಗಳ ವ್ಯವಸ್ಥೆಯನ್ನೂ ಸಹ ಆವತ್ತು ಬಳಸಿಕೊಳ್ಳಲಾಗಿದೆ. 2015-16ರಲ್ಲಿ 388 ಆಂಬ್ಯುಲೆನ್ಸ್‌ಗಳನ್ನು ಖರೀದಿ ಮಾಡಿದ್ದರೂ ಅವು ಬಂದಿರಲಿಲ್ಲ; ನಾನು ಬಂದಮೇಲೆ ಪ್ರಯತ್ನ ಮಾಡಿ ಆಂಬ್ಯುಲೆನ್ಸ್‌ಗಳನ್ನು ರಸ್ತೆಗೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಸುದೈವದಿಂದ ಆ ಆಂಬ್ಯುಲೆನ್ಸ್‌ಗಳೂ ಮೈಸೂರಿನಲ್ಲಿದ್ದವು. ಮಾನ್ಯ ಸಭಾಪತಿಯವರೇ, ನಿರ್ವಹಣೆಯಲ್ಲಿ ಸರ್ಕಾರ ಏನಾದರೂ ಎಡವಿದೆ ಎಂದು ಭಾವಿಸುವುದಾದರೆ, ಖಂಡಿತ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನೀವೂ ಕೂಡ ಹಿಂದೆ ಸರ್ಕಾರ ನಡೆಸಿದ್ದೀರಿ. ನಾನು 24 ಗಂಟೆಯೊಳಗೆ ಅಲ್ಲಿಗೆ ಹೋಗಬೇಕಾಗಿತ್ತು; ಆದರೆ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಆ ಸಂದರ್ಭದಲ್ಲಿ ನಾನು 900 ಕಿಲೋಮೀಟರ್ ದೂರದಲ್ಲಿರುವ ಬಿಜಾಪುರದಲ್ಲಿದ್ದೆ. 48 ಗಂಟೆಗಳ ನಂತರ ಸಚಿವರು ಆ ಸ್ಥಳಕ್ಕೆ ಹೋಗಿದ್ದಾರೆ ಎನ್ನುವ ಮಾತು ಸದನದಲ್ಲಿ ಪ್ರಸ್ತಾಪವಾಯಿತು ಎಂದು ಕೇಳಿದೆ. ಅದು ಶುದ್ಧ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಳ್ಳು. ಘಟನೆ ನಡೆದ 32 ಗಂಟೆಯೊಳಗೆ ನಾನು ಮೈಸೂರಿನಲ್ಲಿದ್ದೆ. ಅಂದರೆ ಮಾರನೆಯ ದಿನ ಮೈಸೂರಿನಲ್ಲಿದ್ದೆ. ಹಿಂದಿನ ದಿವಸ ರಾತ್ರಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ D.H.O. (District Health Officer) ಗಳು ಕೂಡಿಕೊಂಡು, ಶಕ್ತಿ ಮೀರಿ ಪ್ರಯತ್ನವನ್ನು ಮಾಡಿದ್ದಾರೆ. Over all management ಅನ್ನು ಕಮಿಷನರ್‌ರವರು, ನಾನು ಬರುವವರೆಗೆ 3 ದಿವಸಗಳ ಕಾಲ ಠಿಕಾಣಿ ಹೂಡಿ, ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಹಾಗಾಗಿ ಸರ್ಕಾರದ ಕಡೆಯಿಂದ ಯಾವುದೇ ಲೋಪವಾಗಿಲ್ಲ. ಈ ಘಟನೆಯ ನಿರ್ವಹಣೆಯಲ್ಲಿ ಎಲ್ಲರ ಸಹಕಾರ ಸಿಕ್ಕಿದೆ.

ನಿಲುವಳಿ ಸೂಚನೆಯಲ್ಲಿ ತಾವು 29 ಜನರ ಪರಿಸ್ಥಿತಿ ಗಂಭೀರವಾಗಿದೆ ಎಂದು ಹೇಳಿದ್ದೀರಿ. ಆದರೆ ನನಗೆ ವರ್ತಮಾನ ಇರುವುದರ ಪ್ರಕಾರ 9 ರಿಂದ 11 ಜನ ಮಾತ್ರ ಗಂಭೀರ ಸ್ಥಿತಿಯಲ್ಲಿದ್ದಾರೆ. ಉಳಿದವರು ಸುದೈವದಿಂದ ಪಾರಾಗಬಹುದು ಎನ್ನುವ ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇದು ನಾನು ಸದನಕ್ಕೆ ತರಬೇಕಾದ ವಿಷಯವಾಗಿತ್ತು. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ clarification ಬೇಕಿದ್ದರೆ ಕೇಳಬಹುದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಗೃಹ ಸಚಿವರೂ ಸಹಿತ, ಇದೊಂದು ಅತ್ಯಂತ ಅಮಾನವೀಯ ಘಟನೆ ಎನ್ನುವುದನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಇಡೀ ರಾಜ್ಯದ ಇತಿಹಾಸದಲ್ಲೇ ಅಥವಾ ದೇಶದ ಇತಿಹಾಸದಲ್ಲೇ, ದೇವಸ್ಥಾನಗಳಲ್ಲಿ ಪ್ರಸಾದ ಕೊಡುವ ಸಂದರ್ಭದಲ್ಲಿ ಆಗಿರುವಂತಹ ಅಮಾನವೀಯ ಘಟನೆ ಇದಾಗಿದೆ. ಇದನ್ನು ನಾವೆಲ್ಲರೂ ಖಂಡಿಸುತ್ತೇವೆ. ದೇವಸ್ಥಾನದಲ್ಲಿ ಆಗಿರುವ ಘಟನೆಗೆ ಕಾರಣರಾದವರ ಮೇಲೆ ಏನು ಕಾನೂನು ಕ್ರಮ ಕೈಗೊಳ್ಳಬೇಕೋ ಆ ಕೆಲಸ ಆದಷ್ಟು ಬೇಗ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈ ದಿಸೆಯಲ್ಲಿ ತನಿಖೆ ತೀವ್ರಗತಿಯಲ್ಲಾಗಬೇಕು ಮತ್ತು ಬಹಳ ಸ್ಪಷ್ಟತೆಯಿಂದ ತನಿಖೆ ಆಗಬೇಕು. ತನಿಖೆ ಮಾಡಲು ಅಧಿಕಾರಿಗಳನ್ನು ನೇಮಿಸುತ್ತೀರೋ ಅಥವಾ ಸಮಿತಿಯನ್ನು ರಚನೆ ಮಾಡುತ್ತೀರೋ ಗೊತ್ತಿಲ್ಲ. ಈ ಕುರಿತು ಮಾನ್ಯ ಗೃಹ ಸಚಿವರು ಕ್ಲಿಯರ್ ಆಗಿ ಹೇಳಬೇಕು. ಮಾನ್ಯ ಆರೋಗ್ಯ ಸಚಿವರು ಬಹಳ ವಿವರವಾದ ಉತ್ತರ ಕೊಟ್ಟಿದ್ದಾರೆ. Ventilators ಬಗ್ಗೆಯೂ ಅವರು ಮಾತನಾಡಿದರು. ಇಂತಹ ಘಟನೆಗಳ ಹಿನ್ನೆಲೆಯಲ್ಲಿ ನಮ್ಮ ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಗಮನಿಸಿದಾಗ ಅಲ್ಲಿರುವ ಕೊರತೆಗಳ ಬಗ್ಗೆ ಇವತ್ತು ಸರ್ಕಾರ ಬಹಳಷ್ಟು ಬೆಳಕನ್ನು ಚೆಲ್ಲಬೇಕಾಗಿದೆ. Ventilators ಸೌಕರ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ನಾವು ಖಾಸಗಿ ಆಸ್ಪತ್ರೆಗಳ ಮೇಲೆ ಅವಲಂಬಿತವಾಗಿರುವುದನ್ನು ನೋಡಿದ್ದೇವೆ. ಸರ್ಕಾರ ಪ್ರತಿಯೊಂದು ಜಿಲ್ಲೆಗಳಲ್ಲಿ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ life support ಗೆ ventilator is the main thing which a hospital should have. ಅಂತಹ ಒಂದು ಹಿನ್ನೆಲೆಯಲ್ಲಿ ಪ್ರಮುಖವಾಗಿರುವ ಜಿಲ್ಲಾ ಆರೋಗ್ಯ ಕೇಂದ್ರಗಳು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎಂದರೆ, ಜಿಲ್ಲಾ ಆಸ್ಪತ್ರೆಗಳೆಂದು ಏನು ಕರೆಯುತ್ತೇವೆಯೋ ಅಲ್ಲಿ, what is the basic requirement as per the W.H.O. (World Health Organization) Norms? ಒಂದು ಜಿಲ್ಲಾ ಆಸ್ಪತ್ರೆಗೆ ಮುಲಭೂತವಾಗಿ ಎಷ್ಟು ventilators ಬೇಕು ಎನ್ನುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಜಿಲ್ಲಾ ಆಸ್ಪತ್ರೆಗಳ ಎಷ್ಟು ಬೆಡ್‌ಗಳಿಗೆ ventilators ವ್ಯವಸ್ಥೆಗಳಿವೆ? I.C.U. (Intensive Care Unit) ಗಳು ಎಷ್ಟಿವೆ? ಇಲ್ಲಿರುವ ಕೊರತೆಗಳೇನು ಎನ್ನುವುದರ ಬಗ್ಗೆ ಎಲ್ಲರೂ ಗಮನ ಹರಿಸಬೇಕಾಗುತ್ತದೆ. ಆದರೆ, ಇಂತಹ ದೊಡ್ಡ ಅನಾಹುತಗಳಾದಾಗ ಮಾತ್ರ ಜನಪ್ರತಿನಿಧಿಗಳು ಮತ್ತು ಸರ್ಕಾರ ಈ ಸಂಬಂಧ ಪ್ರತಿಕ್ರಿಯೆಗಳನ್ನು ನೀಡುತ್ತವೆ. ಆದರೆ ಮೂಲಭೂತವಾಗಿ, ಒಂದು ಜಿಲ್ಲಾ ಆಸ್ಪತ್ರೆಯನ್ನು ಹೊಂದಿರುವ, ವೈದ್ಯಕೀಯ ಮಹಾ ವಿದ್ಯಾಲಯಗಳನ್ನು ಹೊಂದಿರುವ ಇಂತಹ ಆಸ್ಪತ್ರೆಗಳಲ್ಲಿ ventilators ಎಷ್ಟಿರಬೇಕು, number of I.C.U.s ಎಷ್ಟಿರಬೇಕು ಎನ್ನುವುದರ ಕಡೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಈ ರೀತಿಯ casualties ಆದ ಸಂದರ್ಭದಲ್ಲಿ, ಖಾಸಗಿ ಆಸ್ಪತ್ರೆಗಳವರು ಮುಂದೆ ಬಂದು ಸಹಾಯ ಕೊಟ್ಟಿದ್ದಕ್ಕೆ ನಾನು ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, as a Government, ಪ್ರತಿಯೊಂದು ಜಿಲ್ಲೆಗಳಲ್ಲಿ ಏನು ವೈದ್ಯಕೀಯ ಮಹಾವಿದ್ಯಾಲಯಗಳನ್ನು ಪ್ರಾರಂಭ ಮಾಡಿದ್ದಾರೋ, that is the best support for the Government. ವೈದ್ಯಕೀಯ ಮಹಾವಿದ್ಯಾಲಯಗಳು ಇರುವುದರಿಂದ supporting staff ಸಿಗುತ್ತದೆ. ಆದರೆ ಬೆಡ್‌ಗಳು ಮತ್ತು ಅವುಗಳಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳು ಇಲ್ಲದೇ ಇದ್ದಾಗ ನಾವು ಯಾವುದೇ ಸಹಾಯವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ.; Casualties ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವೇನು 'golden hour' ಎಂದು ಕರೆಯುತ್ತೇವೆಯೋ, ಎರಡು–ಮೂರು ಗಂಟೆಯ ಒಳಗೆ casualty ಆದಂತಹ ರೋಗಿಗಳಿಗೆ ventilator support ಅಥವಾ ಅವರಿಗೆ ಬೇಕಾಗಿರುವ ವೈದ್ಯಕೀಯ ಸೌಲಭ್ಯಗಳನ್ನು ಕೊಡುವಲ್ಲಿ ಸರ್ಕಾರ ಮುಂದಾಗಬೇಕಾಗುತ್ತದೆ.

ಮಾನ್ಯ ಉಪಮುಖ್ಯಮಂತ್ರಿಗಳು ವೈದ್ಯಕೀಯ ಮಹಾವಿದ್ಯಾಲಯದ ಹಿನ್ನೆಲೆಯಿಂದ ಬಂದಿದ್ದಾರೆ. ಇವತ್ತು ಇಷ್ಟು ಜಿಲ್ಲಾ ಆಸ್ಪತ್ರೆಗಳ ದೊಡ್ಡ ಜಾಲವನ್ನು ನಮ್ಮ ರಾಜ್ಯ ಹೊಂದಿದೆ. ಈ ಒಟ್ಟು ವ್ಯವಸ್ಥೆಯಲ್ಲಿ ಯಾವ ಕೊರತೆಗಳಿವೆಯೋ ಅದನ್ನು ನೀಗಿಸುವಲ್ಲಿ, it is an alarm for the Government. ಸರ್ಕಾರಕ್ಕೆ ಇದೊಂದು ಎಚ್ಚರಿಕೆಯ ಗಂಟೆಯಾಗಿದೆ. ಮುಂಬೈಯಲ್ಲಿ ಆದಂತಹ ಘಟನೆಯನ್ನು ನಾವು ಜ್ಞಾಪಿಸಿಕೊಳ್ಳಬಹುದು. ಅಲ್ಲಿ Railway platform ಕುಸಿದು ಒಮ್ಮೆಲೆ ಎಷ್ಟು ಜನ casualty ಗೆ ಒಳಗಾದರು ಎನ್ನುವುದು ಗೊತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಆಸ್ಪತ್ರೆಗಳ ಬಗ್ಗೆ, ಮೂಲಭೂತ ಸೌಕರ್ಯಗಳ ಬಗ್ಗೆ ಮಾತನಾಡುತ್ತೇವೆ. But, it is

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

an alaram for the Government to take immediate action towards giving more importance in doing needful. ಅವರಿಗೆ ಬೇಕಾಗುವಂತಹ ಬೆಡ್‌ಗಳಿಗೆ I.C.U. ಮತ್ತು ventilator ಗಳನ್ನು ಕೊಡುವ ಕೆಲಸ ಆಸ್ಪತ್ರೆಗಳಲ್ಲಿ ಆಗಬೇಕು ಎನ್ನುವ ಒತ್ತಾಯವನ್ನು ಮಾನ್ಯ ಆರೋಗ್ಯ ಸಚಿವರಿಗೆ ಮಾಡಬಯಸುತ್ತೇನೆ.

(504)17-12-2018 ಡಿಎಸ್-ಕೆಎಸ್ 6.40

**ಡಾ:ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾರ್ಟಳ್ಳಿ ಗ್ರಾಮದ ಶ್ರೀಮತಿ ರಾಜಮ್ಮ ಎನ್ನುವವರು ದೂರನ್ನು ಕೊಟ್ಟಿದ್ದಾರೆ. ಅದನ್ನು ರಿಜಿಸ್ಟರ್ ಮಾಡಿಕೊಂಡು 7 ಜನರನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಶ್ರೀ ಚಿನ್ನಪ್ಪ, ಟ್ರಸ್ಟ್‌ನ ಸದಸ್ಯರು, ಶ್ರೀ ಮಹದೇವಸ್ವಾಮಿ, ಟ್ರಸ್ಟ್ ಮ್ಯಾನೇಜರ್, ಶ್ರೀ ವೀರಣ್ಣ ಹಾಗೂ ಶ್ರೀ ಲೋಕೇಶ್, ಅಡಿಗೆ ಭಟ್ಟರು, ಶ್ರೀ ಮಹದೇವ, ದೇವಸ್ಥಾನದ ಪೂಜಾರಿ, ಶ್ರೀ ಪುಟ್ಟಸ್ವಾಮಿ, ಅಡಿಗೆ ಭಟ್ಟರು, ಇವರನ್ನೆಲ್ಲಾ custody ಗೆ ತೆಗೆದುಕೊಂಡು ಈಗಾಗಲೇ ತನಿಖೆ ಬಹಳ ತೀವ್ರಗತಿಯಲ್ಲಿ ನಡೆಯುತ್ತಿದೆ. ಅಲ್ಲಿನ ಐ.ಜಿ. ಶರತ್‌ಚಂದ್ರರವರ ನೇತೃತ್ವದಲ್ಲಿ ಇದೆಲ್ಲಾ ನಡೆಯುತ್ತಿದೆ. ಕೆಲವರು ಊರು ಬಿಟ್ಟು ಓಡಿ ಹೋಗಿದ್ದಾರೆ. ಅವರನ್ನು ಹುಡುಕುತ್ತಿದ್ದೇವೆ. ಅವರು ಸಿಕ್ಕಿದ ಮೇಲೆ ಇನ್ನು ಹೆಚ್ಚಿನ ಮಾಹಿತಿ ಸಿಗುತ್ತದೆ. ನಮ್ಮ ಅಧಿಕಾರಿಗಳು ಇನ್ನು ಎರಡು-ಮೂರು ದಿನಗಳಲ್ಲಿ ಅವರನ್ನು ನಾವು ಎಲ್ಲಿ ಇದ್ದರೂ ಹಿಡಿದುಕೊಂಡು ಬರುತ್ತೇವೆ ಮತ್ತು ಇದನ್ನು track ಮಾಡುತ್ತೇವೆಂದು ನಮಗೆ ಮಾಹಿತಿಗಳನ್ನು ಕೊಡುತ್ತಿದ್ದಾರೆ. ಅದಾದ ಮೇಲೆ ಮುಂದೆ ಯಾವ ರೀತಿ ಕಾನೂನು ಪ್ರಕಾರ ಅವರಿಗೆ ಶಿಕ್ಷೆ ಆಗಬೇಕು, ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಖಂಡಿತವಾಗಿಯೂ ಯಾವುದೇ ಮುಲಾಜಿಗೆ ಒಳಗಾಗದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಶಿವಾನಂದ ಪಾಟೀಲ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೆ, ಈಗ 14 ಮೆಡಿಕಲ್ ಕಾಲೇಜುಗಳಿವೆ, IPHS (Indian Public Health Standards) ಪ್ರಕಾರ ಯಾವುದೇ ಒಂದು ಮೆಡಿಕಲ್ ಕಾಲೇಜಿನಲ್ಲಿ ಗರಿಷ್ಠ 10 ventilators ಇರುತ್ತವೆ. ಅಲ್ಲಿ ದುರ್ದೈವದಿಂದ ತಾಲ್ಲೂಕು ಕೇಂದ್ರವಾಗಿರುವುದರಿಂದ CHCs (Community Health Centres) ನಲ್ಲಿ 2 ventilators ಗಳಿವೆ. ಹೀಗಾಗಿ mass casualty ಇರುವುದರಿಂದ ಎರಡರ ಮೇಲೆ rush ಮಾಡುವುದರಲ್ಲಿ ಅರ್ಥ ಇಲ್ಲ ಎಂದು ತಿಳಿದುಕೊಂಡು ಮೈಸೂರಿಗೆ shift ಮಾಡಿರುವುದೇ ಸೂಕ್ತ ನಿರ್ಣಯವಾಗಿದೆ. 2017 ಕ್ಕಿಂತ ಮೊದಲು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಿ ಆಸ್ಪತ್ರೆಯಲ್ಲಿ Ventilators, Dialysis unit, MRI (Magnetic Resonance Imaging) and CT (Computed Tomography) Scan ಇರಲಿಲ್ಲ. ಸುದೈವದಿಂದ ಇವೆಲ್ಲಾ ಮಾನ್ಯ ರಮೇಶ್ ಕುಮಾರ್‌ರವರು ಆರೋಗ್ಯ ಸಚಿವರಾಗಿದ್ದಾಗ ಮಾಡಿರುವಂಥದ್ದು. ಈಗಾಗಲೇ 700 ಕ್ಕಿಂತಲೂ ಹೆಚ್ಚು ventilator ಗಳನ್ನು ಸರ್ಕಾರಿ ಆಸ್ಪತ್ರೆ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಅಳವಡಿಸಿಕೊಂಡಿದ್ದೇವೆ. ಇನ್ನು ಕಾಲಕ್ರಮೇಣ ಎಲ್ಲೆಲ್ಲಿ ಹೊಸ ಮೆಡಿಕಲ್ ಕಾಲೇಜುಗಳು ಆಗುತ್ತದೆ ಅಲ್ಲಿಯೂ ಕೂಡ ventilators ಬರುತ್ತವೆ. IPHS ಪ್ರಕಾರ ಜಿಲ್ಲಾ ಆಸ್ಪತ್ರೆಗಳಲ್ಲೂ ಕನಿಷ್ಠ 4 ventilators ಇರಬೇಕು. ಅದನ್ನು ಇನ್ನು ಹೆಚ್ಚು ಮಾಡುವಂತಹ ಚಿಂತನೆಯನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಚಾಮರಾಜನಗರ ಮತ್ತು ಮೈಸೂರು ಈ ಎರಡು ಜಿಲ್ಲೆಗಳಿಂದ ನಾನು ಮತ್ತು ಮಾನ್ಯ ಸಂದೇಶ್ ನಾಗರಾಜ್‌ರವರು ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿ ಬಂದಿದ್ದೇವೆ. ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ಮರಿತಿಬ್ಬೇಗೌಡರು ಆ ಭಾಗದಿಂದ ವಿಧಾನ ಪರಿಷತ್ತಿನ ಸದಸ್ಯರುಗಳಾಗಿ ಕೆಲಸ ಮಾಡುತ್ತಿದ್ದೇವೆ. ನಾನು ಆ ದಿನ ರಾತ್ರಿ 11 ಗಂಟೆಗೆ ಹೋದವನು 1 ಗಂಟೆಯವರೆಗೆ ಕೆ.ಆರ್.ಆಸ್ಪತ್ರೆಯಲ್ಲೇ ಇದ್ದೆವು. ಅಷ್ಟೊತ್ತಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ಹೋಗಿದ್ದರು. ಸಚಿವರಾದ ಮಾನ್ಯ ಪುಟ್ಟರಾಜು ರವರನ್ನು 24 ಗಂಟೆ ಅಲ್ಲೇ ಇರುವ ಹಾಗೆ ವ್ಯವಸ್ಥೆ ಮಾಡಿದ್ದರು. ನಾವು ಕೂಡ ವೈದ್ಯರುಗಳು ಹತ್ತಿರ ಮಾತನಾಡಿದೆವು. ಬೆಳಿಗ್ಗೆ ಚಾಮರಾಜನಗರದ ಅಧಿಕಾರಿಗಳು, ಮೈಸೂರು ಜಿಲ್ಲಾಧಿಕಾರಿಗಳ ಹತ್ತಿರ ನಾವೆಲ್ಲಾ ಚರ್ಚೆ ಮಾಡಿದೆವು. ನಮಗೆ ಗೊತ್ತಿರುವ ಹಾಗೆ ಈ ಘಟನೆ ನಡೆದಿರುವುದಕ್ಕೆ ಮೂಲಭೂತವಾಗಿ ಕಾರಣವೇನೆಂದರೆ, ಇದರಲ್ಲಿ ಎರಡು ಗುಂಪುಗಳಿವೆ. ಇದರಲ್ಲಿ ಕೆಲವರು ಬೇರೆ ರಾಜ್ಯದವರು ಇದ್ದಾರೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿನ ದೇವಸ್ಥಾನದಲ್ಲಿ ಅಸ್ತಿತ್ವವನ್ನು ಸ್ಥಾಪನೆ ಮಾಡಬೇಕು ಅಥವಾ ಅದರಲ್ಲಿ ಬರತಕ್ಕಂಥ ಆದಾಯವನ್ನು ಹಂಚಿಕೆ ಮಾಡಿಕೊಳ್ಳಬೇಕೆನ್ನುವ ವಿಚಾರದಲ್ಲಿ ವಿವಾದ ಏರ್ಪಟ್ಟಿರುವುದನ್ನು ಮಾಧ್ಯಮಗಳಲ್ಲೂ ಹೇಳಿದ್ದಾರೆ. ಮೈಸೂರಿನಲ್ಲಿ ventilators ಎಲ್ಲಾ ಇವೆ ಎಂದು ಹೇಳಿದರು. ನಾವು ಮೈಸೂರು MUDA (Mysore Urban Development Authority) ಯಿಂದ ಆಸ್ಪತ್ರೆಗಳಲ್ಲಿ ಸಾರ್ವಜನಿಕವಾಗಿ ಏನೇ ಕೇಳಿದರೂ ಕೂಡ ಎಲ್ಲವನ್ನು ಕೊಡಿಸಿದ್ದೇವೆ. ಆದರೆ, ಅಲ್ಲಿನ ವೈದ್ಯರುಗಳು ನಮಗೆ ಹೇಳಿರುವುದೇನೆಂದರೆ, ಜನರಿಗಾಗಿ ಕೆಲಸ ಮಾಡುವಂತಹವರು ಬೇಕು, ವ್ಯಕ್ತಿಗತವಾಗಿ ನಮಗೆ ಕೆಲಸ ಮಾಡುವವರು ಬೇಕಾಗುತ್ತದೆ, ಅದು ನಮಗೆ ಕೊರತೆಯಾಗಿದೆ, ವೈದ್ಯರು ಸ್ನಾನವನ್ನೂ ಮಾಡದೆ 24 ಗಂಟೆ ಕೆಲಸ ಮಾಡಿದ್ದಾರೆ. ಇವತ್ತು ನಾವು ಮೈಸೂರಿನ ವೈದ್ಯರುಗಳನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಅವರು ಅಷ್ಟು ಜವಾಬ್ದಾರಿಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂಬುದೇ ಯಾರಿಗೂ ಗೊತ್ತಿಲ್ಲ. ನಮಗೆ ಸಾಯಂಕಾಲ ಯಾವುದೋ ದೇವಸ್ಥಾನದಲ್ಲಿ ಪ್ರಸಾದ ವ್ಯತ್ಯಾಸ ಆಗಿದೆ ಎಂಬುದು ಗೊತ್ತಾಯಿತು. ಆದರೆ, ಇತ್ತೀಚಿನ ವರದಿಗಳನ್ನು ನೋಡಿದರೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಿನಲ್ಲಿ ವಿಷ ಬೆರಸಿ ಪ್ರಸಾದಕ್ಕೆ ಹಾಕಿದ್ದಾರೆ ಎನ್ನುವ ವಿಚಾರ ಇದೆ. ಅದರ ನಾಳೆ ಮಾನ್ಯ ಸಿದ್ದರಾಮಯ್ಯನವರು ಬಂದರು. ಅದಾದ ನಂತರ ನಾನು ಹನೂರಿಗೆ ಹೋಗಿ ಬಂದೆ. ಈ ವಿಚಾರಗಳೆಲ್ಲಾ ಗೊತ್ತಿರುವಂಥದ್ದು. ಅಲ್ಲಿನ ರೋಗಿಗಳನ್ನು ವೈದ್ಯರುಗಳು, ಸರ್ಕಾರ ನೋಡಿಕೊಳ್ಳುತ್ತಿದೆ. ಆದರೆ ರೋಗಿಗಳನ್ನು ನೋಡಿಕೊಳ್ಳುವವರ ಹತ್ತಿರ ಒಂದು ರೂಪಾಯಿಯೂ ಇಲ್ಲ. ನಾನು ಮೈಸೂರಿನ ಜಿಲ್ಲಾಧಿಕಾರಿಗಳಿಗೆ ಹೇಳಿದೆ. ಅವರಿಗೆ ಏನಾದರೂ ವ್ಯವಸ್ಥೆಯನ್ನು ಮಾಡಿ. ಮೊದಲು ಅವರ ಕೈಗೆ ಎರಡು ಸಾವಿರ-ಮೂರು ಸಾವಿರ ರೂಪಾಯಿಗಳನ್ನು ಕೊಡಿ ಅವರಿಗೆ ಸಹಾಯವಾಗುತ್ತದೆಂದು ನಾನು ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದೇನೆ. ಇವತ್ತು ಕೂಡ ಸಾರ್ವಜನಿಕರು ಅದನ್ನೇ ಮನವಿ ಮಾಡಿದ್ದಾರೆ. ಅಲ್ಲಿ ನೋಡಿಕೊಳ್ಳುತ್ತಿರುವವರಿಗೆ ಯಾವುದೇ ರೀತಿಯ ಸವಲತ್ತುಗಳಿಲ್ಲ, ಈಗ ಚಳಿಗಾಲ ಬೇರೆ ಇದೆ, ಅವರಿಗೆ ಹೊದ್ದುಕೊಳ್ಳುವುದಕ್ಕೆ bed sheets ಇಲ್ಲ. ಆದ್ದರಿಂದ ನೋಡಿಕೊಳ್ಳುವವರಿಗೂ ವ್ಯವಸ್ಥೆ ಮಾಡಿ ಎಂದು ಸಾರ್ವಜನಿಕರೂ ಕೂಡ YouTube ನಲ್ಲಿ ಕೇಳಿದ್ದಾರೆ. ಈಗ ಎಲ್ಲರೂ ಹೇಳುತ್ತಿದ್ದಾರೆ, ಎರಡು ಗುಂಪು ಯಾರು ಇದ್ದಾರೆ ಆ ಎರಡು ಗುಂಪುಗಳನ್ನು ಬಂಧಿಸತಕ್ಕಂಥದ್ದಾಗಬೇಕು. ಇವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಯಾವ ದೇವಸ್ಥಾನದಲ್ಲೂ ಪ್ರಸಾದ ಹಂಚುವ ಹಾಗಿಲ್ಲ ಎಂದು ಇವತ್ತು ಬೆಳಿಗ್ಗೆ ಸರ್ಕಾರವೇ ಆದೇಶವನ್ನು ಮಾಡಿದೆ. ಇದು ನಮ್ಮ ಮೇಲೆ ನಾವೇ ವಿಶ್ವಾಸವನ್ನು ಕಳೆದುಕೊಳ್ಳುವಂತಹ ವಿಚಾರವಾಗಿರುವುದರಿಂದ ಅಂತಹ ಅವಶ್ಯಕತೆ ಇಲ್ಲ. ಇದೊಂದು ಘಟನೆ ನಡೆದಿದೆ. ಆದರೆ ಯಾವುದೋ ಒಂದು ವೈಯಕ್ತಿಕ ಘಟನೆಗೆ ಇಡೀ ರಾಜ್ಯದ ಜನರನ್ನೆಲ್ಲಾ ತಪ್ಪಾಗಿ ನೋಡುವುದು ಕಷ್ಟಕರವಾದ ವಿಚಾರ ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೆ, ಅಲ್ಲಿ ಯಾರ್‍ಯಾರೂ ಸತ್ತಿದ್ದಾರೆ ಅಥವಾ ಸುಮಾರು ನೂರು ಜನರು ಯಾರ್‍ಯಾರು ಇದ್ದಾರೆ ಅವರೆಲ್ಲಾ ಕಡು ಬಡವರು. ಅದಲ್ಲದೆ ನಮ್ಮ ಚಾಮರಾಜನಗರ ಗಡಿ ಭಾಗದಲ್ಲಿರುವಂತಹ ಊರು. ಗಡಿ ಭಾಗದಲ್ಲಿ ಅವರಿಗೆ ಯಾವುದೇ ಸವಲತ್ತುಗಳಿಲ್ಲದಿರುವುದು ಒಂದು ಕಡೆಯಾದರೆ ಅಲ್ಲಿ ಅವಿದ್ಯಾವಂತರು ಇದ್ದಾರೆ, ಮೂಢನಂಬಿಕೆಗಳಿವೆ, ಇವೆಲ್ಲದರ ಮಧ್ಯದಲ್ಲಿ ಕೆಲವರು ದೇವರ ಪ್ರಸಾದ ಎಂದು ಹೋದರೆ, ಬಹಳಷ್ಟು ಜನರು ಊಟಕೋಸ್ಕರವೇ ಹೋಗಿದ್ದಾರೆ. ಸಾಕಷ್ಟು ಜನ ಹೊಟ್ಟೆ ಹಸಿದು ಪ್ರಸಾದಕ್ಕೋಸ್ಕರ ಅಲ್ಲಿಗೆ ಹೋಗಿದ್ದಾರೆ. ಹಾಗಾಗಿ ಅವರಿಗೆ ನೇರವಾಗಿ ವಿಷ ಹೋಗಿರುವುದರಿಂದ ನಾವು ಬಹಳ ಜನರನ್ನು ಉಳಿಸುವುದಕ್ಕಾಗಿಲ್ಲ ಎನ್ನುವ ಮಾತನ್ನು ಮೈಸೂರಿನಲ್ಲಿ ವೈದ್ಯರುಗಳು ಹೇಳಿದರು. ಹಾಗಾಗಿ ದಯಮಾಡಿ ನೂರು ಜನರಿದ್ದಾರೋ ಅಥವಾ ಎಂಭತ್ತು ಜನರಿದ್ದಾರೋ ಅವರ ಕುಟುಂಬಕ್ಕೆ ಕೂಡಲೇ ಸರ್ಕಾರದವರು ಸವಲತ್ತುಗಳನ್ನು ಒದಗಿಸಬೇಕು ಮತ್ತು ಅವರ ಸಹಾಯಕ್ಕೆ ಬರಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಅವರಿಗೆ ಸರ್ಕಾರ ಐದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಚೆಕ್ ಪಾಸ್ ಆಗಬೇಕು, ಸರ್ಕಾರ ಕೊಟ್ಟ ತಕ್ಷಣ ಇವತ್ತೇ ಅವರ ಕೈಗೆ ಹಣ ಬರುವುದಿಲ್ಲ, ಇಂಥದ್ದೆಲ್ಲಾ ಸರ್ಕಾರ ಗಮನಹರಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಸರ್ಕಾರ ಕೂಡಲೇ ಗಮನ ಕೊಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಅಲ್ಲಿಗೆ ಧಾವಿಸಿದರು, ಆಸ್ಪತ್ರೆಗೆ ಭೇಟಿ ಕೊಟ್ಟರು. ಇದರ ಬಗ್ಗೆ ಟೀಕೆ ಇಲ್ಲ. ನಾನು ಏನು ವಿನಂತಿ ಮಾಡುತ್ತೇನೆಂದರೆ, ಮಾನ್ಯ ಸಚಿವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ. ಮೈಸೂರು ಹತ್ತಿರ ಇತ್ತು, ಬಹಳಷ್ಟು ಜನರಿಗೆ ಅನುಕೂಲವಾಯಿತು. ಒಂದು ವೇಳೆ ಅಕಸ್ಮಾತ್ ರಾಯಚೂರಿನಲ್ಲಿ ಈ ರೀತಿಯ ಘಟನೆ ಸಂಭವಿಸಿದ್ದರೆ ಬಹಳ ಭಯಾನಕ ಪರಿಸ್ಥಿತಿ ಎದುರಾಗುತ್ತಿತ್ತು. ನಾನು ತಮ್ಮ ಮೂಲಕ ಎರಡು ವಿಚಾರಗಳನ್ನು ಹೇಳಬಯಸುತ್ತಿದ್ದೇನೆ. ಬಡವರಿಗೆ ತಕ್ಷಣ ಹೋಗಬೇಕೆನಿಸುವುದು ಸರ್ಕಾರಿ ಆಸ್ಪತ್ರೆ ಎಲ್ಲಿದೆ ಅಲ್ಲಿಗೆ ಹೋಗುತ್ತಾರೆ. ಏಕೆಂದರೆ ಅಲ್ಲಿ ಹಣವನ್ನು ತೆಗೆದುಕೊಳ್ಳುವುದಿಲ್ಲ, ಉಚಿತವಾಗಿ ಚಿಕಿತ್ಸೆ ನೀಡುತ್ತಾರೆಂದು ಬಡವರು ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಯ ಪರಿಸ್ಥಿತಿ ಹೇಗಿದೆ? ಕೆಲವು ಜಿಲ್ಲೆಗಳಲ್ಲಿ ಪರಿಸ್ಥಿತಿ ಚೆನ್ನಾಗಿರಬಹುದು, ಆದರೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ನಾವೆಲ್ಲರೂ ಕೂಡ ಆತ್ಮಸ್ತುತಿ ಮಾಡಿಕೊಳ್ಳಬೇಕು, ಆತ್ಮವಂಚನೆ ಮಾಡಿಕೊಳ್ಳುವುದು ಬೇಡ. ಬಹಳಷ್ಟು ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳು ಕೂಡ ಅತ್ಯಂತ ನರಕ ಪರಿಸ್ಥಿತಿಯಲ್ಲಿವೆ. ಬಹಳಷ್ಟು ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ, ಅಲ್ಲಿ ಮೆಡಿಕಲ್ ಕಾಲೇಜು ಇದ್ದರೆ, it is well and good. ಮೆಡಿಕಲ್ ಕಾಲೇಜು ಇಲ್ಲದಿದ್ದರೆ ಕೊಪ್ಪಳ, ಯಾದಗಿರಿ, ರಾಯಚೂರು, ಇಂತಹ ಜಿಲ್ಲಾ ಕೇಂದ್ರಗಳಲ್ಲಿ ಏನಾದರೂ ಈ ತರಹ ದೊಡ್ಡ ಘಟನೆಗಳು ಸಂಭವಿಸಿದರೆ ನೂರಾರು ಜನರು ಅಪಾಯದಲ್ಲಿ ಸಿಲುಕಿದರೆ ಬಹಳ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ವಿರೋಧ ಪಕ್ಷ, ಆಡಳಿತ ಪಕ್ಷ ಎಂದು ನಾನು ಹೇಳುತ್ತಿಲ್ಲ. ಈ ಘಟನೆ ನಡೆದಿರುವುದು ಎಲ್ಲರ ಮನಸ್ಸಿಗೂ ಬೇಸರವಾಗುತ್ತದೆ. ಆದರೆ ನಾನು ಮುಲಾಜಿಲ್ಲದೆ ಹೇಳುತ್ತಿದ್ದೇನೆ, ಬಹಳಷ್ಟು ವರ್ಷಗಳಿಂದ ಯಾವುದೇ ಸಚಿವರು ಸರ್ಕಾರಿ ಆಸ್ಪತ್ರೆಗಳ ಕಡೆ ಗಮನವನ್ನು ಕೊಟ್ಟಿಲ್ಲ. ಇವತ್ತು ಕೂಡ ಸರ್ಕಾರಿ ಆಸ್ಪತ್ರೆಗಳು ನರಕ ಪರಿಸ್ಥಿತಿಯಲ್ಲಿವೆ. ಇವತ್ತು ಸರ್ಕಾರಿ ಆಸ್ಪತ್ರೆಗಳು ಹಾಗೆ ಇವೆ, ಸರ್ಕಾರಿ ಶಾಲಾ–ಕಾಲೇಜುಗಳು ಹಾಗೆ ಇವೆ ಏಕೆ? ಯಾರು ಗಮನ ಕೊಡಬೇಕಾಗಿತ್ತೋ ಅವರೆಲ್ಲಾ ಖಾಸಗಿ ಆಸ್ಪತ್ರೆಗಳಿಗೆ, ಖಾಸಗಿ ಶಾಲಾ–ಕಾಲೇಜುಗಳಿಗೆ ಹೋಗುತ್ತಾರೆ. ಧ್ವನಿ ಇಲ್ಲದಂಥವರ ಧ್ವನಿಯನ್ನು ಯಾರು ಕೇಳುತ್ತಾರೆ? ಅವರೆಲ್ಲರ ಪರಿಸ್ಥಿತಿ ಅರಣ್ಯರೋಧನವಾಗುತ್ತದೆ.

(505)17–12–2018(6–50)ಬಿಕೆಪಿ–ಕೆಎಸ್

**ಶ್ರೀ ಎನ್.ರವಿಕುಮಾರ್(ಮುಂದು. .)**

ಹೀಗಾಗಿ, ಮೊದಲು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವವರು ಯಾರ್ಯಾರು ಎಂದರೆ ಕಾರ್ಮಿಕರು, ದಲಿತರು, ಬಡವರು, ನಿರಕ್ಷರಕುಕ್ಷಿಗಳು ಯಾವ ಮೆಡಿಕಲ್ ಕಾಲೇಜಿಗೆ ಹೋದರೆ ಏನಾಗುತ್ತದೆ ಎನ್ನುವುದು ಅರ್ಥವಾಗದೇ ಇರತಕ್ಕಂತಹವರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಹೀಗಾಗಿ, ಇವತ್ತಿನ ಸಮಾಜದ ಪರಿಸ್ಥಿತಿಗೆ ವಿರೋಧ ಪಕ್ಷದವರಾದ ನಾವು ಮತ್ತು ಆಡಳಿತ ಪಕ್ಷದವರು ಹೊಣೆಗಾರರಾಗಿರುತ್ತೇವೆ. ಈ ಸಂದರ್ಭದಲ್ಲಿ ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಾಗೂ ಸಚಿವರು ಇದ್ದು, ಈ ವಿಚಾರವನ್ನು ಗಮನಿಸಬೇಕು. ಕೂಡಲೇ ಸರ್ಕಾರಿ ಕಾಲೇಜುಗಳು, ಸರ್ಕಾರಿ ಹಾಸ್ಟೆಲ್‌ಗಳು, ಸರ್ಕಾರಿ ಆಸ್ಪತ್ರೆಗಳ ಸುಧಾರಣೆ ಕಡೆ ಗಮನ ಕೊಡುವುದು ಒಳ್ಳೆಯದು. ನನಗೆ ತಿಳಿದ ಮಾಹಿತಿ ಪ್ರಕಾರ ಸಾವಿರಾರು ವೈದ್ಯರುಗಳು ಖಾಲಿ ಇದ್ದಾರೆ. ತಾಲ್ಲೂಕು ಕೇಂದ್ರಗಳ ಆಸ್ಪತ್ರೆಗಳಿಂದ ಹಿಡಿದು PHCs (Primary Health Centres) ಗಳಿಂದ ಹಿಡಿದು ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳವರೆಗೆ ಸಾವಿರಾರು ವೈದ್ಯರುಗಳ ಹುದ್ದೆಗಳು ಖಾಲಿಯಿವೆ. ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಬೇಕು. ಈ ಕೇಂದ್ರಗಳಿಗೆ ಬಹಳಷ್ಟು ವೈದ್ಯರುಗಳು ಅದರಲ್ಲೂ ಒಳ್ಳೆಯ ವೈದ್ಯರುಗಳು ಬರುವುದಿಲ್ಲವೆನ್ನುವುದು ನನಗೂ ಗೊತ್ತಿದೆ. ನಾನು ಈ ಬಗ್ಗೆ ಸರ್ವೆ ಮಾಡಿ ಒಂದು ಪುಸ್ತಕವನ್ನೂ ಸಹ ಬಿಡುಗಡೆ ಮಾಡಿದ್ದೇನೆ. ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂದು ಹೇಳಿ 7–8 ತಿಂಗಳ ಹಿಂದೆ ಒಂದು ಪುಸ್ತಕವನ್ನು ನಾನು ಬಿಡುಗಡೆ ಮಾಡಿದ್ದೇನೆ. ಹೀಗಾಗಿ, ಇವೆಲ್ಲವುಗಳ ಕಡೆ ಮಾನ್ಯ ಸಚಿವರು, ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಗಮನ ಕೊಡುವುದು ಒಳ್ಳೆಯದು. ಈ ರೀತಿ ಮಾಡುವುದರ ಮೂಲಕ ಬಡವರನ್ನು ಬದುಕಿಸಬೇಕಾಗಿದೆ. ಆಸ್ಪತ್ರೆ ಸೌಲಭ್ಯ ಸಮಯಕ್ಕೆ ಸರಿಯಾಗಿ ಸಿಗದೇ ಸಾಯುತ್ತಾರೆಂದು ಹೇಳಿದರೆ ಆ ಪಾಪ ನಮಗೆ ತಟ್ಟಬೇಕು, ಅದಕ್ಕೆ ನಾವುಗಳೇ ಹೊಣೆಗಾರರು, ಸರ್ಕಾರವೇ ಹೊಣೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಇದೊಂದು ಅತ್ಯಂತ ನೋವಿನ ದುರ್ಘಟನೆಯಾಗಿದೆ. ಸರ್ಕಾರ ಯಾವ ರೀತಿಯಲ್ಲಿ ಘಟನೆ ಸಂಭವಿಸಿದ ನಂತರದಲ್ಲಿ ಕೆಲಸ ಮಾಡಿದೆ ಎಂದು ವಿರೋಧ ಪಕ್ಷದವರೂ ಸಹ ಬಹಳ ತುಂಬು ಹೃದಯದ ಶ್ಲಾಘನೆಯ ಮಾತುಗಳನ್ನು ಹೇಳಿದ್ದಾರೆ. ಮೊದಲು ವಿರೋಧ ಪಕ್ಷದ ನಾಯಕರು ಪದೇ ಪದೇ ಸರ್ಕಾರ ವಿಫಲವಾಗಿದೆ ಎಂದು ಹೇಳುತ್ತಿದ್ದರು. ಆದರೆ, ಅದನ್ನು ಮತ್ತೆ ಸರಿ ಮಾಡಿದ್ದು ಬಹಳ ಸಂತೋಷವಾಯಿತು. ನಾನು ಈ ವಿಚಾರವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಘಟನೆ ನಡೆದ ದಿನ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮೈಸೂರಿನ ಆಸ್ಪತ್ರೆಗೆ ಹೋಗಿದ್ದೆ. ನಮ್ಮ ಜೊತೆಯಲ್ಲಿ ಸಚಿವರಾದ ಶ್ರೀ ಸಾ.ರಾ. ಮಹೇಶ್‌ರವರು ಇದ್ದರು. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಚೆನ್ನೈನಲ್ಲಿದ್ದಾಗ ತಕ್ಷಣ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಸಿ.ಎಸ್.ಪುಟ್ಟರಾಜು ರವರಿಗೆ ದೂರವಾಣಿ ಮಾಡಿ, ಎಲ್ಲಿದ್ದೀರಿ ಎಂದು ಕೇಳಿ, ತಕ್ಷಣ ತಾವು ಮೈಸೂರಿಗೆ ಹೋಗಬೇಕೆಂದು ಹೇಳಿದರು. 15–20 ನಿಮಿಷಗಳ ಒಳಗೆ ಮೈಸೂರಿನ ಆಸ್ಪತ್ರೆಗೆ ಸಚಿವರಾದ ಶ್ರೀ ಪುಟ್ಟರಾಜು ರವರು ಹೋಗಿದ್ದಾರೆ. ಅದಕ್ಕೆ ಮುಂಚೆ ಅಧಿಕಾರಿ ವರ್ಗದವರು ಕೂಡ ಬಹಳ ಅಚ್ಚುಕಟ್ಟಾಗಿ, ಜಾಗ್ರತೆಯಿಂದ ಕೆಲಸ ಮಾಡುತ್ತಿದ್ದನ್ನು ನಾನು ಅಲ್ಲಿಗೆ ಹೋದಾಗ ಖುದ್ದಾಗಿ ನೋಡಿದ್ದೇವೆ. ಇದಕ್ಕೆ ಕಾರಣ, ಬೆಳಿಗ್ಗೆ ಎದ್ದು ಪ್ರಸಾದವನ್ನು ಸ್ವೀಕರಿಸಿದಾಗ ಈ ಘಟನೆ ಸಂಭವಿಸಿದೆ. ಮಧ್ಯಾಹ್ನ 1–00 ಗಂಟೆಗೆ ಜಿಲ್ಲಾಡಳಿತಕ್ಕೆ ವಿಷಯ ಮುಟ್ಟಿದೆ. ಅಂದರೆ 2–3 ಗಂಟೆಗಳ ಕಾಲ ವಿಳಂಬವಾಗಿ ವಿಷಯ ಮುಟ್ಟಿದೆ. ಕಾರಣ, ಊಟ ಮಾಡಿದ ಮೇಲೆ, ಪ್ರಸಾದ ತೆಗೆದುಕೊಂಡ ಮೇಲೆ ಅದು ತಕ್ಷಣ react ಆಗಿರುವುದಿಲ್ಲ. ಅದು 2–3 ಗಂಟೆಗಳ ಕಾಲ ಆಗಿದೆ. ಆ ವಿಷಯ ಮಧ್ಯಾಹ್ನ 1–00 ಗಂಟೆಗೆ ಜಿಲ್ಲಾಡಳಿತಕ್ಕೆ ಮುಟ್ಟಿದ ಮೇಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲರೂ active ಆಗಿದ್ದಾರೆ. ಅವರುಗಳು active ಆಗಿ ಕೆಲಸ ಮಾಡಿದ ಪರಿಣಾಮವಾಗಿ ಇನ್ನು ಹೆಚ್ಚು ಸಾವು–ನೋವು ಸಂಭವಿಸುವುದನ್ನು ತಡೆಹಿಡಿದ್ದಾರೆಂದು ನಾವು ಅಲ್ಲಿಗೆ ಹೋದಾಗ ಗೊತ್ತಾಯಿತು.

ನಮ್ಮ ವಿರೋಧ ಪಕ್ಷದ ನಾಯಕರು, ಮಾತನಾಡುವಾಗ ventilator ಕೊರತೆಯಿಂದ ಈ ರೀತಿ ಆಗಿದೆ ಎಂದು ಹೇಳಿದರು. ಎಲ್ಲರಿಗೂ ventilator ಬೇಕಾಗಿರಲಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇನ್ನುಳಿದ ವಿಚಾರವನ್ನು ಮಂತ್ರಿಗಳು ಹೇಳಲಿಕ್ಕೆ ಅವಕಾಶ ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಅಲ್ಲಿನ ಸತ್ಯ ಏನಿದೆ ಎನ್ನುವ ವಿಚಾರವನ್ನು ಹೇಳಬೇಕಲ್ಲವೇ? ಮಾನ್ಯ ಮಂತ್ರಿಗಳು ಮಾತನಾಡುವಾಗ ಹೇಳಿದ್ದಾರೆ. ಜಿಲ್ಲಾ ಕೇಂದ್ರದಲ್ಲಿ 2 ventilator ಗಳಿವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. IPHS (Indian Public Health Standards) ಪ್ರಕಾರ ಒಂದು ಜಿಲ್ಲಾ ಕೇಂದ್ರದ ಜಿಲ್ಲಾ ಆಸ್ಪತ್ರೆಯಲ್ಲಿ 4 ventilator ಇರಬೇಕೆನ್ನುವುದು ಇದೆ. ಇನ್ನು ಒಂದು ವಿಚಾರವನ್ನು ಮುಂದುವರಿದು ಹೇಳುತ್ತಾ, ಈ ventilator ಗಳೆಲ್ಲಾ 1970 ರಲ್ಲಿ ಇರಲಿಲ್ಲವೆಂದು ಹೇಳಿದರು.

**ಸಭಾಪತಿಯವರು:–** ಸಚಿವರು ಎಲ್ಲಾ ವಿಚಾರವನ್ನು ಹೇಳಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರು ಈ ಬಗ್ಗೆ ಹೇಳಿದ್ದಾರೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಬೆಳಿಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಮಾತನಾಡುವಾಗ ಚಾಮರಾಜನಗರ ಆಸ್ಪತ್ರೆಯಲ್ಲಿ 50 ventilator ಗಳನ್ನು ಹಾಕಬೇಕಾಗಿತ್ತು ಎಂದು ಹೇಳಿದರು. ಬೇಕಾದರೆ, ಕಡತವನ್ನು ತೆಗೆದು ನೋಡಿ. ಯಾವ ಒಂದು ಜಿಲ್ಲಾ ಆಸ್ಪತ್ರೆಯಲ್ಲಿ 50 ventilator ಗಳ ಸೌಲಭ್ಯ ಇದೆ ಎಂದು ದಯಮಾಡಿ ಹೇಳಬೇಕು.

(ಗೊಂದಲ)

ಅಳವಡಿಸಿದರೆ ತೊಂದರೆಯಿಲ್ಲ. ಅಂತಹ ಹಣಕಾಸಿನ ಪರಿಸ್ಥಿತಿ ಬಂದು ಎಲ್ಲರ ಆರೋಗ್ಯ ಕಾಪಾಡತಕ್ಕಂತಹ ಕಾಳಜಿ ತಮ್ಮದು ಏನಿದೆ, ಆ ಕಾಳಜಿಗೆ ನನ್ನ ಮೆಚ್ಚುಗೆ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾನು ಎಲ್ಲಾ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯರವರೇ, ನಾನು ಮಾತನಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾವುದೇ ಜಿಲ್ಲಾ ಮಟ್ಟದ ಆಸ್ಪತ್ರೆಯಲ್ಲಿ 50 ventilator ಗಳ ಅವಶ್ಯಕತೆ ಇದೆ ಎಂದು ಹೇಳಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಯಾವುದೇ ಜಿಲ್ಲಾ ಮಟ್ಟದ ಆಸ್ಪತ್ರೆಗೆ 50 ventilator ಗಳ ಅವಶ್ಯಕತೆ ಇದೆ. ಆ ರೀತಿಯಲ್ಲಿರಬೇಕೆನ್ನುವ ಆಸೆ ನನಗೂ ಇದೆ. ನಮ್ಮ ಹೋಬಳಿ ಕೇಂದ್ರ ಸ್ಥಾನದಲ್ಲಿರುವ ಆಸ್ಪತ್ರೆಗಳಿಗೆ ಒಂದೊಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ventilator ಅನ್ನು ಕೇಳಿದ್ದೇವೆ. ನಮಗೆ 25 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಮಾಡಿಕೊಡಿ ಎಂದು ಕೇಳಿದಾಗ ನಿಮ್ಮ ಜನಸಂಖ್ಯೆ ಆಧಾರದಲ್ಲಿ ನಿಮಗೆ ಆಸ್ಪತ್ರೆಯನ್ನು ಕೊಡಲಿಕ್ಕೆ ಬರುವುದಿಲ್ಲವೆಂದು, ಬೇಕಾದಲ್ಲಿ ambulance ಸೌಲಭ್ಯವನ್ನು ಒದಗಿಸಲಾಗುವುದೆಂದು ಹೇಳಿ ನಮಗೆ ಸಮಾಧಾನ ಮಾಡಿದರು. ಅಂದರೆ, ಆರೋಗ್ಯ, ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯ ಇದೆ ಎನ್ನುವ ವಿಚಾರದಲ್ಲಿ ಎರಡು ಮಾತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಈಗ ಸರ್ಕಾರದ ಬಗ್ಗೆ ಮಾತನಾಡುವುದಲ್ಲ. ಅಲ್ಲಿನ ಜನರು ತೊಂದರೆಗೀಡಾಗಿರುವ ಬಗ್ಗೆ ಮಾತನಾಡುತ್ತಿದ್ದೇವೆ.

**ಶ್ರೀ ಆರ್. ಧರ್ಮಸೇನಾ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ventilatorಗೆ 7 ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ. ಅದು ದೊಡ್ಡ ವಿಷಯವಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅಲ್ಲಿ 14 ಜನರು ಸತ್ತು ಹೋಗಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಸ್ವಾಮಿ, ಅದಕ್ಕೆ ನಾವು ಬೆಲೆ ಕಟ್ಟಲಿಕ್ಕೆ ಆಗುವುದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿಗೆ ಸರ್ಕಾರದವರು ಹೋಗಿಲ್ಲವೆಂದು ನಾವು ಹೇಳುತ್ತಿಲ್ಲ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ನಾರಾಯಣಸ್ವಾಮಿಯವರೇ, ತಾವು ಕುಳಿತುಕೊಳ್ಳಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಅಲ್ಲಿ ಮೂಲಭೂತ ಸೌಲಭ್ಯಗಳು ಇರಲಿಲ್ಲವೆನ್ನುವುದನ್ನು ಹೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಅಲ್ಲಿನ ಜಾಗ ಹೋಬಳಿ ಕೇಂದ್ರವಾಗಿದೆ. ಈಗಾಗಲೇ ಶ್ರೀ ಎನ್.ರವಿಕುಮಾರ್‌ರವರು ಮಾತನಾಡಿದ ಹಾಗೆ ಆ ಹೋಬಳಿ ಕೇಂದ್ರ ಇತರ ಯಾವುದೇ ಹೋಬಳಿ ಕೇಂದ್ರಕ್ಕಿಂತ ಭಿನ್ನವಾಗಿಲ್ಲ.

**ಸಭಾಪತಿಯವರು:–** ಶ್ರೀಯುತ ಭೋಜೇಗೌಡರವರೇ, ಇದು ಸಮರ್ಥನೆ ಮಾಡಿಕೊಳ್ಳುವಂತಹ ವಿಚಾರ ಅಲ್ಲ. ಅಲ್ಲಿ ಅನಾಹುತ ಆಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಎಲ್ಲರಿಗೂ ತಿಳಿದಿರುವಂತೆ ಡಾಕ್ಟರ್‌ಗಳನ್ನು ಅಲ್ಲಿಗೆ ಬರಬೇಕೆಂದು ಕೇಳಿದರೆ ಅವರು ಅಲ್ಲಿಗೆ ಬರುವುದಿಲ್ಲ. ಅಂತಹ ಒಂದು ಪರಿಸ್ಥಿತಿಯಲ್ಲಿ ಇಂತಹ calamities ಆದಾಗ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಈ ವಿಚಾರದಲ್ಲಿ ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಆ ಸಲಹೆಗಳಿಗೆ ನಾನೂ ಸಹ ಬದ್ಧನಿದ್ದೇನೆ. ಇಂತಹ ಒಂದು ಘಟನೆ ಆಗಬಾರದಿತ್ತು. ಮುಂದಿನ ದಿನಗಳಲ್ಲಿ ಇಂತಹ ಘಟನೆ ಆದಂತಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಯಾವ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕೊಡತಕ್ಕಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಆರೋಗ್ಯ ಮಂತ್ರಿಗಳು ಹೆಚ್ಚಿನ ರೀತಿಯಲ್ಲಿ ಒತ್ತು ಕೊಟ್ಟು ಕೆಲಸ ಮಾಡಲಿ ಎನ್ನುವುದು ನನ್ನ ಅಭಿಪ್ರಾಯ ಇದೆ.

**ಡಾ॥ ತೇಜಸ್ವಿನಿಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಲ್ಲಿ ದುರ್ಘಟನೆ ಆಗಿದೆ. ನಾವು ಇಲ್ಲಿ ಒಬ್ಬರಿಗೊಬ್ಬರು ಕೆಸರು ಎರೆಚುವ ಆಟ ಆಡುವುದಕ್ಕೆ ಈ ಸನ್ನೀವೇಶವನ್ನು ನಾವು ಬಳಸಿಕೊಂಡಿಲ್ಲ. ಪ್ರತಿಪಕ್ಷದ ನಮ್ಮ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದು, ನಾವು ಈ ನಿಟ್ಟಿನಲ್ಲಿ ತಕ್ಷಣ ಸ್ಪಂದಿಸಿ ಒಂದಷ್ಟು ಅಮೂಲ್ಯ ಜೀವ ಉಳಿಸುವುದರಲ್ಲಿ ನಾವು ವಿಫಲರಾಗಿದ್ದೇವೆ ಎನ್ನುವ ದುಃಖದಿಂದ ಅವರು ಮಾತನಾಡಿದ್ದಾರೆ. ಮುಂದೆಯೂ ಕೂಡ ಇನ್ನೂ ಒಂದಿಷ್ಟು ಅಪಾಯಗಳು ಸಂಭವಿಸುವಂತಹ ಮಾಹಿತಿಗಳು ನನ್ನ ಬಳಿ ಸಿಕ್ಕಿದೆ. ವಿಶೇಷವಾಗಿ ಚಾಮರಾಜನಗರ ಜಿಲ್ಲೆ, ಮೀಸಲು ಲೋಕಸಭಾ ಕ್ಷೇತ್ರ ಅಂದರೆ ಅಲ್ಲಿ ಅತಿ ಹೆಚ್ಚು ಬುಡಕಟ್ಟು ಜನರನ್ನು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರನ್ನು ಹೊಂದಿರುವಂತಹ ಜಿಲ್ಲೆಯಾಗಿದ್ದು, ಇದು ಮೌಢ್ಯಕ್ಕೆ ಮತ್ತು ಮುಗ್ದತೆಗೆ ಹೆಸರಾದಂತಹ ಜಿಲ್ಲೆಯಾಗಿದೆ. ಅದು ಯಾವ ಮಟ್ಟದಲ್ಲಿದೆ ಎಂದರೆ ಚಾಮರಾಜನಗರ ಎಂದರೆ ಚಾಮರಾಜನಗರಕ್ಕೆ ಹೋದವರು ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಳ್ಳುತ್ತಾರೆನ್ನುವ ಮಟ್ಟದಲ್ಲಿದೆ. ಇನ್ನೂ ಸಹ ನಾವು ಅದೇ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆಂದರೆ ಅಲ್ಲಿನ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ಇನ್ನು ಮುಗ್ಧತೆ ಎಂದರೆ ಮಲೆಮಹದೇಶ್ವರ ಸ್ವಾಮಿಯ ಒಂದು ಬೆಟ್ಟದಡಿ ವನ್ಯಜೀವಿ ಸೂಕ್ಷ್ಮ ವಲಯವಾದ್ದರಿಂದ ಹಾನೂರು ತಾಲ್ಲೂಕು ಭಾಗದ ವಿಚಾರವಾಗಿ ಆ ಭಾಗದಲ್ಲಿನ ಮಾನ್ಯ ಸಚಿವರಾದ ಶ್ರೀ ಪುಟ್ಟರಂಗಶೆಟ್ಟಿಯವರು ಬೆಳಿಗ್ಗೆ ಹೇಳುತ್ತಿದ್ದರು. 60 ಕಿ.ಮೀ ದೂರ ಒಂದು, 40 ಕಿ.ಮೀ ದೂರ ಒಂದು ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳು ಸುಸಜ್ಜಿತವಾಗಿ ಕೆಲಸ ಮಾಡಿಬಿಟ್ಟಿದ್ದರೆ ಈ ರೀತಿಯ ತೊಂದರೆಯಾಗುತ್ತಿರಲಿಲ್ಲವೆಂದು ಹೇಳಿದರು. ಅಲ್ಲಿ ಜನರು ಹಾವು ಕಡಿತಕ್ಕೆ ಒಳಗಾಗುತ್ತಾರೆ. ಆದರೆ, ಇಲ್ಲಿ ಉದ್ದೇಶಪೂರ್ವಕವಾಗಿ ವಿಷವನ್ನು ಹಾಕಿರುವುದರಿಂದ ನಾವು ಸರ್ಕಾರವನ್ನು ದೂಷಿಸುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಮಾನ್ಯ ಆರೋಗ್ಯ ಸಚಿವರು ಹೇಳಿದಂತಹ ವಿಚಾರವಾಗಿ ಸದನದಲ್ಲಿರುವ ನಮಗೆಲ್ಲರಿಗೂ ಸಹ ಗೊತ್ತಿದೆ. ಆ ರೀತಿಯಲ್ಲಿ ತಪ್ಪಾಗಿದೆ ಎಂದು ನಾವು ಹೇಳಲಿಲ್ಲ. ತಪ್ಪು ಎಲ್ಲಿ ಆಗಿದೆ ಎಂದು ಹೇಳಿದರೆ ಹನೂರುನಂತಹ ಒಂದು ಭಾಗದಲ್ಲಿ 50 ರಿಂದ 100 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ನಾವು ಮಾಡಬೇಕಾಗಿತ್ತು. ಆ ಭಾಗದಲ್ಲಿ ಕೌಡಳ್ಳಿ, ರಾಮಪುರ, ಹನೂರು, ಮಾರ್ಥಳ್ಳಿಯ ಭಾಗದಲ್ಲಿ ಅಲ್ಲಿನ ಬುಡಕಟ್ಟು ಮಕ್ಕಳು ವಿಶೇಷವಾಗಿ ಅಸ್ತಿಮಜ್ಜೆಯಲ್ಲಿ ಕೆಂಪು ರಕ್ತಕಣಗಳ ಉತ್ಪತ್ತಿ ಕಡಿಮೆಯಾಗುವಂತಹ, Cancer ಗೆ 'Leukemia' ಎಂದು ಹೇಳುತ್ತೇವೆ. ಅದಕ್ಕೆ ಮತ್ತೊಂದು ಮೆಡಿಕಲ್ ವರ್ಡ್ ಇದೆ. ಅದು ನನಗೀಗ ನೆನಪಾಗುತ್ತಿಲ್ಲ. Blood transfusion ಆಗಬೇಕಾಗುತ್ತದೆ. ಅದು ಅತ್ಯಂತ ದುಬಾರಿಯಾದಂತಹ ವೆಚ್ಚ. ಅದು ಅಂತಹ ಕಡೆ ಅನಿವಾರ್ಯ. ಏಕೆಂದರೆ, ಅಲ್ಲಿ ಒಂದು ಕಡೆ ಅರಣ್ಯ ಪ್ರದೇಶ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ವಿಶೇಷವಾದ ಪೀಳಿಗೆಯಿಂದ ಬರತಕ್ಕಂತಹ, ಪೌಷ್ಟಿಕಾಂಶಗಳ ಕೊರತೆಯಿಂದ ಬರತಕ್ಕಂತಹ ಕಾಯಿಲೆ ಅದಾಗಿದೆ. ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಪರಿಣಿತರು ಏತಕ್ಕೆ ಹೋಗುವುದಿಲ್ಲ? ವಿಷಪ್ರಾಶನವಾದ ತಕ್ಷಣ ವಾಂತಿ ಮಾಡಿಸಬೇಕಾಗಿತ್ತು. ಅಲ್ಲಿಯೂ ಸಹ ಮುಗ್ದರಿದ್ದಾರೆ. ಏಕೆಂದರೆ, ಅವರುಗಳು ಹೊಟ್ಟೆನೋವು ಬಂದಿರಬಹುದು ಎಂದು ಹೇಳಿ ಸುಮ್ಮನಿದ್ದಾರೆ. ಅವರಿಗೆ ಈ ಒಂದು ಕಲ್ಪನೆ ಇಲ್ಲ. ಇದು ಸಣ್ಣ ದೇವಾಲಯ. ನಮ್ಮ ನಾಡಿನಲ್ಲಿ ಲಕ್ಷಾಂತರ ಭಕ್ತರು ಹೋಗುವಂತಹ ಅತಿ ದೊಡ್ಡ ದೇವಾಲಯಗಳಲ್ಲಿ ಪ್ರಸಾದ ವಿನಿಯೋಗವನ್ನು ಮಾಡುತ್ತೇವೆ. ನಮಗೆ ಇವತ್ತು ದುಃಖ ಆಗಿದೆ. ಯಾವುದೇ ಸರ್ಕಾರವಾಗಲಿ, ಈ ನಿಟ್ಟಿನಲ್ಲಿ ಭದ್ರತಾ ವ್ಯವಸ್ಥೆಗಳನ್ನು ಮಾಡುತ್ತಾರೆ. ಈ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರಾದ ಡಾ॥ ಜಿ. ಪರಮೇಶ್ವರ್ ರವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ನಾವು ಲೋಪವನ್ನು ಎಣಿಸಲಿಕ್ಕೆ ಹೋಗುವುದಿಲ್ಲ. ನಾವು ಇನ್ನು ಎಷ್ಟರಮಟ್ಟಿಗೆ ಸಿದ್ಧರಾಗಬೇಕೆಂದು, ಎಷ್ಟರ ಮಟ್ಟಕ್ಕೆ prevent ಮಾಡಬೇಕೆನ್ನುವ ಬಗ್ಗೆ ಯೋಚನೆ ಮಾಡಬೇಕು.

(506) 17.12.2018 07.00 SV-GR

**(ಸಭಾಪತಿಯವರ ಉಪಸ್ಥಿತಿ)**

**ಡಾ:ತೇಜಸ್ವಿನಿ ಗೌಡ (ಮುಂದು):–**

Because, right to live is our right. ಬದುಕಲಿಕ್ಕೆ ಹಾಗೂ ಪ್ರತಿಯೊಂದು ಅಮೂಲ್ಯವಾದ ಜೀವವನ್ನು ಉಳಿಸುವುದಕ್ಕೆ ಏನು ಬೇಕೋ ಅದನ್ನು ಮಾಡುತ್ತೇವೆ. ಮಾನ್ಯ ಧರ್ಮಸೇನ ಅವರು ಆಸ್ಪತ್ರೆಗಳಲ್ಲಿ Ventilators ಇಷ್ಟು ಇರಬೇಕು ಎಂಬ ಒಂದು ಮಾತನ್ನು ಸಕಾರಾತ್ಮಕವಾಗಿ ಹೇಳಿದರು. ಆರೋಗ್ಯ ಇಲಾಖೆ ಬಹಳ ದೊಡ್ಡ ಇಲಾಖೆಯಾಗಿದ್ದು, ಬಜೆಟ್‌ನ ಅತಿ ದೊಡ್ಡ ಭಾಗವನ್ನು ಕೊಡುವಂತಹ ಇಲಾಖೆಯಾಗಿದೆ. ಶಿಕ್ಷಣ, ಆರೋಗ್ಯ ಇಂತಹ ವಿಚಾರಗಳಲ್ಲಿ ಸರ್ಕಾರ ವಿಫಲವಾಗಲೇಬಾರದು. ಸರ್ಕಾರಿ ಆಸ್ಪತ್ರೆ ಚೆನ್ನಾಗಿ ನಡೆಯಲೇಬೇಕು ಎನ್ನುವಂತಹ ಈ ಸನ್ನಿವೇಶದಲ್ಲಿ ನಾನು ಸರ್ಕಾರವನ್ನು ಈ ಮೂಲಕ ಆಗ್ರಹ ಮಾಡುತ್ತೇನೆ. ಅದು ಚಾಮರಾಜನಗರದಲ್ಲಿಯೇ ಇರಲಿ ಅಥವಾ ಮೈಸೂರಿನಲ್ಲಿಯೇ ಇರಲಿ, ರಸ್ತೆಗಳು ಸುಸ್ಥಿತಿಯಲ್ಲಿದ್ದರೆ ಆಂಬುಲೆನ್ಸ್‌ಗಳು ಶರವೇಗದಲ್ಲಿ ಆಸ್ಪತ್ರೆಗೆ ತಲುಪುತ್ತದೆ. 'Golden Hours' ಬಗ್ಗೆ ನಾನು ಪುನರುಚ್ಚರಿಸುತ್ತೇನೆ. ಇಂತಹ ಸನ್ನಿವೇಶವಿದ್ದಾಗ ಸಮಯ ಬಹಳ ಅಮೂಲ್ಯವಾಗಿರುತ್ತದೆ. ಹಾಗಾಗಿ ಮೂಲಭೂತ ಸೌಕರ್ಯಗಳ ಕೊರತೆಯು ಒಂದಾಗಿರುವುದರಿಂದ ಇದಕ್ಕೆ ನಾವೆಲ್ಲರೂ ಕಾರಣರಾಗುತ್ತೇವೆ.

ಮಾನ್ಯ ನಾಗಪ್ಪನವರ ಅಪಹರಣವಾದಂತಹ ಹನೂರು ರಕ್ಷಿತ ಅರಣ್ಯ ಪ್ರದೇಶವನ್ನು ಒಳಗೊಂಡಿರುವುದರಿಂದ ನಾವು ಅದಕ್ಕೆ ಸೂಕ್ಷ್ಮವಾಗಿ ಸ್ಪಂದಿಸಬೇಕಾಗುತ್ತದೆ. ಅಲ್ಲಿಗೆ ಬೇರೆ ಏನೂ ಮಾಡುವುದು ಕಷ್ಟವಾಗುತ್ತದೆ. ಹಳ್ಳಿಗಳಿಗೆ ನುರಿತ ವೈದ್ಯರು ಹೋಗಬೇಕಾದರೆ ಅವರ ಕುಟುಂಬಗಳಿಗೆ ಪ್ರೇರಣಾದಾಯಿಯಾದಂತಹ ಸೌಕರ್ಯಗಳನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡುವುದರ ಮೂಲಕ ಅವರಿಗೂ ಪ್ರೇರೇಪಿಸಬೇಕು. ಒಳ್ಳೆಯ ವೈದ್ಯರು ಅಲ್ಲಿಗೆ ಹೋಗಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳು ಚೆನ್ನಾಗಿ ನಡೆಯುವಂತೆ ಮಾಡಿ ಇನ್ನು ಮುಂದೆ ಇಂತಹ ಘಟನೆಗಳಾಗದಂತೆ ಎಚ್ಚರಿಕೆಯನ್ನು ವಹಿಸಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಯವರ ಮಾತಿಗೆ ಪೂರಕವಾಗಿ ಅಲ್ಲಿ ವಾಹನ ದಟ್ಟಣೆ ಅತ್ಯಂತ ಹೆಚ್ಚಾಗಿದ್ದು, ರಸ್ತೆಯು ಹಾಳಾಗಿರುವುದರಿಂದ ಅತ್ಯಂತ ಜರೂರಾಗಿ ರಸ್ತೆಯನ್ನು ಸುಸ್ಥಿತಿಗೆ ತರಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆಯಿಂದಲೂ ಚಾಮರಾಜನಗರ ಜಿಲ್ಲೆಯಲ್ಲಿ ನಡೆದಿರುವಂತಹ ಅಹಿತಕರ ಘಟನೆಯ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ನಾವು ಈ ಸದನದಲ್ಲಿ ಎಷ್ಟೇ ಚರ್ಚೆಯನ್ನು ಮಾಡಿದರೂ ಸಹ ನಮ್ಮ ಲೋಕವನ್ನು ಬಿಟ್ಟು ಹೋಗಿರುವಂತಹ 14 ಜೀವಗಳು ಪುನಃ ಹಿಂತಿರುಗುವುದಿಲ್ಲ. ಹೆಂಡತಿಗೆ ಗಂಡ ಇಲ್ಲ, ಗಂಡನಿಗೆ ಹೆಂಡತಿ ಇಲ್ಲ. ಅಣ್ಣನಿಗೆ ತಂಗಿ ಇಲ್ಲ, ತಂಗಿಗೆ ಅಣ್ಣನಿಲ್ಲ ಎನ್ನುವಂತಹ ಪರಿಸ್ಥಿತಿ ಆಗಿದೆ. ಮಾನ್ಯ ಧರ್ಮಸೇನ ಅವರು ಮಾತನಾಡುತ್ತಾ ಅಲ್ಲಿರತಕ್ಕಂತಹ ಜನ ಪ್ರಸಾದಕ್ಕೆಂದು ಬರದೆ, ಒಂದು ಹೊತ್ತಿನ ಊಟ ದೊರೆಯುತ್ತದೆ ಎಂದು ಬಂದಂತಹವರಾಗಿದ್ದರು ಎಂದು ಹೇಳಿದರು. ಅವರಲ್ಲಿ ಬಹಳಷ್ಟು ಜನ ಕಡು ಬಡವರಾಗಿರುವಂತಹವರು. ಇಬ್ಬರು ಮಾನ್ಯ ಸಚಿವರೂ ಮತ್ತು ಸರ್ಕಾರ ಸರಿಯಾದ ಸಮಯಕ್ಕೆ ಸ್ಪಂದಿಸಿ, ಯಾವ ರೀತಿಯ ಕ್ರಮವನ್ನು ಕೈಗೊಂಡಿದೆ ಎಂಬುದಾಗಿ ಹೇಳಿದರು. ಪ್ರಸಾದ ಸೇವನೆಯನ್ನು ಮಾಡಿ ಜೀವನ್ಮರಣದ ನಡುವೆ ಹೋರಾಡುತ್ತಿರುವವರನ್ನು ಉಳಿಸಿಕೊಳ್ಳುವ ಬಗ್ಗೆ ಇಂದು ನಾವು ಹೆಚ್ಚಿನ ಕಾಳಜಿಯನ್ನು ವಹಿಸಬೇಕಾಗಿದೆ. ಮಾನ್ಯ ರವಿಕುಮಾರ್ ಅವರು ಮಾತನಾಡುತ್ತಾ ಎಷ್ಟೋ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಹುದ್ದೆಗಳು ಖಾಲಿ ಇವೆ ಎಂಬುದಾಗಿ ಹೇಳಿದರು. ಅವರಿಗಿಂತ ಇನ್ನೂ ಒಂದು ಹೆಜ್ಜೆ ಮುಂದುವರೆದು ಸರ್ಕಾರಿ ಆಸ್ಪತ್ರೆಯಲ್ಲಿರುವಂತಹ ವೈದ್ಯರು ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ ಎಂದು ನಾನು ಹೇಳುತ್ತೇನೆ. ಅಲ್ಲಿರತಕ್ಕಂತಹ ಕಾಂಪೌಂಡರ್‌ಗಳು ವೈದ್ಯರಾಗಿ ಪರಿವರ್ತನೆ ಆಗಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ವ್ಯವಸ್ಥೆಗಳು ಇಲ್ಲ. ಮೈಸೂರು ಹತ್ತಿರದಲ್ಲಿದ್ದುದರಿಂದ ಅನಾಹುತ ಜಾಸ್ತಿಯಾಗುವುದನ್ನು ತಡೆಯುವುದಕ್ಕೆ ಸಾಧ್ಯವಾಗಿದೆ. ಮಾನ್ಯ ಧರ್ಮಸೇನ ಅವರು ಹೇಳಿದಂತೆ ರೋಗಿಗಳನ್ನು ನೋಡಿಕೊಳ್ಳುವುದಕ್ಕೆ ಬರುತ್ತಿರುವಂತಹ ಅವರ ಕುಟುಂಬದವರಿಗೆ ಇಂತಹ ಚಳಿಗಾಲದಲ್ಲಿ ಮಲಗಲು ಬೆಡ್‌ಶೀಟ್ ಆಗಲಿ, ತಿನ್ನಲು ಅನ್ನವಾಗಲಿ, ಕುಡಿಯಲು ಕಾಫಿ ಅಥವಾ ನೀರಾಗಲಿ ಇಲ್ಲ. ಅಲ್ಲಿಗೆ ಸಚಿವರು ಹೋಗಿ ಮೃತರ ಕುಟುಂಬಕ್ಕೆ ರೂ.5 ಲಕ್ಷ ಪರಿಹಾರವನ್ನು ಹಾಗೂ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ರೂ.2.5 ಲಕ್ಷವನ್ನು ಘೋಷಿಸಿದ್ದಾರೆ. ಅವರಿಗೆ ಸರ್ಕಾರ ಚೆಕ್ ಮೂಲಕ ಹಣವನ್ನು ನೀಡಿದರೆ, ಅದನ್ನು ನಗದು ಮಾಡಿಕೊಳ್ಳುವುದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ಈಗಲೇ ಕಷ್ಟಕ್ಕೆ ಪರಿಹಾರವನ್ನು ಕೊಡುವಂತಹ ರೀತಿಯಲ್ಲಿ ಅಂದರೆ ಯಾವುದಾದರೊಂದು ರೀತಿಯಲ್ಲಿ ಅವರ ಕೈಗೆ ರೂ.5,000/-

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಥವಾ ರೂ.10,000/- ಆಗಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಯಾವುದೇ ಜೀವವೂ ಹೋಗಬಾರದು. ಇರುವಂತಹ ಜೀವವನ್ನು ಉಳಿಸಿಕೊಳ್ಳುವುದಕ್ಕೆ ದಯಮಾಡಿ ಮಾನ್ಯ ಸಚಿವರು ಇದರಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಐವನ್ ಡಿ'ಸೋಜ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಘಟನೆಯಲ್ಲಿ ಮೃತಪಟ್ಟ 14 ಜನರ ಆತ್ಮಕ್ಕೆ ಶಾಂತಿಯನ್ನು ಕೋರಿ ಕೆಳಮನೆಯಲ್ಲಿ ಮೌನವನ್ನು ಆಚರಿಸಲಾಗಿದೆ. ಈ ಚರ್ಚೆ ಮುಗಿದ ನಂತರ ನಮ್ಮ ಸದನದಲ್ಲಿಯೂ ಅದನ್ನು ಮಾಡಬೇಕು ಎಂದು ನನ್ನದೊಂದು ಸಲಹೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆ ಇದು ಒಂದು ತುರ್ತು ವಿಚಾರವಾಗಿದ್ದು, ಇದರ ಬಗ್ಗೆ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದೆವು. ಅದಕ್ಕೆ ತಾವು ಸ್ಪಂದಿಸಿ, ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಅಭಿನಂದನೆಗಳು. ಬೆಳಿಗ್ಗೆ ಮಾತನಾಡುವಾಗ ಇದ್ದ ವೇಗದಲ್ಲಿ ಈಗ ನಾನು ಇಲ್ಲ. ಏಕೆಂದರೆ ನಿನ್ನೆ ಮಾತನಾಡಿದ ವೇಗದಲ್ಲಿ ಮಾನ್ಯ ಸಚಿವರು ಇಂದು ಇಲ್ಲ. ಬಹಳ ತಾಳ್ಮೆಯಿಂದ, ಸಹನೆಯಿಂದ ಒಂದಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡಿಕೊಂಡು ಮಾನ್ಯ ಸಚಿವರು ಇಂದು ಉತ್ತರವನ್ನು ನೀಡಿದ್ದಾರೆ. ನಿನ್ನೆ ಮಾನ್ಯ ಸಚಿವರು ಉತ್ತರವನ್ನು ನೀಡದಿದ್ದಕ್ಕೆ ಇಂದು ನಾನು ಸ್ವಲ್ಪ ಗಟ್ಟಿಯಾಗಿ ಮಾತನಾಡಿದ್ದೆನು. ಸರ್ಕಾರವನ್ನು ಟೀಕೆ ಮಾಡುವುದು ನಮ್ಮ ಉದ್ದೇಶವಲ್ಲ. ಆದರೆ ಈ ಸ್ಥಾನದಲ್ಲಿದ್ದಾಗ ಸರ್ಕಾರವನ್ನು ಜಾಗ್ರತೆಗೊಳಿಸಬೇಕಾದುದು ನಮ್ಮ ಜವಾಬ್ದಾರಿ. ಈ ಘಟನೆ ನಡೆದಂತಹ ವಿಚಾರದಲ್ಲಿ ನಾನು ಅಪೊಲೊ ಆಸ್ಪತ್ರೆಗೆ ಭೇಟಿಯನ್ನು ನೀಡಿ, ಅಲ್ಲಿರುವ ರೋಗಿಗಳ ಯೋಗಕ್ಷೇಮವನ್ನು ವಿಚಾರಿಸಿದ್ದೆನು. ಕೆ.ಆರ್. ಆಸ್ಪತ್ರೆಗೂ ಭೇಟಿಯನ್ನು ನೀಡಿದ್ದೆನು. ಎಲ್ಲಕ್ಕಿಂತಲೂ ಹೆಚ್ಚಾಗಿ ಒಂದು ವರ್ಷದ ಹಿಂದೆ ಪ್ರಾರಂಭವಾದಂತಹ ಸುಯೋಗ ಆಸ್ಪತ್ರೆಗೆ ಭೇಟಿ ನೀಡಿದ್ದೆನು. ಆ ಆಸ್ಪತ್ರೆಯಲ್ಲಿ 10 ವರ್ಷದ ಒಳಗಿನ ಮಕ್ಕಳು ದಾಖಲಾಗಿದ್ದರು. ಎರಡು ಮೂರು ಮಕ್ಕಳನ್ನು ಮಾತ್ರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದ್ದು, ಇನ್ನೂ ಏಳೆಂಟು ಮಕ್ಕಳು ಚಿಕಿತ್ಸೆಯನ್ನು ಪಡೆಯುತ್ತಿದ್ದರು. ಅಲ್ಲಿ ಅತ್ಯಂತ ದಾರುಣವಾದ ದೃಶ್ಯವಿದ್ದು, ವೆಂಟಿಲೇಟರ್‌ಗಳು ಉತ್ತಮ ಸ್ಥಿತಿಯಲ್ಲಿರಲಿಲ್ಲ. ಕೆ.ಆರ್.ಆಸ್ಪತ್ರೆಯ ಉನ್ನತ ವೈದ್ಯಾಧಿಕಾರಿಗಳನ್ನು ಕರೆದು ಕೇಳಿದಾಗ, "ಇಂತಹ ಜಿಲ್ಲಾ ಮಟ್ಟದ ಆಸ್ಪತ್ರೆಗೆ ತುರ್ತು ಸಂದರ್ಭಗಳ ಅವಶ್ಯಕತೆಗನುಗುಣವಾಗಿ 13 ವೆಂಟಿಲೇಟರ್‌ಗಳು ಇವೆ. ಇಂದು ಯಾರೋ ಕಿಡಿಗೇಡಿಯು ಮಾಡಿದಂತಹ ಅನಾಹುತದಿಂದಾಗಿ 100 ಜನಕ್ಕೆ ವಿಷಪ್ರಾಶನವಾಗಿದೆ. ಆದರೆ, ನಮ್ಮ ಆಸ್ಪತ್ರೆಯಲ್ಲಿ ಬೇರೆ ಬೇರೆ ಕಾರಣಗಳಿಗೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವಂತಹವರು ಪ್ರತಿ ದಿನ ಏಳೆಂಟು ಜನ ದಾಖಲಾಗುತ್ತಾರೆ" ಎಂಬ ಮಾತನ್ನು ಅವರು ಹೇಳಿದರು. ಆ ಕಾರಣಕ್ಕಾಗಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಕನಿಷ್ಠ 50 ವೆಂಟಿಲೇಟರ್‌ಗಳ ಅವಶ್ಯಕತೆ ಇದೆ ಎಂದು ನಾನು ಹೇಳಿದೆ. ಬರುವಂತಹ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ನಾವು ವಿಂಗಡಿಸುತ್ತೇವೆ ಎಂದು ಅವರು ಹೇಳಿರುವ ಮಾತಿನ ಆಧಾರದಲ್ಲಿ ನಾನು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಚಿವರಲ್ಲಿ ನಾನು ಒಂದು ಮಾತನ್ನು ಕೇಳಬಯಸುತ್ತೇನೆ. ಹನೂರು ಆಸ್ಪತ್ರೆಯಲ್ಲಿಯಾಗಲಿ, ಕೊಳ್ಳೇಗಾಲ ಆಸ್ಪತ್ರೆಯಲ್ಲಿಯಾಗಲಿ ಅಥವಾ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿಯಾಗಲಿ ಇರುವ ವೆಂಟಿಲೇಟರ್‌ಗಳ ಬಗ್ಗೆ ಮಾಹಿತಿಯನ್ನು ಕೇಳಿದಾಗ ಎರಡು ವೆಂಟಿಲೇಟರ್‌ಗಳಿದ್ದು, ಎರಡೂ ಹಾಳಾಗಿವೆ ಎಂದು ಅಧಿಕಾರಿಗಳು ವರದಿಯನ್ನು ಕೊಟ್ಟಿರುತ್ತಾರೆ. ಮಾನ್ಯ ಸಚಿವರು ನಾಲ್ಕು ವೆಂಟಿಲೇಟರ್‌ಗಳಿದ್ದು, ಅದರಲ್ಲಿ ಎರಡು ಸರಿಯಾಗಿವೆ ಎಂದು ಹೇಳಿದ್ದಾರೆ. ಇಲಾಖೆ ಏನು ಹೇಳುತ್ತದೆ ಎಂದು ನನಗೆ ಗೊತ್ತಿಲ್ಲ. ಇಂದಿನ ವ್ಯವಸ್ಥೆಯಲ್ಲಿ ನಮ್ಮ ಸರ್ಕಾರಿ ಆಸ್ಪತ್ರೆಗಳು ಈ ವ್ಯವಸ್ಥೆಯನ್ನು ಸರಿದೂಗಿಸಿಕೊಳ್ಳುವಂತಹ ಸಾಮರ್ಥ್ಯವನ್ನು ಹೊಂದಿದೆಯೇ ಎಂದು ಆತ್ಮಸಾಕ್ಷಿಯಾಗಿ ಮಾನ್ಯ ಸಚಿವರು ಆಲೋಚನೆಯನ್ನು ಮಾಡಬೇಕು. ನಾನು ಆರೋಪವನ್ನು ಮಾಡುತ್ತಿಲ್ಲ. ಇವತ್ತಿನ ಪರಿಸ್ಥಿತಿಯನ್ನಾದರೂ ಪರಿಗಣಿಸಿ, ನಾವು ಇಡೀ ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಒಂದು ಶಕ್ತಿಯನ್ನು ಕೊಡದಿದ್ದರೆ, ಮೂಲಭೂತವಾದ ಸೌಕರ್ಯಗಳನ್ನು ಒದಗಿಸದಿದ್ದರೆ ಬರುವ ದಿನಗಳಲ್ಲಿ ರಾಜ್ಯದ ಜನತೆಯನ್ನು ಬಹಳ ಕಠಿಣವಾದ ಪರಿಸ್ಥಿತಿಗೆ ಕೊಂಡೊಯ್ಯಲಿದ್ದೇವೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎಂಬುದು ನಮ್ಮ ಆಗ್ರಹ.

ಇಂದು ಆಯುಷ್ ವೈದ್ಯರು ಮುಷ್ಕರವನ್ನು ಹೂಡುವುದಕ್ಕಾಗಿ ನೋಟೀಸ್ ಅನ್ನು ನೀಡಿರುತ್ತಾರೆ. ಅವರನ್ನು ಏಕೆ ಮುಷ್ಕರ ಮಾಡುತ್ತಿದ್ದೀರಿ ಎಂದರೆ 14 ವರ್ಷಗಳಿಂದ ನಾವು ಈ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದು, ಈಗ ನಮ್ಮ ಹುದ್ದೆಗೆ ಬೇರೆಯವರನ್ನು ತಂದು ನಮ್ಮನ್ನು ಕೈಬಿಡುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಮುಷ್ಕರ ಮಾಡುತ್ತಿದ್ದೇವೆ ಎಂದು ಹೇಳಿದರು. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಕೊರತೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬದಲಿಗೆ ಆಯುಷ್ ವೈದ್ಯರನ್ನಾದರೂ ನಿಯೋಜನೆ ಮಾಡಿದರೆ, ಆಸ್ಪತ್ರೆಗೆ ಒಬ್ಬ ವೈದ್ಯರನ್ನಾದರೂ ನಿಯೋಜಿಸಿದಂತಾಗುತ್ತದೆ. ಎರಡು ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಬ್ಬ ವೈದ್ಯಾಧಿಕಾರಿಯು ನೇಮಕಗೊಳ್ಳುವಂತಹ ಇಂದಿನ ಸ್ಥಿತಿಯನ್ನು ಯಾವ ರೀತಿ ನಿಭಾಯಿಸಬೇಕೆಂಬುದರ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಬೇರೆ ಹೆಚ್ಚಿನ ವಿಚಾರಗಳೇನೂ ಇಲ್ಲ. ನಾನು ಬೆಳಿಗ್ಗೆ ಒಂದೆರಡು ಮೂರು ವಿಚಾರಗಳನ್ನು ಹೇಳಿದ್ದೆನು. ನಾವು ಇಷ್ಟೇ ಮಾತನಾಡುತ್ತೇವೆಂದು ನಿರ್ಧಾರ ಮಾಡುವುದು ಶಿಷ್ಟಾಚಾರವಲ್ಲ. ಹಾಗೆಂದು ಅತಿಯಾಗಿ ಮಾತನಾಡಬಾರದು ಎಂಬುದು ನಮಗೆ ಅರಿವಿದೆ. ಆ ಕಾರಣಕ್ಕೆ ಒಂದೆರಡು ನಿಮಿಷ ಮಾತನಾಡುವುದಾಗಿ ತಮ್ಮ ಬಳಿ ವಿನಂತಿಸುತ್ತೇನೆ.

ಮಾನ್ಯ ಗೃಹಮಂತ್ರಿಯವರು ಒಂದು ಅಂಶವನ್ನು ಗಮನಿಸಬೇಕು. ಈ ದುರಂತದಲ್ಲಿ ಮೃತ ಪಟ್ಟವರಿಗೆ ಸರ್ಕಾರ ರೂ.5 ಲಕ್ಷ ಪರಿಹಾರ ಧನವನ್ನು ತಕ್ಷಣ ಘೋಷಣೆ ಮಾಡಿರುವುದಕ್ಕೆ ಕೆಳಮನೆ ಮತ್ತು ಮೇಲ್ಮನೆಯಲ್ಲಿ ಅಭಿನಂದಿಸಿದ್ದೇವೆ. ಅಲ್ಲಿರುವ ಭೀಕರತೆಯನ್ನು, ಗಂಡ ಮತ್ತು ಮಕ್ಕಳನ್ನು ಕಳೆದುಕೊಂಡಂತಹ ಒಬ್ಬ ಸಾಮಾನ್ಯ ಹೆಣ್ಣು ಮಗಳನ್ನು ನೋಡಿದಾಗ, ಅವಳ ಬೆನ್ನಹಿಂದೆ ಇರುವ ಬದುಕನ್ನು ನೋಡಿದಾಗ ಸರ್ಕಾರಕ್ಕೆ ಶಕ್ತಿ ಇದ್ದರೆ ಪರಿಹಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧನವನ್ನು ರೂ.10 ಲಕ್ಷ ಮಾಡಬೇಕೆಂಬುದು ನಮ್ಮ ಆಗ್ರ.ಹವಾಗಿದೆ. ನಿನ್ನೆಯವರೆವಿಗೂ ಇದು ವಿಷಾಹಾರ ಸೇವನೆಯಿಂದ ಆಗಿರುವುದೇ ಅಥವಾ ಬೇರೆ ಕಾರಣದಿಂದ ಆಗಿರುವುದೇ ಎನ್ನುವುದರ ಬಗ್ಗೆ ಜಿಜ್ಞಾಸೆ ಇತ್ತು. ಸರ್ಕಾರದ ಉತ್ತರದಲ್ಲಿ ಯಾರೋ ಕಿಡಿಗೇಡಿಗಳು ಸಾಮಾನ್ಯ ಕ್ರಿಮಿನಾಶಕಗಳ್ನು ಬೆರೆಸಿರುವುದರಿಂದ ಈ ರೀತಿಯಾಗಿದೆ ಎಂದು ತಿಳಿಸಲಾಗಿದೆ. ಆದ್ದರಿಂದ ಅತ್ಯಂತ ಕಠಿಣವಾದ ಕ್ರಮಗಳನ್ನು ಕೈಗೊಂಡು ವಿಶೇಷವಾದಂತಹ ಅಧಿಕಾರಿಗಳನ್ನು ನೇಮಕ ಮಾಡಬೇಕು. ಐದು ತಂಡಗಳನ್ನು ಮಾಡುತ್ತೀರೋ ಅಥವಾ ಮೂರು ತಂಡಗಳನ್ನು ಮಾಡುತ್ತೀರೊ ಅದು ನಮಗೆ ಗೊತ್ತಿಲ್ಲ. ಆದರೆ ಆರೋಪಿಗಳು ಪೂರ್ಣ ಪ್ರಮಾಣದಲ್ಲಿ ಇನ್ನೂ ಸಿಕ್ಕಿರುವುದಿಲ್ಲ ಎಂಬುದು ಸರ್ಕಾರಕ್ಕೂ ತಿಳಿದಿದೆ.

(507) 17.12.2018 ಕೆಜಿ.ಜಿಆರ್ 7.10

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು.....):–**

ಹಾಗಾಗಿ, ಗೃಹ ಇಲಾಖೆ ಕಠಿಣವಾದಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಅಗ್ರಹವಾಗಿದೆ. ಇನ್ನೊಂದು ವಿಷಯ ಏನೆಂದರೆ, ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಮೌಢ್ಯಗಳ ವಿರೋಧಿ ಕಾಯಿದೆಯನ್ನು ತೆಗೆದುಕೊಂಡು ಬಂದಂತಹ ಸಂದರ್ಭದಲ್ಲಿ ನಾವು ಅದು ಸರಿಯಿಲ್ಲವೆಂದು ವಿರೋಧ ಮಾಡಿದ್ದೇವೆ. ಈ ಕಾಯಿದೆಯಿಂದ ನಮ್ಮ ಇಡೀ ಕರ್ನಾಟಕವನ್ನೇ ಬದಲಾವಣೆ ಮಾಡುತ್ತೇವೆಂದು ಹೇಳಿ ಈ ಕಾಯಿದೆಯನ್ನು ತೆಗೆದುಕೊಂಡು ಬಂದರು. ಅದಕ್ಕೆ ಯಾವುದೇ rules ಅನ್ನು ಮಾಡಿಲ್ಲ ಎನ್ನುವುದು ನನಗೆ ಇರುವಂಥ ಮಾಹಿತಿ. ನಾನು ಅದನ್ನು ಮಾಡಿ ಎಂದು ಹೇಳಿಲ್ಲ. ಆ ಕಾಯಿದೆಗೆ ಏನಾಯಿತು ಎನ್ನುವುದನ್ನು ಸರ್ಕಾರ ಗಮನಿಸಬೇಕು ಎನ್ನುವುದು ನನ್ನ ಅಗ್ರಹವಾಗಿದೆ. ಮೌಢ್ಯವನ್ನು ನಿಯಂತ್ರಿಸುತ್ತೇವೆ ಎಂದು ತಂದಿರುವಂತಹ ಕಾಯಿದೆ ಅದು. ಅದು ಸರ್ಕಾರದ ಬಹಳ ಮಹತ್ವಕಾಂಕ್ಷಿಯಾದಂತಹ ಯೋಜನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಆ ಕಾಯಿದೆಯನ್ನು ಜಾರಿ ಮಾಡಬೇಕೇ ಅಥವಾ ಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಆ ಕಾಯಿದೆ ಬೇಕೇ ಅಥವಾ ಬೇಡವೇ ಎಂದು ಮೊದಲು ಕಾಯಿದೆ ಮಾಡಿದವರು ಯೋಚನೆ ಮಾಡಬೇಕು.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಸಲಹೆ ಏನು ಎಂಬುದನ್ನು ಹೇಳಲಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಅವರು ನಮ್ಮ ಸಲಹೆಗಳನ್ನು ಕೇಳಿದ್ದರೆ ಅದರಲ್ಲಿನ ಅನೇಕ ಸಮಸ್ಯೆಗಳು ಪರಿಹಾರ ಆಗುತ್ತಿದ್ದವು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬೀದಿ ಬೀದಿಗಳಲ್ಲಿ ದೇವಸ್ಥಾನಗಳನ್ನು ಮಾಡುತ್ತಿದ್ದಾರೆ. ಮೊದಲು ಅದನ್ನು ನಿಯಂತ್ರಿಸಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಇನ್ನೊಂದು ವಿಷಯವನ್ನು ನಾನು ಬೆಳಿಗ್ಗೆ ಹೇಳಿದ್ದೆ. ಸಾಮಾನ್ಯವಾಗಿ ಯಾವುದೇ ಒಂದು ಧಾರ್ಮಿಕ ಸಂಸ್ಥೆಯಲ್ಲಿ ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಸಮಸ್ಯೆಗಳು ಬಂದಾಗ, ಆರ್ಥಿಕ ಅಪರಾಧಗಳು, ಗುಂಪುಗಾರಿಕೆ ಅಥವಾ ಸಂಘರ್ಷಗಳು ಬಂದಾಗ ಜಿಲ್ಲಾಧಿಕಾರಿಯವರು ನೇರವಾಗಿ notice ಕೊಟ್ಟು ಆ ದೇವಸ್ಥಾನವನ್ನು ಸ್ವಾಧೀನ ಪಡಿಸಿಕೊಂಡು ಅದಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವಂತಹ ಪರಮಾಧಿಕಾರ ಸರ್ಕಾರಕ್ಕೆ ಇದೆ. ನಮ್ಮ ವ್ಯವಸ್ಥೆಯಲ್ಲಿ ಸರ್ಕಾರಕ್ಕಿಂತ ಯಾವ ದೇವಸ್ಥಾನವೂ ದೊಡ್ಡದು ಅಲ್ಲ. ಹಾಗಾಗಿ, ಅಂತಹ ಸಮಸ್ಯೆಗಳಿರುವ ದೇವಸ್ಥಾನವನ್ನು ತಕ್ಷಣವೇ ಸ್ವಾಧೀನ ಪಡಿಸಿಕೊಳ್ಳಬೇಕು ಮತ್ತು ಅದಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕು ಎನ್ನುವಂಥದ್ದನ್ನು ನಾನು ಏನು ಹೇಳಿದ್ದೇನೆ, ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು ಎನ್ನುವುದು ನನ್ನ ಅಗ್ರಹವಾಗಿದೆ. ಸರ್ಕಾರ ಅತ್ಯಂತ ತಾಳ್ಮೆಯಿಂದ ಮತ್ತು ಸಹನೆಯಿಂದ ವರ್ತಿಸಬೇಕಾದಂತಹ ಅವಶ್ಯಕತೆಗಳು ಇವೆ. ಮಾನ್ಯ ಸಚಿವರು ತಡವಾಯಿತು ಎಂದು ಹೇಳಿದ್ದು ಏಕೆಂದರೆ, ಅವರಿಗೆ ಟಿ.ವಿ ನೋಡಿ ಗೊತ್ತಾಯಿತು, ಅಪರ ಡಿ.ಹೆಚ್.ಓ., ರವರು ಯಾರೋ ಫೋನ್ ಮಾಡಿ ತಿಳಿಸಿದರೋ ಏನೋ ಅದು ಯಾವುದು ನಮಗೆ ಗೊತ್ತಿಲ್ಲ. ನಮ್ಮ ದೃಷ್ಟಿಯಲ್ಲಿ, ಮಾಧ್ಯಮದವರ ದೃಷ್ಟಿಯಲ್ಲಿ ಮತ್ತು ನಮ್ಮ ವ್ಯವಸ್ಥೆಯ ದೃಷ್ಟಿಯಲ್ಲಿ ಈ ರಾಜ್ಯದಲ್ಲಿ ಆರೋಗ್ಯ ಸಮಸ್ಯೆಗಳು ಬಂದಾಗ, ಅದಕ್ಕೆ ಉತ್ತರದಾಯಿ ಯಾರು ಎಂದು ಕೇಳಿದರೆ; ಮೊದಲನೆದಾಗಿ, ಆರೋಗ್ಯ ಮಂತ್ರಿಗಳು ಎಂದು ಹೇಳುತ್ತಾರೆ. ಅವರ ಸಮಸ್ಯೆಗಳು ನೂರು ಇರಬಹುದು, ಅದನ್ನು ಕೇಳುವುದಿಲ್ಲ.

ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಪ್ರಮಾಣಿಕತೆಯ ಬಗ್ಗೆ ಪ್ರಶ್ನೆ ಮಾಡಿಲ್ಲ. ಹಾಗಾಗಿ, ನಮ್ಮ ಜನರ ನಿರೀಕ್ಷೆ ಏನಿತ್ತು ಎಂದರೆ, ತಕ್ಷಣ ನಮ್ಮ ಆರೋಗ್ಯ ಮಂತ್ರಿಗಳು ಬರಬೇಕು, ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕು, ಖಾಸಗೀ ಆಸ್ಪತ್ರೆಗಳನ್ನು ಜೊತೆಗೂಡಿಸಿಕೊಳ್ಳಬೇಕು. ಜನರ ಜೀವಗಳನ್ನು ಉಳಿಸಬೇಕು ಎನ್ನುವುದು ನಮ್ಮ ಕಲ್ಪನೆ ಇದೆ. ಅದಕ್ಕೆ ಮಾನ್ಯ ಸಚಿವರ ಜವಾಬ್ದಾರಿಯನ್ನು ನೆನಪಿಸುತ್ತಿದ್ದೇನೆ. ನಾವು ಏನಾದರೂ ಸಮಾರೋಪಾದಿಯಲ್ಲಿ ಕೆಲಸ ಮಾಡಿದರೆ ಸಾವು ನೋವುಗಳ ಸಂಖ್ಯೆಯನ್ನು ನಿಯಂತ್ರಿಸಬಹುದುದು ಎಂದು ನನಗೆ ಅನಿಸುತ್ತದೆ. ಆದರೂ ಸಹ ಮಾನ್ಯ ಸಚಿವರು ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡಿದ್ದಾರೆಂದು ಹೇಳಿದ್ದಾರೆ. ಈ ವಿಚಾರವನ್ನು ಜನರಿಗೆ ಬಿಟ್ಟುಬಿಡೋಣ. ನನು ಸರ್ಕಾರ ಹೇಳಿದಂತಹ ಮೂರು ವಿಚಾರದಲ್ಲಿ ಹತ್ತು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕು ಎನ್ನುವುದು, ಆ ದೇವಸ್ಥಾನವನ್ನು ವಶಪಡಿಸಿಕೊಳ್ಳುವುದು ಮತ್ತು ಆ ಕ್ರಿಮಿನಾಶಕವನ್ನು ಸೇರಿಸಿದ್ದಾರೆ ಎಂದ ತಕ್ಷಣ ಎಷ್ಟೇ ಸಮಿತಿಗಳನ್ನು ರಚನೆ ಮಾಡಿದರೂ ಸಹ ಎಷ್ಟೇ ಪೋಲೀಸ್ ತಂಡಗಳನ್ನು ಮಾಡಿದ್ದರೂ ಸಹ ಇನ್ನೂ ಆರೋಪಿಗಳನ್ನು ಬಂಧಿಸಿಲ್ಲ ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಕೊಡಬೇಕು ಎನ್ನುವಂತಹ ಅಗ್ರಹ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಗೆ ಮಾನ್ಯ ಸದಸ್ಯರಾದ ಧರ್ಮಸೇನರವರು ಹೇಳಿದಂತಹ ಮಾತಿಗೆ cheque ಕೊಡುತ್ತೀರಿ ಅಥವಾ ನಗದು ಕೊಡುತ್ತೀರಿ ಅದು ಬೇರೆ ವಿಷಯ. ಸರ್ಕಾರ ಈಗ ಆ ದುರ್ಬಲರ ಕೈಗೆ ಖರ್ಚಿಗೆ ಸ್ವಲ್ಪ ಹಣ ಕೊಡಬೇಕು ಎನ್ನುವುದು ನನ್ನ ಅಗ್ರಹ ಆಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಉತ್ತರ ಕೊಡಿ.

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನದು ಒಂದೇ ಒಂದು ಸಲಹೆ ಇದೆ. ದಯವಿಟ್ಟು ಅವಕಾಶ ಕೊಡಿ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಆಗುವುದಿಲ್ಲ. ಸಚಿವರು ಉತ್ತರ ಕೊಡಲಿ.

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಈಗಾಗಲೇ ನಮ್ಮ ಸದಸ್ಯರಾದಂತಹ ರವಿಕುಮಾರ್‌ರವರು ಮತ್ತು ಇತರ ಸದಸ್ಯರು ಮಾತನಾಡಿದ್ದಾರೆ. ಮನುಷ್ಯ ಯಾರು ಸಹ ಸರ್ಕಾರಿ ಆಸ್ಪತ್ರೆಗೆ ಹೋಗುವಂತಿಲ್ಲ. ದಯಮಾಡಿ ಈಗಾಗಲೇ ಹೇಳಿದಂತೆ, ನಾವು ಇಲ್ಲಿ ಕುಳಿತಿರುವಂತಹ ಶಾಸಕರು ಮತ್ತು ಅಧಿಕಾರಿಗಳು ಸರ್ಕಾರಿ ಆಸ್ಪತ್ರೆಗೆ ಹೋಗಿ treatment ತೆಗೆದುಕೊಂಡಾಗ ಮಾತ್ರ ಅವರಿಗೆ ಪರಿಸ್ಥಿತಿ ಏನೆಂದು ಗೊತ್ತಾಗುತ್ತದೆ. ಆದ್ದರಿಂದ, ಈಗಾಗಲೇ ಆ ದೇವಸ್ಥಾನದ ಗಲಾಟೆ ಏನಿತ್ತು ಅದರ ಬಗ್ಗೆ ಕ್ರಮ ತೆಗೆದುಕೊಂಡು ತಕ್ಷಣವೇ ಆ ದೇಸವಸ್ಥಾನವನ್ನು ಸರ್ಕಾರಕ್ಕೆ ವಶಪಡಿಸಿಕೊಂಡಿದ್ದರೆ, ಈ ತೊಂದರೆಗಳು ಆಗುತ್ತಿರಲಿಲ್ಲ. ಮೊದಲು ಅಲ್ಲಿನ ತಹಶೀಲ್ದಾರ್‌ರವರನ್ನು suspend ಮಾಡಬೇಕೆಂಬುದು ನನ್ನ ಅಗ್ರಹ ಇದೆ.

**ಶ್ರೀ ಶಿವಾನಂದ ಪಾಟೀಲ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು, ಮಾನ್ಯ ಸದಸ್ಯರುಗಳಾದಂತಹ ಡಾ॥ತೇಜಸ್ವಿನಿ ಗೌಡರವರು, ಶ್ರೀ ರವಿಕುಮಾರ್‌ರವರು, ಶ್ರೀ ನಾರಾಯಣಸ್ವಾಮಿಯವರು, ಶ್ರೀ ಭೋಜೇಗೌಡರು, ಶ್ರೀ ಧರ್ಮಸೇನರವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಒಂದು ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಆ ದಿವಸ ಇರಲಿಲ್ಲ. ನಾನು ಇದನ್ನು ನಿಜವಾಗಿಯೂ ಹೇಳುತ್ತಿದ್ದೇನೆ. ನಾನು ನನ್ನ ಬಾಯಿಯಿಂದ ಮೊನ್ನೆ ಅನ್ನುವ ಬದಲಿಗೆ ನಿನ್ನೆ ಅಂದಿದ್ದೇನೆ ಅಷ್ಟೇ. ಅದು ಒಂದನ್ನು ಹಿಡಿದುಕೊಂಡು ದೃಶ್ಯ ಮಾಧ್ಯಮದವರು ಈ ರೀತಿ ಸೃಷ್ಟಿ ಮಾಡುತ್ತಾರೆ. ಯಾವ ಪತ್ರಕರ್ತರು ಅಲ್ಲ. ನಾನು ಅದರ ಬಗ್ಗೆ ಇವತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಹಿರಿಯರಾದ ಮಾನ್ಯ ವಾಟಾಳ್ ನಾಗರಾಜುರವರು ಮಾತನಾಡಿರುವಂತಹ ಮಾತುಗಳನ್ನು ತಾವೆಲ್ಲರೂ ಕೇಳಿದರೆ, ತಾವೆಲ್ಲರೂ ನೋವು ಮಾಡಿಕೊಳ್ಳುತ್ತೀರಿ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂತಹ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವಂತ ಮೊದಲನೇ ವಿಚಾರ ಆಯುಷ್ ವೈದ್ಯರನ್ನು ನಾವು ತೆಗೆಯುತ್ತಿಲ್ಲ. ನಾವು ಅವರನ್ನು ನೇಮಕಾತಿ ಮಾಡುವಂತಹ ಸಮಯದಲ್ಲಿ ಅವರನ್ನು as against the M.B.B.S., Doctors, contract basis ಮೇಲೆ ನೇಮಕ ಮಾಡಲಾಗಿದೆ. ಈಗ M.B.B.S., Doctors ಮೊದಲನೆ ಮಾತು, ಸರ್ಕಾರದಲ್ಲಿ ನೇಮಕಾತಿ ಆಗುತ್ತಿರಲಿಲ್ಲ. 2015 ರ ನಂತರ ಮೊಟ್ಟಮೊದಲನೆ ಬಾರಿಗೆ ನಾನು ಸಚಿವನಾಗಿ ಬಂದ ಮೇಲೆ 256 M.B.B.S., Doctors ನೇಮಕಾತಿ ಮಾಡಿದ್ದೇವೆ. ಜೊತೆಗೆ 180 ತಜ್ಞ ವೈದ್ಯರನ್ನು ಸಹ ನೇಮಕಾತಿ ಮಾಡಿದ್ದೇವೆ. ಇಷ್ಟಾದರೂ ಸಹ, ನಮ್ಮಲ್ಲಿ 1136 ತಜ್ಞ ವೈದ್ಯರ ಕೊರತೆ ಇದೆ. ಮತ್ತೆ M.B.B.S., ನ 450 ಜನ interview ಗೆ ಬಂದಿದ್ದರು. ಅದರಲ್ಲಿ ಹಾಜರಾಗಿದ್ದವರು ಕೇವಲ 236 ಜನ ಮಾತ್ರ. ಅನೇಕ ಸಮಸ್ಯೆಗಳು ಇವೆ. ಆದರೂ ಸಹ, ನಾವು ಮೊದಲನೆ ಬಾರಿಗೆ K.P.S.C., ಗೆ ಒಂದು request ಮಾಡಿಕೊಂಡಿದ್ದೇವೆ. ಏನು Waiting List ಇದೆ ಅದನ್ನು ಸಹ 50% operate ಮಾಡುವುದಕ್ಕೆ K.P.S.C., ಗೆ ಅವಕಾಶ ಇದೆ. ಅದನ್ನು ತಕ್ಷಣವೇ ನೀವು Form No.7 ಎನ್ನುವಂತಹ formality ಇದೆ ಅದನ್ನು ತುಂಬಿ ಕೊಟ್ಟರೆ roster violation ಆಗದ ರೀತಿಯಲ್ಲಿ ತುಂಬಿ ಕೊಡುತ್ತೇವೆಂದು ಅವರು ನಮಗೆ ಬರವಣಿಗೆಯಲ್ಲಿ ತಿಳಿಸಿದ್ದರು. ಅದನ್ನು ಸಹ ನಾವು ಪ್ರಯತ್ನ ಮಾಡಿ ತಜ್ಞ ವೈದ್ಯರನ್ನು ಮತ್ತು ವೈದ್ಯರನ್ನು ನೇಮಕಾತಿ ಮಾಡುವಂತಹ ಪ್ರಯತ್ನ ಮಾಡುತ್ತೇವೆ. ಜೊತೆಗೆ ಆಯುಷ್ ವೈದ್ಯರನ್ನು ಉಳಿಸಿಕೊಳ್ಳುವಂತಹ ಪ್ರಮಾಣಿಕವಾದಂತಹ ಪ್ರಯತ್ನ ಮಾಡಬೇಕೆಂಬ ಇಚ್ಚಾಶಕ್ತಿ ಕೂಡ ನಮಗೆ ಇದೆ. ಅದು ಸರ್ಕಾರದ ನಿರ್ಧಾರದ ಮೇಲೆ ಅವಲಂಬನೆ ಆಗುತ್ತದೆ. ಇದನ್ನು ಭವಿಷ್ಯದಲ್ಲಿ ಕ್ಯಾಬಿನೆಟ್‌ಗೂ ಸಹ ತೆಗೆದುಕೊಂಡು ಹೋಗುತ್ತೇನೆ.

ಮಾನ್ಯ ಸಭಾಪತಿಯವರೆ, ಇವತ್ತು ವಿಶೇಷವಾಗಿ ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಹೇಳಿದಂತೆ ವೈದ್ಯರ ನೇಮಕಾತಿ ಜಲ್ವಂತ ಸಮಸ್ಯೆ ಆಗಿದೆ. ಅದಷ್ಟು ತೀವ್ರವಾಗಿ ಮಾಡಬೇಕು ಎನ್ನುವಂತಹ ಇಚ್ಚಾಶಕ್ತಿ ಇದೆ. ನನ್ನ ಹಿಂದಿನ ಸಚಿವರು ಇದಕ್ಕೆ bidding ಕೂಡ ಇಟ್ಟಿದ್ದರು. ಒಬ್ಬ ವೈದ್ಯರು ತಿಂಗಳಿಗೆ ರೂ.2.80 ಲಕ್ಷ ತೆಗೆದುಕೊಂಡರೂ ಸಹ ಇವತ್ತಿನ ದಿವಸಗಳಲ್ಲಿ ಅವರು ಕೆಲಸ ಬಿಟ್ಟು ಹೋಗುತ್ತಿದ್ದಾರೆ. 400 ವೈದ್ಯರನ್ನು ನೇಮಕಾತಿ ಮಾಡಿದಾಗಲೂ ಅದರಲ್ಲಿ ಒಬ್ಬರನ್ನೂ ಬೆಂಗಳೂರಿಗೆ posting ಕೊಟ್ಟಿಲ್ಲ. ಈ ವಿಷಯ ತಮಗೆ ಮನವರಿಕೆ ಆಗಲಿ. District Headquarters ಗಳಿಗೂ ಕೊಟ್ಟಿಲ್ಲ. ಈಗ ಅನಿವಾರ್ಯವಾಗಿ ಕೊಡಬೇಕಾಗಿದೆ. ಏಕೆಂದರೆ, ನಮ್ಮ ಹಳೆಯ ವೈದ್ಯರು ಏನಾದರೂ atleast ಗ್ರಾಮೀಣ ಭಾಗಕ್ಕೆ ಹೋಗುತ್ತಾರೆಯೇ ಎಂಬುದನ್ನು ನೋಡಬೇಕು. ಇವರನ್ನು ಒಳಗಡೆ ತೆಗೆದುಕೊಳ್ಳಬೇಕು ಎನ್ನವುದಷ್ಟೇ ಈಗ ಉಳಿದಿರುವಂತಹ ಮಾರ್ಗವಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಕಡೆಯಿಂದಲೂ ಶಿಫಾರಸ್ಸು ಬಂದರೂ ಸಹ, ನಾವು ಆ ನಿಯಮವನ್ನು ಮುರಿದಿಲ್ಲ. ಏಕೆಂದರೆ, ನಮ್ಮಲ್ಲಿ ಎಲ್ಲಿ critical area ಇದೆ, ಅಲ್ಲಿಗೆ ವೈದ್ಯರು ಹೋಗಲಿ ಇನ್ನುವಂತಹ ವಿಚಾರ ಅಷ್ಟೇ. ಜೊತೆಗೆ ಇವತ್ತು ತಾವು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದಂತೆ ಒಂದು ಆಸ್ಪತ್ರೆಯಲ್ಲಿ 50 ventilators ಇಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರಣವೆಂದರೆ, ಅಷ್ಟು ಜನ *Anaesthetists* or Operators ಬೇಕು. ಒಂದು ventilator maintain ಮಾಡುವುದಕ್ಕೆ ಪ್ರತಿ ನಿತ್ಯ ಮೂರು ಜನ A.N.M.,ಗಳು ಬೇಕಾಗುತ್ತದೆ. ಒಂದೇ ventilator ಗೆ 8 ತಾಸಿನವರೆಗೆ ಒಬ್ಬರಂತೆ ಹಂಚಿಕೆ ಮಾಡಿದರೂ ಮೂರು ಜನ ಸಿಬ್ಬಂದಿ ಬೇಕಾಗುತ್ತದೆ. ಒಂದೇ ಕಡೆ 50 ventilator ಇಟ್ಟು idle ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. Idle ಏನು ಉಪಯೋಗವಿಲ್ಲ. Emergency ಬಹಳ ಎಂದರೆ, 5 ರಿಂದ 6 patients ಬರಬಹುದು. Mass casualty ಆಗಿರುವಂತಹದ್ದು ಇದು ವಿಶೇಷ ಪ್ರಕರಣ. ಸುಳ್ವಾಡಿ ಗ್ರಾಮದಲ್ಲಿ ಆಗಿರುವಂಥದ್ದು ವಿಶೇಷ ಪ್ರಕರಣ. ಅದಕ್ಕೆ ನಮ್ಮ ವೈದ್ಯರು ಸಹ ಸಂತ್ರಸ್ಥರನ್ನು ಮೈಸೂರಿಗೆ shift ಮಾಡಿದರೆ ಒಳ್ಳೆಯದು ಎಂಬ ಒಂದು ಸೂಕ್ತ ನಿರ್ಣಯವನ್ನು ತೆಗೆದುಕೊಂಡರು. ಇಡೀ ಮೈಸೂರಿನಲ್ಲಿ ಸಾಕಷ್ಟು ventilators ಇದ್ದವು. ಇಷ್ಟೆಲ್ಲಾ ಪ್ರಯತ್ನ ಮಾಡಿದ ಮೇಲೆ ಮೈಸೂರಿನಲ್ಲಿ ಇನ್ನೂ 80 ventilators ಖಾಲಿ ಇದ್ದವು. ಅಷ್ಟು ಜನರನ್ನು accommodate ಮಾಡಬಹುದೆಂಬ ಸೂಕ್ತ ನಿರ್ಣಯವನ್ನು ವೈದ್ಯರು ತೆಗೆದುಕೊಂಡಿದ್ದಾರೆ.

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಆರ್.ಧರ್ಮಸೇನಾರವರು ಎತ್ತಿರುವಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಐದು ಲಕ್ಷ ಪರಿಹಾರ ಕೊಡುತ್ತಿದ್ದಾರೆ, ಅದರಲ್ಲಿ ತಕ್ಷಣವೇ ನಗದು ರೂಪದಲ್ಲಿ ಏನಾದರೂ ಕೊಡುವುದಕ್ಕೆ ಸಾಧ್ಯವಾದರೆ ಅವರ ಮನವೊಲಿಸುವುದಕ್ಕೆ ನಾವು ಪ್ರಮಾಣಿಕವಾದಂತಹ ಪ್ರಯತ್ನ ಪಡುತ್ತೇವೆ. ಇದರಲ್ಲಿ ಅವರು ಸಹ ಸಾಕಷ್ಟು ಸಹಕಾರ ಕೊಟ್ಟಿದ್ದಾರೆ. Cutting across the party line, ವಿರೋಧ ಪಕ್ಷದಲ್ಲಿ ಇರಲಿ ಅಥವಾ ಆಡಳಿತ ಪಕ್ಷದಲ್ಲಿ ಇರಲಿ ಮಾನವೀತೆಯ ದೃಷ್ಟಿಯಿಂದ ನಾವೆಲ್ಲರೂ ವರ್ತಿಸಿದ್ದೇವೆ. ಮುಂದೆ ಈ ರೀತಿ ಆಗದಂತೆ ನಾವು ನೋಡಿಕೊಂಡು ಹೋಗುತ್ತೇವೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಇರುವಂತಹ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ತರಬೇಕೆಂಬ ಒಂದು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದು ಯಾವ ದೃಷ್ಟಿಯಿಂದ ಎಂದರೆ, 'ಆಯುಷ್ಮಾನ್ ಭಾರತ' ಎಂಬ ಯೋಜನೆ ಬಂದ ಮೇಲೆ; ಮೊದಲನೇ ಬಾರಿಗೆ ತಮಗೆ ಹೇಳುತ್ತಿದ್ದೇನೆ, ನಾವು ಎರಡನ್ನು co-branding ಮಾಡಿದ ಮೇಲೆ 1600 ಚಿಕಿತ್ಸೆಗಳನ್ನು ನಾವು ಕೊಡುತ್ತಿದ್ದೇವೆ. ಇದರಲ್ಲಿ ಸ್ವಲ್ಪ ಹಣ ಆಸ್ಪತ್ರೆಗಳಿಗೆ ನೇರವಾಗಿ ಹೋಗುತ್ತದೆ. ಈಗ ಒಂದು operation ಗೆ ರೂ.6000/– ಇದ್ದರೆ, ಅದರಲ್ಲಿ ನಮ್ಮ ಸರ್ಕಾರಿ ಆಸ್ಪತ್ರೆಗೆ 3000/– ಹೋಗುತ್ತದೆ. ಖಾಸಗಿ ಆಸ್ಪತ್ರೆಗೆ ಸಂಪೂರ್ಣ ಹಣ ಹೋಗುತ್ತದೆ. ಈ ಹಣ ಇವತ್ತು Medical Colleges ನಲ್ಲಿ 59 ಕೋಟಿ ರೂಪಾಯಿಗಳು ಜಮಾ ಆಗಿದೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ 10 ಕೋಟಿ ರೂಪಾಯಿಗಳು ಕೇವಲ ಒಂದೂವರೆ ತಿಂಗಳಲ್ಲಿ ಜಮಾ ಆಗಿದೆ. ಬರುವಂತಹ ಮುಂದಿನ ದಿವಸಗಳಲ್ಲಿ ಹೆಚ್ಚಿಗೆ 'ಆಯುಷ್ಮಾನ್ ಭಾರತ' ಮತ್ತು 'ಆರೋಗ್ಯ ಕರ್ನಾಟಕ'ವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವು implement ಮಾಡಿದರೆ, self revenue generate ಮಾಡುವ ಶಕ್ತಿ ನಮ್ಮ ಜಿಲ್ಲಾ ಮತ್ತು ತಾಲ್ಲೂಕ್ ಆಸ್ಪತ್ರೆಗಳಿಗೆ ಬರುತ್ತದೆ. ಅದು ಬಂದರೆ ಖಂಡಿತ ಅವರು ಎಲ್ಲಾ infrastructure ಜೊತೆಗೆ ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವಂತಹ ಪ್ರಮಾಣಿಕವಾದಂತಹ ಪ್ರಯತ್ನವನ್ನು ನಾವು ಮಾಡಬಹುದು. ಜೊತೆಗೆ, clinical servcie ಅನ್ನು ಯಾವ ಜಿಲ್ಲಾ ಮತ್ತು ತಾಲ್ಲೂಕ್ ಆಸ್ಪತ್ರೆಯ ವೈದ್ಯರು ಯಾರು ಕೊಡುತ್ತಾರೆ ಅವರಿಗೂ ಸಹ ಕಾನೂನಿನಲ್ಲಿ 30% incentive ಅನ್ನು ಕೊಡಬೇಕು ಎನ್ನುವಂತಹ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ.

(508)17–12–2018(7–20)ಎಂವಿ–ಎಂಡಿ

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶಿವಾನಂದ ಎಸ್. ಪಾಟೀಲ (ಮುಂದು...):–**
ಏಕೆಂದರೆ, ವೇತನವನ್ನು ಕೊಡುವುದರ ಜೊತೆಗೆ ಶೇಕಡಾ 30ರಷ್ಟು ಪ್ರೋತ್ಸಾಹ ಧನವನ್ನು ಕೊಟ್ಟರೆ, ಗ್ರಾಮೀಣ ಭಾಗಗಳಿಗೆ ಅಥವಾ ಜಿಲ್ಲಾ ಆಸ್ಪತ್ರೆಗಳಿಗೆ ಹೆಚ್ಚಿನ ವೈದ್ಯರುಗಳು ಬರಬಹುದು ಎನ್ನುವಂತಹ ಇಚ್ಛಾಶಕ್ತಿಯನ್ನು ಇಟ್ಟುಕೊಂಡು, ನಾವು ಅನೇಕ ಬದಲಾವಣೆಗಳನ್ನು ತರುತ್ತಿದ್ದೇವೆ. ದಯಮಾಡಿ ತಾವೆಲ್ಲರೂ ಸಹಕಾರ ಕೊಟ್ಟಿರುವುದಕ್ಕೆ ಸರ್ಕಾರದ ವತಿಯಿಂದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

**12. <u>ಸಂತಾಪ ಸೂಚನೆ.</u>**

**ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕಿನ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ 14 ಜನ ಮೃತರಾಗಿರುವ ಬಗ್ಗೆ ಹಾಗೂ ಬಾಯ್ಲರ್ ಸ್ಫೋಟದಿಂದ ಕುಲ್ಲಳ್ಳಿ ಗ್ರಾಮ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯಲ್ಲಿ 4 ಜನ ಮೃತರಾಗಿರುವ ಬಗ್ಗೆ**

**ಡಾ|| ಜಿ.ಪರಮೇಶ್ವರ್(ಉಪ ಮುಖ್ಯಮಂತ್ರಿ, ಒಳಾಡಳಿತ, ಬೆಂಗಳೂರು ನಗರಾಭಿವೃದ್ಧಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ):–** ಮಾನ್ಯ ಸಭಾಪತಿಯವರೆ, ಚಾಮರಾಜನಗರ ಜಿಲ್ಲೆಯ ಸುಳ್ವಾಡಿ ಗ್ರಾಮದಲ್ಲಿರುವ ಮಾರಮ್ಮನ ದೇವಸ್ಥಾನದಲ್ಲಿ ವಿಷಪೂರಿತ ಆಹಾರವನ್ನು ಸೇವನೆ ಮಾಡಿ 14 ಜನ ಮೃತರಾಗಿದ್ದಾರೆ ಹಾಗೂ ಬಾಯ್ಲರ್ ಸ್ಫೋಟದಿಂದ ಕುಲ್ಲಳ್ಳಿ ಗ್ರಾಮ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯಲ್ಲಿ 4 ಜನ ಮೃತರಾಗಿದ್ದಾರೆ. ಒಂದು ನಿಮಿಷ ಮೌನವನ್ನಾಚರಿಸುವುದರ ಮೂಲಕ ಅವರಿಗೆ ಸಂತಾಪ ಸಲ್ಲಿಸೋಣ.

**ಸಭಾಪತಿಯವರು:–** ಈಗ ಎಲ್ಲರೂ ಒಂದು ನಿಮಿಷ ಎದ್ದು ನಿಂತು ಅಗಲಿದ ಜನರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರಿ ಸಂತಾಪ ಸೂಚಿಸೋಣ.

**(ಅಗಲಿದ ಜನರ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರಿ ಸದನದಲ್ಲಿ ಒಂದು ನಿಮಿಷ ಮೌನವನ್ನಾಚರಿಸಲಾಯಿತು)**

**ಸಭಾಪತಿಯವರು:–** ಇಂದಿನ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

"ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಸದನವು ರಾತ್ರಿ 7 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 18ನೇ ಡಿಸೆಂಬರ್ ಮಾಹೆ 2018ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

************

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "